₹ 6 @vishwavaninews epaper.vishwavani.news vishwavani.news ಬೆಂಗಳೂರು | **ಹುಬ್ಬಳ್ಳಿ** | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ **ಭಾನುವಾರ 26.01.2025** **ಸಂಪುಟ:** 67 **ಸಂಚಿಕೆ:** 261 **ಪುಟಗಳು:** 10+4 **ಪ್ರಧಾನ ಸಂಪಾದಕ:** ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ನಮ್ಮ ಎಲ್ಲ ಓದುಗರು ಹಾಗೂ ಜಾಹೀರಾತುದಾರರಿಗೆ
ಗಣರಾಜ್ಯೋತ್ಸವದ ಶುಭಾಶಯಗಳು



ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

75 ವರ್ಷ ಸಂವಿಧಾನಕ್ಕೆ

ಗಾಂಧಿ ಭಾರತ

ಭಾರತದ ಸಂವಿಧಾನ

ಪ್ರಸ್ತಾವನೆ

ಭಾರತದ ಜನಗಳಾದ ನಾವು
ಭಾರತವನ್ನು ಒಂದು ಸಾರ್ವಭೌಮ ಸಮಾಜವಾದೀ
ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ
ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ;
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ:
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು
ಉಪಾಸನಾ ಸ್ವಾತಂತ್ರ್ಯ:
ಸ್ಥಾನಮಾನ ಹಾಗೂ ಅವಕಾಶ ಸಮಾನತೆ
ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು
ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಿ ಅವರಲ್ಲಿ
ಭ್ರಾತೃಭಾವನೆಯನ್ನು ವೃದ್ಧಿಗೊಳಿಸಲು
ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ
ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ,
ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.

ನಾಡಿನ ಸಮಸ್ತ ಜನತೆಗೆ
ಗಣರಾಜ್ಯೋತ್ಸವದ ಶುಭಾಶಯಗಳು

ಫ್ಯಾಸಿಸಂ ಅನ್ನು ತಿರಸ್ಕರಿಸೋಣ
ಕೋಮುವಾದವನ್ನು ಹಿಮ್ಮೆಟ್ಟಿಸೋಣ
ಸಂವಿಧಾನವನ್ನು ಬಲಪಡಿಸೋಣ
ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯೋಣ
ಬನ್ನಿ, ಗಾಂಧಿ ಭಾರತವನ್ನು ಮರುನಿರ್ಮಿಸೋಣ

"75 ವರ್ಷಗಳ ಹಿಂದೆ ಇದೇ ದಿನ ಭಾರತ ಸಂವಿಧಾನವನ್ನು ಅಂಗೀಕರಿಸಿ **ಸಾರ್ವಭೌಮ ಗಣರಾಜ್ಯವಾಯಿತು.** ಇಂದು ನಮ್ಮ ಗಣರಾಜ್ಯ ಮತ್ತು ನಮ್ಮ ಸಂವಿಧಾನ ಅಪಾಯದಲ್ಲಿದೆ. ಫ್ಯಾಸಿಸ್ಟ್ ಮತ್ತು ವಿಭಜಕ ಶಕ್ತಿಗಳು ನಮ್ಮ ರಾಷ್ಟ್ರದ ಒಕ್ಕೂಟ ವ್ಯವಸ್ಥೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ದುರ್ಬಲಗೊಳಿಸುತ್ತಿವೆ. **ನಮ್ಮ ಗಣರಾಜ್ಯವನ್ನು ಸಾರ್ವಭೌಮವನ್ನಾಗಿಸಲು ನಮ್ಮ ಬದ್ಧತೆಯನ್ನು ವ್ಯಕ್ತಪಡಿಸುವ ಸಮಯವಿದು. ಬನ್ನಿ, ಭಾಗಿಯಾಗೋಣ...**"

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ನಮ್ಮ ಕರ್ನಾಟಕ
ಗ್ಯಾರಂಟಿ ಕರ್ನಾಟಕ

ಶಕ್ತಿ — ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ | ಅನ್ನಭಾಗ್ಯ — 10 kg | ಗೃಹಜ್ಯೋತಿ — ಪ್ರತಿ ಮನೆಗೆ 200 | ಗೃಹಲಕ್ಷ್ಮಿ — ₹2000 | ಯುವನಿಧಿ — ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 | ₹1500

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಸಮಾಚಾರ ಸಣ್ಣದಲ್ಲ

ಪದಾಧಿಕಾರಿಗಳಿಂದ ಅರ್ಜಿ ಆಹ್ವಾನ

ಬಳ್ಳಾರಿ: ಸಮಾಜ ಕಲ್ಯಾಣ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ನಾಗರೀಕ ಹಕ್ಕು ರಕ್ಷಣಾ ಕಾಯ್ದೆ, 1955 ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ ಹಾಗೂ ಇತರೆ ಯೋಜನೆಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ (ಬೀದಿ ನಾಟಕ, ರೂಪಕ, ಸಾಕ್ಷ್ಯಚಿತ್ರ, ಪ್ರದರ್ಶನ ಇತ್ಯಾದಿ) ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಅನುಷ್ಠಾನಗೊಳಿಸಲು ಆಸಕ್ತ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಸ್ವಯಂ ಸೇವಾ ಸಂಘ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಫೆಬ್ರವರಿ 1 ರೊಳಗೆ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಕಚೇರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಅರ್ಜಿ ಸಲ್ಲಿಸಬಹುದು.

ಸ್ವ-ಸಹಾಯ ಸಂಘದ ವರದಿಯಿಂದ ಅರ್ಜಿ

ಹೊಸಪೇಟೆ: ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕವನ್ನು ಸಮರ್ಪಕವಾಗಿ ವಸೂಲಾತಿ ಮಾಡಲು ಅರ್ಹ ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಮುಖ್ಯಾಧಿಕಾರಿ ಎಂ. ಖಾಜಾ ತಿಳಿಸಿದ್ದಾರೆ. ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಡೇ-ನಲ್ಮ್ ಅಭಿಯಾನದಡಿ ರಚಿಸಲಾಗಿರುವ ಅರ್ಹ ಮಹಿಳಾ ಸ್ವಸಹಾಯ ಸಂಘಗಳ ಮೂಲಕ ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕವನ್ನು ವಸೂಲಾತಿ, ಸಂಗ್ರಹಣೆ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಡೇ-ನಲ್ಮ್ ಗುಂಪುಗಳಲ್ಲಿನ ಸದಸ್ಯರು ಕನಿಷ್ಠ 7ನೇ ತರಗತಿಯವರೆಗೆ ಶಿಕ್ಷಣವನ್ನು ಹಾಗೂ ಎಲೆಕ್ಟ್ರಾನಿಕ್ಸ್ ಪರಿಕರಗಳನ್ನು ಬಳಸುವ ಸಾಮರ್ಥ್ಯವನ್ನು ಹೊಂದಿರಬೇಕು. ಹೆಚ್ಚಿನ ವಿದ್ಯಾಭ್ಯಾಸ ಪಡೆದಂತವರಿಗೆ ಆದ್ಯತೆ ನೀಡಲಾಗುವುದು. ಪಟ್ಟಣ ಮಹಿಳಾ ಸ್ವಸಹಾಯ ಸಂಘದ ಸದಸ್ಯರುಗಳು ಫೆ.12 ರೊಳಗೆ ಅರ್ಜಿಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಕಾರ್ಯಾಲಯದ ಡೇ-ನಲ್ಮ್ ಶಾಖೆಗೆ ಸಂಪರ್ಕಿಸುವುದು.

ಗಣರಾಜ್ಯೋತ್ಸವ: ದೀಪಾಲಂಕಾರ

ಹೊಸಪೇಟೆ: 76 ನೇ ಗಣರಾಜ್ಯೋತ್ಸವ ದಿನಚಾರಣೆ ನಿಮಿತ್ತ ಹಿಂದೂ ಧಾರ್ಮಿಕ ದತ್ತಿಗಳ ಇಲಾಖೆಯಿಂದ, ಆಡಳಿತಾಧಿಕಾರಿ ಮತ್ತು ಕಾರ್ಯನಿರ್ವಾಹಣ ಅಧಿಕಾರಿಗಳು ಹಾಗೂ ಆಡಳಿತ ಮುಖ್ಯಸ್ಥರಿಗೆ ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ದೇವಸ್ಥಾನಗಳಿಗೆ ಜ.26 ರಂದು ವಿದ್ಯುತ್ ದೀಪಾಲಂಕಾರ, ಹಾಗೂ ಜ.26 ರಂದು ವಿಶೇಷ ಪೂಜೆ, ಪ್ರಾರ್ಥನೆ ವ್ಯವಸ್ಥೆ ಮಾಡಬೇಕೆಂದು ಹಿಂದೂ ಧಾರ್ಮಿಕ ದತ್ತಿಗಳ ಇಲಾಖೆ ಸಹಾಯಕ ನಿರ್ದೇಶಕ ಎಚ್.ಗಂಗಾಧರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮಾಲೋಚನಾ ಸಭೆ ನಾಳೆ

ರಾಯಚೂರು: ವೀರಶೈವ ಲಿಂಗಾಯತ ಮಹಾಸಭಾದಿಂದ ಜ.27 ರಂದು ನಗರದ ವೀರಶೈವ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ಮಟ್ಟದ ವಿಶೇಷ ಸಮಾಲೋಚನಾ ಸಭೆ ಆಯೋಜಿಸಲಾಗಿದೆ ಎಂದು ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಚಂದ್ರಶೇಖರ ಪಾಟೀಲ್ ಮಿರ್ಜಾಪುರು ಹೇಳಿದರು. ನಗರದ ಪತ್ರಿಕಾ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಮಹಾಸಭಾ ರಾಜ್ಯ ಉಪಾಧ್ಯಕ್ಷ ಹಾಗೂ ಮಾಜಿ ಸಚಿವ ಅಮರೇಗೌಡ ಬಯ್ಯಾಪುರು ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಭೆಯನ್ನು ರಾಷ್ಟ್ರೀಯ ಕಾರ್ಯದರ್ಶಿ ಹಾಗೂ ಅರಣ್ಯ ಸಚಿವ ಈಶ್ವರ ಖಂಡ್ರೆ, ಉದ್ಘಾಟಿಸಲಿದ್ದಾರೆ. ಸಾನಿಧ್ಯವನ್ನು ಕಿಲ್ಲೆ ಬೃಹನ್ಮಠದ ಶ್ರೀ ಶಾಂತಮಲ್ಲ ಶಿವಾಚಾರ್ಯರು, ಸೋಮವಾರಪೇಟೆ ಮಠದ ಶ್ರೀ ಅಭಿನವರಾಚೋಟಿ ವೀರಶಿವಾಚಾರ್ಯರು, ಮಂಗಳವಾರಪೇಟೆ ಶ್ರೀಗಳುವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಡಾ.ಶಿವರಾಜ ಪಾಟೀಲ್, ಹಂಪನ ಗೌಡ ಬಾದರ್ಲಿ, ಎಂಎಲ್ಸಿ ಶರಣಗೌಡ ಬಯ್ಯಾಪುರು, ಬಸನಗೌಡ ಬಾದರ್ಲಿ ಸೇರಿ ಅನೇಕರು ಆಗಮಿಸಲಿದ್ದಾರೆ. ವೀರಶೈವ, ಲಿಂಗಾಯತ ಸಮಾಜ ಮುಖಂಡರುಗಳು ಸೇರಿದಂತೆ 500 ಜನರು ಭಾಗವಹಿಸುವ ನಿರೀಕ್ಷೆಯಿದೆ. ಸಮಾಜ ಸದಸ್ಯತ್ವ ನೋಂದಣಿ ಹಾಗೂ ಸಂಘಟನೆ ಕುರಿತಂತೆ ಸಭೆಯಲ್ಲಿ ಚರ್ಚಿಸಲಾಗುತ್ತದೆ ಎಂದರು. ಕಲ್ಲೂರು ಭೀಮರೆಡ್ಡಿ, ಡಾ.ಪರಮೇಶ್ವರ ಸಾಲಿಮಠ, ಸೋಮನಾಥರೆಡ್ಡಿ ಗಣದಿನ್ನಿ, ನೀಲಕಂಠಯ್ಯ ಸ್ವಾಮಿ, ಬಸನಗೌಡ ಬಲ್ಲಟಗಿ ಉಪಸ್ಥಿತರಿದ್ದರು.

ವಿರಾಮ
ಪ್ರತಿ ಭಾನುವಾರ

{ಎನ್.ಚಲುವರಾಯಸ್ವಾಮಿ} ಕೃಷಿ ಸಚಿವ

ತೊಂದರೆ ನೀಡುವ ಫೈನಾನ್ಸ್ ಕಂಪನಿಗಳ ಕಡೆಗೆ ಹೋಗುವುದನ್ನು ಜನ ನಿಲ್ಲಿಸಬೇಕು. ಸರಕಾರವೇ ಬಡ್ಡಿ ರಹಿತ ಸಾಲ ನೀಡುತ್ತಿದ್ದು, ಪಿಎಲ್‌ಡಿ ಬ್ಯಾಂಕ್, ಸೊಸೈಟಿ ಮೂಲಕ ತೆಗೆದುಕೊಳ್ಳಬಹುದು'.

ಸಸಿ ನೆಡುವ ಮೂಲಕ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಗೆ ಜಿಲ್ಲಾಧಿಕಾರಿ ದಿವಾಕರ್ ಚಾಲನೆ

ಶಿಕ್ಷಣದಿಂದ ಸ್ವಾವಲಂಬನೆ ಸಾಧ್ಯ

ಹೊಸಪೇಟೆ: ಭವಿಷ್ಯದಲ್ಲಿ ಸ್ವಾವಲಂಬನೆ ಬದುಕು ಕಟ್ಟಿಕೊಳ್ಳಲು ವಿದ್ಯಾಭ್ಯಾಸಕ್ಕೆ ಹೆಚ್ಚಿನ ಆದ್ಯತೆ ನೀಡಬೇಕೆಂದು ವಿದ್ಯಾರ್ಥಿನಿಯರ ಕುರಿತು ಜಿಲ್ಲಾಧಿಕಾರಿ ಎಂ.ಎಸ್ .ದಿವಾಕರ್ ಸಲಹೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಚೈತನ್ಯ ಗ್ರಾಮೀಣ ಅಭಿವೃದ್ಧಿ ಎಜುಕೇಷನಲ್ ಟ್ರಸ್ಟ್ ಸಹಯೋಗದಲ್ಲಿ ಹೆಣ್ಣು ಮಕ್ಕಳ ರಾಷ್ಟ್ರೀಯ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕೇಂದ್ರ ಸರಕಾರ ಹೆಣ್ಣು ಮಕ್ಕಳಿಗಾಗಿ ಭೇಟಿ ಬಚಾವೋ, ಭೇಟಿ ಪಡಾವೋ ಯೋಜನೆಯನ್ನು ಅನುಷ್ಠಾನಗೊಳಿಸಿ ದಶಮಾನೋತ್ಸವ ಸಂಭ್ರಮ ಆಚರಿಸುತ್ತಿದ್ದೇವೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಹೆಣ್ಣುಮಕ್ಕಳಿಗೆ ಹೆಚ್ಚಿನ ಪ್ರೋತ್ಸಾಹ, ರಕ್ಷಣೆ ನೀಡಲು ಅನೇಕ ಯೋಜನೆಗಳನ್ನು ಜಾರಿ ಮಾಡಿದ್ದು ಅವುಗಳನ್ನು ವಿದ್ಯಾರ್ಥಿನಿಯರು ಸಮರ್ಪಕವಾಗಿ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಇದೇ ವೇಳೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್‌ರವರ ತಾಯಿ ನಾಗರತ್ನಮ್ಮ, ಜಿಪಂ ಸಿಇಒ ನೊಂಗ್ಜಾಯ್ ಮೊಹಮ್ಮದ್ ಅಕ್ರಮ್ ಅಲಿ ಷಾ ಅವರ ತಾಯಿ ಸಫೀನಾ ಹೆಸರಿನಲ್ಲಿ ಸಸಿಗಳನ್ನು ನೆಡುವ ಮೂಲಕ ರಾಷ್ಟ್ರೀಯ ಹೆಣ್ಣುಮಕ್ಕಳ ದಿನಾಚರಣೆಗೆ ಚಾಲನೆ ನೀಡಿದರು.

ಬಳಿಕ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧನೆ, ಸಹಿ ಸಂಗ್ರಹ ಅಭಿಯಾನವನ್ನು ನಡೆಸಲಾಯಿತು. ಜಿಲ್ಲಾಧಿಕಾರಿ ಕಚೇರಿಯಿಂದ ಪ್ರಮುಖ ರಸ್ತೆಯಲ್ಲಿ ಪಥಸಂಚಲನ ನಡೆಸುವ ಮೂಲಕ ಜಾಗೃತಿ ಜಾಥಾ ನಡೆಸಲಾಯಿತು.

ಈ ವೇಳೆ ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಧಿಕಾರಿ ಸಲೀಂ ಪಾಷ, ಜಿಲ್ಲಾ ನಿರೂಪಣಾ ಅಧಿಕಾರಿ ಸುಭದ್ರಾ ದೇವಿ, ಸಿಡಿಪಿಒ ಸಿಂಧು ಅಂಗಡಿ, ಚೈತನ್ಯ ಗ್ರಾಮೀಣ ಅಭಿವೃದ್ಧಿ ಎಜ್ಯೂಕೇಷನಲ್ ಟ್ರಸ್ಟ್ ಸಂಸ್ಥೆಯ ಅಧ್ಯಕ್ಷ ಯು.ಭೀಮರಾಜ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಅಂಬುಜಾ, ಜಿಲ್ಲಾ ಮಿಷನ್ ಸಂಯೋಜಕ ಶಿವಣ್ಣ, ನೇತ್ರಾ ಹರ್ಷಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮಕ್ಕಳ ರಕ್ಷಣಾಧಿಕಾರಿ ಗಂಗಾಧರ ಡೊಳ್ಳಿನ ಇತರರಿದ್ದರು.

ಗ್ರಾಮೀಣ ಅಭಿವೃದ್ಧಿ ಎಜುಕೇಷನಲ್ ಟ್ರಸ್ಟ್ ಸಹಯೋಗದಲ್ಲಿ ಹೆಣ್ಣು ಮಕ್ಕಳ ರಾಷ್ಟ್ರೀಯ ದಿನಾಚರಣೆ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಉದ್ಘಾಟಿಸಿದರು.

> ಸ್ವಾವಲಂಬಿಯಾಗಿ ಬದುಕಲು ಶಿಕ್ಷಣ ಪೂರಕವಾಗಿದೆ. ವಿದ್ಯಾಭ್ಯಾಸಕ್ಕೆ ಹೆಚ್ಚಿನ ಆದ್ಯತೆ ನೀಡಿ ವಿದ್ಯಾವಂತರಾಗಿ, ಪ್ರಜ್ಞಾವಂತ ಪ್ರಜೆಗಳಾಗಿ ಪೋಷಕರಿಗೆ, ಕಲಿತ ಶಾಲೆಗೆ, ನಿಮ್ಮೂರುಗಳಿಗೆ ಕೀರ್ತಿ ತರುವಂತಹ ಕಾರ್ಯಕ್ಕೆ ಮುಂದಾಗಬೇಕು.
> – ಎಂ.ಎಸ್.ದಿವಾಕರ್, ಜಿಲ್ಲಾಧಿಕಾರಿ

ನಬಾರ್ಡ್ ಬ್ಯಾಂಕ್ ಮುಂದೆ ಪ್ರತಿಭಟನೆ ಜ.29ರಂದು

ರಾಯಚೂರು: ನಬಾರ್ಡ್ ರಾಜ್ಯಕ್ಕೆ ನೀಡಲಾಗುತ್ತಿರುವ ಸಾಲದ ಅನುದಾನದಲ್ಲಿ ಕಡಿತಗೊಳಿಸುವುದು ಸೇರಿದಂತೆ ರೈತರ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಜ.29 ರಂದು ಬೆಂಗಳೂರಿನ ನಬಾರ್ಡ್ ಕಚೇರಿ ಮುಂದೆ ಧರಣಿ ನಡೆಸಲು ನಿರ್ಧರಿಸಲಾಗಿದೆ ಎಂದು ರಾಜ್ಯ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಚಾಮರಸ ಮಾಲಿ ಪಾಟೀಲ್ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಕೇಂದ್ರ ಸರಕಾರದಿಂದ ರಾಜ್ಯಕ್ಕೆ ನೀಡಲಾಗುತ್ತಿದ್ದ ಶೇ 58 ರಷ್ಟು ಸಾಲದ ಹಣದಲ್ಲಿ ಕಡಿತಗೊಳಿಸಿದ್ದರ ಪರಿಣಾಮವಾಗಿ 5,800 ಕೋಟಿ ರುಪಾಯಿ ಸಾಲದ ಹಣದಲ್ಲಿ ಕೇವಲ 2,400 ಕೋಟಿ ರುಪಾಯಿ ಮಾತ್ರ ರಾಜ್ಯಕ್ಕೆ ದೊರಕಲಿದ್ದು ರೈತರಿಗೆ ಸಾಲ ಪಡೆಯಲು ಸಹ ಸಾಧ್ಯವಾಗುವುದಿಲ್ಲ.

ಇನ್ನೂ ಮೈಕ್ರೋ ಫೈನಾನ್ಸ್ ಗಳ ಕಿರುಕುಳ ತಡೆಯಲು ಯಾವುದೇ ನಿಯಮ ಇಲ್ಲದೇ ಇರುವುದರಿಂದ ಗ್ರಾಮೀಣ ಜನರು ಹಿಂಸೆ ಅನುಭವಿಸುವಂತಾಗಿದ್ದು, ಕಡಿವಾಣ ಹಾಕಲು ಆಗ್ರಹಿಸಿ ಪ್ರತಿಭಟನೆ ನಡೆಯಲಿದೆ ಎಂದರು.

ತುಂಗಭದ್ರ, ಎಡದಂಡೆ ಕಾಲುವೆ ನೀರು ಹರಿಸಿದ್ದರೂ, ಇಂದಿಗೂ ಸಿರವಾರಕ್ಕೆ ನೀರು ಬರುತ್ತಿಲ್ಲ. ರೈತರಿಗೆ ಬರ ಪರಿಹಾರ ಹಣ ಅನೇಕರಿಗೆ ಪಾವತಿಯೇ ಆಗಿಲ್ಲ. ಬೆಳೆ ನಷ್ಟ ಪರಿಹಾರವೂ ಬೇರೆ ರೈತರ ಖಾತೆಗೆ ಜಮಾ ಆಗಿರುವ ಶಂಕೆಯಿದ್ದು, ಸಮಗ್ರ ತನಿಖೆ ನಡೆಸಬೇಕು. ಪ್ರಭಾವಿಗಳ ಒತ್ತಡದಿಂದ ಬೆಳೆ ಪರಿಹಾರ ರೈತರ ಖಾತೆಗೆ ಹೋಗಿಲ್ಲವೆಂದರು.

ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಪ್ರಭಾಕರ ಪಾಟೀಲ್, ಸರ್ವೋದಯ ಪಕ್ಷದ ಜಿಲ್ಲಾಧ್ಯಕ್ಷ ಜಾನವೆಸ್ಲಿ, ಬೂದೆಯ್ಯಸ್ವಾಮಿ, ದೇವರಾಜ ನಾಯಕ, ವೀರೇಶ ಪಾಟೀಲ್, ನಿಂಗಪ್ಪ, ವೀರೇಂದ್ರ ಪಾಟೀಲ್ ಹರವಿ, ಮತ್ತಿತರರು ಉಪಸ್ಥಿತರಿದ್ದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಉಪಾಧ್ಯಕ್ಷ ಚಾಮರಸ ಮಾಲಿ ಪಾಟೀಲ್ ಮಾತನಾಡಿದರು.

ಗುಣಮಟ್ಟ ಶಿಕ್ಷಣಕ್ಕೆ ನೀಡುವಂತೆ ಪ್ರತಿಭಟನೆ

ರಾಯಚೂರು: ಸರಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣಕ್ಕಾಗಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಅಪೌಷ್ಟಿಕತೆ ಮತ್ತು ರಕ್ತಹೀನತೆ ಹೋಗಲಾಡಿಸುವುದು, ದೇವದಾಸಿಯರ ಮರು ಸಮೀಕ್ಷೆ, ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರು ಪೂರೈಕೆ ಸೇರಿದಂತೆ ಇತರೆ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಜಿಲ್ಲಾ ಕ್ರೀಡಾಂಗಣದ ಆವರಣದಲ್ಲಿ ಪ್ರಗತಿ ಪರ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯಿಂದ ಬೃಹತ್ ಪ್ರತಿಭಟಸಿ, ಜಿಲ್ಲಾಧಿಕಾರಿಗಳ ಕಚೇರಿ ವರೆಗೆ ಮೆರವಣಿಗೆ ಮೂಲಕ ತೆರಳಿ ಮನವಿ ಸಲ್ಲಿಸಲಾಯಿತು.

- ದೇವದಾಸಿಯರ ಮರು ಸಮೀಕ್ಷೆಯನ್ನು ತಕ್ಷಣ ಮಾಡಿ.
- ಮಹಿಳೆಯರಿಗೆ ಪಿಂಚಣಿ, ವಿದ್ಯಾರ್ಥಿವೇತನ ನೀಡಬೇಕು.
- ಒಂಟಿ ಮಹಿಳೆಯರ ಪಿಂಚಣಿ ವಯೋಮಿತಿ 21 ವರ್ಷಕ್ಕೆ ಇಳಿಸಿ.
- ಸಾಕ್ಷರತಾ ಮಾದರಿಯ ಅಭಿಯಾನ.
- ಶಿಕ್ಷಕಿ, ಶಿಕ್ಷಕರ ನೇಮಕ.

ಕಳೆದ 15 ವರ್ಷಗಳಿಂದ ನಿರಂತರವಾಗಿ ಹೋರಾಟ ಮಾಡುತ್ತಾ ಬರಲಾಗಿದೆ. ಹೋರಾಟದ ಸಂದರ್ಭದಲ್ಲಿ ಸಚಿವರು ಮತ್ತು ಶಾಸಕರು ನೀಡಿದ್ದ ಭರವಸೆ ಈಡೇರಿಸುವಲ್ಲಿ ವಿಫಲರಾಗಿದ್ದಾರೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ 30 ಲಕ್ಷಕ್ಕಿಂತ ಹೆಚ್ಚು ಮಹಿಳೆಯರು ರಕ್ತ ಹೀನತೆಯಿಂದ ಮತ್ತು ಸಾವಿರಾರು ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಇದರ ಬಗ್ಗೆ ಸರಕಾರ ಯಾವುದೇ ಕ್ರಮಕೈಗೊಳ್ಳುತ್ತಿಲ್ಲ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಾವಿರಾರು ಶಿಕ್ಷಕರ ಹುದ್ದೆಗಳು ಖಾಲಿ ಇದ್ದು, ವಿಷಯವಾರು ಶಿಕ್ಷಕ, ಶಿಕ್ಷಕಿಯರನ್ನು ಕೂಡಲೇ ನೇಮಿಸಬೇಕು. ಪ್ರತಿ ಶಾಲೆಗೆ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಗೃಹ ಪಾಠ ಮಾಡುವವರನ್ನು ಸಹ ನೇಮಿಸಬೇಕು. ನಾವು ಸಮೀಕ್ಷೆ ನಡೆಸಿದ ಪ್ರಕಾರ ಸುಮಾರು ಶಾಲೆಗಳಲ್ಲಿ ಶೇ75 ರಷ್ಟು ಅಥಿತಿ ಶಿಕ್ಷರಿದ್ದರೇ, ಶೇ 25 ರಷ್ಟು ಖಾಯಂ ಶಿಕ್ಷಕರಿಂದ ಶಾಲೆಗಳು ನಡೆಯುತ್ತಿವೆ. ಇದರಿಂದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗಲು ಸಾಧ್ಯವೇ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ ಅಪೌಷ್ಟಿಕತೆ ಮತ್ತು ರಕ್ತಹೀನತೆಯನ್ನು ಹೋಗಲಾಡಿಸಲು ಸಾಕ್ಷರತಾ ಮಾದರಿಯ ಅಭಿಯಾನವನ್ನು ನಡೆಸಲು ಸರಕಾರದಿಂದ ಹೆಚ್ಚುವರಿ ಹಣವನ್ನು ಮೀಸಲಿಡಬೇಕು. ಇದು ನಾಗರಿಕ ಸಮಾಜ, ಜನಪ್ರತಿನಿಧಿಗಳು ಮತ್ತು ಆಡಳಿತವನ್ನು ಒಳಗೊಂಡಿರಬೇಕು. ಈ ವಿಷಯದಲ್ಲಿ ಕರ್ನಾಟಕವನ್ನು ನಾವು ಬಿಹಾರ, ಜಾರ್ಖಂಡ, ಛತ್ತೀಸ್‌ಗಢ್, ರಾಜಸ್ಥಾನದಂತಹ ರಾಜ್ಯಗಳ ಪಟ್ಟಿಯಿಂದ ತೆಗೆದುಹಾಕುವ ಯೋಜನೆಯನ್ನು ಹೊಂದಿರಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ವಿದ್ಯಾ ಪಾಟೀಲ್, ಸ್ವರ್ಣ ಭಟ್, ಶರಣೇ ಗೌಡ , ಮೋಕ್ಷಮ್ಮ , ಗುರುರಾಜ , ಬಸವರಾಜ್ , ಆಂಧ್ರ ಪ್ರದೇಶ, ತೆಲಂಗಾಣ,ಹಾಗೂ ಇನ್ನಿತರ ಹೊರ ರಾಜ್ಯದ ಪ್ರತಿನಿಧಿಗಳು ಭಾಗವಹಿಸಿದ್ದರು.

ಜಿಲ್ಲಾ ಕ್ರೀಡಾಂಗಣದ ಆವರಣದಲ್ಲಿ ಪ್ರಗತಿ ಪರ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯಿಂದ ಬೃಹತ್ ಪ್ರತಿಭಟಸಿ, ಜಿಲ್ಲಾಧಿಕಾರಿಗಳ ಕಚೇರಿವರೆಗೆ ಮೆರವಣಿಗೆ ಮೂಲಕ ತೆರಳಿ ಮನವಿ ಸಲ್ಲಿಸಲಾಯಿತು.

ಗರ್ಭಿಣಿಗೆ ಪ್ರತಿ ತಿಂಗಳು ತಪಾಸಣೆ ಅಗತ್ಯ

ಬಳ್ಳಾರಿ: ಜಿಲ್ಲೆಯಲ್ಲಿ ತಾಯಿ ಮಗುವಿನ ಮರಣ ಪ್ರಮಾಣ ಕಡಿಮೆಗೊಳಿಸುವ ನಿಟ್ಟಿನಲ್ಲಿ ಪ್ರತಿ ತಿಂಗಳು 9 ಮತ್ತು 24 ರಂದು ಎರಡು ಬಾರಿ ಗರ್ಭಿಣಿ ಮಹಿಳೆಯರು ತಮ್ಮ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ರಮೇಶ್ ಬಾಬು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಂಯುಕ್ತಾಶ್ರಯದಲ್ಲಿ ಕುಡತಿನಿ ಪಟ್ಟಣದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಸುರಕ್ಷಾ ಮಾತೃತ್ವ ಅಭಿಯಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಾತೃತ್ವ ಸುರಕ್ಷಾ ಅಭಿಯಾನದ ಮೂಲಕ ಗರ್ಭಿಣಿಯರಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ಆರೋಗ್ಯ ಇಲಾಖೆ ಹಲವು ಸುರಕ್ಷಾ ಕ್ರಮಗಳು ಜಾರಿಗೊಳಿಸಿದೆ. ಗರ್ಭಿಣಿಯರ ಸುರಕ್ಷತೆ ದೃಷ್ಟಿಯಿಂದ ಪ್ರತಿ ತಿಂಗಳು 2 ಬಾರಿ ಗರ್ಭಿಣಿಯರ ಆರೋಗ್ಯ ತಪಾಸಣೆ ಕೈಗೊಂಡು, ಗರ್ಭಿಣಿಯರಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ಆರೋಗ್ಯ ಇಲಾಖೆ ಕ್ರಮ ವಹಿಸುತ್ತಿದೆ ಎಂದರು.

ಗರ್ಭಿಣಿಯರಿಗೆ ಅಗತ್ಯವಾದ ಪೌಷ್ಠಿಕಾಂಶದ ಆಹಾರ, ಆರೋಗ್ಯ ಸೇವೆ ಒದಗಿಸಿ ಪ್ರಸವಪೂರ್ವ ತಪಾಸಣೆ ರೋಗ ವೈದ್ಯರಿಂದ 2ನೇ ಅಥವಾ 3ನೇ ತ್ರೈಮಾಸಿಕದಲ್ಲಿ ಕನಿಷ್ಠ 1 ಬಾರಿ ತಪಾಸಣೆ ನಡೆಸಲಾಗುತ್ತದೆ. ಗರ್ಭಧಾರಣೆಯ 3 ತಿಂಗಳ ಮೊದಲು ಮತ್ತು ಗರ್ಭಧಾರಣೆಯ 1ನೆ ತ್ರೈಮಾಸಿಕದಲ್ಲಿ ಪೋಲಿಕ್ ಆಮ್ಲ ಮಾತ್ರೆಗಳನ್ನು ಸಹ ನೀಡಲಾಗುತ್ತಿದೆ.

ಚೊಚ್ಚಲು ಗರ್ಭಿಣಿ, ಎತ್ತರ ಕಡಿಮೆ, ಅಧಿಕ ರಕ್ತದೊತ್ತಡ, ರಕ್ತದಲ್ಲಿ ಕಬ್ಬಿಣಾಂಶ ಕೊರತೆ, ಅವಳಿ ಜವಳಿ ಗರ್ಭಿಣಿ, ವಿವಾಹವಾಗಿ ಐದಕ್ಕಿಂತ ಹೆಚ್ಚು ವರ್ಷಗಳ ನಂತರ ಗರ್ಭಿಣಿಯಾಗಿರುವುದು, ಮೊದಲ ಹೆರಿಗೆ ಸಿಸೇರಿಯನ್ ಮುಂತಾದ ಕಾರಣಗಳಿದ್ದರೆ ಆಯಾ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲೂಕು ಸಾರ್ವಜನಿಕ ಆಸ್ಪತ್ರೆ ಹಾಗೂ ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಿಸಿ ನಿಗಾವಹಿಸುವ ಮೂಲಕ ಹೆರಿಗೆ ಅವಧಿಯಲ್ಲಿ ಕಂಡು ಬರಬಹುದಾದ ಸಂಭವನೀಯ ತೊಂದರೆಗಳನ್ನು ವೈದ್ಯರ ನಿಗಾವಣೆ ಮೂಲಕ ಗುರ್ತಿಸಿ ಸುರಕ್ಷಿತ ಹೆರಿಗೆ ಕೈಗೊಳ್ಳಲಾಗುವುದು ಎಂದರು.

ಈ ವೇಳೆ ಕುಡುತಿನಿ ಪಟ್ಟಣ ಪಂಚಾಯಿತಿ ಅಧ್ಯಕ್ಷೆ ಬಸಮ್ಮ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಎಚ್ ದಾಸಪ್ಪನವರ, ಕುಡುತಿನಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ಗುರುಬಸವರಾಜ್, ಡಾ.ಭಾಗ್ಯಲಕ್ಷ್ಮೀ, ಸಮುದಾಯ ಆರೋಗ್ಯ ಅಧಿಕಾರಿಗಳು, ಆಸ್ಪತ್ರೆ ಸಿಬ್ಬಂದಿಗಳು, ಆಶಾ ಕಾರ್ಯಕರ್ತರು ಸೇರಿದಂತೆ ಇತರರು ಉಪಸ್ಥಿತರಿದ್ದರು.

ಪಟ್ಟಣದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಸುರಕ್ಷಾ ಮಾತೃತ್ವ ಅಭಿಯಾನ ಕಾರ್ಯಕ್ರಮದಲ್ಲಿ ಕಲ್ಯಾಣಾಧಿಕಾರಿ ಡಾ. ರಮೇಶ್ ಬಾಬು ಮಾತನಾಡಿದರು.

> 500 ಎಂಸಿಜಿ ಕ್ಯಾಲ್ಸಿಯಂ ಅನ್ನು ಗರ್ಭಧಾರಣೆಯ 14ನೆ ವಾರದಿಂದ ಹೆರಿಗೆ ಮತ್ತು 6 ತಿಂಗಳ ನಂತರದ ಅವಧಿಯವರೆಗೆ ನೀಡಲಾಗುತ್ತಿದೆ. 3ನೆ ತ್ರೈಮಾಸಿಕ ಪಿಡಬ್ಲ್ಯೂಗಳ ಲೈನ್ ಪಟ್ಟಿ ಮಾಡಲಾಗುತ್ತಿದೆ. ಓರಲ್ ಗ್ಲೂಕೋಸ್ ಟಾಲರೆನ್ಸ್ ಟೆಸ್ಟ್ ಬಳಸಿಕೊಂಡು ಗರ್ಭಾವಸ್ಥೆಯ ಮಧುಮೇಹ ಮೆಲ್ಲಿಟಸ್ ಗಾಗಿ ಪ್ರತಿ ಗರ್ಭಿಣಿಯ ಕಡ್ಡಾಯ ತಪಾಸಣೆ ಮಾಡಲಾಗುತ್ತಿದೆ.
> – ಡಾ. ರಮೇಶ್ ಬಾಬು, ಕಲ್ಯಾಣಾಧಿಕಾರಿ

ರೆಡ್ಡಿ-ರಾಮುಲು ತಿಕ್ಕಾಟಕ್ಕೆ ಜಾತಿ ಗುರಾಣಿ

ಶರಣಬಸವ ಹುಲಿಹೈದರ, ಕೊಪ್ಪಳ

ಶಾಸಕ ಜನಾರ್ದನ ರೆಡ್ಡಿ ಮತ್ತು ಮಾಜಿ ಸಚಿವ ಬಿ. ಶ್ರೀರಾಮುಲು ನಡುವಿನ ವೈಯಕ್ತಿಕ ತಿಕ್ಕಾಟ ತಾರಕಕ್ಕೇರಿದೆ. ಇಬ್ಬರ ನಡುವಿನ ವೈಯಕ್ತಿಕ ಗಲಾಟೆ ನಡುವೆ ನಾಯಕ ಸಮುದಾಯದ ಮುಖಂಡರು ಎಂಟ್ರಿ ಕೊಟ್ಟಿದ್ದಾರೆ.

ಗಂಗಾವತಿಯ ನಾಯಕ ಸಮುದಾಯದ ಎರಡು ಗುಂಪು ಸುದ್ದಿಗೋಷ್ಠಿ ನಡೆಸಿದ್ದು, ಒಂದು ಗುಂಪು, ಶಾಸಕ ಜನಾರ್ದನ ರೆಡ್ಡಿ ಮತ್ತು ಬಿಜೆಪಿಯಿಂದ ನಾಯಕ ಸಮುದಾಯಕ್ಕೆ ಅಪಮಾನ ಆಗಿದೆ. ರೆಡ್ಡಿ ಕ್ಷಮೆ ಯಾಚಿಸಬೇಕು ಎಂದು ಒತ್ತಾಯಿಸಿದೆ. ಇದಕ್ಕೆ ತಿರುಗೇಟು ನೀಡುರುವ ಮತ್ತೊಂದು ಗುಂಪು, ಜನಾರ್ದನ ರೆಡ್ಡಿ ಸಮುದಾಯದ ಬಗ್ಗೆ ಏನೂ ಮಾತನಾಡಿಲ್ಲ. ಇಬ್ಬರ ನಡುವಿನ ವೈಯಕ್ತಿಕ ಗಲಾಟೆ ನಡುವೆ ಜಾತಿ ಎಳೆದು ತರುವುದು ಸರಿಯಲ್ಲ. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ನಡೆದಾಗ ಅಖಿಲ ಕರ್ನಾಟಕ ವಾಲ್ಮೀಕಿ ಮಹಾಸಭಾ ಪದಾಧಿಕಾರಿಗಳು ಎಲ್ಲಿದ್ದರು ಎಂದು ತಿರುಗೇಟು ನೀಡಿದೆ.

ಈ ಎರಡೂ ಗುಂಪಿನ ನಡೆ ಗಂಗಾವತಿಯ ಕಾಂಗ್ರೆಸ್- ಬಿಜೆಪಿ ಪಕ್ಷದಲ್ಲಿ ಮತ್ತು ನಾಯಕ ಸಮುದಾಯದ ಪ್ರಜ್ಞಾವಂತರಲ್ಲಿ ಸಾಕಷ್ಟು ಚರ್ಚೆ ಹುಟ್ಟು ಹಾಕಿದೆ. ಕಳೆದ ಎರಡು ದಶಕದಿಂದ ರಾಜಕೀಯ ವಲಯದಲ್ಲಿ ಕಿಚಿಕು ಎಂದೇ ಗುರುತಿಸಿಕೊಂಡಿದ್ದ ರೆಡ್ಡಿ-ರಾಮುಲು ನಡುವೆ ಹಣಕಾಸು ಮತ್ತು ಅಧಿಕಾರದ ವಿಚಾರವಾಗಿ ಭಿನ್ನಾಭಿಪ್ರಾಯ ಉಂಟಾಗಿರುವುದು ಬಹಿರಂಗ ಸತ್ಯ. ಇದನ್ನು ಜಾತಿಗೆ ತಳುಕು ಹಾಕಿ ಮಾತನಾಡುವುದು ಎಷ್ಟು ಸರಿ ಎಂಬ ಚರ್ಚೆಯೂ ಕೇಳಿ ಬಂದಿದೆ.

ಸಂಡೂರಿನಲ್ಲಿ ಸೋತಿದ್ಯಾರು?: ಅಷ್ಟಕ್ಕೂ ಸದ್ಯ ಚರ್ಚೆಗೆ ವೇದಿಕೆ ಒದಗಿಸಿದ್ದು, ಸಂಡೂರು ವಿಧಾನಸಭೆ ಉಪ ಚುನಾವಣೆ. ವಾಲ್ಮೀಕಿ ನಾಯಕ ಸಮುದಾಯದ ಅಭ್ಯರ್ಥಿ ಇದು ತೀರಾ ಬಿಜೆಪಿಯ ಆಂತರಿಕ ವಿಷಯವಾಗಿದ್ದು, ಒಂದೇ ಪಕ್ಷದ ಇಬ್ಬರು ನಾಯಕರ ನಡುವಿನ ಕಿತ್ತಾಟ. ಸಮುದಾಯಕ್ಕೆ ಅಲ್ಲ ಎಂಬ ಮಾತುಗಳು ಕೇಳಿ ಬಂದಿವೆ

ಕೊಪ್ಪಳ ಮೀಡಿಯಾ ಕ್ಲಬ್‌ನಲ್ಲಿ ನಾಯಕ ಸಮುದಾಯ ಮುಖಂಡರು ಜಂಟಿ ಸುದ್ದಿಗೋಷ್ಠಿ ನಡೆಸಿದರು.

ರೆಡ್ಡಿ-ರಾಮುಲು ಜಗಳಕ್ಕೆ ಜಾತಿ ಲೇಪನ ಬೇಡ

ಕೊಪ್ಪಳ: ಮಾಜಿ ಸಚಿವ ಶ್ರೀರಾಮುಲು ಮತ್ತು ಶಾಸಕ ಜನಾರ್ದನ ರೆಡ್ಡಿ ಅವರ ವೈಯಕ್ತಿಕ ಜಗಳಕ್ಕೆ ಜಾತಿಯ ಲೇಪನ ಹಚ್ಚುವುದು ಸರಿಯಲ್ಲ. ಈಗ ಶ್ರೀ ರಾಮುಲು ಸ್ವಾರ್ಥಕ್ಕಾಗಿ ಮಾತನಾಡುತ್ತಿರುವ ವಾಲ್ಮೀಕಿ ಮಹಾಸಭಾದ ಮುಖಂಡರಿಗೆ ಸಚಿವ ನಾಗೇಂದ್ರ, ಸಮಾಜದ ಹಣವನ್ನು ಭ್ರಷ್ಟಾಚಾರ ಮಾಡಿದಾಗ ಏಕೆ ಧ್ವನಿ ಎತ್ತಲಿಲ್ಲ ಎಂದು ವಾಲ್ಮೀಕಿ ಸಮುದಾಯದ ಮುಖಂಡರು ಪ್ರಶ್ನಿಸಿದರು. ನಗರದ ಮೀಡಿಯಾ ಕ್ಲಬ್‌ನಲ್ಲಿ ನಾಯಕ ಸಮುದಾಯ ಯಮನೂರಪ್ಪ ಚೌಡ್ಕಿ, ಜೋಗದ ದುರ್ಗಪ್ಪ ನಾಯಕ, ವಿರೂಪಾಕ್ಷ ನಾಯಕ, ಶಿವಾನಂದ ಗೌಡ ಹಾಗೂ ಪಂಪಣ್ಣ ನಾಯಕ ಜಂಟಿ ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದರು. ಶ್ರೀ ರಾಮುಲು ಅವರು ಮೂರನೇ ವ್ಯಕ್ತಿಯ ಮಾತಿಗೆ ಕಿವಿಗೊಡ ಬಾರದು. ಕಳೆದ 2008ರಲ್ಲಿ ರಾಜ್ಯದಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬರಲು ಇವರ ಸ್ನೇಹವೇ ಕಾರಣ.

> ವಾಲ್ಮೀಕಿ ನಾಯಕ ಸಮುದಾಯ ಬಡವರ ಬದುಕಿಗೆ ಆಸರೆ ಆಗಬೇಕಿದ್ದ ಕೋಟ್ಯಂತರ ರು. ಹಣ ಅನ್ಯ ರಾಜ್ಯದ ಪಾಲಾದಾಗ ಅಖಿಲ ಕರ್ನಾಟಕ ವಾಲ್ಮೀಕಿ ಮಹಾಸಭಾದ ಮುಖಂಡರು ಎಲ್ಲಿಗೆ ಹೋಗಿದ್ದರು? ಬಡವರಿಗೆ ಅನ್ಯಾಯವಾದಾಗ ಸುಮ್ಮನೆ ಕುಳಿತಿದ್ದ ಎಷ್ಟರ ಮಟ್ಟಿಗೆ ಸರಿ?
> – ಯಮನೂರಪ್ಪ ಚೌಡ್ಕಿ, ಮುಖಂಡ

ಶ್ರೀರಾಮುಲುಗೆ ವಾಲ್ಮೀಕಿ ಮಹಾಸಭಾ ಬೆಂಬಲ

ಕೊಪ್ಪಳ: ಸಂಡೂರು ಉಪ ಚುನಾವಣೆಯ ಬಿಜೆಪಿ ಅಭ್ಯರ್ಥಿ ಸೋಲಿಗೆ ಬಿ. ಶ್ರೀರಾಮುಲು ಕಾರಣ ಎಂಬ ಬಿಜೆಪಿ ರಾಜ್ಯ ಉಸ್ತುವಾರಿ ರಾಧಾ ಮೋಹನದಾಸ್ ಅಗರ್ವಾಲ್ ಹೇಳಿಕೆಯನ್ನು ಅಖಿಲ ಕರ್ನಾಟಕ ವಾಲ್ಮೀಕಿ ಮಹಾಸಭಾ ಪದಾಧಿಕಾರಿಗಳು ಖಂಡಿಸಿದ್ದಾರೆ.

ನಗರದ ಮೀಡಿಯಾ ಕ್ಲಬ್ ನಲ್ಲಿ ಜಿಲ್ಲಾಧ್ಯಕ್ಷ ಕೆ.ಎನ್. ಪಾಟೀಲ್, ಮುಖಂಡರಾದ ಸುರೇಶ ದೊಣ್ಣಿ, ಹನುಮಂತಪ್ಪ ಜೋಗದ ಹಾಗೂ ವೀರಭದ್ರಪ್ಪ ನಾಯಕ ಜಂಟಿ ಸುದ್ದಿಗೋಷ್ಠಿ ನಡೆಸಿ ಶನಿವಾರ ಮಾತನಾಡಿದರು.

ಯಾವುದೇ ಚುನಾವಣೆ ಒಬ್ಬರಿಂದಲೇ ಗೆಲ್ಲುವುದು, ಸೋಲುವುದೂ ಸಾಧ್ಯವಿಲ್ಲ. ಪ್ರತಿ ಚುನಾವಣೆಯಲ್ಲಿ ಸಾಮೂಹಿಕ ಜವಾಬ್ದಾರಿ ಇರುತ್ತದೆ. ರಾಮುಲು ವಿರುದ್ಧ ಶಾಸಕ ಜನಾರ್ದನ ರೆಡ್ಡಿ ನೇರವಾಗಿ ಮಾತನಾಡಿದ್ದಾರೆ. ಸೋಲಿನ ಹೊಣೆ ಒಬ್ಬರ ಮೇಲೆಯೇ ಹೊರಿಸಿದ್ದು ರಾಮುಲು ಅವರಿಗೆ ಮಾಡಿರುವ ಅವಮಾನ ಎಂದರು.

ರಾಮುಲು ಇಲ್ಲದೇ ಹೋಗಿದ್ದರೆ, ನಾಯಕ ಸಮಾಜ ನಿಮ್ಮ ಜತೆಗೆ ನಿಲ್ಲದಿದ್ದರೆ ರೆಡ್ಡಿ ರಾಜಕೀಯವಾಗಿ ಎಲ್ಲಿರುತ್ತಿದ್ದರು? ರಾಮುಲು ಅವರ ಬಳಿ ಲಾಭ ತೆಗೆದುಕೊಂಡ ರೆಡ್ಡಿ ವಾಪಸ್ ಕೊಟ್ಟಿದ್ದೇನು? ಎಂದು ಪ್ರಶ್ನಿಸಿದರು. ಅಗರ್ವಾಲ್ ಹೇಳಿಕೆಯಿಂದ ರಾಮುಲು ಹಾಗೂ ನಾಯಕ ಸಮಾಜಕ್ಕೆ ಅವಮಾನವಾಗಿದೆ. ನಮ್ಮ ಸಮಾಜದ ನಾಯಕನಿಗೆ ಅನ್ಯಾಯವಾದರೆ ಪಕ್ಷಾತೀತವಾಗಿ ಹೋರಾಟ ಮಾಡಲಾಗುವುದು. ರೆಡ್ಡಿ ನಾಯಕ ಸಮಾಜದ ಜನರ ಕ್ಷಮೆ ಕೋರಬೇಕು ಎಂದು ಆಗ್ರಹಿಸಿದರು.

ಕೊಪ್ಪಳ ಮೀಡಿಯಾ ಕ್ಲಬ್‌ನಲ್ಲಿ ಅಖಿಲ ಕರ್ನಾಟಕ ವಾಲ್ಮೀಕಿ ಮಹಾಸಭಾ ಮುಖಂಡರು ಜಂಟಿ ಸುದ್ದಿಗೋಷ್ಠಿ ಶನಿವಾರ ನಡೆಸಿದರು.

> ಕಳೆದ 2018ರ ವಿಧಾನಸಭೆ ಚುನಾವಣೆಯಲ್ಲಿ ಬಾದಾಮಿಯಲ್ಲಿ ಸಿದ್ದರಾಮಯ್ಯ ಎದುರು ಸ್ಪರ್ಧೆ ಮಾಡಲು ಬಿಜೆಪಿಯಲ್ಲಿ ಯಾರೂ ಗಂಡಸರು ಇರಲಿಲ್ಲವೇ? ಆಗ ರಾಮುಲು ಬೇಕಾಯಿತೇ? ಈಗ ಯಾಕೆ ನಮ್ಮ ಸಮಾಜದ ನಾಯಕನಿಗೆ ಅವಮಾನ ಮಾಡಲಾಗುತ್ತಿದೆ.
> – ಕೆ.ಎನ್. ಪಾಟೀಲ್, ಜಿಲ್ಲಾಧ್ಯಕ್ಷ, ಅಖಿಲ ಕರ್ನಾಟಕ ವಾಲ್ಮೀಕಿ ಮಹಾಸಭಾ

ಅಂಬಿಗರ ಚೌಡಯ್ಯ ಜಯಂತಿ ಆಚರಣೆ

ಸಂಡೂರು: ಅಂಬಿಗನ ಕೈಯಲ್ಲಿದ್ದದ್ದು ಅಂತಿಂತಹ ಹರಿಗೋಲಲ್ಲ, ಅದು ತನ್ನ ಜತೆಗಿದ್ದವರನ್ನು ಮನೋ ಸ್ವಾತಂತ್ರ್ಯದ ನೆಲೆಗೆ ಕರೆದೋಯ್ಯುವ ಭರವಸೆಯ, ಬಂಡಾಯದ ಹರಿಗೋಲು ಎನ್ನುವುದನ್ನು ನಾವು 12ನೇ ಶತಮಾನದ ನಿಜಶರಣ ಅಂಬಿಗರ ಚೌಡಯ್ಯನವರಾಗಿದ್ದರು ಎಂದು ಉಪನ್ಯಾಸಕ ಬಸವರಾಜ ಬಣಕಾರ ತಿಳಿಸಿದರು. ಅವರು ಪಟ್ಟಣದ ತಾಲೂಕು ಕಚೇರಿಯಲ್ಲಿ ರಾಷ್ಟ್ರೀಯ ಹಬ್ಬಗಳ ಅಧ್ಯಕ್ಷರು ಹಾಗೂ ತಹಸೀಲ್ದಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ನಿಜಶರಣ ಅಂಬಿಗರ ಚೌಡಯ್ಯ ಜಯಂತಿಯನ್ನು ಉದ್ದೇಶಿಸಿ ಉಪನ್ಯಾಸ ನೀಡಿ ಮಾತನಾಡಿ, ನಿಜಶರಣ ಅಂಬಿಗರ ಚೌಡಯ್ಯನವರು ಕ್ರಿ.ಶ. 1160ರಲ್ಲಿ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲೂಕಿನ ಇಂದಿನ ಚೌಡದಾನಪುರಗದಲ್ಲಿ ವಿರೂಪಾಕ್ಷ ಮತ್ತು ಪಂಪಾದೇವಿಯ ಉದರದಲ್ಲಿ ಜನಿಸಿದರು, ಅವರ ನಿಜತನವನ್ನು ಕುರಿತು ಚೌಡಯ್ಯನವರ ವಚನಗಳು ಹಸಿಗೋಡೆಯಲ್ಲಿ ಹರಳು ಎಸೆದಂತಿವೆ ಎಂದರೆ, ಕಾವ್ಯಾನಂದರು ನಿಜದ ನಗಾರಿ ನಿರ್ಭಯತೆಯ ಭೇರಿ ಈ ಅಂಬಿಗರ ಚೌಡಯ್ಯ ಎಂದಿದ್ದಾರೆ. ಅಧ್ಯಕ್ಷತೆ ವಹಿಸಿದ್ದ ತಹಸೀಲ್ದಾರ್ ಅನಿಲ್ ಕುಮಾರ್ ಮಾತನಾಡಿದರು. ಸಮಾರಂಭದಲ್ಲಿ ಸಮಾಜದ ಗಣ್ಯರಾದ ನಾಗರಾಜ ಉಪಾಧ್ಯಕ್ಷ, ಪಿ.ಸಂತೋಷ್ ಕಾರ್ಯದರ್ಶಿ, ಶಿವಕುಮಾರ ಖಜಾಂಚಿ, ಹುಲುಗಪ್ಪ ಬಾರಿಕರ, ಜೈ ಗಣೇಶ್, ಪರಶುರಾಮಪ್ಪ, ಪೂರ್ಣಿಮಾ, ವಿನೋಧಮ್ಮ ಹಳೇದರೋಜಿ, ಶಾರದಮ್ಮ, ಬಸವರಾಜ ಹಾಗೂ ಉಪಸ್ಥಿತರಿದ್ದರು.

ಹೊಸಪೇಟೆ ನಗರದ ಶ್ರೀ ಹರಿ ವಾಯು ಗುರುಗಳ ಅಷ್ಟೋತ್ತರ ಮಂಡಳಿ ವತಿಯಿಂದ 20ನೇ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಹರಪನಹಳ್ಳಿಯ ಶ್ರೀ ದೇವರ ತಿಮ್ಲಾಪುರ ಶ್ರೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಮಂಡಳಿ ಸದಸ್ಯರು ಶ್ರೀ ರಾಘವೇಂದ್ರ ಅಷ್ಟೋತ್ತರ ಪಾರಾಯಣ ಮಾಡಿದರು. ನಂತರ ಸದಸ್ಯರೆಲ್ಲರೂ ಸೇರಿ ಶ್ರೀ ಭೂದೇವಿ ಹಾಗೂ ಶ್ರೀದೇವಿ ಸಹಿತ ಶ್ರೀ ವೆಂಕಟೇಶ್ವರ ಸ್ವಾಮಿಗೆ ಶ್ರೀ ವೆಂಕಟೇಶ್ವರ ಕಲ್ಯಾಣೋತ್ಸವ ನೆರವೇರಿಸಿದರು.

ಕವಿಗಳು ಚಿತ್ರಿಸಿದ ಶಬ್ದ ಚಿತ್ರ ವೈವಿಧ್ಯ

ಸಂಡೂರು: ಕವಿಗಳು ಮೂಲತಃ ಕಲಾವಿದರಾಗಿದ್ದು ಅನುಕರಣದ ಸಿದ್ಧಾಂತ, ಅನುಭವದ ಮೂಲಕ ತಮ್ಮ ಸಾಹಿತ್ಯದಲ್ಲಿ ರಸಪೂರ್ಣವಾದ ಚಿತ್ರಗಳನ್ನು ಶಬ್ದಗಳ ಮೂಲಕ ಚಿತ್ರಿಸಿದ್ದಾರೆ ಎಂದು ಬಳ್ಳಾರಿಯ ಎಸ್.ಜಿ.ಆರ್. ಸಿ.ಎಂ. ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕ ಡಾ. ಎಂ ಸೋಮಶೇಖರ ತಿಳಿಸಿದರು. ಪಟ್ಟಣದ ಎಪಿಎಂಸಿ ಪದವಿ ಪೂರ್ವ ಕಾಲೇಜಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕ ಸಂಡೂರು ವತಿಯಿಂದ ನಡೆದ ಚಿತ್ರ ಕಲಾವಿದ ನಾಡೋಜ ವಿ.ಟಿ. ಕಾಳೆ ದತ್ತಿ ಕಾರ್ಯಕ್ರಮದಲ್ಲಿ ಕನ್ನಡ ಕವಿಗಳು ಚಿತ್ರಿಸಿದ ಚಿತ್ರಗಳು ಎನ್ನುವ ವಿಷಯವನ್ನು ಕುರಿತು ಮಾತನಾಡಿದರು. ಕನ್ನಡ ಸಾಹಿತ್ಯದ ಮಹಾಕವಿಗಳಾದ ಪಂಪ, ರನ್ನ, ಪೊನ್ನ, ಕುವೆಂಪು ಕುಮಾರವ್ಯಾಸ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಬಿ.ಜಿ.ಎಲ್. ಸ್ವಾಮಿ, ಪೂರ್ಣಚಂದ್ರ ತೇಜಸ್ವಿ ಮೊದಲಾದ ಕವಿಗಳು, ಸಾಹಿತಿಗಳು ಸಮಕಾಲಿನ ಸಮಾಜದ ಚಿತ್ರಣವನ್ನು ತಮ್ಮ ಕಾವ್ಯಗಳಲ್ಲಿ ಸಾಹಿತ್ಯದಲ್ಲಿ ಚಿತ್ರಿಸಿ ಕನ್ನಡ ಸಾಹಿತ್ಯವನ್ನು ಅಮರಗೊಳಿಸಿದ್ದಾರೆ ಎಂದರು. ಈ ಸಂದರ್ಭದಲ್ಲಿ ಅರಳೆ ಕುಮಾರಸ್ವಾಮಿ ಅವರು ತಮ್ಮ ಹಿರಿಯರ ನೆನಪಿನಲ್ಲಿ ಹೊಸದತ್ತಿಯನ್ನು ನೀಡಿದರು. ಜಯ ಮತ್ತು ಗೀತಾ ಪ್ರಾರ್ಥನೆ ಹಾಡಿದರು, ನಾಗರತ್ನ ಸ್ವಾಗತಿಸಿದರು. ಶಿಕ್ಷಕರಾದ ಎ.ತಿಪ್ಪೇಸ್ವಾಮಿ ನಿರೂಪಣೆ ಮಾಡಿದರು. ಕಾರ್ಯದರ್ಶಿಗಳಾದ ಡಾ. ತಿಪ್ಪೇರುದ್ರ, ಪದಾಧಿಕಾರಿಗಳಾದ ಎ.ಎಂ. ಶಿವಮೂರ್ತಿಸ್ವಾಮಿ, ಬಶೀರ್ ಅಹ್ಮದ್ ಭಾಗವಹಿಸಿದ್ದರು.

₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಭಾನುವಾರ 26.01.2025 ಸಂಪುಟ: 67 ಸಂಚಿಕೆ: 261 ಪುಟಗಳು: 10+4 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಗಣತಂತ್ರ ದಿನದ ಶುಭಾಶಯಗಳು

ಗಿಲ್ ಶತಕದಾಟ ವ್ಯರ್ಥ, ಪಂಜಾಬ್ ವಿರುದ್ಧ ಗೆದ್ದು ಬೀಗಿದ ಕರ್ನಾಟಕ

ಇನ್ನಿಂಗ್ಸ್ ಮತ್ತು 207 ರನ್ ಅಂತರದ ಭರ್ಜರಿ ಜಯ, ರಣಜಿ ಕನಸು ಜೀವಂತ

ಸೊಂಪಾದ ಪುಟಗಳು



ಅಮೆರಿಕ ಅಧ್ಯಕ್ಷರ ಹಾಸ್ಯ ದಿನದ ಬಗ್ಗೆ ನಿಮಗೆ ಗೊತ್ತಿದೆಯೇ?

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್ 6



ಅಧಿಕಾರ, ತ್ಯಾಗ ಮತ್ತು ರಾಜಕೀಯ ಅನಿವಾರ್ಯತೆ

ವಿದ್ಯಮಾನ
ವಿನಾಯಕ ವೆಂ.ಭಟ್ಟ ಅಂಬ್ಲಿಹೊಂಡ 7

ದಾರಿದೀಪೋಕ್ತಿ



ನಮ್ಮ ಇರುವಿಕೆಯು ತೋರಿಕೆಯಾಗಬಾರದು. ಒಂದು ಸಲ ತೋರಿಕೆಗಾಗಿ ಬದುಕಲು ಶುರು ಮಾಡಿದರೆ, ನಮ್ಮ ಅಸ್ತಿತ್ವವನ್ನು ಮರೆತು ಬದುಕಬೇಕಾಗುತ್ತದೆ.

ವಕ್ರತುಂಡೋಕ್ತಿ

ನಿಮಗೆ ಏನೇ ಕೆಟ್ಟದ್ದಾಗಿರುವಾಗ ಎಲ್ಲರಿಗೂ ಹೇಳಬೇಕಾದ ಅಗತ್ಯವಿಲ್ಲ, ನೆರೆಮನೆಯವರಿಗೆ ಹೇಳಿದರೆ ಸಾಕು.

ಶಾಸಕ ಇಕ್ಬಾಲ್ ವಿರುದ್ಧ ದೂರು

ರಾಮನಗರ: ಶಾಸಕ ಇಕ್ಬಾಲ್ ಹುಸೇನ್ ಅವರು ಉಳುವವನೇ ಭೂಮಿಯ ಒಡೆಯ ಎಂಬ ಭೂ ಸುಧಾರಣಾ ಕಾಯ್ದೆಯನ್ನು ಉಲ್ಲಂಘನೆ ಮಾಡಿ ಇಡೀ ಊರನ್ನೇ ಖರೀದಿ ಮಾಡಿದ್ದಾರೆಂದು ಗ್ರಾಮಸ್ಥರು ಲೋಕಾಯುಕ್ತಕ್ಕೆ ದೂರು ನೀಡಿದ್ದಾರೆ. ಕನಕಪುರ ತಾಲೂಕಿನ ಯಡಮಾರನಹಳ್ಳಿ ದಾಖಲೆಯ ಹೊಂಗನೆದೊಡ್ಡಿ ಗ್ರಾಮದಲ್ಲಿನ ಸುಮಾರು 67 ಎಕರೆ 30 ಗುಂಟೆ ಜಮೀನನ್ನು ಇಕ್ಬಾಲ್ ಹುಸೇನ್ ತಮ್ಮ ಹೆಸರಿಗೆ ಮಾಡಿಕೊಂಡಿದ್ದು, ಗ್ರಾಮಸ್ಥರಲ್ಲಿ ಊರು ಒಕ್ಕಲೆಬ್ಬಿಸುವ ಆತಂಕ ಸೃಷ್ಟಿಯಾಗಿದೆ. ಕಳೆದ 50-60 ವರ್ಷಗಳಿಂದ ವ್ಯವಸಾಯ ಮಾಡಿಕೊಂಡು, ಜೀವನ ನಡೆಸುತ್ತಿದ್ದ ಇಡೀ ಊರನ್ನೇ ಅಧಿಕಾರ ದುರ್ಬಳಕೆ ಮಾಡಿಕೊಂಡು ಖರೀದಿಸಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿ ಶಾಸಕ ಇಕ್ಬಾಲ್ ಹುಸೇನ್ ಸೇರಿ 7 ಮಂದಿ ವಿರುದ್ಧ ಲೋಕಾಯುಕ್ತಕ್ಕೆ ಗ್ರಾಮಸ್ಥರು ದೂರು ನೀಡಿದ್ದಾರೆ. ಕನಕಪುರ ತಾಲೂಕಿನ ವಿಎ, ಆರ್.ಐ, ಶಿರಸ್ತೇದಾರ್, ಹಾಲಿ ತಹಸೀಲ್ದಾರ್, ಹಿಂದಿನ ತಹಸೀಲ್ದಾರ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ.

ಮಾತಂದ್ರೆ ಮಾತು

ನೀವು ಎತ್ತರಕ್ಕೆ ಏರಬೇಕೆಂದರೆ ಕಷ್ಟಪಟ್ಟು ಕೆಲಸ ಮಾಡುವುದೊಂದೇ ದಾರಿ. ಯಾವ ಕ್ಷೇತ್ರದಲ್ಲಿ ನಿಮಗೆ ಅಭಿರುಚಿ, ಸಾಮರ್ಥ್ಯ ಇದೆಯೋ ಅದನ್ನು ಕಂಡುಕೊಂಡು, ಅದರಲ್ಲಿ ಸಮರ್ಪಣಾ ಭಾವದಿಂದ ದುಡಿಯಿರಿ. ಯಾವ ದೇಶದಲ್ಲಿಯೂ ಸರಕಾರವೇ ಎಲ್ಲರಿಗೂ ಉದ್ಯೋಗ ಕೊಡುತ್ತಿಲ್ಲ.



– ಎನ್.ಆರ್.ನಾರಾಯಣ ಮೂರ್ತಿ
ಇನ್ಫೋಸಿಸ್ ಸಹಸಂಸ್ಥಾಪಕ

ಫನ್‌ತರಂಗ

– ರಘುಪತಿ ಶೃಂಗೇರಿ –



ಮೈಕ್ರೋ ಸಾಲಗಾರರಿಗೆ ಸುಗ್ರೀವಾಜ್ಞೆಯ ರಕ್ಷಣೆ
ಆಂಧ್ರಪ್ರದೇಶ ಮಾದರಿ ಕಾನೂನು ಜಾರಿಗೆ ಚಿಂತನೆ

ಬಡ್ಡಿ ಹೈದರಿಗೆ ಮೂಗುದಾರ

ಬೆಂಗಳೂರು: ರಾಜ್ಯದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ದಾಂಧಲ ತಗ್ಗಿಸಲು ಹಾಗೂ ಸಾರ್ವಜನಿಕರಿಗೆ ರಕ್ಷಣೆ ನೀಡಲು 'ಸುಗ್ರೀವಾಜ್ಞೆ' ಹೊರಡಿಸಲು ರಾಜ್ಯ ಸರಕಾರ ತೀರ್ಮಾನಿಸಿದೆ.

ದಿನದಿಂದ ದಿನಕ್ಕೆ ಸಾರ್ವಜನಿಕರಿಂದ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ವಿರುದ್ಧ ದೂರು ಕೇಳಿಬಂದ ಹಿನ್ನಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತುರ್ತು ಸಭೆ ನಡೆಸಿದರು. ಸಭೆಗೆ ಸಚಿವರು ಹಾಗೂ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಮುಖ್ಯಸ್ಥರನ್ನು ಕರೆಯಲಾಗಿತ್ತು. ಸರಣಿ ಸಭೆಯ ಬಳಿಕ ರಾಜ್ಯ ಸರಕಾರ, ನಿಯಮ ಮೀರಿ ಸಾಲ ವಸೂಲಿ ಮಾಡುವ ಮೈಕ್ರೋ ಫೈನಾನ್ಸ್‌ಗಳ ಅಟ್ಟಹಾಸಕ್ಕೆ ನಿಯಂತ್ರಣ ಹೇರಲು ಸುಗ್ರೀವಾಜ್ಞೆ ಜಾರಿಗೊಳಿಸಲು ತೀರ್ಮಾನಿಸಲಾಗಿದೆ.

ಎರಡು ಹಂತಗಳಲ್ಲಿ ನಡೆದ ಸಭೆಯ ಮೊದಲ ಸುತ್ತಿನಲ್ಲಿ ಮೈಕ್ರೋ ಫೈನಾನ್ಸ್ ಅಧಿಕಾರಿಗಳೊಂದಿಗೆ ಚರ್ಚಿಸಿ, ಎಚ್ಚರಿಕೆ ನೀಡಿದರು. ಸಾಲ ಮರುಪಾವತಿಗೆ ಇರುವ ಮಾರ್ಗಸೂಚಿ ಬಿಟ್ಟು, ಬೇರೆ ರೀತಿಯಲ್ಲಿ ವಸೂಲಿಗೆ ಮುಂದಾದರೆ ಕಠಿಣ ಕ್ರಮ ವಹಿಸಬೇಕಾಗುತ್ತದೆ ಎನ್ನುವ ಸ್ಪಷ್ಟ ಎಚ್ಚರಿಕೆ ರವಾನಿಸಿದರು. ಇದಾದ ಬಳಿಕ ಸಚಿವರೊಂದಿಗೆ ಸಭೆ ನಡೆಸಿದ ಸಿಎಂ, ಈ ಹಾವಳಿಯನ್ನು ತಗ್ಗಿಸಲು ಪೊಲೀಸರಿಗೆ ಇನ್ನಷ್ಟು 'ಸ್ವಾತಂತ್ರ್ಯ' ನೀಡಲು ತೀರ್ಮಾನಿಸಿದ್ದಾರೆ.

ಸಾಲ ವಸೂಲಿಗೆ ಕಿರುಕುಳ; ಶಿಕ್ಷಾರ್ಹ ಅಪರಾಧ: ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಗೆ ಕಡಿವಾಣ ಹಾಕಲು ಮುಂದಾಗಿರುವ ಸರಕಾರ, ಸಾಲಗಾರರಿಗೆ ಕಿರುಕುಳ ಕೊಡುವುದನ್ನು ಶಿಕ್ಷಾರ್ಹ ಅಪರಾಧ ಎಂದು ಪರಿಗಣಿಸುವ ಹೊಸ ಕಾನೂನನ್ನು ಸುಗ್ರೀವಾಜ್ಞೆ ಮೂಲಕ ಜಾರಿ ಮಾಡಲು ನಿರ್ಧರಿಸಿದೆ. ಪರವಾನಗಿ ಪಡೆದು ಸಾಲ ಕೊಡುವ ಮೈಕ್ರೋ ಫೈನಾನ್ಸ್ ಕಂಪನಿಗಳು ನಿಯಮ ಬಾಹಿರ ವರ್ತಿಸುವುದನ್ನು ತಡೆಯಲು ಹಾಗೂ ಪರವಾನಗಿ ಪಡೆಯದೇ ಮೀಟರ್ ಬಡ್ಡಿ ದಂಧೆ ನಡೆಸುವ ಕಂಪನಿಗಳ ವಿರುದ್ಧ ಮುಲಾ ಜಿಲ್ಲದೆ ಕ್ರಮ ಕೈಗೊಳ್ಳಲು ಕಾನೂನು ರೂಪಿಸಲು ತೀರ್ಮಾನಿಸಲಾಗಿದೆ.

ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿದ್ದಾಮಯ್ಯ ಅವರು, ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಕಿರುಕುಳ ತಡೆಯಲು ಹೊಸ ಕಾಯಿದೆಯನ್ನು ಸುಗ್ರೀವಾಜ್ಞೆ ಮೂಲಕ ಜಾರಿ ಮಾಡಲು ನಿರ್ಧರಿ ಸಿದ್ದೇವೆ. ಶೀಘ್ರದಲ್ಲೇ ಕಾನೂನನ್ನು ಜಾರಿ ಮಾಡುತ್ತೇವೆ. ಯಾವುದೇ ಹಣಕಾಸು ಸಂಸ್ಥೆಗಳು ಸಾಲಗಾರರಿಗೆ ಸಾಲ ಕೊಡಬೇಡಿ ಎಂದು ನಾವು ಹೇಳಿಲ್ಲ. ಆದರೆ, ಕಾನೂನು ಮೀರಿ ಸಾಲ ವಸೂಲಾತಿಗೆ ಮುಂದಾದರೆ ಅದನ್ನು ನಾವು ಸಹಿಸುವುದಿಲ್ಲ ಎಂದು ಹೇಳಿದ್ದೇವೆ. ನಿಯಮಗಳನ್ನು ಪಾಲಿಸದ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮಕ್ಕೆಗೊಳ್ಳುತ್ತೇವೆ ಎಂದು ಎಚ್ಚರಿಸಿದರು.

→ 4

ಮೈಕ್ರೋ ಫೈನಾನ್ಸ್ ಅಧಿಕಾರಿಗಳಿಗೆ ನೀಡಿದ ಸೂಚನೆಗಳೇನು?

- ಮರುಪಾವತಿಯ ಸಾಮರ್ಥ್ಯ ನೋಡದೇ ಸಾಲ ನೀಡಿದ್ದು ಏಕೆ? ಇನ್ಮುಂದೆ ಸಾಮರ್ಥ್ಯ ನೋಡಿ ಸಾಲ ನೀಡಬೇಕು
- ಮಹಿಳೆಯರ, ವೃದ್ಧರ ಮೇಲೆ ದಬ್ಬಾಳಿಕೆ ನಡೆಸುವುದನ್ನು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ
- ಸಂಜೆ 5 ಗಂಟೆ ಬಳಿಕ ಸಾಲ ವಸೂಲಾತಿಗೆ ಹೋಗುವಂತಿಲ್ಲ
- ಕಾನೂನು ಕೈಗೆತ್ತಿಕೊಳ್ಳಲು ನಿಮ್ಮ ಸಿಬ್ಬಂದಿಗೆ ಅನುಮತಿ ಕೊಟ್ಟವರು ಯಾರು?
- ಸಾಲ ವಸೂಲಿಗೆ ರೌಡಿಗಳನ್ನು ಬಳಸುತ್ತಿದ್ದೀರಾ? ಮೂರನೇ ಪಾರ್ಟಿಯಿಂದ ಸಾಲ ವಸೂಲಿ ಮಾಡಿಸುವಂತಿಲ್ಲ

ಸಾಲಗಾರರ ವಿರುದ್ಧ ದೌರ್ಜನ್ಯ ವೆಸಗಬಾರದು, ಕಿರುಕುಳ ನೀಡಬಾ ರದು. ಆರ್‌ಬಿಐ ನಿಯಮಗಳನ್ನು ಪಾಲಿಸಬೇಕು. ಹೆಚ್ಚು ಬಡ್ಡಿ ವಿಧಿಸ ಬಾರದು ಎಂದು ಎಚ್ಚರಿಕೆ ನೀಡಿದ್ದೇವೆ. ನಿಯಮ ಮೀರಿದರೆ ಕಠಿಣ ಕ್ರಮಕ್ಕೆಗೊಳ್ಳುತ್ತೇವೆ. ಹೊಸ ಕಾಯ್ದೆಯಲ್ಲಿ ಯಾವುದೇ ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಸಾಲಗಾರರಿಗೆ ಕಿರುಕುಳ ಕೊಟ್ಟರೆ ಅವರ ವಿರುದ್ಧ ಜಾಮೀನು ರಹಿತ ಪ್ರಕರಣ ದಾಖಲಿಸಿ, ಆರೋಪ ಸಾಬೀತಾದರೆ ಮೂರು ವರ್ಷ ಕಠಿಣ ಶಿಕ್ಷೆ, ಜತೆಗೆ ಫೈನಾನ್ಸ್ ಕಂಪನಿಗಳ ಲೈಸೆನ್ಸ್ ರದ್ದು ಮಾಡುವ ಅಂಶಗಳು ಈ ನೂತನ ಕಾಯ್ದೆಯಲ್ಲಿ ಇರಲಿದೆ. – **ಸಿದ್ದರಾಮಯ್ಯ**, ಮುಖ್ಯಮಂತ್ರಿ

2025ರ ಪದ್ಮ ಪ್ರಶಸ್ತಿ ಪ್ರಕಟ

ನಟ ಅನಂತನಾಗ್ ಸೇರಿ ರಾಜ್ಯದ 9 ಸಾಧಕರಿಗೆ ಗೌರವ

ರಾಜ್ಯದ ಸಾಧಕರು

- **ಪದ್ಮ ವಿಭೂಷಣ**
  ಲಕ್ಷ್ಮೀನಾರಾಯಣ ಸುಬ್ರಮಣಿಯಂ
- **ಪದ್ಮ ಭೂಷಣ**
  ನಟ ಅನಂತನಾಗ್, ಎ.ಸೂರ್ಯಪ್ರಕಾಶ್
- **ಪದ್ಮಶ್ರೀ**
  ರಿಕ್ಕಿ ಕೇಜ್, ವಿಜಯಲಕ್ಷ್ಮಿ ದೇಶಮಾನೆ
  ವೆಂಕಪ್ಪ ಅಂಬಾಜಿ,
  ಹಾಸನ ರಘು
  ಭೀಮವ್ವ ದೊಡ್ಡಬಾಳಪ್ಪ ಶಿಳ್ಳೆಕ್ಯಾತರ
  ಪ್ರಶಾಂತ್ ಪ್ರಕಾಶ್

ದೆಹಲಿ: ಕೇಂದ್ರ ಸರಕಾರವು ಪ್ರಸಕ್ತ ಸಾಲಿನ ಅತ್ಯುನ್ನತ ನಾಗರಿಕ ಸೇವಾ ಪ್ರಶಸ್ತಿಗಳಾದ ಪದ್ಮ ವಿಭೂಷಣ, ಪದ್ಮಭೂಷಣ ಹಾಗೂ ಪದ್ಮಶ್ರೀ ಪುರಸ್ಕೃತರ ಹೆಸರುಗಳನ್ನು ಪ್ರಕಟಿಸಿದೆ.

ವಯೋಲಿನ್ ವಾದಕ ಲಕ್ಷ್ಮೀನಾರಾಯಣ ಸುಬ್ರಮಣಿ ಯಂ ಅವರಿಗೆ ಪದ್ಮ ವಿಭೂಷಣ, ನಟ ಅನಂತನಾಗ್, ಶಿಕ್ಷಣ ತಜ್ಞ ಹಾಗೂ ಅಂಕಣಕಾರ ಎ.ಸೂರ್ಯಪ್ರಕಾಶ್ ಅವರಿಗೆ ಪದ್ಮ ಭೂಷಣ, ಗ್ರ್ಯಾಮಿ ಪ್ರಶಸ್ತಿ ವಿಜೇತ ಸಂಗೀತ ನಿರ್ದೇಶಕ ರಿಕ್ಕಿ ಕೇಜ್, ವೈದ್ಯಕೀಯ ಕ್ಷೇತ್ರದಲ್ಲಿ ವಿಜಯಲಕ್ಷ್ಮಿ ದೇಶಮಾನೆ, ಕಲೆಯಲ್ಲಿ ವೆಂಕಪ್ಪ ಅಂಬಾಜಿ, ಹಾಸನ ರಘು, ಭೀಮವ್ವ ದೊಡ್ಡಬಾಳಪ್ಪ ಶಿಳ್ಳೆಕ್ಯಾತರ, ಕೈಗಾರಿಕಾ ಕ್ಷೇತ್ರದಲ್ಲಿ ಪ್ರಶಾಂತ್ ಪ್ರಕಾಶ್ ಅವರು ಪದ್ಮ ಶ್ರೀ ಗೌರವಕ್ಕೆ ಭಾಜನರಾದ ಕರ್ನಾಟಕದ ಸಾಧಕರು.

→ 4

ರಾಜ್ಯದ 21 ಪೊಲೀಸರಿಗೆ ರಾಷ್ಟ್ರಪತಿ ಪದಕ

ಪೊಲೀಸ್ ಇಲಾಖೆಯಲ್ಲಿ ಶ್ಲಾಘನೀಯ ಸೇವೆ ಸಲ್ಲಿಸಿದ ರಾಜ್ಯದ ಇಬ್ಬರು ಡಿಐಜಿಪಿ ಹಾಗೂ ಕೆಎಸ್‌ಆರ್‌ಪಿಯ ಕಮಾಂಡೆಂಟ್ ಸೇರಿದಂತೆ 21 ಪೊಲೀಸರಿಗೆ 2025ನೇ ಸಾಲಿನ ರಾಷ್ಟ್ರಪತಿ ಪದಕ ಲಭಿಸಿದೆ. ಗಣರಾಜ್ಯೋತ್ಸವದ ಸಂದರ್ಭದಲ್ಲಿ ರಾಷ್ಟ್ರಪತಿಯವರ 'ವಿಶಿಷ್ಟ ಸೇವಾ ಪದಕ' ಹಾಗೂ 'ಶ್ಲಾಘನೀಯ ಸೇವಾ ಪದಕ' ಪುರಸ್ಕೃತ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಹೆಸರು ಪ್ರಕಟಿಸಲಾಗಿದೆ.

ವಿಜಯೇಂದ್ರ ವಿರುದ್ಧ ಧ್ವನಿ ಎತ್ತಿದ ಮಾಜಿ ಸಿಎಂ

ಬಿವೈವಿ ವಿರುದ್ಧ ಡಿವಿಎಸ್ ಗರಂ

ಬೆಂಗಳೂರು: ವಿಜಯೇಂದ್ರ ಈಗ ಅಡ್‌ಹಾಕ್ (ಹಂಗಾಮಿ) ರಾಜ್ಯಾಧ್ಯಕ್ಷ. ಚುನಾವಣೆ ನಂತರ ಅಧಿಕೃತ ಅಧ್ಯಕ್ಷರ ನೇಮಕ ಆಗುತ್ತದೆ. ಈಗಿನ ಅಧ್ಯಕ್ಷರು ತಮ್ಮ ಜವಾಬ್ದಾರಿ ನಿರ್ವಹಿಸುವ ಸಂದರ್ಭಗಳಲ್ಲಿ ಅತೃಪ್ತರ ಗುಂಪನ್ನು ವಿಶ್ವಾಸಕ್ಕೆ ಪಡೆಯುವಲ್ಲಿ ಯಶಸ್ವಿ ಆಗಿಲ್ಲ ಹಾಗೂ ಅತೃಪ್ತರನ್ನು ವಿಶ್ವಾಸಕ್ಕೆ ಪಡೆಯಲಿಲ್ಲ ಎಂದು ಮಾಜಿ ಸಿಎಂ ಸದಾನಂದ ಗೌಡ ಹರಿಹಾಯ್ದಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೊಸ ಅಧ್ಯಕ್ಷರ ನೇಮಕ ಸರ್ವ ಸಮ್ಮತದಿಂದ ಆಗಬೇಕು. ಅದೂ ಪಾರದರ್ಶಕವಾಗಿ ಆಗಬೇಕು. ಆಗಲೇ ಪಕ್ಷಕ್ಕೆ ಶಕ್ತಿ ಬರುವುದು. ಈಗ ರಾಜ್ಯ ಬಿಜೆಪಿಯಲ್ಲಿ ಕೆಳಗಿನ ಹಂತದವರೆಗೂ ಗುಂಪುಗಾರಿಕೆ ಹಬ್ಬಿದೆ. ಈ ಗುಂಪುಗಾರಿಕೆಗೆ ಮದ್ದು ಕೊಡುವ ಕೆಲಸ ಹೈಕಮಾಂಡ್ ಮಾಡಬೇಕು ಎಂದರು.

ನಮ್ಮ ಮನೆಯಲ್ಲಿ ಹಿರಿಯರು ಸೇರಿದ್ದು ನಿಜ. ಆದರೆ, ಅದು ಯಾವುದೇ ಗುಂಪುಗಾರಿಕೆ ಸಭೆ ಅಲ್ಲ. ಕೋರ್ ಕಮಿಟಿ ಚರ್ಚೆಗಳ ಅನುಷ್ಠಾನಕ್ಕೆ ನಮ್ಮನೆಯಲ್ಲಿ ಸಭೆ ಮಾಡಲಾಗಿತ್ತು ಎಂದು ಸ್ಪಷ್ಟನೆ ನೀಡಿದರು.

ನಟ ಸೈಫ್‌ಗೆ ಇರಿತ: ತನಿಖೆ ಚುರುಕು

ಮುಂಬೈ: ನಟ ಸೈಫ್ ಅಲಿ ಖಾನ್ ಅವರಿಗೆ ಚಾಕುವಿನಿಂದ ಇರಿಯಲಾಗಿದ್ದ ಕೃತ್ಯದ ಕುರಿತು ಪೊಲೀಸರು ತನಿಖೆ ಚುರುಕು ಗೊಳಿಸಿದ್ದು, ಸೈಫ್ ಅಲಿ ಖಾನ್ ಅವರ ರಕ್ತದ ಮಾದರಿ, ಧರಿ ಸಿದ್ದ ಬಟ್ಟೆ, ಆ ಸಂದರ್ಭ ಸ್ಥಳದಲ್ಲಿದ್ದ ಸಿಬ್ಬಂ ದಿಯ ರಕ್ತದ ಮಾದರಿ ಸಂಗ್ರಹಿಸಿ ಪ್ರಯೋ ಗಾಲಯಕ್ಕೆ ಕಳುಹಿಸಿದ್ದಾರೆ. ಕೃತ್ಯದ ಸ್ಥಳದಲ್ಲಿ ಸಂಗ್ರಹಿಸಲಾಗಿದ್ದ ಬೆರಳಚ್ಚು ಮಾದರಿಗಳು, ಬಂಧಿತ ಆರೋಪಿಯ ಬೆರಳಚ್ಚಿನ ಜತೆಗೆ ಹೋಲಿಕೆ ಆಗುತ್ತಿದೆ. ಪ್ರಕರಣದಲ್ಲಿ ಒಬ್ಬರಿಗಿಂತ ಹೆಚ್ಚು ಮಂದಿ ಭಾಗಿಯಾಗಿರಬಹುದು ಎಂದು ಶಂಕಿಸಿದ್ದಾರೆ.

ಸುಮಾರು 90 ಸಾವಿರ ಕೋಟಿ ಮೌಲ್ಯದ ಯೋಜನೆಗಳನ್ನು ಪ್ರಸ್ತಾಪಿಸಿದ ಡಿಸಿಎಂ

ಅನುದಾನ ಕೋರಿ ನಿರ್ಮಲಾಗೆ ಮುಖ್ಯಮಂತ್ರಿ, ಡಿಸಿಎಂ ಪತ್ರ

ಬೆಂಗಳೂರು: ಕೇಂದ್ರದ ಬಜೆಟ್‌ಗೆ ಸರ್ವ ಸಿದ್ಧತೆ ಪೂರ್ಣಗೊಂಡಿದ್ದು, ಇನ್ನೊಂದು ವಾರದಲ್ಲಿ ಬಜೆಟ್ ಮಂಡನೆಯಾಗುವ ಕ್ಷಣದಲ್ಲಿ ಕರ್ನಾಟಕಕ್ಕೆ ಆಗಬೇಕಿರುವ ಆರ್ಥಿಕ ನೆರವುಗಳಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರತ್ಯೇಕ ಪತ್ರದ ಮೂಲಕ ಕೇಂದ್ರಕ್ಕೆ ಮನವಿ ಸಲ್ಲಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿ ನರೇಂದ್ರ ಮೋದಿ, ಆರ್ಥಿಕ ಸಚಿವೆ ನಿರ್ಮಲಾ ಸೀತಾರಾಮನ್, ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್, ಜಲಶಕ್ತಿ ರಾಜ್ಯ ಸಚಿವ ವಿ. ಸೋಮಣ್ಣ ಅವರಿಗೆ ಪತ್ರ ಬರೆದಿದ್ದಾರೆ. ಇನ್ನೊಂದೆಡೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೇಂದ್ರ ಆರ್ಥಿಕ ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಬರೆದು, ಸುಮಾರು 90 ಸಾವಿರ ಕೋಟಿ ರು. ಯೋಜನೆಗಳಿಗೆ ಆರ್ಥಿಕ ನೆರವು ನೀಡುವಂತೆ ಮನವಿ ಮಾಡಿದ್ದಾರೆ.

200 ಪ್ಯಾಲೆಸ್ತೀನಿ ಕೈದಿಗಳ ಬಿಡುಗಡೆ

ಕೈರೊ: 15 ತಿಂಗಳ ಯುದ್ಧದ ಬಳಿಕ ಇಸ್ರೇಲ್ ಹಾಗೂ ಹಮಾಸ್ ನಡುವೆ ಕದನ ವಿರಾಮ ಏರ್ಪಟ್ಟಿದ್ದು, ಹಮಾಸ್ ವಶದಲ್ಲಿದ್ದ ಇಸ್ರೇಲ್‌ನ ನಾಲ್ವರು ಮಹಿಳಾ ಸೇನಾ ಸಿಬ್ಬಂದಿಯನ್ನು ಬಿಡುಗಡೆ ಮಾಡಲಾಗಿದೆ. ಇದಕ್ಕೆ ಪ್ರತಿಯಾಗಿ ಇಸ್ರೇಲ್‌ನ ವಶದಲ್ಲಿದ್ದರುವ 200 ಪ್ಯಾಲೆ ಸ್ಟೀನ್ ಕೈದಿಗಳನ್ನು ಬಿಡುಗಡೆಗೊಳಿಸಲಾಗಿದೆ. ಇಸ್ರೇಲ್ ಬಿಡುಗಡೆ ಮಾಡಿರುವ 200 ಪ್ಯಾಲೆಸ್ಟೀನ್ ಕೈದಿಗಳ ಪಟ್ಟಿಯನ್ನು ಹಮಾಸ್ ಬಿಡುಗಡೆ ಮಾಡಿದೆ. ಈ ಪಟ್ಟಿಯಲ್ಲಿ ದೀರ್ಘಾ ವಧಿಯ ಶಿಕ್ಷೆಗೆ ಗುರಿಯಾದವರು ಸೇರಿ ಇತರರು ಇದ್ದಾರೆ ಎಂದು ತಿಳಿದುಬಂದಿದೆ.

26/11 ರೂವಾರಿ ಗಡಿಪಾರಿಗೆ ಸಮ್ಮತಿ

ವಾಷಿಂಗ್ಟನ್: 2008ರ ನ.26ರಂದು ಮುಂಬೈ ನಲ್ಲಿ ಭಯೋತ್ಪಾದಕ ದಾಳಿ ನಡೆಸಿ 175 ಜನರ ಸಾವಿಗೆ ಕಾರಣವಾದ ಸಂಚಿನ ಮುಖ್ಯ ರೂವಾರಿ ಘೋಷಿತ ಅಪರಾಧಿ ತಹಾವುರ್ ರಾಣಾನನ್ನು ಭಾರತಕ್ಕೆ ಗಡಿಪಾರಾಗುವ ದಿನ ಹತ್ತಿರವಾಗಿದೆ. ಭಾರತಕ್ಕೆ ಗಡಿಪಾರು ಆಗುವುದನ್ನು ತಪ್ಪಿಸಿಕೊಳ್ಳಲು ತಹಾವುರ್ ರಾಣಾ ಸಲ್ಲಿಸಿದ್ದ ಮೇಲ್ಮನವಿಯನ್ನು ಅಮೆರಿಕದ ಸುಪ್ರೀಂಕೋರ್ಟ್ ಶನಿವಾರ ವಜಾಗೊಳಿಸಿದೆ. ಪರಿಣಾಮ, ರಾಣಾಗೆ ಗಡಿಪಾರು ಕ್ರಮದಿಂದ ಪಾರಾಗುವ ಕೊನೆಯ ಪ್ರಯತ್ನದಲ್ಲೂ ಸೋಲಾಗಿದ್ದು, ರಾಣಾ ಭಾರತಕ್ಕೆ ಹಸ್ತಾಂತರಗೊಳ್ಳುವುದು ಖಚಿತವಾಗಿದೆ.

ವರದಿಯ ವಿವರ ಬಹಿರಂಗಪಡಿಸಲು ನಿರಾಕರಿಸಿದ ಲೋಕಾಯುಕ್ತರು

ಮುಡಾ: ತನಿಖಾ ವರದಿ ಸಲ್ಲಿಕೆ

ಬೆಂಗಳೂರು: ಮುಡಾ ಹಗರಣ ಪ್ರಕರಣ ಸಂಬಂಧ ಸಿಎಂ ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಿ ಮತ್ತು ಇತರರ ವಿರುದ್ಧ ತನಿಖೆ ಪೂರ್ಣಗೊಳಿಸಿರುವ ಲೋಕಾ ಯುಕ್ತ ಪೊಲೀಸರು ಶನಿವಾರ ಬೆಂಗಳೂರಿನ ವಿಶೇಷ ನ್ಯಾಯಾಲಯಕ್ಕೆ ವರದಿ ಸಲ್ಲಿಸಿದ್ದಾರೆ ಎನ್ನಲಾಗಿದೆ.

- ಹಗರಣ ಸಂಬಂಧ ವರದಿ ಸಲ್ಲಿಸಲು ಜ.27ರ ಗಡುವು ನೀಡಿದ್ದ ನ್ಯಾಯಾಲಯ
- ನ್ಯಾಯಾಲಯದ ವಿಚಾರಣೆಗೂ ಮುನ್ನವೇ ಲೋಕಾಯುಕ್ತರಿಂದ ವರದಿ ಸಲ್ಲಿಕೆ
- ಇದು ಅಂತಿಮ ವರದಿಯಲ್ಲ, ಈವರೆಗಿನ ತನಿಖಾ ವರದಿಯಷ್ಟೇ ಎಂದ ಲೋಕಾಯುಕ್ತರು

ಹಗರಣ ಸಂಬಂಧ ವರದಿ ಸಲ್ಲಿಸಲು ನ್ಯಾಯಾಲಯ ಜ.27ರ ಗಡುವು ನೀಡಿತ್ತು. ಆದರೆ ಜನವರಿ 27ರಂದು ನಡೆಯಲಿರುವ ನ್ಯಾಯಾಲಯದ ವಿಚಾರಣೆಗೂ ಮುನ್ನ ವರದಿ ಸಲ್ಲಿಸಲಾಗಿದೆ. ಮೈಸೂರು ಲೋಕಾಯುಕ್ತ ಅಧಿಕಾರಿಗಳು ವರದಿಯ ಬಗ್ಗೆ ಯಾವುದೇ ವಿವರ ಬಹಿರಂಗ ಪಡಿಸಲು ನಿರಾಕರಿಸಿದ್ದಾರೆ. ಆದರೆ, ಇದು ಅಂತಿಮ ವರದಿಯಲ್ಲ, ಈವರೆಗಿನ ತನಿಖಾ ಪ್ರಗತಿ ವರದಿಯಷ್ಟೇ. ಇನ್ನೂ ವರದಿಗೆ ಮತ್ತಷ್ಟು ಕಾಲಾವಕಾಶ ಕೋರಲು ಮುಂದಾಗಿದ್ದಾರೆಂದು ಮೂಲಗಳು ತಿಳಿಸಿವೆ. ಈ ವರದಿಯನ್ನು ಲೋಕಾಯುಕ್ತ ನೇತೃತ್ವದ ಇಬ್ಬರು ಹಿರಿಯ ಐಪಿಎಸ್ ಅಧಿಕಾರಿಗಳು ಮತ್ತು ಐಜಿಪಿ ಸುಬ್ರಹ್ಮಣ್ಯೇಶ್ವರ ರಾವ್ ಅವರು ಶುಕ್ರವಾರ ಪರಿಶೀಲಿಸಿದ್ದಾರೆ ಎನ್ನಲಾಗಿದೆ.

ಪ್ರಕರಣದ ಹಿನ್ನೆಲೆ: ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರ ದೂರಿನ ಮೇರೆಗೆ, ಬೆಂಗಳೂರಿನ ವಿಶೇಷ ನ್ಯಾಯಾಲಯವು ಸೆಪ್ಟೆಂಬರ್ 25 ರಂದು ಮೈಸೂರಿನ ಲೋಕಾಯುಕ್ತ ಪೊಲೀಸರಿಗೆ ತನಿಖೆ ನಡೆಸುವಂತೆ ನಿರ್ದೇಶಿಸಿತ್ತು. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆ ವಿಚಾರದಲ್ಲಿ ಭಾರೀ ಅಕ್ರಮ ನಡೆದಿದೆ ಎಂದು ಆರೋಪಿಸಲಾಗಿದೆ. ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರ ಹೆಸರಿನಲ್ಲಿದ್ದ ಕೆಸರೆ ಗ್ರಾಮದ ಸರ್ವೆ ನಂಬರ್ 464ರಲ್ಲಿ 3.16 ಎಕರೆ ಜಮೀನನ್ನು ದೇವನೂರು ಬಡಾವಣೆ ನಿರ್ಮಾಣಕ್ಕೆ ಭೂಸ್ವಾಧೀನ ಮಾಡಿಕೊಳ್ಳಲಾಗಿತ್ತು. ಈ ಜಾಗವನ್ನು ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ದಾನ ಪತ್ರದ ಮೂಲಕ ಅವರ ಸಹೋದರ ಕೊಟ್ಟಿದ್ದರು. ಇದು ಒಟ್ಟು 1,48,104 ಚದರ ಅಡಿ ಜಾಗ ಇತ್ತು. ಅದರ ಬದಲಿಗೆ ಮುಡಾ 2021ರಲ್ಲಿ ಪಾರ್ವತಿ ಅವರಿಗೆ ಮೈಸೂರಿನ ವಿಜಯನಗರ ಬಡಾವಣೆಯಲ್ಲಿ 38,284 ಚದರ ಅಡಿ ಜಾಗ ಕೊಟ್ಟಿದ್ದಾರೆ. ಇದು ಚರ್ಚೆಗೆ ಕಾರಣವಾಗಿ ಲೋಕಾ ಮೆಟ್ಟಿಲು ಹತ್ತಿದೆ.

"ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ"

ಟ್ವೀಟೂ-ಖಾರಾ

ಕಾಂಗ್ರೆಸ್, ಕರ್ನಾಟಕ

ದೇಶದ ಸ್ವಾಯತ್ತ ತನಿಖಾ ಸಂಸ್ಥೆಗಳು ಕೇಂದ್ರ ಬಿಜೆಪಿ ಸರಕಾರದ ಆಣತಿಯಂತೆ ಕಾರ್ಯನಿರ್ವಹಿಸುತ್ತಿವೆ ಎಂದು ಮತ್ತೆ ಮತ್ತೆ ಸಾಬೀತಾಗುತ್ತಲೇ ಇದೆ. ಇದಕ್ಕೆ ಪುಷ್ಟಿ ನೀಡುವಂತೆ ನ್ಯಾಯಾಲಯವೇ ಇ.ಡಿ. ಅಧಿಕಾರಿಗಳ ಕಾರ್ಯವೈಖರಿಯ ಮೇಲೆ ಬಲವಾದ ಅನುಮಾನ ವ್ಯಕ್ತಪಡಿಸಿ ದಂಡ ವಿಧಿಸಿದೆ. ಪ್ರತಿಪಕ್ಷಗಳ ನಾಯಕರು, ರಾಜಕೀಯ ವಿರೋಧಿಗಳು, ಪ್ರತಿಪಕ್ಷಗಳ ಪರವಾಗಿರುವವರನ್ನು ಗುರಿಯಾಗಿರಿಸಿ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಬಿಜೆಪಿ ಸರಕಾರ.

ಆನಂದ ಎ., ಬೆಂಗಳೂರು

ಸುಮ್ ಸುಮ್ಮೆ ದ್ವೇಷದ ರಾಜಕಾರಣ ಮಾಡಿದರೆ ಹೀಗೆ ದಂಡ ಹಾಕ್ತಾರೆ ಅನ್ನುವುದು ಬಿಜೆಪಿಯ ಅಂಧಭಕ್ತರಿಗೆ ನೆನಪಿರಲಿ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಬೆಂಗಳೂರು**

ಸಮಸ್ಯೆಯೇನು..?

- ಯಲೇನಹಳ್ಳಿಯ ಮುಖ್ಯರಸ್ತೆಯ ಅಕ್ಷಯ್ ನಗರ ಬಳಿ ಡ್ರೈನೇಜ್ ನೀರು ರಸ್ತೆಗೆ ಬರುತ್ತಿರುವುದು.
- **ಪರಿಹಾರ:** ಯಲೇನಹಳ್ಳಿಯ ಮುಖ್ಯರಸ್ತೆಯ ಅಕ್ಷಯ್ ನಗರ ಬಳಿ ಡ್ರೈನೇಜ್ ನೀರು ರಸ್ತೆಗೆ ನೀರು ಬರುತ್ತಿರುವುದನ್ನು ಪರಿಶೀಲನೆ ನಡೆಸಿ, ರಸ್ತೆಗೆ ನೀರು ಬರದಂತೆ ಕಾಮಗಾರಿ ನಡೆಸಲಾಗುತ್ತಿದೆ.

ಸಚಿವರ ಪ್ರಯತ್ನದಿಂದ ಮರಳಿ ಗೂಡು ಸೇರಿದ ಕುಟುಂಬ

ಸಂಕಷ್ಟದಲ್ಲಿದ್ದ ಕುಟುಂಬಕ್ಕೆ ಸಚಿವರ ಸಕಾಲಿಕ ನೆರವು

ಫೈನಾನ್ಸ್ ಅಬ್ಬರಕ್ಕೆ ಕೌಂಟರ್ ಕೊಟ್ಟ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್

ಬೆಳಗಾವಿ: ಮೈಕ್ರೋ ಫೈನಾನ್ಸ್‌ನವರು ನೀಡುತ್ತಿರುವ ಕಿರುಕುಳಕ್ಕೆ ಸಿಲುಕಿ ಬಡ ಮಹಿಳೆಯರು ನಲುಗಿ ಹೋಗುತ್ತಿದ್ದಾರೆ. ಹಣ ಕಟ್ಟದ ಕುಟುಂಬಗಳನ್ನು ಮನೆಯಿಂದ ಹೊರಹಾಕಿ ಬೀಗ ಜಡಿಯುವ ಕಾರ್ಯ ನಿರಂತರವಾಗಿ ಸಾಗುತ್ತಿದೆ. ಬೆಳಗಾವಿಯಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ. ಬಾಣಂತಿ ಎನ್ನುವುದನ್ನು ನೋಡದೆ ಅಧಿಕಾರಿಗಳು ಅಟ್ಟಹಾಸ ಮೆರೆದ ಸಂದರ್ಭದಲ್ಲಿ, ಫೈನಾನ್ಸ್ ಅಧಿಕಾರಿಗಳ ಜೊತೆ ಮಾತುಕತೆ ನಡೆಸಿ ಮೊದಲು ಹೊರಹಾಕಿದ್ದ ಕುಟುಂಬವನ್ನು ಮರಳಿ ಗೂಡು ಸೇರಿಸಿದ ಅಪರೂಪದ ಪ್ರಸಂಗಕ್ಕೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಪ್ರತಿನಿಧಿಸುವ ಬೆಳಗಾವಿ ಗ್ರಾಮೀಣ ಕ್ಷೇತ್ರ ಸಾಕ್ಷಿಯಾಗಿದೆ.

ಘಟನೆಯ ವಿವರ: ಮೈಕ್ರೋ ಫೈನಾನ್ಸ್‌ನಿಂದ ಮನೆ ಕಟ್ಟಲು ಬೆಳಗಾವಿ ತಾಲೂಕಿನ ತಾರಿಹಾಳ ಗ್ರಾಮದ ಲೋಹಾರ್ ಕುಟುಂಬ ಐದು ಲಕ್ಷ ಸಾಲ ಪಡೆದಿತ್ತು. ಕುಟುಂಬ ಸದಸ್ಯರ ಅನಾರೋಗ್ಯದ ಹಿನ್ನೆಲೆಯಲ್ಲಿ ಕೆಲ ಕಂತು ಕಟ್ಟಲು ಸಾಧ್ಯವಾಗಿರಲಿಲ್ಲ. ಆದರೆ ಹೆಚ್ಚಿನ ಬಡ್ಡಿ ವಿಧಿಸಿ ಕೂಡಲೇ ಕಟ್ಟುವಂತೆ ತಕರಾರು ಎತ್ತಿದ್ದ ಫೈನಾನ್ಸ್ ಸಿಬ್ಬಂದಿ ಇಡೀ ಕುಟುಂಬವನ್ನು ಮನೆಯಿಂದ ಹೊರಹಾಕಿ ಬಾಗಿಲಿಗೆ ಬೀಗ ಜಡಿದಿದ್ದರು. ವಿಪರ್ಯಾಸವೆಂದರೆ ಹೆರಿಗೆ ನಂತರ ತವರಿನಲ್ಲಿ ಆರೈಕೆ ಪಡೆಯುತ್ತಿದ್ದ ಬಾಣಂತಿಯನ್ನು ಮನೆಯಿಂದ ಆಚೆ ಹಾಕಲಾಗಿತ್ತು.

ಈವರೆಗೆ ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಕಿರುಕುಳಕ್ಕೆ ಮನೆಯಿಂದ ಹೊರಬಿದ್ದ ಕುಟುಂಬಗಳು ವಾಪಸ್ ಹೋಗಬೇಕಾದರೆ ಸಂಪೂರ್ಣ ಸಾಲ ಮರುಪಾವತಿಸಿ ಹೋಗಿರುವ ಉದಾಹರಣೆಗಳ ಮಧ್ಯೆ, ಸಚಿವರೊಬ್ಬರು ಅಧಿಕಾರಿಗಳ ಜೊತೆ ಮಾತನಾಡಿ ನಿರಾಶ್ರಿತರ ಕುಟುಂಬಕ್ಕೆ ನೆರವಾಗಿದ್ದು ಇದೇ ಮೊದಲು.

ತಾರಿಹಾಳ ಗ್ರಾಮದಲ್ಲಿ ಮೈಕ್ರೋ ಫೈನಾನ್ಸ್‌ನವರ ಕಿರುಕುಳಕ್ಕೆ ಗುರಿಯಾಗಿ ಮನೆಯಿಂದ ಹೊರಹಾಕಲ್ಪಟ್ಟ ಕುಟುಂಬ, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಸಕಾಲಿಕ ನೆರವಿನಿಂದ ಮತ್ತೆ ತನ್ನ ಗೂಡು ಸೇರಿದೆ. ಬಾಣಂತಿ–ಮಗು ಸೇರಿದಂತೆ ಇಡೀ ಕುಟುಂಬಕ್ಕೆ ಮತ್ತೆ ಆಶ್ರಯ ದೊರೆತಂತಾಗಿದೆ.

ಮರಳಿ ಗೂಡು ಸೇರಿದ ಕುಟುಂಬ

ಸಾಲ ಮರುಪಾವತಿಸಿಲ್ಲ ಎನ್ನುವ ಕಾರಣಕ್ಕೆ ಬಾಣಂತಿ ಸೇರಿ ಕುಟುಂಬದವರನ್ನೆಲ್ಲ ಹೊರಹಾಕಿ ಬೀಗ ಹಾಕಲಾಗಿದ್ದ ಪ್ರಕರಣಕ್ಕೆ ತ್ವರಿತವಾಗಿ ಸ್ಪಂದಿಸಿದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಮನೆಯ ಬೀಗ ತೆರವುಗೊಳಿಸಿ ಕುಟುಂಬದವರನ್ನು ಮರಳಿ ಗೂಡಿಗೆ ಸೇರಿಸಿದ್ದಾರೆ. ಕುಟುಂಬದ ದುಃಸ್ಥಿತಿ ತಿಳಿದ ತಕ್ಷಣ ತಮ್ಮ ಇಲಾಖೆ ಅಧಿಕಾರಿಗಳು ಹಾಗೂ ಆಪ್ತ ಸಹಾಯಕರನ್ನು ಸ್ಥಳಕ್ಕೆ ಕಳುಹಿಸಿ ಕುಟುಂಬಕ್ಕೆ ನೆರವು ಒದಗಿಸಿದರು.

ಗಾಯಾಳುವಾಗಿದ್ದರೂ ಲೆಕ್ಕಿಸದ ಸಚಿವರು: ಸಚಿವೆ ಹೆಬ್ಬಾಳ್ಕರ್ ಸ್ವತಃ ಅಪಘಾತದಲ್ಲಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೂ ಅದೆಲ್ಲವನ್ನೂ ಲೆಕ್ಕಿಸದೆ ಕುಟುಂಬದ ಸಹಾಯಕ್ಕೆ ಧಾವಿಸಿದ್ದು ವಿಶೇಷ. ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಸಚಿವರೊಬ್ಬರು ಮೈಕ್ರೋ ಫೈನಾನ್ಸ್ ಅವಾಂತರಕ್ಕೆ ತಕ್ಕ ಪ್ರತ್ಯುತ್ತರ ನೀಡಿ ಮೊದಲು ಅಮಾಯಕ ಜನರಿಗೆ ನ್ಯಾಯ ಒದಗಿಸಿಕೊಟ್ಟಿದ್ದು ಮೊದಲ ಪ್ರಕರಣ ಎಂದರೆ ತಪ್ಪಾಗಲಾರದು.

ತೊಗಲುಗೊಂಬೆ ಕಲಾವಿದೆ ಭೀಮವ್ವ ಶಿಳ್ಳೇಕ್ಯಾತರ್‌ಗೆ ಪ್ರಶಸ್ತಿ

ಕೊಪ್ಪಳ: ಜಿಲ್ಲೆಗೆ ಮೊದಲ ಬಾರಿಗೆ ಪದ್ಮಶ್ರೀ ಪ್ರಶಸ್ತಿ ಒಲಿದು ಬಂದಿದೆ. ಕೇಂದ್ರ ಸರಕಾರ ನೀಡುವ ದೇಶದ ಅತ್ಯುನ್ನತ ಗೌರವ ಪ್ರಶಸ್ತಿಗೆ ಜಿಲ್ಲೆಯ ತೊಗಲುಗೊಂಬೆ ಕಲಾವಿದೆ ಭೀಮವ್ವ ಶಿಳ್ಳೇಕ್ಯಾತರ ಭಾಜನರಾಗಿದ್ದಾರೆ.

ಕೊಪ್ಪಳ ತಾಲೂಕು ಮೋರನಾಳದ 96 ವರ್ಷದ ಭೀಮವ್ವ, ರಾಜ್ಯೋತ್ಸವ ಸೇರಿ ಹತ್ತು ಹಲವಾರು ಪ್ರಶಸ್ತಿ ತಮ್ಮದಾಗಿಸಿಕೊಂಡಿದ್ದಾರೆ.

ಇದೀಗ ಪದ್ಮಶ್ರೀ ಪಡೆಯುವ ಮೂಲಕ ಜಿಲ್ಲೆಗೂ ಕೀರ್ತಿ ತಂದಿದ್ದಾರೆ. ದೇಶದ ಹಲವೆಡೆ ಭೀಮವ್ವ ತೊಗಲುಗೊಂಬೆ ಕಲೆ ಪ್ರದರ್ಶಿಸಿದ್ದಾರೆ. ಈಗ ಮನೆಯಲ್ಲಿ ಮಕ್ಕಳು, ಮೊಮ್ಮಕ್ಕಳೊಂದಿಗೆ ಕಲಾ ತಂಡ ಮಾಡಿಕೊಂಡು, ದೇಶ, ರಾಜ್ಯದ ವಿವಿಧ ಭಾಗದಲ್ಲಿ ತೊಗಲುಗೊಂಬೆ ಕಲೆ ಪ್ರದರ್ಶಿಸುವ ಮೂಲಕ ಕಲೆಯನ್ನು ಜೀವಂತ ಉಳಿಸಿದ್ದಾರೆ.

ವಿದೇಶದಲ್ಲಿ ಪ್ರದರ್ಶನ: ಭೀಮವ್ವ ಅಮೆರಿಕ, ಪ್ಯಾರಿಸ್, ಇಟಲಿ, ಇರಾನ್ ಮತ್ತು ಇರಾಕ್, ಸ್ವಿಟ್ಜರ್ಲೆಂಡ್, ಹಾಲೆಂಡ್ ಮುಂತಾದ ದೇಶಗಳಲ್ಲಿ ಭೀಮವ್ವ ಪ್ರದರ್ಶನ ನೀಡಿದ್ದಾರೆ. ರಾಮಾಯಣ, ಮಹಾ ಭಾರತದಂತಹ ಮಹಾಕಾವ್ಯ ಹಾಗೂ ಪ್ರಸ್ತುತ ವಿದ್ಯಮಾನಗಳನ್ನು ತೊಗಲುಗೊಂಬೆ ಮೂಲಕ ಪ್ರದರ್ಶನ ನೀಡಿದ್ದಾರೆ.

ಗೊಂದಳಿ ಕಲಾವಿದ ವೆಂಕಪ್ಪಗೆ ಪದ್ಮಶ್ರೀ

ಬಾಗಲಕೋಟೆ–ಕಲಬುರಗಿಯ ಪದ್ಮ ಪುರಸ್ಕೃತರು

ಬಾಗಲಕೋಟೆ: 6 ದಶಕದಿಂದ ಗೊಂದಳಿ ಕಲೆಯನ್ನು ಪ್ರದರ್ಶಿಸುತ್ತಾ ಅದನ್ನು ಮುಂದಿನ ಪೀಳಿಗೆಗೆ ತಲುಪಿಸುತ್ತಿರುವ ನಗರದ ಡಾ. ವೆಂಕಪ್ಪ ಅಂಬಾಜಿ ಸುಗತೇಕರ ಅವರಿಗೆ ಪದ್ಮಶ್ರೀ ಪ್ರಶಸ್ತಿ ದೊರಕಿದೆ.

ವಂಶ ಪರಂಪರೆಯ ಗೊಂದಳಿ ಕಲಾವಿದರಾದ ವೆಂಕಪ್ಪ ಸುಗತೇಕರ ಅವರು ಇಲ್ಲಿಯವರೆಗೆ 150 ಕ್ಕೂ ಹೆಚ್ಚು ಕಥೆಗಳು ಹಾಗೂ ಒಂದು ಸಾವಿರಕ್ಕೂ ಅಧಿಕ ಹಾಡು ಹಾಡುವ ಮೂಲಕ ಗೊಂದಳಿ ಕಲೆಯನ್ನು ಬೆಳೆಸುತ್ತಿದ್ದಾರೆ. ಇಂತಹ ಕಲಾವಿದನಿಗೆ ಈ ಪ್ರಶಸ್ತಿ ದೊರೆತಿದ್ದು, ಜಿಲ್ಲೆಗೆ ಮತ್ತೊಂದು ಹೆಮ್ಮೆಯ ವಿಷಯವಾಗಿದೆ.

67 ವರ್ಷದಿಂದ ಗೊಂದಳಿ ಹಾಡು ಹಾಗೂ ಕಥೆಗಳನ್ನು ಹೇಳುವ ವೆಂಕಪ್ಪ, ಒಟ್ಟು 77 ಜನರಿಗೆ ಈ ಕಲೆಯನ್ನು ಕರಗತ ಮಾಡಿಸಿದ್ದಾರೆ. ಶಾಲೆಯ ಮುಖ ನೋಡದ ಅವರು ಗೊಂದಳಿ ಪದಗಳ ಮೂಲಕ ದೇಶವನ್ನು ಸುತ್ತುವ ಜತೆಗೆ ಹತ್ತಾರು ಪ್ರಶಸ್ತಿಗಳನ್ನು ಮುಡಿಗೇರಿಸಿ ಕೊಂಡಿದ್ದಾರೆ.

ಪ್ರಧಾನಿ ಮೋದಿ ಪ್ರಶಂಸೆ: ದೂರದರ್ಶನ ಹಾಗೂ ಆಕಾಶವಾಣಿಯಲ್ಲಿ 70ಕ್ಕೂ ಹೆಚ್ಚು ಕಾರ್ಯಕ್ರಮ ನೀಡಿರುವ ವೆಂಕಪ್ಪ ಸುಗತೇಕರಗೆ ಪದ್ಮಶ್ರೀ ಒಲಿದು ಬಂದಿದೆ. ಇದಕ್ಕೆ ಮೊದಲು ಜಾನಪದ ವಿವಿ ಗೌರವ ಡಾಕ್ಟರೇಟ್ ನೀಡಿದ್ದರೆ, 2017ರಲ್ಲಿ ಜಾನಪದ ಶ್ರೀ, 2012 ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ 15 ಪ್ರಶಸ್ತಿಗಳನ್ನು ಪಡೆದ ಅವರ ಬಗ್ಗೆ ಪ್ರಧಾನಿ ಮೋದಿ, 2024ರ ಫೆಬ್ರುವರಿಯಲ್ಲಿ ನಡೆದ ಮನ್ ಕೀ ಬಾತ್ ಕಾರ್ಯಕ್ರಮದಲ್ಲಿ ಸುಗತೇಕರ್ ಕಲಾ ಸೇವೆಯನ್ನು ಶ್ಲಾಘಿಸಿದ್ದರು.

ಡಾ.ವಿಜಯಲಕ್ಷ್ಮಿ ದೇಶಮಾನೆಗೆ ಪದ್ಮಶ್ರೀ

ಕಲಬುರಗಿ: ಖ್ಯಾತ ಕ್ಯಾನ್ಸರ್ ತಜ್ಞೆ, ಶಸ್ತ್ರಚಿಕಿತ್ಸಕಿ, ಕರ್ನಾಟಕದ ಮೊಟ್ಟ ಮೊದಲ ಮಹಿಳಾ ಆಂಕಾಲಜಿಸ್ಟ್‌ಗಳಲ್ಲೊಬ್ಬರಾದ ಕಲಬುರಗಿ ಮೂಲದ ಡಾ. ವಿಜಯಲಕ್ಷ್ಮಿ ದೇಶಮಾನೆ ಅವರಿಗೆ ವೈದ್ಯಕೀಯ ಸೇವೆಗಾಗಿ 2025ನೇ ಸಾಲಿನ ದೇಶದ ಅತ್ಯುನ್ನತ ನಾಗರಿಕ ಸೇವಾ ಪದ್ಮಶ್ರೀ ಪ್ರಶಸ್ತಿ ಘೋಷಿಸಿದೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಗಣರಾಜ್ಯೋತ್ಸವ ಮುನ್ನ ದಿನ ಘೋಷಣೆ ಮಾಡುವ ಪ್ರಶಸ್ತಿಯಲ್ಲಿ ರಾಜ್ಯದ ಮೂವರಿಗೆ ಪದ್ಮಶ್ರೀ ಪ್ರಶಸ್ತಿ ಘೋಷಣೆ ಮಾಡಿದ್ದು, ಇದರಲ್ಲಿ ಜಿಲ್ಲೆಯ ಖ್ಯಾತ ಕ್ಯಾನ್ಸರ್ ವೈದ್ಯೆಯಾಗಿ 40 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಡಾ. ವಿಜಯಲಕ್ಷ್ಮಿ ದೇಶಮಾನೆ ಅವರಿಗೆ ಪ್ರಶಸ್ತಿ ಘೋಷಿಸಿ ಗೌರವಿಸಿದೆ.

40 ವರ್ಷಗಳ ಸಾರ್ಥಕ ಸೇವೆ: ಡಾ. ವಿಜಯಲಕ್ಷ್ಮಿ ದೇಶಮಾನೆ, ಹಿರಿಯ ಆಂಕಾಲಜಿಸ್ಟ್ ಸರ್ಜನ್ ಆಗಿ 4 ದಶಕಗಳಿಗೂ ಹೆಚ್ಚು ಕಾಲ ಕ್ಯಾನ್ಸರ್ ವಿರುದ್ಧ ಹೋರಾಡುವ ಜನರ ಸಹಾಯಕ್ಕೆ ತಮ್ಮ ಜೀವನ ಮುಡಿಪಾಗಿಟ್ಟಿದ್ದಾರೆ. ಆರ್ಥಿಕವಾಗಿ ಹಿಂದುಳಿದ ಕ್ಯಾನ್ಸರ್ ಪೀಡಿತರಿಗೆ ಉಚಿತ ಚಿಕಿತ್ಸೆ ಮತ್ತು ಸಮಾಲೋಚನೆ ನೀಡಿದ್ದಾರೆ. ಬೆಂಗಳೂರಿನ ಕಿದ್ವಾಯಿ ಸ್ಮಾರಕ ಆಂಕಾಲಜಿ ಸಂಸ್ಥೆಯ ನೇತೃತ್ವ ವಹಿಸಿದ್ದರು. ಕ್ಯಾನ್ಸರ್ ಆರೈಕೆ, ಸಂಶೋಧನೆ ಮತ್ತು ಸಮುದಾಯ ಜಾಗೃತಿಯಲ್ಲಿ ಪ್ರಗತಿಗೆ ಕಾರಣರಾದ್ದಾರೆ. ಅಲ್ಲದೇ, ಸ್ತನ ಕ್ಯಾನ್ಸರ್ ಸಂಶೋಧನೆಯಲ್ಲಿ ಪ್ರವರ್ತಕರಾಗಿರುವ ಅವರು ಆಂಕಾಲಜಿ ಕ್ಷೇತ್ರಕ್ಕೆ ಗಮನಾರ್ಹವಾಗಿ ಕೊಡುಗೆ ನೀಡುವ ಪರಿಣಾಮಕಾರಿ ಅಧ್ಯಯನಗಳನ್ನು ನಡೆಸಿದ್ದಾರೆ.

ಅಮೆರಿಕ, ಸ್ವೀಡನ್ ,ಮುಂಬೈ ಕೊಲಂಬೋಗೆ ಪ್ರತಿನಿಧಿಯಾಗಿ ಭೇಟಿ ನೀಡಿರುವ ವಿಜಯಲಕ್ಷ್ಮಿ ದೇಶಮಾನ,ವಿವಿಧ ಪತ್ರಿಕೆಗಳಲ್ಲಿ ಕ್ಯಾನ್ಸರ್ ಕುರಿತು ಹಲವಾರು ಲೇಖನಗಳನ್ನು ಪ್ರಕಟಿಸಿದ್ದಾರೆ. ಭಾರತೀಯ ಮಹಿಳಾ ವೈದ್ಯಕೀಯ ಸಂಘದ ಅಧ್ಯಕ್ಷೆಯಾಗಿ ಕಾರ್ಯನಿರ್ವಹಿಸಿದ್ದಾರೆ. ಹಲವು ಸಂಸ್ಥೆಗಳು ರಾಷ್ಟ್ರೀಯ ರತ್ನ, ಮೆಡಿಕಲ್ ಎಕ್ಸಲೆನ್ಸ್ ಪ್ರಶಸ್ತಿ, ಶಿರೋಮಣಿ ಪ್ರಶಸ್ತಿ, 1999 ವರ್ಷದ ಮಹಿಳಾ ಪ್ರಶಸ್ತಿ ಕೊಟ್ಟು ಗೌರವಿಸಿದೆ. ಅಲ್ಲದೇ, ಅಂತಾರಾಷ್ಟ್ರೀಯ ಸ್ಟಡಿ ಸರ್ಕಲ್ 2003 ಹಾಗೂ 204ರಲ್ಲಿ ಚಿನ್ನದ ಪದಕ ನೀಡಿ ಗೌರವಿಸಿದೆ.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ತುಮಕೂರು ಉಪ ವಿಭಾಗ (ಪ್ರಾದೇಶಿಕ), ರಾಮಕೃಷ್ಣನಗರ,
ಕುಣಿಗಲ್ ರಸ್ತೆ,ತುಮಕೂರು– 572105
Email: acftumkur@gmail.com
ಕರ್ನಾಟಕ ಅರಣ್ಯ ಇಲಾಖೆ

ಸಂಖ್ಯೆ: ಸ.ಅ.ಸಂ/ತುಉವಿ/ಇಟೆಂಡರ್/ಸಿಆರ್–508/2024–25 ದಿನಾಂಕ: 23–01–2025

ಇ–ಟೆಂಡರ್ ಪ್ರಕಟಣೆ.

2024–25ನೇ ಸಾಲಿನಲ್ಲಿ KMERC(CEPMIZ) ಯೋಜನೆಯಡಿ ತುಮಕೂರು ಪ್ರಾದೇಶಿಕ ವಿಭಾಗ, ತುಮಕೂರು ಉಪ ವಿಭಾಗದ, ಗುಬ್ಬಿ ವಲಯದಲ್ಲಿ ಚೈನ್ ಲಿಂಕ್ ಮೆಷ್ ಮತ್ತು ಆರ್.ಸಿ.ಸಿ ಪಿಲ್ಲರ್ ಸಹಿತ ಮುಳ್ಳುತಂತಿ ಬೇಲಿ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು 2024–25ನೇ ಸಾಲಿಗೆ ಸಿವಿಲ್ ಗುತ್ತಿಗೆದಾರರಾಗಿ ನೊಂದಾವಣೆಯಾಗಿರುವ ಗುತ್ತಿಗೆದಾರರಿಂದ ಪ್ರತ್ಯೇಕವಾಗಿ ಇ–ಟೆಂಡರ್‌ಗಳನ್ನು ದಾಖಲಿಸಲು ಕೋರಿ ಟೆಂಡರ್ ಆಹ್ವಾನಿಸಲಾಗಿದೆ. **ಒಟ್ಟು 04** ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ **ರೂ. 1,37,67,780/–** ಗಳಿಗೆ ಇ.ಎಂ.ಡಿ ಮೊತ್ತ **ರೂ. 2,06,517/–** ಗಳಾಗಿರುತ್ತದೆ ಮತ್ತು ಕನಿಷ್ಠ ಅಂದಾಜು ಮೊತ್ತ **ರೂ. 45,00,619/–**ಗಳಿಗೆ ಇ.ಎಂ.ಡಿ. ಮೊತ್ತ **ರೂ. 90,012/–** ಗಳಾಗಿರುತ್ತದೆ. **ದಿನಾಂಕ: 10–02–2025ರ ಅಪರಾಹ್ನ 3–00 ಗಂಟೆಯವರೆಗೆ** ಟೆಂಡರ್ ಸಲ್ಲಿಸಬಹುದಾಗಿದೆ ಹಾಗೂ **ದಿನಾಂಕ: 11–02–2025ರಂದು ಅಪರಾಹ್ನ 3–00 ಗಂಟೆಗೆ** ತಾಂತ್ರಿಕ ಬಿಡ್ಡುಗಳನ್ನು ತೆರೆಯಲಾಗುವುದು. ಪರಿಮಾಣ, ಇಎಂಡಿ ಹಾಗೂ ಇನ್ನಿತರೆ ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಮತ್ತು ಅಂತರ್ಜಾಲದ ಮೂಲಕ ಪಡೆಯಬಹುದಾಗಿದೆ.

ವೆಬ್‌ಸೈಟ್ ವಿಳಾಸ- http://www.kppp.karnataka.gov.in.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
DIPR/TUM/RO-159/24-25/Oysters ತುಮಕೂರು ಉಪ ವಿಭಾಗ, ತುಮಕೂರು

ಲೋಕೋಪಯೋಗಿ ಇಲಾಖೆ, ತುಮಕೂರು,

ಕ್ರ.ಸಂ:ಕಾಇಂ:ಲೋಇವಿ:ತುಮ:ಕಿ.ಇಂ–1: ಟೆಂಡರ್ 34:2024–25. ದಿನಾಂಕ: 22–01–2025

ಟೆಂಡರ್ ಪ್ರಕಟಣೆ ಸಂ. 34/2024–25 ದಿನಾಂಕ 22–01–2025

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 34/2024–25: ದಿನಾಂಕ 22–01–2025 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ ಲೆಕ್ಕ ಶೀರ್ಷಿಕೆ 5054–ಜಿಲ್ಲಾ ಮತ್ತು ಇತರೆ ರಸ್ತೆಗಳ ಸುಧಾರಣೆ ಯೋಜನೆ ಹಾಗೂ 8443 ಠೇವಣಿ ವಂತಿಕೆ ಯೋಜನೆ ಅಡಿಯಲ್ಲಿ **13 ಕಾಮಗಾರಿಗೆ** KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ **ರೂ: 83.13 ಲಕ್ಷ**ಗಳು, ಟೆಂಡರಿಗಿಟ್ಟ ಕನಿಷ್ಠ ಮೊತ್ತ **ರೂ: 6.57 ಲಕ್ಷ**ಗಳು ಇ.ಎಂ.ಡಿ ಗರಿಷ್ಠ ಮೊತ್ತ **ರೂ. 1,66,260/,** ಇ.ಎಂ.ಡಿ ಕನಿಷ್ಠ ಮೊತ್ತ **ರೂ. 16,443/–** ಅರ್ಹ ಗುತ್ತಿಗೆದಾರರು 3ನೇ ದರ್ಜೆ ಹಾಗೂ 4ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: **3 ಮತ್ತು 6 ತಿಂಗಳು**ಗಳು ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: **06–02–2025 ರ 17–00 ಗಂಟೆಗೆ,** KPPP-Portal ಮೂಲಕ ಟೆಂಡರ್‌ಅನ್ನು **ದಿನಾಂಕ 23–01–2025 ರಿಂದ 07–02–2025 ರ 16.00 ಗಂಟೆ**ವರೆಗೆ ಪಡೆಯಬಹುದಾಗಿದೆ. ಟೆಂಡರ್‌ಅನ್ನು ಸ್ವೀಕರಿಸಲು ಕೊನೆಯ **ದಿನಾಂಕ ಮತ್ತು ವೇಳೆ: 07–02–2025 ರ 16–00 ಗಂಟೆ**ವರೆಗೆ, ತಾಂತ್ರಿಕ ಬಿಡ್‌ಅನ್ನು ತೆರೆಯುವ **ದಿನಾಂಕ ಮತ್ತು ವೇಳೆ: 10–02–2025ರ 11–00 ಗಂಟೆಗೆ,** ಆರ್ಥಿಕ ಬಿಡ್‌ಅನ್ನು ತೆರೆಯುವ **ದಿನಾಂಕ ಮತ್ತು ವೇಳೆ: 11–02–2025 ರ 11–00 ಗಂಟೆಗೆ,** ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ,
DIPR/TUM/RO-162/24-25/Oysters ತುಮಕೂರು.

ಬಡ್ಡಿ ಹೈದರಿಗೆ ಮೂಗುದಾರ

← ಮೊದಲಪುಟದಿಂದ

ಐದು ಗಂಟೆಯ ನಂತರ ಯಾರೂ ಸಾಲ ವಸೂಲಾತಿಗೆ ಹೋಗಬಾರದು, ರೌಡಿಗಳನ್ನು ಬಳಸುವಂತಿಲ್ಲ. ಆರ್‌ಬಿಐ ನಿಯಮದಂತೆ ನಡೆದುಕೊಳ್ಳಲು ಸೂಚನೆ ನೀಡಲಾಗಿದೆ. ಕಾನೂನು ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವವರಿಗೆ ರಕ್ಷಣೆ ಕೊಡುತ್ತೇವೆ ಎಂದು ಹೇಳಿದರು.

ಅಧಿಕಾರಿಗಳ ಸಮರ್ಥನೆ ಏನು?

- ಸಾಲ ಪಡೆದವರು ಮರುಪಾವತಿಸದಿದ್ದರೆ ಸಂಸ್ಥೆ ನಡೆಸುವುದು ಹೇಗೆ?
- ಸಾಲ ಮರುಪಾವತಿ ಮಾಡಿದವರಿಗೆ ನಮ್ಮಿಂದ ಯಾವುದೇ ಸಮಸ್ಯೆಯಾಗಿಲ್ಲ
- ಆರ್‌ಬಿಐ ಮಾನದಂಡದಂತೆಯೇ ವಸೂಲಿ ಮಾಡಲಾಗುತ್ತಿದೆ
- ಅನುಮತಿ ಇಲ್ಲದ ಸಂಸ್ಥೆಯವರು ನಿಯಮಬಾಹಿರವಾಗಿ ವಸೂಲಿ ಮಾಡುತ್ತಿದ್ದಾರೆ

17.07ಕ್ಕಿಂತ ಹೆಚ್ಚು ಬಡ್ಡಿ ವಿಧಿಸುವಂತಿಲ್ಲ: ಯಾವುದೇ ಹಣಕಾಸು ಸಂಸ್ಥೆಗಳು ಶೇ.17.07ಕ್ಕಿಂತ ಹೆಚ್ಚಿನ ಬಡ್ಡಿ ವಿಧಿಸುವಂತಿಲ್ಲ. ಒಬ್ಬರಿಗೆ ಮೂರಕ್ಕಿಂತ ಹೆಚ್ಚು ಬಾರಿ ಸಾಲ ನೀಡುವಂತಿಲ್ಲ. ಇವೆಲ್ಲ ನಿಯಮಗಳನ್ನು ಪಾಲಿಸಲೇಬೇಕು. ಆರ್‌ಬಿಐ ನಿಯಮಗಳನ್ನು ಉಲ್ಲಂಘಿಸಿ ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಸಾಲಗಾರರಿಗೆ ಕಿರುಕುಳ ನೀಡುವುದನ್ನು ಶಿಕ್ಷಾರ್ಹ ಅಪರಾಧ ಎಂದು ಪರಿಗಣಿಸಿ ಇಂತಹ ಸಂಸ್ಥೆಗಳ ಮುಖ್ಯಸ್ಥರ ವಿರುದ್ಧ ಕನಿಷ್ಠ 3 ವರ್ಷ ಜೈಲು ಶಿಕ್ಷೆಗೆ ಅವಕಾಶ ನೀಡುವ ಅಂಶ ಈ ನೂತನ ಕಾಯಿದೆಯಲ್ಲಿರಲಿದೆ ಎಂದಿದ್ದಾರೆ.

ಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗೃಹ ಸಚಿವ ಡಾ.ಜಿ.ಪರಮೇಶ್ವರ, ಕಾನೂನು ಸಚಿವ ಎಚ್.ಕೆ.ಪಾಟೀಲ್, ಕಂದಾಯ ಸಚಿವ ಕೃಷ್ಣಬೈರೇಗೌಡ, ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ಮುಖ್ಯಮಂತ್ರಿಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅತೀಕ್ ಅಹ್ಮದ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಸೇರಿದಂತೆ ಹಲವು ಅಧಿಕಾರಿಗಳಿದ್ದರು.

ಸಂಸ್ಥೆಗಳ ನಡೆಗೆ ಸಚಿವರ ಅಸಮಾಧಾನ

ಮೈಕ್ರೋ ಫೈನಾನ್ಸ್ ಅಧಿಕಾರಿಗಳ ಎದುರು ಸಂಸ್ಥೆಗಳ ಕಾರ್ಯನಿರ್ವಹಣೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವು ಸಚಿವರು ಅಸಮಾಧಾನ ಹೊರಹಾಕಿದರು. ಸಭೆಯಲ್ಲಿ ಕೆಲ ಸಂಸ್ಥೆಯ ಮುಖ್ಯಸ್ಥರು, ಆರ್‌ಬಿಐ ಪರವಾನಗಿ ಪಡೆದಿರುವ ಕಂಪನಿಗಳು ನಿಯಮಬಾಹಿರ ವಸೂಲಿಗೆ ಇಳಿದಿಲ್ಲ, ಆ ರೀತಿ ಮಾಡುತ್ತಿರುವುದು ಪರವಾನಗಿ ಇಲ್ಲದ ಕಂಪನಿಗಳು ಎನ್ನುವ ಸಮರ್ಥನೆ ನೀಡಲು ಮುಂದಾದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವ ಕೃಷ್ಣಬೈರೇಗೌಡ, ಎಚ್.ಕೆ.ಪಾಟೀಲ್, ಪರವಾನಗಿ ಇದ್ದವರೇ ಈ ರೀತಿ ಮಾಡುತ್ತಿದ್ದಾರೆ ಎನ್ನುವ ವರದಿ ನಮಗೆ ಗ್ರೌಂಡ್ ರಿಪೋರ್ಟ್‌ನಲ್ಲಿ ಬಂದಿದೆ. ಆದ್ದರಿಂದ ಬಡ ಜನರ ಹಿತಕಾಯಲು ನಿಯಮ ಉಲ್ಲಂಘಿಸುವ ಕಂಪನಿ ಮುಖ್ಯಸ್ಥರ ವಿರುದ್ಧ ಕ್ರಮಕೈಗೊಳ್ಳುವುದು ಅನಿವಾರ್ಯ ಎಂದು ಎಚ್ಚರಿಸಿದರು.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ: ಕಾಮಗಾರಿ ವಿಭಾಗ ಬಳ್ಳಾರಿ.

ಸಂಖ್ಯೆ: ಕಕರಸಾನಿ/ಕಾನಿಅ/ಕಾವಿಬ/ತಾಂತ್ರಿಕ/1130/2024–25 ದಿನಾಂಕ: : 23.01.2025

ಇ–ಪ್ರೊಕ್ಯೂಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ 96/ 2024–25

ಈ ಕೆಳಗೆ ಕಾಣಿಸಿದ ಕಾಮಗಾರಿ ಕೆಲಸಕ್ಕೆ ಇ–ಪ್ರೊಕ್ಯೂರ್ಮೆಂಟ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಅಂತರ್ಜಾಲದ ಮೂಲಕ ವೆಬ್‌ಸೈಟ್ **(https://kppp.karnataka.gov.in)** ನಲ್ಲಿ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು ಹಾಗೂ ಈ ಪ್ರಕಟಣೆಗೆ ಸಂಭಂದಿಸಿದಂತೆ ಯಾವುದೇ ತಿದ್ದುಪಡಿಗಳನ್ನು ಕರ್ನಾಟಕ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳಿಗಾಗಿ ಸಹಾಯವಾಣಿ ದೂರವಾಣಿ ಸಂಖ್ಯೆ : **+91 80 46010000, +91 80 68948777, 080–22230960, 080–22234115** ಅಥವಾ **08392–294828, 7760992035** ಮುಖಾಂತರ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಕ್ರ. ಸಂ	ಕಾಮಗಾರಿಯ ಹೆಸರು	ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಮುಂಗಡ ಠೇವಣಿ ಮೊತ್ತ (ರೂ.ಗಳಲ್ಲಿ)
1.	ಸಿಂಧನೂರು ತಾಲ್ಲೂಕಿನ ತುರುವಿಹಾಳ ಗ್ರಾಮದಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸುವುದು. (ಕ.ಕ.ಪ್ರ.ಅ.ಮಂ. 50% & ಕ.ಕ.ರ.ಸಾ.ನಿ. 50% ಅನುದಾನದಲ್ಲಿ)	300.00 (ಎಲ್ಲಾ ತೆರಿಗೆ & ಜಿ.ಎಸ್.ಟಿ ಸೇರಿ)	3,75,000-00

ಡಿಐಪಿಆರ್/ಬಳ್ಳಾರಿ/835/ಕೆಎಸ್‌ಎಂಸಿಎ/2024–25
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕ.ಕ.ರ.ಸಾ.ನಿಗಮ, ಕಾಮಗಾರಿ ವಿಭಾಗ, ಬಳ್ಳಾರಿ

ಬಿಜೆಪಿಯಿಂದ ಹಲವರು ಕಾಂಗ್ರೆಸ್ಸಿಗೆ?

ಬಿಜೆಪಿ ರಾಜ್ಯಾಧ್ಯಕ್ಷರ ಹುದ್ದೆಗೆ ಶೀಘ್ರ ಚುನಾವಣೆ | ವಿಜಯೇಂದ್ರ ಹಂಗಾಮಿ ಅಧ್ಯಕ್ಷ: ಡಿವಿಎಸ್

ಬೆಂಗಳೂರು: ರಾಜ್ಯ ಬಿಜೆಪಿಯ ಒಳಬೇಗುದಿ, ಬಣ ಬಡಿದಾಟ ಮತ್ತೊಂದು ತಿರುವು ಪಡೆದುಕೊಂಡಿದ್ದು, ಪಕ್ಷದ ಪ್ರಧಾನ ಕಾರ್ಯದರ್ಶಿಯೋರ್ವರು ಕಾಂಗ್ರೆಸ್ ಸೇರಲಿರುವ ಸುದ್ದಿ ಹಬ್ಬಿದ್ದು, ಅಲ್ಲದೆ ಈಗಿರುವ ರಾಜ್ಯಾಧ್ಯಕ್ಷ ಅಡ್‌ಹಾಕ್(ಹಂಗಾಮಿ) ಅಧ್ಯಕ್ಷರು ಎಂದು ಮಾಜಿ ಸಿಎಂ ಹೇಳಿರುವುದು ಪಕ್ಷದಲ್ಲಿ ಎಲ್ಲವೂ ಸರಿಯಿಲ್ಲ ಎಂಬುದನ್ನು ಎತ್ತಿ ತೋರಿಸಿದೆ.

ವಿಜಯೇಂದ್ರ ಈಗ ಅಡ್‌ಹಾಕ್(ಹಂಗಾಮಿ) ರಾಜ್ಯಾಧ್ಯಕ್ಷ. ಚುನಾವಣೆ ನಂತರ ಅಧಿಕೃತ ಅಧ್ಯಕ್ಷರ ನೇಮಕ ಆಗುತ್ತದೆ. ಈಗಿನ ಅಧ್ಯಕ್ಷರು ತಮ್ಮ ಜವಾಬ್ದಾರಿ ನಿರ್ವಹಿಸುವ ಸಂದರ್ಭಗಳಲ್ಲಿ ಅತೃಪ್ತರ ಗುಂಪನ್ನು ವಿಶ್ವಾಸಕ್ಕೆ ಪಡೆಯುವಲ್ಲಿ ಯಶಸ್ವಿ ಆಗಿಲ್ಲ ಹಾಗೂ ಅತೃಪ್ತರನ್ನು ವಿಶ್ವಾಸಕ್ಕೆ ಪಡೆಯಲಿಲ್ಲ ಎಂದು ಮಾಜಿ ಸಿಎಂ ಡಿ.ವಿ.ಸದಾನಂದ ಗೌಡ ಹೇಳಿದ್ದಾರೆ.

ಅಧ್ಯಕ್ಷ ಸರ್ವಸಮ್ಮತ ಆಯ್ಕೆ ಆಗಬೇಕು: ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೊಸ ಅಧ್ಯಕ್ಷರ ನೇಮಕ ಸರ್ವ ಸಮ್ಮತದಿಂದ ಆಗಬೇಕು. ಅದೂ ಪಾರದರ್ಶಕವಾಗಿ ಆಗಬೇಕು. ಆಗಲೇ ಪಕ್ಷಕ್ಕೆ ಶಕ್ತಿ ಬರುವುದು. ಈಗ ರಾಜ್ಯ ಬಿಜೆಪಿಯಲ್ಲಿ ಕೆಳಗಿನ ಹಂತದವರೆಗೂ ಗುಂಪುಗಾರಿಕೆ ಹಬ್ಬಿದೆ. ಈ ಗುಂಪುಗಾರಿಕೆಗೆ ಮದ್ದು ಕೊಡುವ ಕೆಲಸ ಹೈಕಮಾಂಡ್ ಮಾಡಬೇಕು. ರಾಜ್ಯಾಧ್ಯಕ್ಷ ಹುದ್ದೆ ಸಂಬಂಧ ಸಹಮತ ಆಗದಿದ್ದಲ್ಲಿ ಚುನಾವಣೆ ಆಗಬಹುದು. ಬಿಜೆಪಿಯಲ್ಲಿ ಒಂದು ಹಂತದವರೆಗೆ ಎಲ್ಲವನ್ನೂ ಹೈಕಮಾಂಡ್ ಸರಿಮಾಡುತ್ತಾರೆ ಎಂಬ ಚರ್ಚೆ ನಡೆಯುತ್ತಿತ್ತು. ಆದರೆ, ಯಾಕೋ ಏನೋ ಕೇಂದ್ರದವರು ಆಂತರಿಕ ಸಂಘರ್ಷ ಕೊನೆಗೊಳಿಸುವ ಪ್ರಯತ್ನ ಮಾಡಲಿಲ್ಲ. ಅದಕ್ಕಾಗಿ ಈ ಬಾರಿಯ ಕೋರ್ ಕಮಿಟಿಯಲ್ಲಿ ಸುದೀರ್ಘವಾಗಿ ಮನಸಿನ ಅಂತರಾಳದ ಮಾತುಗಳನ್ನು ಆಡಿದ್ದೇವು. ಇತ್ತೀಚೆಗೆ ಕೋರ್ ಕಮಿಟಿ ಪ್ರಭಾವಿಯಾಗಿ ಇರಲಿಲ್ಲ, ಆದರೆ ಮಂಗಳವಾರ ನಡೆದ ಸಭೆ ಚೆನ್ನಾಗಿ ನಡೆದಿದ್ದು, ಎಲ್ಲವನ್ನೂ ಗಂಭೀರವಾಗಿ ಚರ್ಚೆ ಮಾಡಲಾಗಿದೆ ಎಂದರು.

ರಾಮುಲು ಪಕ್ಷದ ನಿಷ್ಠಾವಂತ ನಾಯಕ. ಅವರೊಂದಿಗೆ ಮಾತನಾಡಿರುವೆ. ಮಾಧ್ಯಮಗಳಲ್ಲಿ ಮಾತಾನಾಡುವುದು ಬೇಡ ಎಂದು ತಿಳಿಸಿದ್ದೇನೆ. ಪಕ್ಷ ಬಿಡಲ್ಲ ಎನ್ನುವ ವಿಶ್ವಾಸ ನಮಗಿದೆ. ಆದರೆ ಪಕ್ಷ ಬಿಡುತ್ತಾರೆ ಎಂದು ಸುದ್ದಿ ಮಾಧ್ಯಮದಲ್ಲಿ ಬರುತ್ತಿದೆ. ನಾನು ಪಕ್ಷ ಬಿಡಲ್ಲ ಎಂದು ರಾಮುಲು ಹೇಳಿದ್ದಾರೆ.

–**ಡಿ.ವಿ.ಸದಾನಂದಗೌಡ** ಮಾಜಿ ಸಿಎಂ

ಬಿಜೆಪಿ ಪ್ರಧಾನ ಕಾರ್ಯದರ್ಶಿ ಕಾಂಗ್ರೆಸ್‌ಗೆ?

ಕೋರ್ ಕಮಿಟಿ ಈ ಹಿಂದೆ ಪ್ರಭಾವಿ ಆಗಿರಲಿಲ್ಲ. ಕೋರ್ ಕಮಿಟಿಯಲ್ಲಿ ಸರಿದೂಗಿಸುವ ರೀತಿಯ ಚರ್ಚೆಗಳು ನಡೆಯುತ್ತಿತ್ತು. ಅಲ್ಲಿ ಯಾರಿಗೂ ನೋವಾಗದ ರೀತಿ ಮಾತನಾಡುತ್ತಿದ್ದರು. ಸತ್ಯದ ಬಗ್ಗೆ ಮಾತನಾಡುತ್ತಿರಲಿಲ್ಲ. ಕೋರ್ ಕಮಿಟಿ ಪ್ರಭಾವಿಯಾಗಿರದಿರುವುದೂ ಆಂತರಿಕ ಭಿನ್ನಮತಕ್ಕೆ ಒಂದು ಕಾರಣ. ಕಾರ್ಯಕರ್ತರ ಮನಸಿನ ಭಾವನೆಗಳನ್ನು ಸಭೆಯಲ್ಲಿ ಪ್ರತಿಬಿಂಬಿಸಿದ್ದೇವೆ. ಶಾಸಕ ಎಸ್.ಟಿ. ಸೋಮಶೇಖರ್ ಹಾಗೂ ಶಿವರಾಂ ಹೆಬ್ಬಾರ್ ವಿರುದ್ಧ ಇನ್ನೂ ಕ್ರಮ ಆಗಿಲ್ಲ. ಸೋಮಶೇಖರ್ ಕಾಂಗ್ರೆಸ್ ಸಮಾವೇಶದಲ್ಲಿ ಭಾಗವಹಿಸಿದ್ದನ್ನು ನಾವು ಸುಮ್ಮನೆ ನೋಡುವಂತಾಗಿದೆ. ಸುನೀಲ್ ಕುಮಾರ್ ತಮ್ಮ ಸ್ಥಾನದಿಂದ ಬಿಡುಗಡೆ ಕೇಳಿದ್ದಾರೆ. ಇದೇ ವೇಳೆ ಮತ್ತೊಬ್ಬ ಪ್ರಧಾನ ಕಾರ್ಯದರ್ಶಿ ಕಾಂಗ್ರೆಸ್‌ಗೆ ಹೋಗುತ್ತಾರೆ ಎಂಬ ಮಾತು ಹಬ್ಬಿದೆ ಎನ್ನುವ ಮೂಲಕ ಪಕ್ಷದ ಪರಿಸ್ಥಿತಿಯನ್ನು ಸದಾನಂದಗೌಡ ತೆರೆದಿಟ್ಟಿದ್ದಾರೆ.

ಗುಂಪುಗಾರಿಕೆ ಇಲ್ಲ

ನಮ್ಮ ಮನೆಯಲ್ಲಿ ಹಿರಿಯರು ಸೇರಿದ್ದು ನಿಜ. ಆದರೆ, ಅದು ಯಾವುದೇ ಗುಂಪುಗಾರಿಕೆ ಸಭೆ ಅಲ್ಲ. ಕೋರ್ ಕಮಿಟಿ ಚರ್ಚೆಗಳ ಅನುಷ್ಠಾನಕ್ಕೆ ನಮ್ಮನೆಯಲ್ಲಿ ಸಭೆ ಮಾಡಲಾಗಿತ್ತು. ಕೋರ್ ಕಮಿಟಿ ಗಟ್ಟಿಯಾಗಿದ್ದರೆ ಆದರೆ ಗುಂಪುಗಾರಿಕೆ ನಿಲ್ಲಬಹುದು. ಹಲವು ಸಂಗತಿಗಳು ಕಮಿಟಿಯಲ್ಲಿ ಚರ್ಚೆಯಲ್ಲಿ ಆಗಿದ್ದು, ಚರ್ಚೆಗಳನ್ನು ಹೈಕಮಾಂಡ್ ಗಂಭೀರವಾಗಿ ಪರಿಗಣಿಸಬೇಕು ಎಂದರು.

ಹೈಕಮಾಂಡ್ ಕೋರ್ ಕಮಿಟಿ ಚರ್ಚೆಗಳನ್ನು ಹೈಕಮಾಂಡ್ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುತ್ತಿರಲಿಲ್ಲ. ಹೀಗಾಗಿ ಪಕ್ಷದ ಒಳಗಿನ ಆಂತರಿಕ ಸಂಘರ್ಷದ ಪರ್ವತವೇ ಸೃಷ್ಟಿಯಾಗಿದೆ. ಮೊದಲು ಇದನ್ನು ಸರಿಪಡಿಸಬೇಕಿದೆ. ಆಂತರಿಕ ಕಚ್ಚಾಟ ಸರಿಪಡಿಸದೆ ಯಾವ ಸಂಘಟನಾ ಪರ್ವ ಮಾಡಿದರೂ ಪ್ರಯೋಜನವಿಲ್ಲ. ಕೋರ್ ಕಮಿಟಿಯಲ್ಲಿ ಪಕ್ಷದಲ್ಲಿ ಎಲ್ಲಿ ಏನಾಗುತ್ತಿದೆ. ಎಲ್ಲಿ ತಪ್ಪಾಗಿದೆ ಎಂದು ತಿಳಿಸಿದ್ದೇವೆ. ಆದರೆ ಹಿಂದಿನ ಕೋರ್ ಕಮಿಟಿ ಸಭೆಯಲ್ಲಿ ಇಬ್ಬರು ಶಾಸಕರ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡಲಾಗಿತ್ತು. ಆದರೂ ಏನೂ ಕ್ರಮ ಆಗಿಲ್ಲ. ಶಿಸ್ತು ಸಮಿತಿಯಿಂದ ಯತ್ನಾಳ್‌ಗೆ ನೋಟಿಸ್ ನೀಡಲಾಗಿತ್ತು. ಆದರೆ, ಅದರ ಮುಂದಿನ ಪ್ರಕ್ರಿಯೆ ನಡೆಯಲೇ ಇಲ್ಲ. ಕರ್ನಾಟಕ ಬಿಜೆಪಿ ಬಗ್ಗೆ ಕೇಂದ್ರದ ಬಿಜೆಪಿಯವರಿಗೆ ಯಾವ ಅಭಿಪ್ರಾಯ ಇದೆ ಎಂದು ಗೊತ್ತಾಗಬೇಕಿದೆ ಎಂದರು.

2025ರ ಪದ್ಮ ಪ್ರಶಸ್ತಿ ಪ್ರಕಟ

← ಮೊದಲಪುಟದಿಂದ

ಗರ್ಭ ಕೊರಳಿನ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸುವ ಹಾಗೂ ಚಿಕಿತ್ಸೆ ನೀಡುವಲ್ಲಿ ಗಮನಾರ್ಹ ಕೆಲಸ ಮಾಡಿದ ಸ್ತ್ರೀರೋಗ ತಜ್ಞೆ ಡಾ.ನೀರಜಾ ಭಾತ್ಲಾ, ತುಳಿತಕ್ಕೊಳಗಾದ ಮುಸಾಹರ್ ಸಮುದಾಯದ ಏಳಿಗಾಗಿ 'ನಯೀ ಆಶಾ' ಸಂಘಟನೆ ಮೂಲಕ ಶ್ರಮಿಸಿದ ಭೋಜಪುರದ ಸಾಮಾಜಿಕ ಕಾರ್ಯಕರ್ತ ಭೀಮ್ ಸಿಂಗ್ ಭವೇಶ್, ಕಳೆದ ಐದು ದಶಕಗಳಿಂದ ನಾಗಸ್ವರವಾದನದ ಥವಿಲ್ ನುಡಿಸುತ್ತಿರುವ ಪಿ.ದಚ್ಚಣಮೂರ್ತಿ, ಹಣ್ಣು ಬೆಳೆಯಲ್ಲಿ ವಿಶಿಷ್ಟ ಸಾಧನೆ ಮಾಡಿದ ನಾಗಾಲ್ಯಾಂಡ್‌ನ ಎಲ್. ಹ್ಯಾಂಗ್ತಿಂಗ್ ಅವರಿಗೆ ಪದ್ಮಶ್ರೀ ದೊರೆತಿದೆ. ಪೋರ್ಚುಗೀಸರ ಹಿಡತದಲ್ಲಿದ್ದ ಗೋವಾ ಸ್ವಾತಂತ್ರ್ಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಲಿಬಿಯಾ ಲೊಬೊ ಸರದೇಸಾಯಿ, ಢಕ್ ವಾದಕ ಗೋಕುಲ ಚಂದ್ರ ಡೇ ಅವರು ಪುರುಷ ಪ್ರಧಾನ ಕ್ಷೇತ್ರದಲ್ಲಿ 150 ಮಹಿಳೆಯರಿಗೆ ತರಬೇತಿ ನೀಡುವುದರ ಜತೆಗೆ 1.5 ಕೆ.ಜಿ. ತೂಕದ ಹಗುರ ಢಕ್ ಅನ್ನು ಅಭಿವೃದ್ಧಿಪಡಿಸಿದ್ದಾರೆ. ಮಧ್ಯಪ್ರದೇಶದಲ್ಲಿ ಮಹೇಶ್ವರದಲ್ಲಿ ಕೈಮಗ್ಗದ ಶಾಲೆ ತೆರೆದು 300 ವರ್ಷಗಳ ಹಳೆಯದಾದ ಪಾರಂಪರಿಕ ಜವಳಿ ಉದ್ಯಮಕ್ಕೆ ಪುನಶ್ಚೇತನ ನೀಡಿದ ಸಾಲಿ ಹೋಲ್ಕರ್ ಅವರೂ ಪದ್ಮಶ್ರೀಗೆ ಭಾಜನರಾಗಿದ್ದಾರೆ. ಕಲೆ, ಸಮಾಜಮುಖಿ ಕಾರ್ಯ, ಸಾರ್ವಜನಿಕ ವ್ಯವಹಾರ, ವಿಜ್ಞಾನ ಹಾಗೂ ಎಂಜಿನಿಯರಿಂಗ್, ವ್ಯಾಪಾರ ಹಾಗೂ ಕೈಗಾರಿಕೆ, ವೈದ್ಯಕೀಯ, ಸಾಹಿತ್ಯ ಮತ್ತು ಶಿಕ್ಷಣ, ಕ್ರೀಡೆ ಮತ್ತು ನಾಗರಿಕ ಸೇವೆ ಇತ್ಯಾದಿ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದವರಿಗ ಪದ್ಮಶ್ರೀ, ಪದ್ಮಭೂಷಣ, ಪದ್ಮ ವಿಭೂಷಣ ಪ್ರಶಸ್ತಿಯನ್ನು ಕೇಂದ್ರ ಸರಕಾರ ನೀಡುತ್ತದೆ.

ಸುದ್ದಿಗಳೊಂದಿಗೆ ಉಪಯುಕ್ತ ಮಾಹಿತಿ, ಕಾರ್ಯಕ್ರಮಗಳನ್ನು ಪ್ರಸ್ತುತ ಮಾಧ್ಯಮಗಳು ಮಾಡುತ್ತಿರುವುದು ಉತ್ತಮ ವಿಚಾರ. ವಿಶ್ವೇಶ್ವರ ಭಟ್ ಅವರ ನೇತೃತ್ವದಲ್ಲಿ ಪ್ರಾರಂಭವಾದ ವಿಶ್ವವಾಣಿ ಪತ್ರಿಕೆ ಅತ್ಯಂತ ಕಡಿಮೆ ಅವಧಿಯಲ್ಲಿಯೇ ಬಹಳ ಖ್ಯಾತಿ ಪಡೆದಿದೆ. ಕನ್ನಡಿಗರಿಗೆ ಇದು ಹೆಮ್ಮೆಯ ವಿಚಾರ. ಸಮಾಜದ ಆಗು-ಹೋಗು, ಲೋಪದೋಷಗಳನ್ನು ಪಾರದರ್ಶಕವಾಗಿ ಎತ್ತಿಹಿಡಿಯುತ್ತಿರುವ ಈ ಪತ್ರಿಕೆ ಪಕ್ಷಾತೀತವಾಗಿ ಓದುಗರ ಮನ - ಮನೆ ತಲುಪುತ್ತಿದೆ. ದಶಕದ ಸಂಭ್ರಮದಲ್ಲಿರುವ ವಿಶ್ವವಾಣಿ ಪತ್ರಿಕೆ ಇದೇ ರೀತಿ ಸಕಾರಾತ್ಮವಾಗಿ ತನ್ನ ಛಾಪನ್ನು ವಿಶ್ವದಾದ್ಯಂತ ಹರಡಲಿ. ಮುಂದಿನ ದಿನಗಳಲ್ಲಿ ವಿಂಶತಿ, ರಜತ ಮಹೋತ್ಸವ, ಸುವರ್ಣ ಮಹೋತ್ಸವ, ಶತಮಾನೋತ್ಸವಗಳನ್ನು ಅತ್ಯಂತ ವೈಭವದೊಂದಿಗೆ ಆಚರಿಸುವಂತಾಗಲಿ. ಭಗವಂತನು ವಿಶ್ವೇಶ್ವರ ಭಟ್ ಮತ್ತವರ ಟೀಂಗೆ ಆರೋಗ್ಯ ಭಾಗ್ಯ ಕರುಣಿಸಲಿ.

-ಶ್ರೀಲಲಿತಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿ, ಜೈನಮಠ, ಕಾರ್ಕಳ



ವಿಶ್ವವಾಣಿ ದಶಮಾನೋತ್ಸವ ಹೊಸ್ತಿಲಲ್ಲಿರುವುದು ಸಂತಸದ ಸಂಗತಿ. ಸಾಕಷ್ಟು ಸವಾಲುಗಳ ನಡುವೆಯೂ ವಿಶ್ವೇಶ್ವರ ಭಟ್ ಅವರು ಪತ್ರಿಕೆಯನ್ನು ಮುನ್ನಡೆಸಿ ಯಶಸ್ಸು ಕಂಡಿದ್ದಾರೆ. ವಸ್ತುನಿಷ್ಠ ವರದಿಗಳ ಮೂಲಕ ತನ್ನದೇ ಆದ ಛಾಪು ಮೂಡಿಸುತ್ತಿರುವ ವಿಶ್ವವಾಣಿ ಮತ್ತಷ್ಟು ಉತ್ತುಂಗಕ್ಕೇರಲಿ.

-ಶಿವಗಂಗಾ ಬಸವರಾಜ್, ಚನ್ನಗಿರಿ ಶಾಸಕ

ವಿಶ್ವವಾಣಿ ಪತ್ರಿಕೆ ಜನರ ವಾಣಿಯಾಗಿ ಕೆಲಸ ಮಾಡುತ್ತಿದೆ. ಹಲವು ಹೊಸತನ ಜನಕ ವಿಶ್ವೇಶ್ವರ ಭಟ್ ಅವರ ಆಲೋಚನೆ ಜನಪರ ಎಂಬುದು ಪತ್ರಿಕೆ ಓದಿದರೆ ತಿಳಿಯುತ್ತದೆ. ನವನವೀನ ತಲೆಬರಹ ನನಗೆ ಎಂದಿಗೂ ಇಷ್ಟ. ಭಟ್ ಅವರು ಅಂಥ ಪ್ರಯೋಗ ಮಾಡುತ್ತಲೇ ಹೊಸ ತಲೆಮಾರಿಗೆ ಪತ್ರಿಕೋದ್ಯಮದ ಪಾಠ ಹೇಳಿಕೊಟ್ಟರು, ವಿಶ್ವವಾಣಿ ತನ್ನ ನೇರವಾಗಿ ಜನರ ಮನಸ್ಸಿಗೆ ಹತ್ತಿರ ಆಗುವ ಅದರ ಅಂಕಣ ಅದರ ಬರಹಗಾರರು ಹೊಸ ಪರಂಪರೆ ಹುಟ್ಟುಹಾಕಿದರು. ಸಾಮಾಜಿಕ ಬದ್ಧತೆ ಯ ಅನೇಕ ಸಂಗತಿ ಇರುತ್ತವೆ. ತಪ್ಪದೇ ಎಲ್ಲ ಅಂಕಣ ಓದುತ್ತೇನೆ.

-ಡಿ. ಎಸ್. ಅರುಣ್ , ವಿಧಾನ ಪರಿಷತ್ ಸದಸ್ಯರು

ನೆಚ್ಚಿನ ವಿಶ್ವೇಶ್ವರ ಭಟ್ಟರ ಸಾರಥ್ಯದಲ್ಲಿ ದಶಕಗಳಿಂದ ಮೂಡಿ ಬರುತ್ತಿರುವ ವಿಶ್ವವಾಣಿ ದಿನಪತ್ರಿಕೆ ರಾಜ್ಯದ ಓದುಗರ ಮನೆ ಮಾತಾಗಿದೆ. ಇಂತಹ ಕ್ರಿಯಾಶೀಲ ದಿನಪತ್ರಿಕೆಯು ಇನ್ನು ವಿಶ್ವಾಸಾರ್ಹತೆಯಿಂದ ಜನಪ್ರಿಯವಾಗಿ ಓದುಗರ ಮನಸೆಳೆಯಲಿ

- ರವಿಕುಮಾರ್ ಗಣಿಗ, ಶಾಸಕರು, ಮಂಡ್ಯ

ಭಟ್ಟರ ಅಂಕಣ ಓದುವುದೇ ಖುಷಿ

- ಶಿವಾನಂದ ಶೆಲ್ಲಿಕೇರಿ
ಅಧ್ಯಕ್ಷರು, ಬಾಗಲಕೋಟೆ ಜಿಲ್ಲಾ ಕಸಾಪ

ಸುದ್ದಿಮನೆ ಕತೆ, ಇದೇ ಅಂತರಂಗ ಸುದ್ದಿ,, ನೂರೆಂಟು ವಿಶ್ವ, ನೂರೆಂಟು ಮಾತು, ಜನಮನ , ಸಂಪಾದಕರ ಸದ್ಯದ ಶೋಧ- ಇವು ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ ಅವರ ಅಂಕಣಗಳು. ಆಕರ್ಷಕವಾಗಿ ವೈವಿಧ್ಯಮಯವಾಗಿ ಓದುಗರನ್ನು ಹಿಡಿದಿಡುವಂತೆ ಬರೆಯುವ ಕಲೆ ಕಂಡು ನಾನು ಬೆರಗಾಗಿದ್ದೇನೆ. ಅಷ್ಟೇ ಅಲ್ಲ, ನನ್ನಂತಹ ಅನೇಕ ಯುವಕರನ್ನು ಅವರು ಬರಹಗಾರರಾಗಿ ರೂಪಿಸಿದ್ದಾರೆ. ನಮ್ಮ ಬರಹಗಳನ್ನು ಪ್ರಕಟಿಸಿ ನಾಡಿಗೆ ಪರಿಚಯಿಸಿದ್ದಾರೆ. ಹತ್ತು ವರ್ಷಗಳ ಹಿಂದೆ ವಿಶ್ವವಾಣಿಯನ್ನು ಪುನಃ ಆರಂಭಿಸಿದಾಗ ಬಹಳಷ್ಟು ಆತಂಕಗಳಿದ್ದವು. ಈಗಿನ ಕಾಲದಲ್ಲಿ ಪ್ರಿಂಟ್ ಮೀಡಿಯಾ ಮುನ್ನಡೆಸುವುದಕ್ಕೆ ಎಂಟೆದೆ ಬೇಕು ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಭಟ್ಟರು ತಮ್ಮ ಅಂತರಂಗದಲ್ಲಿ ಎಂಟೆದೆ ಧೈರ್ಯ ಹೊಂದಿರುವುದು ನನಗೆ ಅರಿವಾಗಿದೆ.

ಗಾಂಧೀಜಿ ಹಲವು ಪತ್ರಿಕೆಗಳಿಗೆ ಏಕಕಾಲಕ್ಕೆ ಬರೆಯುತ್ತಿದ್ದರು. ಭಟ್ಟರು ಏಕಕಾಲಕ್ಕೆ ಹಲವು ಅಂಕಣಗಳನ್ನು ಬರೆಯುತ್ತಿದ್ದಾರೆ. ಅವರು ಪ್ರತಿದಿನ ಬರೆಯುವ' ಸಂಪಾದಕರ ಸದ್ಯದ ಶೋಧ' ಕಾಲಂ ಅನೇಕ ಹೊಸ ಮಾಹಿತಿಗಳನ್ನು ನೀಡುತ್ತದೆ. ಅವರು ದೇಶಗಳನ್ನು ಸುತ್ತುತ್ತಾರೆ,ಕೋಶ ಓದುತ್ತಾರೆ. ಎಲ್ಲರೊಂದಿಗೂ ಹೃದಯ ತೆರೆದು ಮಾತನಾಡುತ್ತಾರೆ. ಅವರ ಅನುಭವದ ವಿಸ್ತಾರ ದೊಡ್ಡದು. ಪತ್ರಿಕಾ ವರದಿಗಳಿಗೆ ಆಕರ್ಷಕ ತಲೆಕಟ್ಟು ಕೊಡುವ ಕಲೆಯನ್ನು ಅವರು ಕರಗತ ಮಾಡಿಕೊಂಡಿದ್ದಾರೆ. ತಮ್ಮೊಂದಿಗೆ ಕೆಲಸ ಮಾಡುವ ಸಿಬ್ಬಂದಿಗೂ ಕಲಾತ್ಮಕ ಬರಹದ ಪಾಠ ಮಾಡುತ್ತಾರೆ. ಈಚೆಗೆ ಪುಸ್ತಕ ಬಿಡುಗಡೆಯ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು. ಇಲ್ಲಿರುವ ಎಲ್ಲರ ಹೆಸರುಗಳನ್ನು ನಾನು ಇನಿಷಿಯಲ್ ಸಹಿತ ಹೇಳಬಲ್ಲೆ ಎಂದು ಅವರು ಹೇಳಿದಾಗ ನಾನು ಚಕಿತಗೊಂಡಿದ್ದೆ. ನಾಯಕನಾದವನು ತನ್ನ ಜೊತೆಗಿರುವವರನ್ನು ಹೆಸರು ಹಿಡಿದು ಕರೆಯಬೇಕು. ಅದು ನಾಯಕತ್ವದ ಗುಣಲಕ್ಷಣ. ಭಟ್ಟರು ಒಳ್ಳೆಯ ಯುವ ಬರಹಗಾರರನ್ನು ರೂಪಿಸಿದ್ದಾರೆ. ಬೆನ್ನು ತಟ್ಟಿ, ತಿದ್ದಿ ಅವರ ಬರಹಗಳನ್ನು ಪ್ರಕಟಿಸುತ್ತಿದ್ದಾರೆ. ವಿಶ್ವವಾಣಿಯ 'ವಿರಾಮ ಪೋಸ್ಟ್'ಪುಟ ಹೊಸ ಬರಹಗಾರರಿಗೆ ವಿಶಾಲ ವೇದಿಕೆಯಾಗಿದೆ. ವಿಶ್ವವಾಣಿ ಪತ್ರಿಕೆಗೆ 10 ವರ್ಷ ತುಂಬಿದ ಈ ಸಂದರ್ಭದಲ್ಲಿ ಶುಭ ಹಾರೈಸುತ್ತೇನೆ.

ಸುದೀರ್ಘ ಅಂಕಣಗಳ ಸಾಗರ

- ಪ್ರಮೋದ್ ಮಲ್ಕಿ ಒಡೆಯರ್, ಹೂವಿನಹಡಗಲಿ, ವಿಜಯನಗರ ಜಿಲ್ಲೆ

ಕಳೆದ 14 ವರ್ಷದಿಂದ ಕನ್ನಡ ಪತ್ರಿಕೆಗಳನ್ನು ಓದುತ್ತಿದ್ದೇನೆ.ಮೊದಲೆಲ್ಲ ಎಲ್ಲಾ ಪತ್ರಿಕೆಗಳಲ್ಲೂ ಸಹ ದೀರ್ಘವಾದ ಅಂಕಣಗಳು ಬರುತ್ತಿದ್ದವು, ಆದರೆ ಇತ್ತೀಚೆಗೆ ದಿನಕಳೆದಂತೆ ಎಲ್ಲ ಕನ್ನಡ ಪ್ರಮುಖ ಪತ್ರಿಕೆಗಳಲ್ಲಿ ಅಂಕಣಗಳ ಗಾತ್ರ ತುಂಬಾ ಚಿಕ್ಕದಾಗುತ್ತಾ ಬರುತ್ತಿದೆ. ಕೆಲ ಪ್ರಮುಖ ಕನ್ನಡ ಪತ್ರಿಕೆಗಳಲ್ಲಿ ಇತ್ತೀಚೆಗಂತೂ ವಾರಪೂರ್ತಿ ಅಂಕಣಗಳು ಪ್ರಕಟವಾಗುವುದೇ ಇಲ್ಲ .ಅದೇನಿದ್ದರೂ ಭಾನುವಾರ ಮಾತ್ರ ಎಂಬಂತಾಗಿದೆ.ಇದೆಲ್ಲದರ ಹೊರತಾಗಿ ವಿಶ್ವವಾಣಿ ತನ್ನ ಓದುಗರಿಗೆ ಸುದೀರ್ಘ ಅಂಕಣಗಳ ಮೂಲಕ ಪ್ರತಿನಿತ್ಯ ಜಗತ್ತಿನಲ್ಲಿ ಆಗುತ್ತಿರುವ ವಿಷಯಗಳ ಕುರಿತು ಕನ್ನಡದಲ್ಲಿಯೇ ಸ್ಪಷ್ಟವಾಗಿ ಮತ್ತು ಸರಳವಾಗಿ ವಿವರಣೆ ನೀಡುತ್ತಾ ಸಾಗುತ್ತಿದೆ. ಇಂಗ್ಲಿಷ್ ದಿನಪತ್ರಿಕೆ ಮತ್ತು ವಾರಪತ್ರಿಕೆಯಲ್ಲಿ ಒದಗಿಸುವ ಸುದೀರ್ಘ ವಿವರಣೆ ನಮಗೆ ಕನ್ನಡದಲ್ಲಿ ವಿಶ್ವವಾಣಿ ನೀಡುತ್ತಿರುವುದು ಹೆಮ್ಮೆಯ ಸಂಗತಿ. ನಾನು ಗಮನಿಸಿದ ಒಂದು ಪ್ರಮುಖ ಅಂಶ ಎಂದರೆ ಕನ್ನಡದಲ್ಲಿ ಅಂಕಣಕಾರರ ಕೊರತೆ ಇಲ್ಲವೆಂಬುದು. ಏಕೆಂದರೆ ವಿಶ್ವವಾಣಿಯಲ್ಲಿ ಪ್ರತಿನಿತ್ಯ ಅಂಕಣಗಳನ್ನು ಬರೆಯುತ್ತಿರುವವರು ಯಾರೂ ಸಹ ಹೆಸರಾಂತ ವ್ಯಕ್ತಿಗಳಲ್ಲ . ಆದರೆ ಜನಸಾಮಾನ್ಯರನ್ನೇ ಪ್ರಖ್ಯಾತ ಅಂಕಣಕಾರನ್ನಾಗಿ ಮಾಡಿದ ವಿಶ್ವೇಶ್ವರ ಭಟ್ ಎಂಬ ಗುರುವಿಗೆ ನನ್ನದೊಂದು ಸಲಾಂ. ನಾನು ಗಮನಿಸಿದ ಹಾಗೆ ಬೇರೆ ಯಾವ ದಿನ ಪತ್ರಿಕೆಯಲ್ಲೂ ಸಹ ಹೊಸಬರಿಗೆ ಅಂಕಣಗಳನ್ನು ಬರೆಯಲು ಅಷ್ಟು ಸುಲಭವಾಗಿ ಅವಕಾಶ ಸಿಗುವುದಿಲ್ಲ .ಆದರೆ ವಿಶ್ವವಾಣಿಯಲ್ಲಿ ಎಲ್ಲವೂ ಸಾಧ್ಯ ಎಂಬುದು ಖುಷಿಯ ಸಂಗತಿ. ಒಂದೇ ಕ್ಷಣ ಯೋಚಿಸಿ, ವಿಶ್ವವಾಣಿ ಎಂಬ ದಿನಪತ್ರಿಕೆಯೇ ಇಲ್ಲದಿದ್ದರೆ ಎಷ್ಟೆಲ್ಲ ಅಂಕಣಕಾರರು ಎಲೆಮರೆಕಾಯಿಗಳಂತೆ ಇರುತ್ತಿದ್ದರು ಎಂಬುದನ್ನು. ಆದ್ದರಿಂದ ಇಂತಹ ದಿನಪತ್ರಿಕೆಯನ್ನು ನಾವೆಲ್ಲರೂ ಉಳಿಸಿ ಬೆಳೆಸಬೇಕಾಗಿ ವಿನಂತಿ.

ನಾಡಿನ ಕ್ರಿಯಾಶೀಲ ಪತ್ರಿಕೆ ವಿಶ್ವವಾಣಿ

-ಶ್ರೀ ನಂಜಾವಧೂತ ಮಹಾಸ್ವಾಮೀಜಿ, ಸ್ಪಟಿಕಪುರಿ ಮಠ, ಶಿರಾ

10ನೇ ವರ್ಷಕ್ಕೆ ಕಾಲಿಟ್ಟಿರುವ ವಿಶ್ವವಾಣಿ ನಾಡಿನ ಕ್ರಿಯಾಶೀಲ, ಕ್ರಿಯಾತ್ಮಕ ಪತ್ರಿಕೆಯಾಗಿ ಜಗದಗಲ ವ್ಯಾಪಿಸಿದೆ. ಶೂನ್ಯದಿಂದ ಆರಂಭವಾಗಿರುವ ಪತ್ರಿಕೆ ಇಂದು ಹೆಮ್ಮರವಾಗಿ ಬೆಳೆದು ಮಾದರಿಯಾಗಿದೆ.

ಪ್ರತಿದಿನ ವಿನೂತನ ಪ್ರಯೋಗಗಳೊಂದಿಗೆ ಮೂಡಿಬರುವ ಪತ್ರಿಕೆ ದಿನಗಟ್ಟಲೆ ಓದುವಷ್ಟು ಮಾಹಿತಿಯನ್ನು ಒಳಗೊಂಡಿರುತ್ತದೆ. ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವ ಜತೆಗೆ ನಾನಾ ರೀತಿಯ ವಿಷಯ ಹಂದರವನ್ನು ಪತ್ರಿಕೆ ಪ್ರತಿನಿತ್ಯ ಹೊತ್ತು ತರುತ್ತದೆ. ಪ್ರಧಾನ ಸಂಪಾದಕರಾದ ವಿಶ್ವೇಶ್ವರ ಭಟ್ ಅವರ ಪರಿಶ್ರಮದಿಂದ ಪತ್ರಿಕೆ ವಿಶ್ವದಾದ್ಯಂತ ಓದುಗರ ಬಳಗವನ್ನು ಸೃಷ್ಟಿಸಿಕೊಂಡು ನಿರಂತರವಾಗಿ ಸಾಗುತ್ತಿರುವುದು ಸಂತಸದ ವಿಚಾರ. ಹತ್ತು ಹಲವು ವಿಚಾರಗಳನ್ನು ವಸ್ತುನಿಷ್ಠವಾಗಿ ನೀಡುವುದು ವಿಶ್ವವಾಣಿಯ ವಿಶೇಷ. ಇದಕ್ಕೆ ಭಟ್ ಅವರ ಉತ್ತಮ ಮಾರ್ಗದರ್ಶನವೂ ಕಾರಣವಾಗಿದೆ ಎಂದರೆ ತಪ್ಪಾಗಲಾರದು.

ಮಾಧ್ಯಮ ಮೌಲ್ಯಗಳನ್ನು ರೂಢಿಸಿಕೊಂಡು ಪ್ರತಿಯೊಂದು ಹಂತದಲ್ಲಿ ಸಮಾಜವನ್ನು ತಿದ್ದುವ ಕಾಯಕ ಪ್ರಶಂಸನೀಯ. ಪತ್ರಿಕೆಗಳು ಓದುಗರನ್ನು ಹಿಡಿದಿಟ್ಟುಕೊಳ್ಳುವುದು ಅದರ ಶ್ರೇಷ್ಠತೆಯನ್ನು ತಿಳಿಸುತ್ತದೆ. ವಿಶ್ವವಾಣಿ ಈ ವಿಚಾರದಲ್ಲಿ ಮಂಚೂಣಿಯಲ್ಲಿದೆ.ಪತ್ರಿಕೆ ಬಳಗಕ್ಕೆ ಭಗವಂತ ಶುಭ ನೀಡಲಿ.

ಡಾ.ಬಿ.ಆರ್. ಅಂಬೇಡ್ಕರ್ ಅವರ ಆಶೋತ್ತರಗಳನ್ನು ಚಾಚುತಪ್ಪದೇ ಪಾಲಿಸುತ್ತಾ ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾದ ಪತ್ರಿಕೋದ್ಯಮದಲ್ಲಿ ವಿಶ್ವವಾಣಿ ದಿನಪತ್ರಿಕೆಯು ವೇಗವಾಗಿ ಮುನ್ನುಗ್ಗುತ್ತಿದ್ದು, ಇದರ ಯಶಸ್ಸು ಇನ್ನು ಪ್ರಜ್ವಲಿಸಲಿ.

-ಡಾ.ಕೆ.ಅನ್ನದಾನಿ, ಮಾಜಿ ಶಾಸಕ

ವಿಶ್ವವಾಣಿ ಜನಮನ ಗೆದ್ದ ಪತ್ರಿಕೆ

ಸಿದ್ದಲಿಂಗ ಸ್ವಾಮೀಜಿ, ಗುರುಲಿಂಗದೇವರ ಮಠ (ನದಿ) ಇಂಗಳಗಾಂವ್

ವಿಶ್ವೇಶ್ವರ ಭಟ್ಟರ ಸಾರಥ್ಯದಲ್ಲಿ ಮೂಡಿಬರುತ್ತಿರುವ ವಿಶ್ವವಾಣಿ ಕನ್ನಡ ದಿನಪತ್ರಿಕೆ ತನ್ನ ವೈಶಿಷ್ಟಗಳಿಂದಲೇ ಜನಮನ ಗೆದ್ದಿದೆ. ಸದಾ ಹೊಸತನವನ್ನು ಮೈಗೂಡಿಸಿಕೊಂಡು ಓದುಗರ ಹೃದಯ ಮುಟ್ಟುವುದು ಸಾಮಾನ್ಯ ವಿಷಯವಲ್ಲ. ಕಳೆದ ಒಂಬತ್ತು ವರ್ಷಗಳಿಂದ ವಿಶ್ವವಾಣಿ ದಿನಪತ್ರಿಕೆ ಈ ಕೆಲಸ ಮಾಡಿದ್ದು ವಿಶೇಷ. ಪ್ರತಿದಿನ ವಿಶೇಷ ಪುರವಣಿಗಳ ಮೂಲಕ ಮೌಲ್ಯಾಧಾರಿತ ವಿಷಯಗಳಿಗೆ ಆದ್ಯತೆ ನೀಡಿ, ಅಭಿರುಚಿಗೆ ತಕ್ಕ ಹಾಗೆ ಮಾಹಿತಿಯನ್ನು ನೀಡುತ್ತಿದೆ.ನಾಡಿನ ಉದ್ದಗಲಕ್ಕೂ ಇನ್ನೂ ಹೆಚ್ಚಿನ ಕಂಪು ಪಸರಿಸಿ ಪತ್ರಿಕೆ ಉತ್ತರೋತ್ತರವಾಗಿ ಬೆಳೆಯಲಿ. ನೈಜಸುದ್ದಿಗಳ ಮೂಲಕ ಶಾಸಕಾಂಗ ಹಾಗೂ ಕಾರ್ಯಾಂಗಕ್ಕೆ ಚುರುಕು ಮುಟ್ಟಿಸುವ ಕೆಲಸವನ್ನು ಪತ್ರಿಕೆ ಮಾಡುತ್ತಿದೆ. ನಮ್ಮ ನೆಚ್ಚಿನ ಪತ್ರಿಕೆ ದಶಮಾನೋತ್ಸವ ಸಂಭ್ರಮದಲ್ಲಿ ಇರುವುದು ಅತ್ಯಂತ ಖುಷಿ ಸಂಗತಿ. ಇದೇ ರೀತಿಯಲ್ಲಿ ಪತ್ರಿಕೆ ಯಶಸ್ವಿಯಾಗಿ ಸಾಗಲಿ.

ವಿಶ್ವಾಸಾರ್ಹ ಪತ್ರಿಕೆ ಕಳೆದ ಒಂಬತ್ತು ವರ್ಷಗಳಿಂದ ವಿಶ್ವವಾಣಿ ಅತ್ಯಂತ ವಿಶ್ವಾಸಾರ್ಹ ಪತ್ರಿಕೆಯಾಗಿ ಮೂಡಿ ಬರುತ್ತಿದೆ. ಅಂಕಣ ಬರಹಗಳು, ವಿವಿಧ ಬಗೆಯ ವಿಷಯಕ್ಕೆ ಸಂಬಂಧಿಸಿದ ಪುರವಣಿಗಳನ್ನು ಓದುವುದು ಒಂದು ರೀತಿಯಲ್ಲಿ ಖುಷಿ ಕೊಡುತ್ತದೆ. ಅಷ್ಟೇ ಅಲ್ಲದೆ ರಾಜಕೀಯ ಸುದ್ದಿಗಳ ಸಮಗ್ರ ವಿವರಣೆಯೂ ಅದ್ಭುತವಾಗಿ ಮೂಡಿಬರುತ್ತಿದ್ದು, ಈ ಪತ್ರಿಕೆ ಇನ್ನಷ್ಟು ಎತ್ತರಕ್ಕೆ ಬೆಳೆಯಲಿ ಎಂದು ತುಂಬು ಹೃದಯದಿಂದ ಹಾರೈಸುತ್ತೇನೆ.

-ಡಾ. ನಯನಾ ಭಸ್ಮೆ
ಅಧ್ಯಕ್ಷರು,ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ,ಬೆಳಗಾವಿ

ಪಾಟೀಲ ಪುಟ್ಟಪ್ಪ ಅವರ ವಿಶ್ವವಾಣಿಯನ್ನು ಮುಂದುವರಿಸಿರುವ ವಿಶ್ವೇಶ್ವರ ಭಟ್ ಪತ್ರಿಕೆಯನ್ನು ಕಟ್ಟಲು ಪಟ್ಟ ಶ್ರಮ ಅವರ್ಣನೀಯ. ಕರೋನಾ ಸಂದರ್ಭದಲ್ಲಿ ಪತ್ರಿಕೆ ನಿಂತೇ ಹೋಯಿತು ಎಂಬ ಊಹಾಪೋಹ ಜಾಲತಾಣಗಳಲ್ಲಿ ಹರಿದಾಡುತ್ತಿದ್ದರೂ ಅದು ನಿಜವಾಗಲಿಲ್ಲ. ಪ್ರತಿದಿನ ಎಲ್ಲ ಪುಟಗಳೂ ಕಲರ್ ಕಲರ್ ಆಗಿದ್ದು ವಿರಾಮ ಸೂಪರ್ ಆಗಿ ಬರುತ್ತಿದೆ. ಸಂಪಾದಕೀಯ ಎಲ್ಲ ಪತ್ರಿಕೆಯ ಹೂರಣವಾದರೂ ಸೊಂಪಾದಕೀಯ ಮತ್ತು ಸಂಪಾದಕರ ಸತ್ಯಶೋಧನೆಗಾಗಿ ವಿಶ್ವವಾಣಿಯನ್ನೇ ತಿರುವಿ ಹಾಕಬೇಕು. ಸ್ಥಳೀಯ ಸುದ್ದಿಗಳಿಗೆ ಹೆಚ್ಚು ಪುಟಗಳನ್ನು ಮೀಸಲಿಡುವ ಮೂಲಕ ಪತ್ರಿಕೆ ಇನ್ನಷ್ಟು ದುಂಡಗಾಗಲಿ. ದಶಮಾನೋತ್ಸವ ಸಂಭ್ರಮದಲ್ಲಿರುವ ವಿಶ್ವವಾಣಿಗೆ ಶುಭಾಶಯಗಳು.

- ಬಿ.ಶಿವಕುಮಾರ್, ಉಪ ಕಾರ್ಯದರ್ಶಿ, ಜಿಪಂ, ಕೋಲಾರ

ಸ್ಪರ್ಧಾತ್ಮಕ ಪತ್ರಿಕೋದ್ಯಮದಲ್ಲಿ ವಿಶ್ವವಾಣಿ ದಿನಪತ್ರಿಕೆಯು ಓದುಗರನ್ನು ಹಿಡಿದಿಟ್ಟುಕೊಂಡು ಮುಂದೆ ಸಾಗುತ್ತಿರುವುದು ನಿಜಕ್ಕೂ ಶ್ಲಾಘನೀಯ. ಪತ್ರಿಕೋದ್ಯಮದ ಕ್ರಾಂತಿಕಾರಿ ವಿಶ್ವೇಶ್ವರ ಭಟ್ಟರ ಸಾರಥ್ಯದಲ್ಲಿ ರಾಜ್ಯದ ಮುಂಚೂಣಿ ಪತ್ರಿಕೆಯಾಗಿ ಮುನ್ನುಗ್ಗುತ್ತಿರುವ ವಿಶ್ವವಾಣಿಯು ಇನ್ನು ಎತ್ತರಕ್ಕೆ ಬೆಳೆಯಲಿ.

- ಎ.ಬಿ. ರಮೇಶ ಬಂಡಿಸಿದ್ದೇಗೌಡ,
ಶಾಸಕರು, ಶ್ರೀರಂಗಪಟ್ಟಣ



ಅತಿ ಕಡಿಮೆ ಅವಧಿಯಲ್ಲಿ ರಾಜಮಟ್ಟದ ದಿನಪತ್ರಿಕೆಯೊಂದನ್ನು ಕಟ್ಟಿ, ಅದನ್ನು ಜನಮಾನಸದಲ್ಲಿ ಅಚ್ಚ ಹಸಿರಿನಂತೆ ಉಳಿಸುವುದು ಸಾಮಾನ್ಯ ವಿಷಯವಲ್ಲ. ಇಂತಹ ದಿಟ್ಟ ಹೆಜ್ಜೆಯನ್ನು ಛಲದಿಂದ ಗೆದ್ದು ಮುಂದೆ ಸಾಗುತ್ತಿರುವ ವಿಶ್ವೇಶ್ವರ ಭಟ್ ಅವರ ನೇತೃತ್ವದ ವಿಶ್ವವಾಣಿ ದಿನಪತ್ರಿಕೆಗೆ ಶುಭಾಶಯಗಳು. ಈ ಪತ್ರಿಕೆ ಇನ್ನಷ್ಟು ದೊಡ್ಡ ಮಟ್ಟಕ್ಕೆ ಬೆಳೆದು ಚಂದಾದಾರನ್ನು ಹೆಚ್ಚಿಸಿಕೊಳ್ಳಲಿ ಎಂಬುದೇ ನನ್ನ ಆಶಯ.

- ಎನ್.ಚಲುವರಾಯಸ್ವಾಮಿ, ಕೃಷಿ ಸಚಿವ

ಸಮಾಚಾರ ಸಣ್ಣದಲ್ಲ

ಮೀಟರ್ ಬಡ್ಡಿ ಕಿರುಕುಳ ಯುವಕ ನೇಣಿಗೆ ಶರಣು

ಮಂಡ್ಯ: ಮೀಟರ್ ಬಡ್ಡಿ ದಂಧೆಕೋರರ ಕಿರುಕುಳದಿಂದ ಯುವಕನೊಬ್ಬ ನೇಣಿಗೆ ಶರಣಾದ ಘಟನೆ ಕೆ.ಆರ್.ಪೇಟೆಯ ವಳಗೆರೆ ಮೆಣಸ ಗ್ರಾಮದಲ್ಲಿ ನಡೆದಿದೆ. ಲೋಹಿತ್ (35) ಮೃತ ದುರ್ದೈವಿ ಎಂದು ತಿಳಿದು ಬಂದಿದೆ. ಆತ ಖಾಸಗಿ ವ್ಯಕ್ತಿಗಳಿಂದ ಮೀಟರ್ ಬಡ್ಡಿಗೆ ಸಾಲ ಪಡೆದಿದ್ದ. ಸುಮಾರು 30 ಲಕ್ಷ ರು. ಸಾಲ ಮಾಡಿಕೊಂಡಿದ್ದ. ಲಕ್ಷ ಲಕ್ಷ ಬಡ್ಡಿ ಕೂಡ ಕಟ್ಟಿದ್ದ. ಆದರೂ ಮೀಟರ್‌ಬಡ್ಡಿ ದಂಧೆಕೋರರ ಹಾವಳಿ ತಪ್ಪಿರಲಿಲ್ಲ. ಯುವಕ ಮೈಕ್ರೋ ಫೈನಾನ್ಸ್‌ನಲ್ಲೂ ಸಾಲ ಪಡೆದಿರುವ ಬಗ್ಗೆ ಶಂಕೆ ಇದೆ. ಆತ ಮೂರು ದಿನದ ಹಿಂದೆ ಕೆ.ಆರ್.ಪೇಟೆ ಪಟ್ಟಣದ ಪೊಲೀಸ್ ಠಾಣೆಗೆ ದೂರು ಸಲ್ಲಿಸಲು ಮುಂದಾಗಿದ್ದ. ಬಳಿಕ ದೂರು ನೀಡದೆ ಗ್ರಾಮಸ್ಥರ ಸಮ್ಮುಖದಲ್ಲಿ ಸಮಸ್ಯೆ ಬಗೆಹರಿಸಿಕೊಳ್ಳುವುದಾಗಿ ವಾಪಸಾಗಿದ್ದ. ಅಂತಿಮವಾಗಿ ಮೈಕ್ರೋ ಫೈನಾನ್ಸ್ ಹಾಗೂ ಮೀಟರ್ ಬಡ್ಡಿ ದಂಧೆಕೋರರ ಕಾಟಕ್ಕೆ ನೊಂದು ನೇಣಿಗೆ ಶರಣಾಗಿದ್ದಾನೆ.

ಮೀಟರ್ ಬಡ್ಡಿ: ವ್ಯಕ್ತಿಗೆ ಬೆತ್ತಲೆಗೊಳಿಸಿ ಚಿತ್ರಹಿಂಸೆ

ಗದಗ: ಜಿಲ್ಲೆಯಲ್ಲಿ ಮೈಕ್ರೋ ಫೈನಾನ್ಸ್ ಹಾವಳಿ ಬೆನ್ನಲ್ಲೇ, ಮೀಟರ್ ಬಡ್ಡಿ ದಂಧೆಕೋರರ ಹಾವಳಿಯೂ ಹೆಚ್ಚುತ್ತಿದೆ. 1 ಲಕ್ಷ ರು. ಸಾಲದ ಬಡ್ಡಿ ನೀಡದ್ದಕ್ಕೆ ಮನಬಂದಂತೆ ಹಲ್ಲೆ ಮಾಡಿರುವ ಘಟನೆ ಗದಗ್‌ನ ಬೆಟಗೇರಿಯಲ್ಲಿ ನಡೆದಿದೆ. ಬೆಟಗೇರಿಯ ದಶರಥ ಅವರು ಮಂಜುನಾಥ ಹಂಸನೂರು ಎಂಬಾತನ ಬಳಿ ಎರಡು ವರ್ಷದ ಹಿಂದೆ 1 ಲಕ್ಷ ರು.ಸಾಲ ಪಡೆದಿದ್ದರು. ಈ ಸಾಲಕ್ಕೆ ಬಡ್ಡಿ ಪಾವತಿಸುತ್ತಿದ್ದರು. ದರೆ ಇತ್ತೀಚೆಗೆ ಕೆಲಸ ಇಲ್ಲದಕ್ಕೆ ಬಡ್ಡಿ ತುಂಬಲು ವಿಳಂಬ ಮಾಡಿದ್ದಾರೆ. ಇದರಿಂದ ರೊಚ್ಚಿಗೆದ್ದ ಮೀಟರ್ ಬಡ್ಡಿಕೋರರು ರಾತ್ರಿ ದಶರಥ ಅವರನ್ನು ಸೆಟಲ್ ಮೆಂಟ್ ನಗರದ ಮನೆಯಲ್ಲಿ ಕೂಡಿಹಾಕಿ ಚಿತ್ರಹಿಂಸೆ ನೀಡಿದ್ದಾರೆ. ಬಟ್ಟೆಬಿಚ್ಚಿ, ಬಾಯಿಗೆ ಬಟ್ಟೆ ತುರುಕಿ ತಡರಾತ್ರಿ 3 ರವರೆಗೂ ಹಲ್ಲೆ ನಡೆಸಿ ದುಷ್ಕರ್ಮಿಗಳು ಕ್ರೌರ್ಯ ಮೆರೆದಿದ್ದಾರೆ. ಬೆಲ್ಟ್, ಕೇಬಲ್ ತಂತಿ, ಲಾಠಿಯಿಂದ ಮೈ, ಕೈ, ಕಾಲು,ಬೆನ್ನು, ಮುಖ, ತಲೆ ಎಲ್ಲ ಕಡೆ ಬಾಸುಂಡೆ ಬರುವಂತೆ ಚಿತ್ರಹಿಂಸೆ ಕೊಟ್ಟಿದ್ದಾರೆಂದು ದೂರಲಾಗಿದೆ.

ಬಳ್ಳಾರಿ ವೈದ್ಯರ ಅಪಹರಣ 6 ಕೋಟಿ ಒತ್ತೆಹಣಕ್ಕೆ ಬೇಡಿಕೆ

ಬಳ್ಳಾರಿ: ಇಲ್ಲಿನ ಜಿಲ್ಲಾ ಆಸ್ಪತ್ರೆಯ ಮಕ್ಕಳ ವೈದ್ಯ ಡಾ.ಸುನೀಲ್ ಅವರನ್ನು ಶನಿವಾರ ಬೆಳಗ್ಗೆ ಸತ್ಯನಾರಾಯಣ ಪೇಟೆಯ ಶನೈಶ್ಚರ ಗುಡಿ ಬಳಿ ವಾಯುವಿಹಾರದಲ್ಲಿದ್ದ ವೇಳೆ ಅಪರಿಚಿತರು ಅಪಹರಿಸಿ, ಆರು ಕೋಟಿ ರು. ಒತ್ತೆಹಣಕ್ಕೆ ಬೇಡಿಕೆಯಿಟ್ಟಿದ್ದಾರೆ. ಟಾಟಾ ಇಂಡಿಗೋ ಕಾರಿನಲ್ಲಿ ಬಂದಿದ್ದ ಅಪಹರಣಕಾರರು, ವೈದ್ಯರ ಬಾಯಿಮುಚ್ಚಿ ಅಪಹರಿಸಿದ್ದಾರೆ. ಡಾ.ಸುನೀಲ್ ಸಹೋದರ ವೇಣು ಅವರು ಜಿಲ್ಲಾ ಮದ್ಯ ಮಾರಾಟಗಾರರ ಸಂಘದ ಅಧ್ಯಕ್ಷರಂತೆ. ಅವರ ಬಳಿ ಹೆಚ್ಚಿನ ಹೆಚ್ಚಿನ ಪ್ರಮಾಣದಲ್ಲಿ ಹಣ ಇದೆಯೆಂದು ವೈದ್ಯರನ್ನು ಅಪಹರಿಸಲಾಗಿದೆ ಎಂದು ಹೇಳಲಾಗುತ್ತಿದೆ. ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲಿಸಿದ್ದು, ಅಪಹರಣಕಾರರ ಪತ್ತೆಗೆ ಕಾರ್ಯಾಚರಣೆ ಕೈಗೊಂಡಿದ್ದಾರೆ.

ಭದ್ರಾಮೇಲ್ದಂಡೆ ಯೋಜನೆಯ ಅನುದಾನ ಬಿಡುಗಡೆಗೆ ಸಿಎಂ ಆಗ್ರಹ | ರಾಜ್ಯದ ವಿವಿಧ ಯೋಜನೆಗಳ ಪ್ರಸ್ತಾಪ

ರಾಜ್ಯಕ್ಕೆ ಅನುದಾನ: ಕೇಂದ್ರಕ್ಕೆ ಸಿಎಂ, ಡಿಸಿಎಂ ಪತ್ರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೇಂದ್ರದ ಮುಂಗಡಪತ್ರಕ್ಕೆ ಸಿದ್ಧತೆ ಪೂರ್ಣಗೊಂಡಿದ್ದು, ಇನ್ನೊಂದು ವಾರದಲ್ಲಿ ಬಜೆಟ್ ಮಂಡನೆಯಾಗುವ ಕ್ಷಣದಲ್ಲಿ ಕರ್ನಾಟಕಕ್ಕೆ ಆಗಬೇಕಿರುವ ಆರ್ಥಿಕ ನೆರವಿನ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರತ್ಯೇಕ ಪತ್ರದ ಮೂಲಕ ಕೇಂದ್ರಕ್ಕೆ ಮನವಿ ಸಲ್ಲಿಸಿದ್ದಾರೆ.

ಸಿಎಂ ಸಿದ್ದರಾಮಯ್ಯ ಅವರು ಪ್ರಧಾನಿ ನರೇಂದ್ರ ಮೋದಿ, ಆರ್ಥಿಕ ಸಚಿವೆ ನಿರ್ಮಲಾ ಸೀತಾರಾಮನ್, ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್, ಜಲಶಕ್ತಿ ರಾಜ್ಯ ಸಚಿವ ವಿ. ಸೋಮಣ್ಣ ಅವರಿಗೆ ಪತ್ರ ಬರೆದಿದ್ದಾರೆ. ಇನ್ನೊಂದೆಡೆ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಬರೆದು, 90 ಸಾವಿರ ಕೋಟಿ ರು. ಯೋಜನೆಗಳಿಗೆ ಆರ್ಥಿಕ ನೆರವು ನೀಡುವಂತೆ ಮನವಿ ಮಾಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಮುಖವಾಗಿ 2023-24ನೇ ಸಾಲಿನ ಬಜೆಟ್‌ನಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ 5300 ಕೋಟಿ ರು. ಘೋಷಣೆಯಾಗಿತ್ತು. ಆದರೆ ಈವರೆಗೆ ಅನುದಾನ ಬಿಡುಗಡೆಯಾಗಿಲ್ಲ. ಆದ್ದರಿಂದ 2025-26ನೇ ಸಾಲಿನಲ್ಲಿ ಈ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಪ್ರಧಾನಿ ಮೋದಿ, ಆರ್ಥಿಕ ಸಚಿವೆ ನಿರ್ಮಲಾ ಸೀತಾರಾಮನ್, ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್, ರಾಜ್ಯ ಖಾತೆ ಸಚಿವ ಸೋಮಣ್ಣ ಅವರಿಗೆ ಪತ್ರ ಬರೆದಿದ್ದಾರೆ.

ಬೆಂಗಳೂರಿನ ವಿವಿಧ ಯೋಜನೆಗಳನ್ನು ಪ್ರಸ್ತಾಪಿಸಿರುವ ಡಿ.ಕೆ.ಶಿವಕುಮಾರ್ ಅವರು, ಇಂತಿಷ್ಟೇ ಅನುದಾನ ಬೇಕೆಂದು ಮನವಿ ಮಾಡಿಲ್ಲವಾದರೂ, ಪ್ರಮುಖ ಮೂಲಸೌಕರ್ಯ ಯೋಜನೆಗಳಿಗೆ ಅನುದಾನ ನೀಡುವಂತೆ ಮನವಿ ಸಲ್ಲಿಸಿದ್ದಾರೆ. ಈ ಮೂಲಕ ಸುಮಾರು 90 ಸಾವಿರ ಕೋಟಿ ಮೌಲ್ಯದ ಯೋಜನೆಗಳಿಗೆ ಅನುದಾನ ಒದಗಿಸುವಂತೆ ಮನವಿ ಸಲ್ಲಿಸಿದ್ದಾರೆ. ಈ ಯೋಜನೆಗಳಲ್ಲಿ ಎಷ್ಟಕ್ಕೆ ಅನುಮೋದನೆ ಸಿಗಲಿದೆ ಎನ್ನುವುದು ಈಗಿರುವ ಕುತೂಹಲವಾಗಿದೆ.

90 ಸಾವಿರ ಕೋಟಿ ಯೋಜನೆಯ ಪ್ರಸ್ತಾಪ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಸುದೀರ್ಘ ಪತ್ರ ಬರೆದಿದ್ದು, ಬೆಂಗಳೂರು ನಿರೀಕ್ಷೆಗೂ ಮೀರಿ ಬೆಳೆಯುತ್ತಿರುವುದರಿಂದ ಜನ ಸಂಖ್ಯೆ 1.50 ಕೋಟಿ ಸನಿಹದಲ್ಲಿದೆ. ಆದ್ದರಿಂದ ಬೆಂಗಳೂರಿನ ಮೂಲಸೌಕರ್ಯ ಅಭಿವೃದ್ಧಿ ಮಾಡಿ ಬೆಂಗಳೂರನ್ನು ದೇಶದ ಸಿಲಿಕಾನ್ ವ್ಯಾಲಿ ಎಂಬ ಹಿರಿಮೆ ಉಳಿಸಿಕೊಳ್ಳಬೇಕಿದೆ. ಇದಕ್ಕಾಗಿ ರಾಜ್ಯ ಸರಕಾರ ಅನೇಕ ಮಹತ್ವದ ಯೋಜನೆಗಳನ್ನು ರೂಪಿಸಿದ್ದು, ಮುಂಬರುವ ಬಜೆಟ್ ನಲ್ಲಿ ಈ ಯೋಜನೆಗಳಿಗೆ ಪೂರಕವಾಗಿ ಅನುದಾನ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ಭೂಮಿಯ ಕೊರತೆಯಿಂದಾಗಿ ಬೆಂಗಳೂರಿನಲ್ಲಿರುವ ಹಾಲಿ ರಸ್ತೆಗಳ ಅಗಲೀಕರಣ ಕಷ್ಟವಾಗಿದೆ. ಹೀಗಾಗಿ ಸಂಚಾರ ದಟ್ಟಣೆ ನಿವಾರಣೆಗೆ ಸುರಂಗ ರಸ್ತೆ ನಿರ್ಮಿಸಲು ರಾಜ್ಯ ಸರಕಾರ ಮುಂದಾಗಿದೆ. ಹೆಬ್ಬಾಳದ ಎಸ್ಟೀಮ್ ಮಾಲ್‌ನಿಂದ ಎಚ್‌ಎಸ್‌ಆರ್ ಬಡಾವಣೆಯ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೂ ಉತ್ತರ - ದಕ್ಷಿಣ 18.5 ಕಿ.ಮೀ ಟನಲ್ ರಸ್ತೆ ನಿರ್ಮಾಣಕ್ಕೆ 15 ಸಾವಿರ ಕೋಟಿ ವೆಚ್ಚವಾಗಲಿದೆ. ಕೆ.ಆರ್ ಪುರ ವೃತ್ತದಿಂದ ನಾಯಂಡನಹಳ್ಳಿ ಜಂಕ್ಷನ್‌ವರೆಗೂ 28.5 ಕಿ.ಮೀ ಟನಲ್ ರಸ್ತೆ ನಿರ್ಮಾಣಕ್ಕೆ 25 ಸಾವಿರ ಕೋಟಿ ವೆಚ್ಚವಾಗಲಿದೆ. ಈ ಯೋಜನೆಗೆ ರಾಜ್ಯ ಸರಕಾರ, ಕಾರ್ಯಸಾಧ್ಯತೆಯ ಅಂತರ ನಿಧಿಯಾಗಿ 19 ಸಾವಿರ ಕೋಟಿ ನೀಡಲು ಒಪ್ಪಿದೆ. ಡಿಪಿಆರ್ ಅನ್ನೂ ಸಿದ್ಧಪಡಿಸಿ, ಸಾರ್ವಜನಿಕರ ಪ್ರತಿಕ್ರಿಯೆಗಾಗಿ ಪ್ರಕಟಿಸಲಾಗಿದೆ ಎಂದು ತಿಳಿಸಿದ್ದಾರೆ.

ಎಲಿವೇಟೆಡ್ ಕಾರಿಡಾರ್‌ಗೆ ಮನವಿ: ನಮ್ಮ ಮೆಟ್ರೋದ ಮೂರನೇ ಹಂತದ ಹಳದಿ ಮಾರ್ಗದಲ್ಲಿ ರಾಗಿಗುಡ್ಡದಿಂದ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೂ ನಿರ್ಮಿಸಲಾಗಿರುವ ಡಬಲ್ ಡೆಕ್ಕರ್ ಮೇಲ್ಸೇತುವೆ ಯಶಸ್ವಿ ಹಿನ್ನೆಲೆಯಲ್ಲಿ ಮೆಟ್ರೋ ನಾಲ್ಕನೇ ಹಂತದ ಯೋಜನೆಯನ್ನು ಡಬಲ್ ಡೆಕ್ಕರ್ ಮೂಲಕ ನಿರ್ಮಿಸಲು ತೀರ್ಮಾನಿಸಲಾಗಿದೆ. ಜೆ.ಪಿ ನಗರದಿಂದ ಹೆಬ್ಬಾಳದವರೆಗೆ ಹಾಗೂ ಹೊಸಹಳ್ಳಿಯಿಂದ ಕಡಬಗೆರೆವರೆಗೂ 45 ಕಿ.ಮೀ ಉದ್ದದ ಈ ಮಾರ್ಗಕ್ಕೆ ಹೆಚ್ಚುವರಿಯಾಗಿ 8916 ಕೋಟಿ ಅಗತ್ಯವಿದೆ. ಇದರೊಂದಿಗೆ ನಗರದ ಸಂಚಾರಿ ದಟ್ಟಣೆ ಯಿರುವ 11 ಜಂಕ್ಷನ್‌ಗಳಲ್ಲಿ 99.50 ಕಿ.ಮೀ ನಷ್ಟು 17 ಮೇಲ್ಸೇತುವೆ ನಿರ್ಮಾಣ ಅಗತ್ಯವಿದ್ದು, ಇದಕ್ಕಾಗಿ 12 ಸಾವಿರ ಕೋಟಿ ಹಣ ಬೇಕಾಗಿದೆ. ಪ್ರಮುಖ ನದಿ ಹಾಗೂ ದೊಡ್ಡ ಕೆರೆಗಳು ಹಾಗೂ ರಾಜಕಾಲುವೆ ಪಕ್ಕದ ಬಫರ್ ಪ್ರದೇಶಗಳನ್ನು ಒತ್ತುವರಿ ಮಾಡಿಕೊಳ್ಳಲಾಗುತ್ತಿದೆ. ಇದನ್ನು ತಪ್ಪಿಸಲು ಈ ಬಫರ್ ವಲಯದಲ್ಲಿ 300 ಕಿ.ಮೀ ಉದ್ದದ ರಸ್ತೆ ನಿರ್ಮಾಣ ಮಾಡಲು ಉದ್ದೇಶಿಸಲಾಗಿದ್ದು, ಇದಕ್ಕಾಗಿ 3000 ಕೋಟಿ ಅಗತ್ಯವಿದೆ ಎಂದು ತಿಳಿಸಲಾಗಿದೆ.

ಯೋಜನೆಗಳ ಪ್ರಸ್ತಾಪ

- ಉತ್ತರ-ದಕ್ಷಿಣ ಹಾಗೂ ಪೂರ್ವ-ಪಶ್ಚಿಮ ತಲುಪಲು ಟನೆಲ್ ರಸ್ತೆ ನಿರ್ಮಾಣಕ್ಕೆ ಸಿದ್ಧತೆ
- ಸಂಚಾರಿ ದಟ್ಟಣೆಯಿರುವ 11 ಜಂಕ್ಷನ್‌ಗಳಲ್ಲಿ ಎಲಿವೇಟೆಡ್ ಕಾರಿಡಾರ್ ಅಗತ್ಯವಿದ್ದು, 12 ಸಾವಿರ ಕೋಟಿ ಅಗತ್ಯ.
- ಅಷ್ಟಪಥಗಳ 73.04 ಕಿ.ಮೀ ಉದ್ದದ ಬಿಸಿನೆಸ್ ಕಾರಿಡಾರ್ ನಿರ್ಮಾಣಕ್ಕೆ 27 ಸಾವಿರ ಕೋಟಿ ಅಗತ್ಯ.
- 500 ಎಂಎಲ್‌ಡಿ ನೀರು ಪೂರೈಸುವ ಕಾವೇರಿ ಆರನೇ ಹಂತ ಯೋಜನೆ.
- ಕೆರೆ ಹಾಗೂ ರಾಜಕಾಲುವೆಯ ಬಫರ್ ವಲಯದಲ್ಲಿ ರಸ್ತೆ ನಿರ್ಮಾಣಕ್ಕೆ 300 ಕೋಟಿ ರು.

ಅಷ್ಟಪಥ ರಸ್ತೆಗೆ 27 ಸಾವಿರ ಕೋಟಿ

ಬೆಂಗಳೂರಿನ ದಟ್ಟಣೆ ನಿಯಂತ್ರಿಸಲು ಖಾಸಗಿ ಹಾಗೂ ಸರಕಾರಿ ಸಹಭಾಗಿತ್ವದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಟು ಪಥಗಳ, 73.04 ಕಿ.ಮೀ ಉದ್ದದ ಬಿಸಿನೆಸ್ ಕಾರಿಡಾರ್ ನಿರ್ಮಾಣಕ್ಕೆ ಮುಂದಾಗಿದೆ. ಈ ಯೋಜನೆಯಲ್ಲಿ 21 ಸಾವಿರ ಕೋಟಿ ಭೂಸ್ವಾಧೀನ ಹಾಗೂ ಆರು ಸಾವಿರ ಕೋಟಿ ರಸ್ತೆ ನಿರ್ಮಾಣಕ್ಕೆ ಸೇರಿ ಒಟ್ಟು 27 ಸಾವಿರ ಕೋಟಿ ಅಗತ್ಯವಿದೆ. ಇದೇ ರೀತಿ ಕಾವೇರಿ 5ನೇ ಹಂತದ ಕುಡಿಯುವ ನೀರಿನ ಪೂರೈಕೆ ಮೂಲಕ ಬೆಂಗಳೂರಿನ ಕುಡಿಯುವ ನೀರಿನ ಬೇಡಿಕೆ ಪೂರ್ಣಗೊಳಿಸಲಾಗಿದ್ದು, ಹೆಚ್ಚುವರಿ ಬೇಡಿಕೆ ಪೂರೈಸಲು ಕಾವೇರಿ 6ನೇ ಹಂತದ ಯೋಜನೆ ಮೂಲಕ 2028ರ ವೇಳೆಗೆ 500 ಎಂಎಲ್‌ಡಿ ನೀರು ಪೂರೈಸುವ ಉದ್ದೇಶವಿದೆ ಎಂದು ತಿಳಿಸಿದ್ದಾರೆ.

ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ರಾಜ್ಯ ಸರಕಾರ ಟನಲ್ ರಸ್ತೆ, ಡಬಲ್ ಡೆಕ್ಕರ್ ಮೇಲ್ಸೇತುವೆ, ಪಿಆರ್‌ಆರ್ ಬಿಸಿನೆಸ್ ಕಾರಿಡಾರ್, ನೀರು ಸರಬರಾಜು ಸೇರಿ ಯೋಜನೆಗಳಿಗೆ 2025-26ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಅನುದಾನ ನೀಡಿ. ಸಂಸತ್ತಿನಲ್ಲಿ ಕರ್ನಾಟಕವನ್ನು ಪ್ರತಿನಿಧಿಸುವ ನಿರ್ಮಲಾ ಸೀತಾರಾಮನ್ ಅವರು ಪ್ರಮುಖ ಯೋಜನೆಗಳಿಗೆ ಅನುದಾನ ನೀಡಬೇಕು.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಸಿಬಿಐ ಪ್ರಕರಣ ಕಂಡವನಿಗೆ ರಾಮುಲು ಬೆಂಬಲಿಗರ ದೂರು ಯಾವ ಲೆಕ್ಕ?

ಬಳ್ಳಾರಿ: ಯಾವುದೋ ದೂರಿಗೆ ನಾನು ಜಗ್ಗುವುದಿಲ್ಲ,ಹೆದರುವುದಿಲ್ಲ. ಸಿಬಿಐ ಪ್ರಕರಣವನ್ನೇ ಎದುರಿಸಿದ್ದೇನೆ. ಶ್ರೀರಾಮುಲು ಬೆಂಬಲಿಗರ ದೂರು ಯಾವ ಲೆಕ್ಕ ಎಂದು ಶಾಸಕ ಜನಾರ್ದನ ರೆಡ್ಡಿ ಸ್ಪಷ್ಟವಾಗಿ ಹೇಳಿದ್ದಾರೆ. ರಾಮುಲು ಬೆಂಬಲಿಗರೆನಿಸಿರುವ ವಾಲ್ಮೀಕಿ ಸಮುದಾಯದ ಕೆಲವರು ತಮ್ಮ ವಿರುದ್ಧ ಬಳ್ಳಾರಿ ಜಿಲ್ಲಾ ಪೊಲೀಸ್ ವರಿಷ್ಠರಿಗೆ ದೂರು ನೀಡುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಆಸ್ತಿ ವಿಚಾರಕ್ಕೆ ಶ್ರೀರಾಮುಲು ಜತೆ ವೈಮನಸ್ಯ ಎಂಬ ಪ್ರಶ್ನೆಗೆ ಸ್ಪಷ್ಟ ಉತ್ತರ ನೀಡಲಿಲ್ಲ. ಯಾವುದೂ ಕೂಡಾ ರಹಸ್ಯವಾಗಿ ಉಳಿಯಲ್ಲ. ನಿಧಾನವಾಗಿ ಕಾಲಕ್ರಮೇಣ ಗೊತ್ತಾಗುತ್ತದೆ ಎಂದು ರೆಡ್ಡಿ ಮಾರ್ಮಿಕವಾಗಿ ನುಡಿದರು.

ವಾಸ್ತು ಹೆಸರಲ್ಲಿ ಗೇಟ್ ಬಂದ್: ಜನಾರ್ದನ ರೆಡ್ಡಿ ಮನೆಗೆ ಹೋಗುವ ಆವರಣ ಗೋಡೆ ಗೇಟ್ ಬಂದ್ ಮಾಡಿರುವುದು, ವಾಸ್ತು ಹೆಸರಲ್ಲಿ ಅಲ್ಲವೇ..? ವಾಸ್ತು ಸರಿ ಇಲ್ಲ ಅಂತಾ ಹೇಳಿದ್ಮೇಲೆ ಇನ್ನೇನಿದೆ. ಅದನ್ನು ನಾವಾಗಲಿ, ನೀವಾಗಲಿ ಸರಿ ಮಾಡಿಕೊಳ್ಳಲೇಬೇಕಲ್ಲ ಎಂದೂ ಅವರು ಸೂಚ್ಯವಾಗಿ ನುಡಿದರು.

ನಾನು ಏನೇ ಇದ್ರೂ ಬಿಜೆಪಿಯ ವೇದಿಕೆಯಲ್ಲಿ ಮಾತಾಡುತ್ತೇನೆ. ಪಕ್ಷದ ವರಿಷ್ಠರು ಸೂಚನೆ ಕೊಟ್ಟಿದ್ದಾರೆ. ಇನ್ನು ಮುಂದೆ ಈ ವಿಚಾರದ ಬಗ್ಗೆ ಬಹಿರಂಗ ಪ್ರತಿಕ್ರಿಯೆ ನೀಡಲ್ಲ. ವರಿಷ್ಠರ ಮುಂದೆಯೇ ಚರ್ಚೆ ಮಾಡ್ತೇನೆ. ನಾನು ಬಳ್ಳಾರಿಯಲ್ಲೇ ಇರುತ್ತೇನೆ. ಸಮಯ ಬಂದಾಗ ಎಲ್ಲವೂ ಗೊತ್ತಾಗುತ್ತದೆ

-ಜನಾರ್ದನರೆಡ್ಡಿ, ಶಾಸಕ

ಗೋಹತ್ಯೆ: ದುಷ್ಕರ್ಮಿ ಸೆರೆ

ಕಾರವಾರ: ಗಬ್ಬದ ಹಸುವನ್ನು ಹತ್ಯೆಮಾಡಿ ಕರುವಿನ ಮಾಂಸ ಕೊಂಡೊಯ್ದ ಅಮಾನವೀಯ ಪ್ರಕರಣದಲ್ಲಿ ಹೊನ್ನಾವರ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ. ಬಂಧಿತನನು ವಲ್ಕಿಯ ತೌಫಿಕ್ ಅಹ್ಮದ್ ಜಿದ್ದಾ ಎಂದು ಗುರುತಿಸಲಾಗಿದೆ. ಆರೋಪಿ ಜ.19 ರಂದು ಹೊನ್ನಾವರದ ಸಾಲ್ಕೋಡು ಗ್ರಾಮದ ಅರಣ್ಯದಲ್ಲಿ ಗೋವಿನ ವಧೆಮಾಡಿ, ರುಂಡ, ಕಾಲುಗಳನ್ನು ಬಿಟ್ಟು ಗೋಮಾಂಸ ಹಾಗೂ ಹೊಟ್ಟೆಯಲ್ಲಿದ್ದ ಕರುವಿನ ಮಾಂಸ ಹೊತ್ತೊಯ್ದಿದ್ದ. ಈ ಕೃತ್ಯದಲ್ಲಿ ಆರೋಪಿಗೆ ಸಹಕರಿಸಿದ ಮೂವರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

ಮುಡಾ ಮಾಜಿ ಆಯುಕ್ತರಿಗೆ ನೋಟೀಸ್

ಮೈಸೂರು: ಕ್ಯಾಥೆಡ್ರಲ್ ಸೊಸೈಟಿಗೆ ಅಕ್ರಮವಾಗಿ ಸೈಟ್ ಹಂಚಿಕೆ ಆರೋಪ ಕೇಳಿ ಬಂದಿದ್ದು ಮುಡಾ ಮಾಜಿ ಆಯುಕ್ತ ದಿನೇಶ್ ಕುಮಾರ್ ಹಾಗೂ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಸರಕಾರ ಸೂಚನೆ ನೀಡಿದೆ. ರಾಜ್ಯದಲ್ಲಿ ಭಾರಿ ಚರ್ಚೆಯಾಗುತ್ತಿರುವ ಮುಡಾ ಹಗರಣದ ತನಿಖೆ ಅಂತಿಮ ಹಂತಕ್ಕೆ ತಲುಪಿದ್ದು, ಲೋಕಾಯುಕ್ತ ವರದಿ ಸಲ್ಲಿಸಲು ಸಿದ್ದವಾಗಿದೆ. ಈ ಮಧ್ಯೆಯೇ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸರಕಾರ ಈ ಸೂಚನೆ ನೀಡಿದೆ.

ಇಂದಿನಿಂದ 31ರವರೆಗೆ ಸುತ್ತೂರು ಜಾತ್ರೆ

ಮೈಸೂರು: ಆದಿ ಜಗದ್ಗುರು ಶ್ರೀ ಶಿವರಾತ್ರಿ ಶಿವಯೋಗಿಗಳ ಜಾತ್ರಾ ಮಹೋತ್ಸವ ಜ.26ರಿಂದ ಪ್ರಾರಂಭಗೊಂಡು ಜ.31ರವರೆಗೆ ಆರು ದಿನಗಳ ಕಾಲ ನಡೆಯಲಿದೆ. ರಥೋತ್ಸವ ಹಾಗೂ ತೆಪ್ಪೋತ್ಸವ ಜರುಗುತ್ತವೆ. ಈ ಸಂಭ್ರಮದ ಜಾತ್ರೆಯಲ್ಲಿ ವೈವಿಧ್ಯಪೂರ್ಣ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಕ್ಷೇತ್ರದ ಕಾರ್ಯದರ್ಶಿ ಮಂಜುನಾಥ್ ತಿಳಿಸಿದ್ದಾರೆ. ಜಾತ್ರೆಯ ಎಲ್ಲ ಕಾರ್ಯಕ್ರಮಗಳು ಮತ್ತು ಪೂಜಾಕೈಂಕರ್ಯಗಳು ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ ಸಾನ್ನಿಧ್ಯದಲ್ಲಿ ನಡೆಯಲಿದೆ.

ನಿರಂತರ ಉತ್ಸವ: ಜ. 27ರಂದು ಸಾಮೂಹಿಕ ವಿವಾಹ ಮತ್ತು ಹಾಲ್ಹರವಿ ಉತ್ಸವ, 28ರಂದು ರಥೋತ್ಸವ ಹಾಗೂ ಶ್ರೀವೀರಭದ್ರೇಶ್ವರ ಕೊಂಡೋತ್ಸವ, 29ರಂದು ಶ್ರೀಮಹದೇಶ್ವರ ಕೊಂಡೋತ್ಸವ ಮತ್ತು ಲಕ್ಷದೀಪೋತ್ಸವ, 30ರಂದು ತೆಪ್ಪೋತ್ಸವ ಹಾಗೂ 31ರಂದು ಅನ್ನಬ್ರಹ್ಮೋತ್ಸವ ಜತೆಗೆ ಹಲವಾರು ಧಾರ್ಮಿಕ ಕಾರ್ಯಕ್ರಮ, ವೈವಿಧ್ಯಮಯ ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಕ್ರೀಡಾಚಟುವಟಿಕೆಗಳು ಜರುಗಲಿವೆ.

ವಸ್ತುಪ್ರದರ್ಶನ: ವಸ್ತುಪ್ರದರ್ಶನದಲ್ಲಿ ಕೈಗಾರಿಕೋತ್ಪನ್ನಗಳು, ಕೈಮಗ್ಗ, ಜವಳಿ, ಗ್ರಾಮೀಣ ಕರಕುಶಲ ಉತ್ಪನ್ನಗಳು, ಸ್ವಸಹಾಯ ಸಂಘಗಳು, ಸ್ತ್ರೀಶಕ್ತಿ ಸಂಘಗಳು ತಯಾರಿಸಿದ ಗೃಹಬಳಕೆ ಉತ್ಪನ್ನಗಳು ಹಾಗೂ ಗುಡಿ ಕೈಗಾರಿಕೆ ವಸ್ತುಗಳ ಪ್ರದರ್ಶನ ಹಾಗೂ ಮಾರಾಟದ ವ್ಯವಸ್ಥೆ ಇರುತ್ತದೆ.

ಕೃಷಿ ಮೇಳ: ನಿಖರ ಕೃಷಿ ಬೇಸಾಯ ಎಂಬ ಶೀರ್ಷಿಕೆಯಡಿ ಸಾಂಪ್ರದಾಯಿಕ ಹಾಗೂ ಆಧುನಿಕ ತಂತ್ರಜ್ಞಾನಾಧಾರಿತ ಕೃಷಿಮೇಳವನ್ನು ಆಯೋಜಿಸಲಾಗಿದೆ. ವಿವಿಧ ಫಲಪುಷ್ಪಗಳು, ತೋಟಗಾರಿಕೆ ಬೆಳೆ ಸೇರಿ 300 ಬೆಳೆಗಳ ಪ್ರದರ್ಶನವಿದೆ.

ಚಿತ್ರಸಂತೆ: ರಾಜ್ಯ ಹಾಗೂ ಹೊರರಾಜ್ಯ ಕಲಾವಿದರುಗಳ ಕಲಾಕೃತಿಗಳ ಪ್ರದರ್ಶನ, ಮಾರಾಟ ಹಾಗೂ ಸ್ಥಳದಲ್ಲೇ ಸಾರ್ವಜನಿಕರ ಭಾವಚಿತ್ರ ಬಿಡಿಸಿ ಮಾರಾಟ ಮಾಡುವ ವ್ಯವಸ್ಥೆಯು ಜಾತ್ರೆಯ ಎಲ್ಲಾ ದಿನಗಳಲ್ಲಿಯೂ ಇರುತ್ತದೆ.

ಕುಸ್ತಿ ಪಂದ್ಯಾವಳಿ: ಜನವರಿ 30ರ ಗುರುವಾರ ರಾಷ್ಟ್ರಮಟ್ಟದ ನಾಡ ಕುಸ್ತಿಪಂದ್ಯ ನಡೆಯಲಿವೆ. ಈ ಬಾರಿ ಎರಡು ಮಾರ್ಪಿಟ್ ಕುಸ್ತಿಗಳಿರುತ್ತವೆ. ರಾಷ್ಟ್ರಮಟ್ಟದ ಕುಸ್ತಿ ಸ್ಪರ್ಧೆಯಲ್ಲಿ ವಿಜೇತರಿಗೆ ಸುತ್ತೂರು ಕೇಸರಿ ಪ್ರಶಸ್ತಿ ಹಾಗೂ ಸ್ಥಳೀಯ ಉತ್ತಮ ಕುಸ್ತಿ ಸ್ಪರ್ಧೆ ವಿಜೇತರಿಗೆ ಸುತ್ತೂರು ಕುಮಾರ ಪ್ರಶಸ್ತಿಗಳನ್ನು ನೀಡಲಾಗುವುದು.

ದನಗಳ ಪರಿಷೆ : ದನಗಳ ಜಾತ್ರೆಯನ್ನು ಕಳೆದ 53 ವರ್ಷಗಳಿಂದಲೂ ಏರ್ಪಡಿಸಲಾಗುತ್ತಿದೆ. ರೈತ ಬಾಂಧವರು ಎತ್ತು, ಹಸು, ಹೋರಿಗಳನ್ನು ಕೊಂಡುಕೊಳ್ಳಲು, ಮಾರಾಟ ಮಾಡಲು ಅವಕಾಶವಿದೆ.

ಅಮೆರಿಕ ಅಧ್ಯಕ್ಷರ ಹಾಸ್ಯ ದಿನದ ಬಗ್ಗೆ ನಿಮಗೆ ಗೊತ್ತಿದೆಯೇ?

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
vbhat@me.com

ಡೊನಾಲ್ಡ್ ಟ್ರಂಪ್ ಅವರು ಎರಡನೇ ಅವಧಿಗೆ ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ್ದಾಯ್ತು. ಈ ಬೆಳವಣಿಗೆಯ ಹಿನ್ನೆಲೆಯಲ್ಲಿ, ಮುಂಬರುವ 4 ವರ್ಷಗಳ ಅವಧಿಯಲ್ಲಿ ಭಾರತ ಮತ್ತು ಅಮೆರಿಕ ನಡುವಿನ ಸಂಬಂಧ ಹೇಗಿರಬಹುದು ಎಂಬುದನ್ನು ಮುನ್ನಂದಾಜಿಸುವ ಸಾಕಷ್ಟು ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ, ಆಗುತ್ತಲೇ ಇವೆ. ಆದರೆ, ಇಂಥ ಆಡಳಿತಾತ್ಮಕ ವಿಷಯಗಳಿಗೆ ಹೊರತಾದ ಒಂದು ಮಗ್ಗುಲನ್ನು ಇಂದು ಇಲ್ಲಿ ಹಂಚಿಕೊಳ್ಳಲು ಬಯಸುವೆ.

ಅನೇಕರಿಗೆ ಗೊತ್ತಿಲ್ಲದಿರಬಹುದು, ಪ್ರತಿ ವರ್ಷ ಆಗಸ್ಟ್ 11ನ್ನು 'ಅಮೆರಿಕ ಅಧ್ಯಕ್ಷರ ಹಾಸ್ಯ ದಿನ' (Presidential Joke Day) ಎಂದು ಆಚರಿಸುತ್ತಾರೆ. ಆ ದಿನ ಅಮೆರಿಕ ಅಧ್ಯಕ್ಷರ ಬಗ್ಗೆ ಜೋಕ್ ಮಾಡಬಹುದು ಎಂದಲ್ಲ, ಆದರೆ ಅದಕ್ಕೆ ವ್ಯತಿರಿಕ್ತವಾಗಿ, ಅಮೆರಿಕ ಅಧ್ಯಕ್ಷರೇ ಅಂದು ಕೆಲವು ಜೋಕುಗಳನ್ನು ಹೇಳುತ್ತಾರೆ.

ಈ ಸಂಪ್ರದಾಯ ಆರಂಭವಾಗಿದ್ದಕ್ಕೆ ಕಾರಣವಿದೆ. 1984ರ ಆಗಸ್ಟ್ 11ರಂದು, ತಮ್ಮ ಶನಿವಾರದ ರೇಡಿಯೋ ಭಾಷಣಕ್ಕೆ ಮುನ್ನ, ಅಧ್ಯಕ್ಷ ರೊನಾಲ್ಡ್ ರೇಗನ್ ಮೈಕ್ರೊಫೋನ್ ಪರೀಕ್ಷೆ ಮಾಡುತ್ತಿದ್ದರು. ಆದರೆ ತಮ್ಮ ಮಾತು ಲೈವ್ ಪ್ರಸಾರವಾಗುತ್ತಿದೆ ಎಂಬುದು ಅವರಿಗೆ ಗೊತ್ತಿರಲಿಲ್ಲ. ಅವರು ಮೈಕ್ ಟೆಸ್ಟ್ ಮಾಡುತ್ತಾ, ''ನನ್ನ ಪ್ರೀತಿಯ ಅಮೆರಿಕವಾಸಿಗಳೇ, ನಾನು ರಷ್ಯಾ ವಿರುದ್ಧ ದಾಳಿ ನಡೆಸಲು ನಿರ್ಧರಿಸಿದ್ದೇನೆ. ಇನ್ನು ಕೆಲ ಹೊತ್ತಿನಲ್ಲಿ ದಾಳಿ ಆರಂಭವಾಗಲಿದೆ'' ಎಂದು ಹೇಳಿದರು. ಆದರೆ ಅವರ ಮಾತು ಹೊರ ಜಗತ್ತಿಗೆ ಲೈವ್ ಪ್ರಸಾರ ಆಗಿ ಬಹಳ ಮುಜುಗರವಾಯಿತು. ಅದನ್ನು ಮರೆಮಾಚಲು 'ಇದೊಂದು ಜೋಕ್' ಎಂದು ಹೇಳಲಾಯಿತು. ಅಮೆರಿಕ ಅಧ್ಯಕ್ಷರ ಕಾರ್ಯಾಲಯ ಸ್ಪಷ್ಟನೆ ನೀಡಿತು. ಅಷ್ಟೇ ಅಲ್ಲ, ಇನ್ನು ಪ್ರತಿ ವರ್ಷ ಆ ದಿನವನ್ನು 'ಅಧ್ಯಕ್ಷರ ಹಾಸ್ಯ ದಿನ'ವೆಂದು ಆಚರಿಸಲಾಗುವುದು ಎಂದು ಘೋಷಿಸಲಾಯಿತು. ಈ ಘಟನೆಯೇ Presidential Joke Day ಆಚರಣೆಗೆ ಕಾರಣವಾಯಿತು. ಆ ದಿನ ಅಧ್ಯಕ್ಷರು ಜೋಕ್ ಹೇಳಬೇಕೆಂದು ನಿರೀಕ್ಷಿಸಲಾಗುತ್ತದೆ. ಆದರೆ ಎಲ್ಲರೂ ಹೇಳುವುದಿಲ್ಲ, ಅವರು ಹೇಳುತ್ತಾರೋ ಇಲ್ಲವೋ, ಜನರಂತೂ ಅಮೆರಿಕ ಅಧ್ಯಕ್ಷರ ಬಗ್ಗೆ ಹಾಸ್ಯ ಚಟಾಕಿಗಳನ್ನು ಸಿಡಿಸಿ ಖುಷಿಪಡುತ್ತಾರೆ. ಅದರ ಮುಂದಿನ ವರ್ಷ 'ಅಧ್ಯಕ್ಷರ ಹಾಸ್ಯ ದಿನ'ದಂದು ರೊನಾಲ್ಡ್ ರೇಗನ್ ಒಂದು ಹಾಸ್ಯ ಚಟಾಕಿ ಹಾರಿಸಿದರು– Recession is when your neighbour loses his job. Depression is when you lose yours. And recovery is when Jimmy Carter loses his.

ಒಂದು ವೇಳೆ, ಈ ಘಟನೆ ಭಾರತದಲ್ಲಿ ನಡೆದಿದ್ದರೆ, ಪ್ರತಿಪಕ್ಷಗಳು ಪ್ರಧಾನಿ ಮೋದಿ ಕ್ಷಮೆಯಾಚಿಸಬೇಕೆಂದು ಆಗ್ರಹಿಸುತ್ತಿದ್ದವು. ಈ ಪ್ರಮಾದಕ್ಕೆ ತಲೆದಂಡವಾಗಿ ಪ್ರಸಾರ ಖಾತೆ ಸಚಿವರು ರಾಜೀನಾಮೆ ನೀಡಬೇಕೆಂಬ ಬೇಡಿಕೆ ಇಡುತ್ತಿದ್ದವು. ಅವರು ತಮ್ಮ ಕುರ್ಚಿ ಉಳಿಸಿಕೊಳ್ಳಲು, ಆಕಾಶವಾಣಿಯ ಹಿರಿಯ ಅಧಿಕಾರಿಗಳನ್ನು ವಜಾ ಮಾಡುತ್ತಿದ್ದರು. ಸಾಮಾಜಿಕ ಜಾಲತಾಣಗಳಲ್ಲಿ ಈ ಪ್ರಸಂಗವು ಒಂದು ವಾರದವರೆಗೆ ತೀವ್ರ ಸ್ವರೂಪದ ವಾದ–ವಿವಾದಕ್ಕೆ ಕಾರಣವಾಗುತ್ತಿತ್ತು. 'ಪ್ರಧಾನಿಯ ವರು ಇಷ್ಟು ಬೇಜವಾಬ್ದಾರಿಯಿಂದ ವರ್ತಿಸಬಾರದು' ಅಂತ ಎಳಸು ಪತ್ರಕರ್ತರಿಂದ ಮೊದಲ್ಗೊಂಡು ಅನುಭವಿ ಸಂಪಾದಕರುಗಳವರೆಗೆ ಎಲ್ಲರೂ ಪ್ರಧಾನಿಯವರಿಗೆ ಬುದ್ಧಿಮಾತು ಹೇಳುತ್ತಿದ್ದರು. ಎಕ್ಸ್ (ಟ್ವಿಟರ್) ಮತ್ತು ಫೇಸ್‌ಬುಕ್‌ನಲ್ಲಿ ಮೂರ್ನಾಲ್ಕು ದಿನ ರಾಡಿ!

ಒಂದಷ್ಟು ಜೋಕುಗಳು

ಅಮೆರಿಕ ಅಧ್ಯಕ್ಷರ ಬಗ್ಗೆ ಇರುವಷ್ಟು ಹಾಸ್ಯ ಪ್ರಸಂಗಗಳು ಮತ್ಯಾರ ಬಗೆಗೂ ಇರಲಿಕ್ಕಿಲ್ಲ. ಯಾರೇ ಅಧ್ಯಕ್ಷರಾಗಿ ಬರಲಿ, ತಕ್ಷಣ ಅವರ ಬಗ್ಗೆ ಒಂದಷ್ಟು ಜೋಕುಗಳು ಹುಟ್ಟಿಕೊಳ್ಳುತ್ತವೆ. ಕೆಲವು ಅಂಥ ಪ್ರಸಂಗಗಳು...

- **ಒಬ್ಬ:** ಒಂದು ಲೈಟ್ ಬಲ್ಬನ್ನು ಬದಲಿಸಲು ಅಮೆರಿಕ ಅಧ್ಯಕ್ಷರ ಎಷ್ಟು ಮಂದಿ ಸಹಾಯಕರು ಬೇಕು?
  ಮತ್ತೊಬ್ಬ: ಯಾರೂ ಬೇಕಿಲ್ಲ. ಕಾರಣ ಅವರೆಲ್ಲ ಅಧ್ಯಕ್ಷರನ್ನು ಕತ್ತಲೆಯಲ್ಲಿಡಲು ಪ್ರಯತ್ನಿಸುತ್ತಾರೆ!
  ಒಬ್ಬ: ಯಾರು ಬೇಕಾದರೂ ಅಮೆರಿಕ ಅಧ್ಯಕ್ಷರಾಗಬಹುದು. ಆದರೆ 'ಮಿಸ್ ಅಮೆರಿಕ' ಆಗುವುದು ಬಹಳ ಕಷ್ಟ.
  ಮತ್ತೊಬ್ಬ: ಹೇಗೆ ಹೇಳ್ತೀರಾ ?
  ಒಬ್ಬ: ನೋಡಿ, ಇಬ್ಬರ ಪೈಕಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಆರಿಸುತ್ತಾರೆ. ಆದರೆ 'ಮಿಸ್ ಅಮೆರಿಕ' ಹಾಗಲ್ಲ, ಐವತ್ತು ಯುವತಿಯರ ಪೈಕಿ ಒಬ್ಬಳನ್ನು ಆರಿಸುತ್ತಾರೆ.
- ಅಮೆರಿಕದ ಅಧ್ಯಕ್ಷ ಜಿಮ್ಮಿ ಕಾರ್ಟರ್ ಭಾರತಕ್ಕೆ ಬಂದಿದ್ದರು. ಆಗ ಮೊರಾರ್ಜಿ ದೇಸಾಯಿ ಪ್ರಧಾನಿ. ಅವರಿಗೆ 82 ವರ್ಷ ವಯಸ್ಸಾಗಿತ್ತು. ಕಾರ್ಟರ್ ಅವರ ಗೌರವಾರ್ಥ ಏರ್ಪಡಿಸಿದ್ದ ಭೋಜನ ಕೂಟದಲ್ಲಿ, ಮೊರಾರ್ಜಿ ಕೊನೆಯಲ್ಲಿ, 'Lets make love and not war'' ಎಂದು ಹೇಳಿದರಂತೆ. ಈ ಮಾತುಗಳನ್ನು ಕೇಳಿದ ಕಾರ್ಟರ್ ತಮ್ಮ ಪಕ್ಕದಲ್ಲಿ ಕುಳಿತಿದ್ದ ಸಹಾಯಕನಿಗೆ ಹೇಳಿದರಂತೆ– ''ಈ ಮನುಷ್ಯನನ್ನು (ಮೊರಾರ್ಜಿ) ನೋಡಿದರೆ, ಅವೆರಡನ್ನೂ ಮಾಡುವ ಲಕ್ಷಣಗಳಿದ್ದಂತೆ ಕಾಣುವುದಿಲ್ಲ''.
- ಒಮ್ಮೆ ಬಿಲ್ ಕ್ಲಿಂಟನ್ ಅವರನ್ನು ಯಾರೋ ಕೇಳಿದರಂತೆ– ''ನಿಮ್ಮ ದೃಷ್ಟಿಯಲ್ಲಿ ಅಮೆರಿಕದ ಅಧ್ಯಕ್ಷಗಿರಿ ಅಂದ್ರೆ ಏನು?''. ಅದಕ್ಕೆ ಕ್ಲಿಂಟನ್ ಹೇಳಿದರಂತೆ– ''ಅಮೆರಿಕ ಅಧ್ಯಕ್ಷ ಅಂದ್ರೆ ಸ್ಮಶಾನದ ಮುಖ್ಯಸ್ಥನಿದ್ದಂತೆ. ಎಲ್ಲರೂ ಅವನ ಕಾಲ ಕೆಳಗೆ ಇರುತ್ತಾರೆ. ಆದರೆ ಒಬ್ಬರೂ ಅವನ ಮಾತುಗಳನ್ನು ಕೇಳುವುದಿಲ್ಲ''.

ಹಿಂಗ್ಯಾಕೆ ಆಡ್ತಾರೋ?!

ಸಾಮಾನ್ಯವಾಗಿ, ನನಗೆ ಯಾರೇ ಕರೆ ಮಾಡಲಿ, ಅವರು ಕರ್ನಾಟಕದವರೇ ಆಗಿದ್ದರೆ, 'ಕನ್ನಡದಲ್ಲೇ ಮಾತಾಡಿ' ಎಂದು ಹೇಳುತ್ತೇನೆ. ಆ ಕಡೆಯಿಂದ ಮಾತಾಡುವವನು ಕನ್ನಡ ಬಲ್ಲವನಾ, ಇಲ್ಲವಾ ಎಂಬುದು ಎಂಥವರಿಗಾದರೂ ಥಟ್ಟನೆ ಗೊತ್ತಾಗುತ್ತದೆ. ಅದರಲ್ಲೂ ಕಾಲ್ ಸೆಂಟರ್ ಅಥವಾ ಕಸ್ಟಮರ್ ಕೇರ್‌ಗಳಿಂದ ಕರೆ ಮಾಡಿದರೆ, ಕನ್ನಡದಲ್ಲೇ ಮಾತಾಡಿ ಎಂದು ಆಗ್ರಹಿಸುತ್ತೇನೆ. ದುರಂತ ಅಂದ್ರೆ, ಆ ಕಡೆಯಿಂದ ಮಾತಾಡುವವರಿಗೆ ನನಗೂ ಕನ್ನಡ ಬರುತ್ತದೆಂದು ಗೊತ್ತಿದ್ದರೂ, ಇಂಗ್ಲಿಷಿನಲ್ಲೇ ಮಾತಾಡುತ್ತಾರೆ. ಅವರಾಡುವ ಎರಡು ವಾಕ್ಯ ಇಂಗ್ಲಿಷ್ ಕೇಳಿದರೆ, ಆಸಾಮಿ ಕನ್ನಡವನೆಂದೇ ಗೊತ್ತಾಗುತ್ತದೆ. ಆದರೂ ಇಂಗ್ಲಿಷಿನಲ್ಲಿ ಮಾತಾಡುವ ಚಟ!

ನಮ್ಮ ಪತ್ರಿಕಾ ಕಚೇರಿಗೆ ಉದ್ಯೋಗ ಬಯಸಿ ಬರುವವರು ತಮ್ಮ ಬಯೋಡಾಟವನ್ನು ಯಾಕೋ ಇಂಗ್ಲಿಷಿನಲ್ಲಿ ಬರೆದುಕೊಂಡು ಬರುತ್ತಾರೆ. ಅವರಿಗೆ ತಾವು ಕೆಲಸ ಮಾಡುವುದು ಕನ್ನಡ ಪತ್ರಿಕೆಗೆ ಎಂಬುದು ಗೊತ್ತಿದ್ದರೂ ಹಾಗೆ ಮಾಡುತ್ತಾರೆ. ಕೆಲವರಿಗೆ ಇನ್ನೊಂದು ಚಾಳಿ. ರಾಜೀನಾಮೆ ಪತ್ರ ಮತ್ತು ರಜೆ ಚೀಟಿಯನ್ನು ಸಹ ಇಂಗ್ಲಿಷಿನಲ್ಲಿ ಬರೆಯುತ್ತಾರೆ. ಕೆಲ ವರ್ಷಗಳ ಹಿಂದೆ, ನನ್ನ ಹಿರಿಯ ಸಹೋದ್ಯೋಗಿಯೊಬ್ಬರು ತಮ್ಮ ಮಗಳ ಮದುವೆಗಾಗಿ ಒಂದು ವಾರದ ರಜಾ ಕೋರಿ ಅರ್ಜಿ ನೀಡಿದ್ದರು. ಅದರಲ್ಲಿ ಹೀಗೆ ಬರೆದಿದ್ದರು– As I am marrying my daughter, please grant me a week's leave, without fail. ನನಗೆ ಅದನ್ನು ಓದುತ್ತಿದ್ದಂತೆ ನಗು ತಡೆಯಲಾಗಲಿಲ್ಲ. ಇನ್ನೊಮ್ಮೆ ಓದುವಂತೆ ಅವರಿಗೆ ಹೇಳಿದೆ. ಅದನ್ನು ಓದಿದರೂ, ಅದರಲ್ಲಿನ ತಪ್ಪು ಅವರಿಗೆ ಹೊಳೆಯಲಿಲ್ಲ. ಇನ್ನೊಮ್ಮೆ ಓದುವಂತೆ ಹೇಳಿದೆ. ಅವರಿಗೂ ನಗು ತಡೆದುಕೊಳ್ಳಲಾಗಲಿಲ್ಲ. ''ಅಲ್ಲಾರಿ, ಯಾಕೆ ಇಂಗ್ಲಿಷ್ ಮೋಹ? ನೆಟ್ಟಗೆ ಕನ್ನಡದಲ್ಲಿ ಬರೆಯಬಾರದೇ? ನಾನೇನು ನ್ಯೂಯಾರ್ಕ್ ಟೈಮ್ಸ್ ಎಡಿಟರಾ?'' ಎಂದು ಕೇಳಿದೆ. ತಲೆ ತಗ್ಗಿಸಿ ನಿಂತಿದ್ದರು.

ಒಮ್ಮೆ, ತಮ್ಮ ಅತ್ತೆ ನಿಧನರಾಗಿದ್ದರಿಂದ, ಅಪರಕಾರ್ಯಗಳನ್ನೆಲ್ಲ ತಾವೇ ಮಾಡಬೇಕಿದ್ದರಿಂದ, ಆ ಹೊಣೆಗಾರಿಕೆ ಪೂರೈಸಲು, ಒಂದು ವಾರ ರಜೆ ಬೇಕೆಂದು ಸಹೋದ್ಯೋಗಿಯೊಬ್ಬರು, ರಜಾ ಚೀಟಿಯನ್ನು ಹೀಗೆ ಬರೆದಿದ್ದರು– ''As my mother-in-law has expired and I am responsible for it, please grant me four days leave''.

ಇನ್ನೊಂದು ಪ್ರಸಂಗ. ನಾನು 'ವಿಜಯ ಕರ್ನಾಟಕ'ದಲ್ಲಿದ್ದಾಗ, ಸಂಪಾದಕೀಯ ಸಿಬ್ಬಂದಿಯೊಬ್ಬರು, ತಮಗೆ ಒಂದು ವಾರ ರಜೆ ಬೇಕೆಂದು ಹೇಳಿದರು. ನಾನು ಯಾಕೆಂದು ಕೇಳಿದೆ. ಅದಕ್ಕೆ ಅವರು ತಮ್ಮ ಮಾವನಿಂದ ಬಂದ ಆಸ್ತಿಯನ್ನು ಮಾರಾಟ ಮಾಡಬೇಕಿದೆಯೆಂದೂ, ತಾವೂ, ತಮ್ಮ ಪತ್ನಿಯೂ ಊರಿಗೆ ಹೋಗಬೇಕಾಗಿ ಬಂದಿದೆಯೆಂದೂ, ಅದಕ್ಕಾಗಿ ಒಂದು ವಾರ ರಜೆ ಬೇಕೆಂದೂ ಹೇಳಿದರು. ನಾನು ಆಯಿತು ಎಂದೆ. ರಜಾ ಚೀಟಿ ಬರೆದುಕೊಡುವಂತೆ ಹೇಳಿದೆ. ಅದಕ್ಕೆ ಅವರು ಬರೆದು ಕೊಟ್ಟರು–Since I have to go to my village to sell my land with my wife, please grant my a week leave.

ಕೆಲ ವರ್ಷಗಳ ಹಿಂದೆ, ಒಬ್ಬ ಸಹೋದ್ಯೋಗಿ ಮಿತ್ರರು ಬರೆದಿದ್ದರು– Dear Sir, with reference to the above, please refer to my below...

ಅವಳಿ ಮಕ್ಕಳ ಊರು

ನನ್ನ ಸ್ನೇಹಿತರೊಬ್ಬರು ಮದುವೆಯಾದರು. ಒಂದು ತಿಂಗಳ ನಂತರ, ಬೆಂಗಳೂರಿನ ಹೊಸಕೆರೆಹಳ್ಳಿಯಲ್ಲಿರುವ ತಮ್ಮ ಮನೆಯಲ್ಲಿ, 15 ಜನರನ್ನು ಮಿತ್ರ–ಭೋಜನಕ್ಕೆ ಕರೆದಿದ್ದರು. ಅವರ ಮನೆಗೆ ಹೋಗುತ್ತಿದ್ದಂತೆ, ತಮ್ಮ ಪತ್ನಿಯನ್ನು ಪರಿಚಯಿಸಿದರು. ''ನಾನು ಮಲಯಾಳಿ ಹುಡುಗಿಯನ್ನು ಮದುವೆಯಾಗಿದ್ದೇನೆ. ಈಕೆ ನನ್ನ ಆಫೀಸಿನಲ್ಲಿಯೇ ರಿಸೆಪ್ಷನಿಸ್ಟ್ ಆಗಿದ್ದರು'' ಎಂದು ಪರಿಚಯಿಸಿದರು. ನಾನು ಅವರ ಪತ್ನಿಯನ್ನು, ''ಕೇರಳದಲ್ಲಿ ನಿಮ್ಮ ಊರು ಯಾವುದು?'' ಎಂದು ಕೇಳಿದೆ. ಅವರು ''ಮಲಪ್ಪುರಂ'' ಎಂದರು. ''ಮಲಪ್ಪುರಂನಲ್ಲಿ ಎಲ್ಲಿ?'' ಎಂದು ಕೇಳಿದೆ. ''ನಿಮಗೆ ಕೇರಳ ಗೊತ್ತಾ?'' ಎಂದು ಕೇಳಿದ ಅವರು ನನ್ನ ಉತ್ತರಕ್ಕೂ ಕಾಯದೇ, ''ಪರಪ್ಪನಂಗಡಿ ಸಮೀಪ'' ಅಂದರು. ನಾನು ಅಷ್ಟಕ್ಕೇ ಸುಮ್ಮನಾಗದೇ, ''ಬೈ ಚಾನ್ಸ್, ನಿಮ್ಮ ಊರು ತಿರುರಂಗಡಿ ಸನಿಹದ ಕೊಡಿನಿಹಿಯೇ?'' ಎಂದು ಕೇಳಿದೆ. ಅವರು ಕಣ್ಣುಗಳನ್ನು ಅರಳಿಸಿಕೊಂಡು ಪರಮಾಶ್ಚರ್ಯದಿಂದ, ''ಹೌದು.. ನಿಮಗೆ ಹೇಗೆ ಗೊತ್ತು? ನೀವು ನಮ್ಮ ಊರಿಗೆ ಬಂದಿದ್ರಾ? ನಿಮ್ಮ ಬಾಯಿಯಲ್ಲಿ ನಮ್ಮ ಊರಾದ ಕೊಡಿನಿಹಿ ಹೆಸರು ಕೇಳಿ ಸಂತೋಷವಾಯಿತು. ಹೇಳಿ ಪ್ಲೀಸ್, ನಿಮಗೆ ಹೇಗೆ ನಮ್ಮ ಊರಿನ ಹೆಸರು ಗೊತ್ತು?'' ಎಂದು ಒಂದೇ ಸಮನೆ ಪ್ರಶ್ನೆಗಳ ಸುರಿಮಳೆಗೈದರು.

ನಾನು ತಕ್ಷಣ ಉತ್ತರಿಸಲಿಲ್ಲ. ಅವರ ಪತಿ ಅರ್ಥಾತ್ ನನ್ನ ಸ್ನೇಹಿತ ಪಕ್ಕದಲ್ಲಿ ಇನ್ನೊಬ್ಬರ ಜತೆ ಮಾತಾಡುತ್ತಿದ್ದ. ಅವನನ್ನು ಕರೆದು, ''ನಿನಗೆ ಹುಟ್ಟುವ ಮಗು ಅವಳಿ–ಜವಳಿ ಕಣೋ'' ಎಂದೆ. ಅದಕ್ಕೆ ಅವನ ಪತ್ನಿ (ನವ ವಧು) ಮುಖ ಮುಚ್ಚಿಕೊಂಡು ತುಸು ನಾಚಿಕೆ ಮಿಶ್ರಿತ ವೈಯಾರದಿಂದ ಜೋರಾಗಿ ನಗಲಾರಂಭಿಸಿದಳು. ಸ್ನೇಹಿತನಿಗೆ, ನನ್ನ ಉತ್ತರದಿಂದ ಅವಳೇಕೆ ನಗುತ್ತಿದ್ದಾಳೆ ಎಂಬುದು ಅರ್ಥವಾಗಲಿಲ್ಲ. ನಾನು ಹೇಳುವುದು ಅವಳಿಗೆ ಅರ್ಥವಾಗಿತ್ತು. ಇನ್ನೂ ಹೆಚ್ಚು ಹೊತ್ತು ಕಾಯಿಸಬಾರದೆಂದು ಸ್ನೇಹಿತನಿಗೆ ಹೇಳಿದೆ– ''ನಿನ್ನ ಪತ್ನಿ ನಿನಗೆ ಹೇಳಿದ್ದಾರೋ ಇಲ್ಲವೋ ಗೊತ್ತಿಲ್ಲ. ಕೇರಳದ ಮಲಪ್ಪುರಂನಲ್ಲಿ ಕೊಡಿನಿಹಿ ಎಂಬ ಹಳ್ಳಿಯಿದೆ. ಅಲ್ಲಿ ಬಹುತೇಕ ಮಹಿಳೆಯರಿಗೆ ಅವಳಿ–ಜವಳಿ ಮಕ್ಕಳೇ ಹುಟ್ಟುತ್ತವೆಯಂತೆ. ಆ ಊರಿನ ಜನಸಂಖ್ಯೆ ಕೇವಲ 2 ಸಾವಿರ. ಆದರೆ ಅಲ್ಲಿ 400 ಜೋಡಿ ಅವಳಿಗಳಿವೆಯೆಂದು ನಾನು ಕೆಲ ವರ್ಷಗಳ ಹಿಂದೆ ಓದಿದ್ದೆ.

ಲಂಡನ್ನಿನ 'ದಿ ಗಾರ್ಡಿಯನ್' ಪತ್ರಿಕೆ ಕೂಡ ಈ ಹಳ್ಳಿ ಬಗ್ಗೆ ಒಂದು ಲೇಖನ ಪ್ರಕಟಿಸಿತ್ತು. ಒಂದೆರಡು ಚಾನೆಲ್ಲುಗಳೂ ಈ ಹಳ್ಳಿಯ ಬಗ್ಗೆ ಸಾಕ್ಷ್ಯಚಿತ್ರ ಮಾಡಿದ್ದನ್ನು ನೋಡಿದ್ದೆ. ಇಲ್ಲಿ ತನಕ ಈ ರಹಸ್ಯವನ್ನು ಭೇದಿಸಲು ಯಾರಿಂದಲೂ ಸಾಧ್ಯವಾಗಿಲ್ಲ. ಹಲವು ದೇಶಿ ಮತ್ತು ವಿದೇಶಿ ವಿಶ್ವವಿದ್ಯಾಲಯಗಳು ಕೊಡಿನಿಹಿ ಊರಿಗೆ ಬಂದು ಈ ಬಗ್ಗೆ ಸಂಶೋಧನೆ ಮಾಡಿವೆ. ಇದರಿಂದ ಹೇಳಿಕೊಳ್ಳುವಂಥ ಮಹತ್ವದ ಸಂಗತಿ ಬೆಳಕಿಗೆ ಬಂದಿಲ್ಲ. ನನಗೆ ತಿಳಿದಂತೆ, ಪ್ರತಿ ಸಾವಿರಕ್ಕೆ 9 ಅವಳಿ–ಜವಳಿ ಹುಟ್ಟುತ್ತಾರೆ. ಇದು ನಮ್ಮ ರಾಷ್ಟ್ರೀಯ ಸರಾಸರಿ. ಆದರೆ ಕೊಡಿನಿಹಿಯಲ್ಲಿ ಪ್ರತಿ ಸಾವಿರಕ್ಕೆ 45 ಅವಳಿಗಳು ಹುಟ್ಟುತ್ತಾರೆ. ಆ ಊರಲ್ಲಿ ಯಾರನ್ನು ನೋಡಿದರೂ ತದ್ರೂಪಿಯಂತೆ ಕಾಣುತ್ತಾರೆ''.

''ಇಂಟರೆಸ್ಟಿಂಗ್ ಆದ ಈ ಸಂಗತಿಯನ್ನು ನೀನು ನನಗೆ ಹೇಳೇ ಇಲ್ಲವಲ್ಲ?'' ಎಂದು ನನ್ನ ಸ್ನೇಹಿತ ತನ್ನ ಪತ್ನಿಗೆ ಕೇಳಿದ. ಹಲವಾರು ಸಂಘ–ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಈ ಬಗ್ಗೆ ಸಂಶೋಧನೆ ನಡೆಸಿದರೂ ವೈಜ್ಞಾನಿಕ ಕಾರಣಗಳೇನು ಎಂಬುದು ಪತ್ತೆಯಾಗಿಲ್ಲ. ''ಆ ಊರಿನಲ್ಲಿ ವಾಸಿಸುವ ಹೆಂಗಸರು ಮಾತ್ರ ಅವಳಿ ಮಕ್ಕಳಿಗೆ ಜನ್ಮ ನೀಡುತ್ತಾರೆ, ಆ ಊರಿನಲ್ಲಿ ಹುಟ್ಟಿ ಬೇರೆ ಊರಿನಲ್ಲಿ ನೆಲೆಸಿದವರು ಒಂದೇ ಮಗುವಿಗೆ ಜನ್ಮ ನೀಡುತ್ತಾರೆ. ಇದಕ್ಕೆ ಪ್ರಾಯಶಃ ಈ ಊರಿನ ನೀರು, ಗಾಳಿ, ಪರಿಸರ ಕಾರಣವಾಗಿರಬಹುದು'' ಎಂದು ಕೆಲವು ಅಧ್ಯಯನಗಳು ಹೇಳಿವೆ. ಇದಕ್ಕೆ ಅಪವಾದವೆಂಬಂತೆ, ಕೊಡಿನಿಹಿಯಲ್ಲಿ ಜನಿಸಿ, ವಿದೇಶಗಳಲ್ಲಿ ವಾಸಿಸುತ್ತಿರುವವರು ಅವಳಿ ಮಕ್ಕಳಿಗೆ ಜನ್ಮ ನೀಡಿದ ನಿದರ್ಶನಗಳಿವೆ. ಹೀಗಾಗಿ ಯಾವ ಸಂಶೋಧನೆಗಳಿಂದಲೂ ನಿಶ್ಚಿತ ನಿರ್ಧಾರಕ್ಕೆ ಬರಲು ಸಾಧ್ಯವಾಗಿಲ್ಲ. ಇಲ್ಲೊಂದೇ ಅಲ್ಲ, ಆಂಧ್ರದ ಪೂರ್ವ ಗೋದಾವರಿ ಜಿಲ್ಲೆಯ ರಂಗಂಪೇಟ ಮಂಡಲದ ದೊಡ್ಡಿಗುಂಟ ಗ್ರಾಮವೂ ಇದೇ ರೀತಿ ಅವಳಿ–ಜವಳಿ ಮಕ್ಕಳ ಊರು ಎಂದು ಹೆಸರುವಾಸಿಯಾಗಿದೆ. ಈ ಊರಿನ ನೀರು ಕುಡಿದ ಮಹಿಳೆಯರು ಅವಳಿ ಮಕ್ಕಳಿಗೆ ಜನ್ಮ ನೀಡುತ್ತಾರೆ ಎಂಬ ಪ್ರತೀತಿಯಿದೆ.

ಟರ್ ಟಕ್!

ಟಾಮ್ ಕ್ರೂಸ್ ನಾಯಕನಾಗಿ ನಟಿಸಿದ 'ಮಿಷನ್ ಇಂಪಾಸಿಬಲ್– ದಿ ಫಾಲ್ ಔಟ್' ಎಂಬ ಸಿನಿಮಾವನ್ನು ನೀವು ನೋಡಿರಬಹುದು. ಈ ಸಿನಿಮಾದ ಕೊನೆಯ 15 ನಿಮಿಷಗಳು ಮೈನವಿರೇಳಿಸುವಂಥವು. ಒಂದು ಸಿನಿಮಾವನ್ನು ಈ ರೀತಿಯಲ್ಲೂ ಚಿತ್ರೀಕರಿಸಬಹುದಾ ಎಂದು ಆಶ್ಚರ್ಯವಾಗುತ್ತದೆ. ಹಾಗಂತ ಇದು ಸಾಕಷ್ಟು ಹಳೆಯ ಸಿನಿಮಾ. ಕೊನೆಯ 15 ನಿಮಿಷಗಳ ದೃಶ್ಯಗಳನ್ನು ನೋಡುತ್ತಿದ್ದರೆ, ಆ ಘಟನೆ ಭಾರತದ ಸಿಯಾಚಿನ್ ಪ್ರಾಂತದಲ್ಲಿರುವ 'ಟರ್ ಟಕ್' ಎಂಬ ಪ್ರದೇಶದಲ್ಲಿ ನಡೆಯುತ್ತಿದೆ ಎಂದು ಭಾಸವಾಗುತ್ತದೆ.

ಜಗತ್ತನ್ನು ಅಣುಬಾಂಬ್ ದಾಳಿಯಿಂದ ರಕ್ಷಿಸಲು ಟಾಮ್ ಕ್ರೂಸ್ ನಡೆಸುವ ಸಾಹಸ, ಉಸಿರು ಬಿಗಿಹಿಡಿದು ವೀಕ್ಷಿಸುವಂತೆ ಮಾಡುತ್ತದೆ. ಈ ಚಿತ್ರ ಭಾರತದಲ್ಲಿ ಬಿಡುಗಡೆಯಾಗುವಾಗ, ಸೆನ್ಸಾರ್ ಮಂಡಳಿ ಈ ಭಾಗವನ್ನು ಕತ್ತರಿಸುವಂತೆ ಆದೇಶಿಸಿತು. ಅದನ್ನು ಕತ್ತರಿಸಿದರೆ ಸಿನಿಮಾ ನಿರರ್ಥಕವಾಗುತ್ತದೆಂದು ಸಿನಿಮಾ ನಿರ್ದೇಶಕ ವಾದಿಸಿದ. ಆನಂತರ ಸಿನಿಮಾಕ್ಕೆ ಅನುಮತಿ ನೀಡಲಾಯಿತು. ಸಿನಿಮಾ ನಾಯಕ ತಾನು ಈ ಕ್ಷಣದಲ್ಲಿ ಟರ್ ಟಕ್ ಪ್ರದೇಶಕ್ಕೆ ಧಾವಿಸುತ್ತಿರುವುದಾಗಿ ಹೇಳುತ್ತಾನೆ. ಹೀಗಾಗಿ ವೀಕ್ಷಕರು ಮುಂದಿನ ದೃಶ್ಯ ಟರ್ ಟಕ್‌ನಲ್ಲಿ ನಡೆಯುತ್ತಿರಬಹುದು ಎಂದು ಭಾವಿಸುತ್ತಾರೆ.

ಆದರೆ ಮುಂದಿನ ಚಿತ್ರೀಕರಣ ನಡೆದಿದ್ದು ನ್ಯೂಜಿಲ್ಯಾಂಡಿನಲ್ಲಿ. ಟರ್ ಟಕ್ ಬಗ್ಗೆ ಎರಡು ಮಾತು ಹೇಳಬೇಕು. ಇದು ಭಾರತದ ಉತ್ತರಕ್ಕಿರುವ ಕಟ್ಟಕಡೆಯ ಹಳ್ಳಿ. ಲೇಹ್ ಜಿಲ್ಲೆಯ, ನುಬ್ರಾ ಪ್ರಾಂತದಲ್ಲಿರುವ ಈ ಹಳ್ಳಿಯ ಜನಸಂಖ್ಯೆ 3 ಸಾವಿರವಿದ್ದಿರಬಹುದು. ಲೇಹ್‌ದಿಂದ 250 ಕಿ.ಮೀ. ದೂರದಲ್ಲಿರುವ ಈ ಹಳ್ಳಿ ಷ್ಯೋಕ್ ನದಿ ದಂಡೆಯ ಮೇಲಿದೆ. 1971ರವರೆಗೆ ಈ ಹಳ್ಳಿ ಪಾಕಿಸ್ತಾನದ ವಶದಲ್ಲಿತ್ತು. ಆನಂತರ ಭಾರತ ಈ ಹಳ್ಳಿ ಸೇರಿದಂತೆ ಸುತ್ತಲಿನ ಪ್ರದೇಶವನ್ನು ತನ್ನ ವಶಕ್ಕೆ ಪಡೆಯಿತು.

ಮೂಲತಃ ಟರ್ ಟಕ್ ಬಾಲ್ಟಿಸ್ತಾನ್ ಪ್ರಾಂತದಲ್ಲಿದೆ. ಟರ್ ಟಕ್ ನಂತರ ಜನವಸತಿ ಇಲ್ಲ, ಅದಾದ ಬಳಿಕ ಪಾಕಿಸ್ತಾನ ನಿಯಂತ್ರಣದಲ್ಲಿರುವ ಗಿಲ್ಗಿಟ್ ಆರಂಭವಾಗುತ್ತದೆ. ಟರ್ ಟಕ್ ಸಿಯಾಚಿನ್ ಪ್ರದೇಶದ ಹೆಬ್ಬಾಗಿಲು ಸಹ ಹೌದು. ಟರ್ ಟಕ್ ಹಿಮಾಚ್ಛಾದಿತ ಪ್ರದೇಶವಾದರೂ ಹಣ್ಣುಗಳಿಗೆ ಪ್ರಸಿದ್ಧ. ಈ ಹಳ್ಳಿಯಲ್ಲಿ ಅನೇಕ ಹೋಮ್ ಸ್ಟೇಗಳಿವೆ. ಇದು ದೇಶದ ಉತ್ತರಕ್ಕಿರುವ ಕೊನೆಯ ಹಳ್ಳಿಯಾಗಿರುವುದರಿಂದ, ಪ್ರವಾಸಿಗರು ಇಲ್ಲಿಗೆ ಬರುತ್ತಾರೆ. ಆದರೆ ಸೇನೆಯ ಅನುಮತಿ ಬೇಕು. ಟರ್ ಟಕ್ ಹಳ್ಳಿ ಜನ ಪ್ರತಿವರ್ಷ ಸ್ವರ್ಗ ದಿನಾಚರಣೆ ಆಚರಿಸುತ್ತಾರೆ. ಅಂದರೆ ಅವರ ಪ್ರಕಾರ, ಭೂಮಿ ಮೇಲೆ ಸ್ವರ್ಗ ಅಂತಿದ್ದರೆ ಅದು ಟರ್ ಟಕ್. ಭಾರತದ ಯಾವ ಸಿನಿಮಾ ನಿರ್ದೇಶಕರಿಗೂ ಕಾಣದ ಈ ತಾಣ ಟಾಮ್ ಕ್ರೂಸ್‌ಗೆ ಕಂಡಿದ್ದು ಆಶ್ಚರ್ಯವೇ. ಹಿಂದೊಮ್ಮೆ ಖುಷ್ವಂತ್ ಸಿಂಗ್ ಅವರು ಯಾರೂ ಕೇಳದ ಊರು ಎಂಬುದನ್ನು ವಿವರಿಸುವಾಗ, 'ಅದು ಯಾರೂ ಕೇಳಿರದ ಟಿಂಬಕ್ಟು ಅಥವಾ ಟರ್ ಟಕ್'' ಎಂದು ಬರೆದಿದ್ದನ್ನು ಓದಿದ ನೆನಪು.

ಗಣತಂತ್ರ ದಿವಸಕ್ಕೆ ಯ-ಗಣಗಳದೇ ವಿಶೇಷ ಪಥಸಂಚಲನ

ತಿಳಿರು ತೋರಣ
ಶ್ರೀವತ್ಸ ಜೋಶಿ
srivathsajoshi@yahoo.com

'ಅಜಂ ನಿರ್ವಿಕಲ್ಪಂ ನಿರಾಕಾರಮೇಕಂ। ನಿರಾನಂದಮಾನಂದಮದ್ವೈತಪೂರ್ಣಂ। ಪರಂ ನಿರ್ಗುಣಂ ನಿರ್ವಿಶೇಷಂ ನಿರೀಹಂ। ಪರಬ್ರಹ್ಮರೂಪಂ ಗಣೇಶಂ ಭಜೇಮ॥'– ಗಣೇಶ ಸ್ತುತಿಯಿಂದಲೇ ಪಥಸಂಚಲನ ಆರಂಭ. ಇದು ಶಂಕರಾಚಾರ್ಯರು ರಚಿಸಿದ ಗಣೇಶಸ್ತವ ಸ್ತೋತ್ರದ ಮೊದಲ ಶ್ಲೋಕ. ಗಣೇಶನು ಜನನ–ಮರಣಗಳಿಲ್ಲದವನು; ಇಂಥಿಂಥ ಗುಣಗಳುಳ್ಳವನೆಂದಾಗಲೀ ಇಂಥ ಆಕಾರದವನೆಂದಾಗಲೀ ಬಣ್ಣಿಸಲಿಕ್ಕೆ ಸಿಗದವನು; ಆನಂದಕ್ಕೆ ಅತೀತನಾಗಿಯೂ ನಮಗೆ ಆನಂದ ನೀಡುವವನು; ಕಾಮನೆಗಳಿಗೆ ಮಿಗಿಲಾದವನು; ಎಲ್ಲಕ್ಕಿಂತ ಹೆಚ್ಚಾಗಿ ಪರಬ್ರಹ್ಮಸ್ವರೂಪನು. ಅಂಥ ಗಣೇಶನನ್ನು ನಾವು ಭಜಿಸೋಣ ಎಂಬುದು ಇದರರ್ಥ. ಗಣೇಶನು ನಿರ್ಗುಣ ನಿರ್ವಿಕಲ್ಪನೆಂದಾದರೆ ಅವನಪ್ಪನೂ ಅಂಥವನೇ ಇರಬೇಕಲ್ಲ? ಹೌದೆನ್ನುತ್ತಾರೆ ತುಲಸೀದಾಸರು, ರುದ್ರಾಷ್ಟಕದ ಈ ಶ್ಲೋಕದಲ್ಲಿ: 'ನಮಾಮೀಶಮೀಶಾನ ನಿರ್ವಾಣರೂಪಂ। ವಿಭುಂ ವ್ಯಾಪಕಂ ಬ್ರಹ್ಮವೇದಸ್ವರೂಪಮ್। ನಿಜಂ ನಿರ್ಗುಣಂ ನಿರ್ವಿಕಲ್ಪಂ ನಿರೀಹಂ। ಚಿದಾಕಾಶಮಾಕಾಶವಾಸಂ ಭಜೇಽಹಮ್॥' ಗಣೇಶನನ್ನು ಬಣ್ಣಿಸಿದ ವಿಶೇಷಣಗಳೇ ಇಲ್ಲಿಯೂ ಬಳಕೆಯಾಗಿರುವುದು. ತುಳಸೀದಾಸರು 'ರಾಮಚರಿತ ಮಾನಸ'ದ ಉತ್ತರಕಾಂಡದಲ್ಲಿ ಇದನ್ನು ಬರೆದಿದ್ದಾರೆ. ಇಂದಿನ ವಿಶೇಷ ಗಣತಂತ್ರ ಪರೇಡ್‌ನಲ್ಲಿ ಇದು ಎರಡನೆಯ ಟ್ಯಾಬ್ಲೊ.

ಈಗ ಬರುತ್ತಿರುವುದು ನಮಗೆಲ್ಲ ಸುಪರಿಚಿತವಾದ, ಸುಪ್ರಭಾತವೂ ಸುಬ್ಬುಲಕ್ಷ್ಮಿಯೂ ಸಮಾನಾರ್ಥಕ ಪದಗಳು ಎಂದು ನಾವೆಲ್ಲ ಸ್ವೀಕರಿಸಿರುವ ವೆಂಕಟೇಶ್ವರ ಸುಪ್ರಭಾತದ್ದೇ ಒಂದು ಭಾಗ, ವೆಂಕಟೇಶ್ವರ ಸ್ತೋತ್ರದ ಎರಡು ಶ್ಲೋಕಗಳು: 'ವಿನಾ ವೆಂಕಟೇಶಂ ನನಾಥೋ ನ ನಾಥಃ। ಸದಾ ವೆಂಕಟೇಶಂ ಸ್ಮರಾಮಿ ಸ್ಮರಾಮಿ। ಹರೇ ವೆಂಕಟೇಶ ಪ್ರಸೀದ ಪ್ರಸೀದ। ಪ್ರಿಯಂ ವೆಂಕಟೇಶ ಪ್ರಯಚ್ಛ ಪ್ರಯಚ್ಛ॥ ಅಹಂ ದೂರತಸ್ತೇ ಪದಾಂಭೋಜಯುಗ್ಮ। ಪ್ರಣಾಮೇಚ್ಛಯಾಗತ್ಯ ಸೇವಾಂ ಕರೋಮಿ। ಸಕೃತ್ಸೇವಯಾ ನಿತ್ಯಸೇವಾಫಲತ್ವಂ। ಪ್ರಯಚ್ಛ ಪ್ರಯಚ್ಛ ಪ್ರಭೋ ವೆಂಕಟೇಶ॥'– ಅಂದರೆ, ವೆಂಕಟೇಶನಿಲ್ಲದೆ ನಾನು ನಿಜವಾಗಿಯೂ ಅನಾಥನು. ಸದಾ ವೆಂಕಟೇಶನನ್ನೇ ಸ್ಮರಿಸುತ್ತೇನೆ. ವೆಂಕಟೇಶನೇ ನನ್ನನ್ನು ಹರಸು, ನನ್ನೆಡೆ ಕೃಪೆಯನ್ನು ಹರಿಸು. ಇದುವರೆಗೂ ನಿನ್ನ ಪಾದಕಮಲಗಳಿಂದ ಬಹುದೂರವಿದ್ದೆ. ಆದರೆ ಈಗ ನಿನ್ನ ಸೇವೆ ಮಾಡುವುದರ ಮಹತ್ವವನ್ನರಿತು ಬಂದಿದ್ದೇನೆ. ಸೇವೆ ಮಾಡುವ ಅವಕಾಶವನ್ನೂ, ಫಲವನ್ನೂ ಕರುಣಿಸು ಪ್ರಭೋ ಎಂದು ಮತ್ತೆಮತ್ತೆ ಕೇಳಿಕೊಳ್ಳುತ್ತಿದ್ದೇನೆ ಎಂದರ್ಥ.

ಮತ್ತೊಮ್ಮೆ ಶಂಕರಾಚಾರ್ಯರ ಮೂರು ಅತಿಜನಪ್ರಿಯ ರಚನೆಗಳು. ಶಿವಾಷ್ಟಕಮ್‌ನ ಮೊದಲ ಶ್ಲೋಕ: 'ಪ್ರಭುಂ ಪ್ರಾಣನಾಥಂ ವಿಭುಂ ವಿಶ್ವನಾಥಂ। ಜಗನ್ನಾಥ ನಾಥಂ ಸದಾನಂದ ಭಾಜಮ್। ಭವದ್ಭವ್ಯ ಭೂತೇಶ್ವರಂ ಭೂತನಾಥಂ। ಶಿವಂ ಶಂಕರಂ ಶಂಭುಮೀಶಾನಮೀಡೇ॥'– ಅಂದರೆ, ನಮ್ಮ ಪ್ರಾಣಗಳಿಗೂ ಸಮಸ್ತ ವಿಶ್ವಕ್ಕೂ ಒಡೆಯನಾದ, ಸರ್ವಾಂತರ್ಯಾಮಿಯೂ ಸರ್ವಾನಂದಕಾರಕನೂ ಆಗಿ ಭೂತಗಣಗಳಿಗೂ ಸಕಲಚರಾಚರಗಳಿಗೂ ನಾಥನಾಗಿರುವ, ಈಶಾನ್ಯ ದಿಶಾಧಿಪತಿಯಾಗಿರುವ ಮಂಗಳಕರ ಶಿವನನ್ನು ಸ್ತುತಿಸಿ ಶರಣಾಗುತ್ತೇನೆ ಎಂದರ್ಥ. ಇದರ ಹಿಂದಿನಿಂದ ನಿರ್ವಾಣಷಟ್ಕಮ್‌ನ ಮೊದಲ ಶ್ಲೋಕ: 'ಮನೋಬುದ್ಧ್ಯಹಂಕಾರಚಿತ್ತಾನಿ ನಾಹಂ। ನ ಚ ಶ್ರೋತ್ರ ಜಿಹ್ವೇ ನ ಚ ಘ್ರಾಣನೇತ್ರೇ। ನ ಚ ವ್ಯೋಮಭೂಮಿರ್ನ ತೇಜೋ ನ ವಾಯುಃ। ಚಿದಾನಂದರೂಪಃ ಶಿವೋಽಹಂ ಶಿವೋಽಹಂ॥'– ಅಂದರೆ, ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ–ಇವ್ಯಾವುವೂ ನಾನಲ್ಲ; ರೂಪ, ಶಬ್ದ, ರಸ, ಗಂಧ, ಸ್ಪರ್ಶಗಳನ್ನು ಗ್ರಹಿಸುವ ಪಂಚೇಂದ್ರಿಯಗಳು ನಾನಲ್ಲ; ಭೂಮಿ, ಆಕಾಶ, ಅಗ್ನಿ, ಜಲ, ವಾಯುವೆಂಬ ಪಂಚಭೂತಗಳೂ ನಾನಲ್ಲ; ಚಿದಾನಂದರೂಪಿ ಶಿವನೇ ನಾನು! ಎಂದರ್ಥ. ಇನ್ನು, ಗುರ್ವಷ್ಟಕಮ್‌ನ ಮೊದಲ ಶ್ಲೋಕ: 'ಶರೀರಂ ಸುರೂಪಂ ತಥಾ ವಾ ಕಲತ್ರಂ। ಯಶಶ್ಚಾರು ಚಿತ್ರಂ ಧನಂ ಮೇರು ತುಲ್ಯಮ್। ಮನಶ್ಚೇನ್ನ ಲಗ್ನಂ ಗುರೋರಂಘ್ರಿಪದ್ಮೇ। ತತಃ ಕಿಂ ತತಃ ಕಿಂ ತತಃ ಕಿಂ ತತಃ ಕಿಮ್॥'– ಅಂದರೆ, ತಾನು ಸ್ಫುರದ್ರೂಪಿ; ಪತ್ನಿಯೂ ಸುಂದರಿ; ತನ್ನ ಯಶಸ್ಸೂ ಎಲ್ಲ ಕಡೆ ಹರಡಿದೆ; ಸಂಪತ್ತು ಮೇರುಪರ್ವತದಷ್ಟಿದೆ. ಆದರೆ, ಮನಸ್ಸು ಗುರುಪದಕಮಲದಲ್ಲಿ ಶರಣಾಗದಿದ್ದರೆ, ಏನು ಫಲ? ಏನು ಫಲ? ಏನು ಫಲ? ಎಂದರ್ಥ. ಶಂಕರಾಚಾರ್ಯರದೇ ಇನ್ನೂ ಎರಡು ರಚನೆಗಳು ಇಲ್ಲಿ ಕಂಗೊಳಿಸುತ್ತಿವೆ: ಭವಾನಿ ಅಷ್ಟಕಮ್‌ನ ಈ ಶ್ಲೋಕ– 'ನ ತಾತೋ ನ ಮಾತಾ ನ ಬಂಧುರ್ನ ದಾತಾ। ನ ಪುತ್ರೋ ನ ಪುತ್ರೀ ನ ಭೃತ್ಯೋ ನ ಭರ್ತಾ। ನ ಜಾಯಾ ನ ವಿದ್ಯಾ ನ ವೃತ್ತಿರ್ಮಮೈವ। ಗತಿಸ್ತ್ವಂ ಗತಿಸ್ತ್ವಂ ತ್ವಮೇಕಾ ಭವಾನಿ॥' – ಅಂದರೆ, ತಂದೆಯಿಲ್ಲ, ತಾಯಿಯಿಲ್ಲ, ಬಂಧುಗಳಿಲ್ಲ, ಆಶ್ರಯದಾತರಿಲ್ಲ. ಮಕ್ಕಳಿಲ್ಲ ಗಂಡ/ಹೆಂಡತಿ ಇಲ್ಲ. ವಿದ್ಯೆಯಾಗಲೀ ವೃತ್ತಿಯಾಗಲೀ ಏನೂ ಇಲ್ಲ. ಭವಾನಿ ದೇವಿಯೇ, ನೀನೊಬ್ಬಳೇ ನನಗೆ ಗತಿ ಎಂದರ್ಥ. ಅಂತೆಯೇ ಲೋಕಕ್ಕೆಲ್ಲ ಅಭಿರಾಮನೆನಿಪ ಶ್ರೀರಾಮನನ್ನು ಕುರಿತಾದದ್ದೂ ಒಂದು: 'ವಿಶುದ್ಧಂ ಪರಂ ಸಚ್ಚಿದಾನಂದರೂಪಂ। ಗುಣಾಧಾರಮಾಧಾರಹೀನಂ ವರೇಣ್ಯಮ್। ಮಹಾಂತಂ ವಿಭಾಂತಂ ಗುಹಾಂತಂ ಗುಣಾಂತಂ। ಸುಖಾಂತಂ ಸ್ವಯಂ ಧಾಮ ರಾಮಂ ಪ್ರಪದ್ಯೇ॥'– ಅಂದರೆ, ಪರಿಶುದ್ಧನೂ ಪರಿಪೂರ್ಣನೂ ಸ್ವತಃ ನಿರಾವಲಂಬಿಯಾಗಿದ್ದೂ ಗುಣಗಳಿಗೆಲ್ಲ ಆಧಾರನಾಗಿರುವವನೂ, ಅವಿಭಾಜ್ಯನೂ ಅಂತರ್ಯಾಮಿಯೂ ಅಗಣಿತಗುಣಗಣಿಯೂ ಅಮಿತಾನಂದಕಾರಕನೂ ತಾನೇ ಪರಂಧಾಮನೂ ಆಗಿರುವ ಶ್ರೀರಾಮನನ್ನು ಪೂಜಿಸುತ್ತೇನೆ ಎಂದರ್ಥ.

ಇದೋ ಈಗ ಬರುತ್ತಿದೆ, ಕಾಳಿದಾಸನು ರಚಿಸಿದ್ದೆನ್ನಲಾದ ಗಂಗಾಷ್ಟಕದ ಒಂದು ಶ್ಲೋಕ. ಇದರಲ್ಲಿ ಗಂಗಾ ಎಂಬ ಪದಕ್ಕೆ ಪ್ರಾಸವಾಗಿ ಪದಪದದಲ್ಲೂ ಅನುಪ್ರಾಸ ಸೇರಿ ಎಷ್ಟು ಸುಂದರವಾಗಿದೆ ನೋಡಿ! 'ನಮಸ್ತೇಽಸ್ತು ಗಂಗೇ ತ್ವದಂಗಪ್ರಸಂಗಾ। ದ್ಭುಜಂಗಾಸ್ತುರಂಗಾಃ ಕುರಂಗಾಃ ಪ್ಲವಂಗಾಃ। ಅನಂಗಾರಿರಂಗಾಃ ಸಸಂಗಾಃ ಶಿವಾಂಗಾ। ಭುಜಂಗಾಧಿಪಾಂಗೀಕೃತಾಂಗಾ ಭವಂತಿ॥'– ಅಂದರೆ, ಗಂಗೆಯೇ, ನಿನಗೆ ಶಿರಬಾಗಿ ನಮಿಸುತ್ತೇನೆ. ನಿನ್ನ ಸ್ಪರ್ಶಮಾತ್ರದಿಂದಲೇ ಸಕಲಜೀವಿಗಳೂ– ಹಾವು, ಕುದುರೆ, ಜಿಂಕೆ, ಕೋತಿ... ಎಲ್ಲವೂ, ಅದೆಷ್ಟೇ ದೊಡ್ಡದೊಡ್ಡ ಗುಂಪುಗಳಲ್ಲಿದ್ದರೂ, ಶಿವನದೋ ವಿಷ್ಣುವಿನದೋ ರೂಪವನ್ನು ಧರಿಸುತ್ತವೆ. ಮೋಕ್ಷ ಪಡೆದು ಶಿವೈಕ್ಯವಾಗುತ್ತವೆ ಅಥವಾ ವಿಷ್ಣುವಿನ ಸನ್ನಿಧಿಯನ್ನು ಸೇರುತ್ತವೆ. ಅಂಥ ಪುಣ್ಯವನ್ನು ದೊರಕಿಸುವವಳು ನೀನು! ಎಂದರ್ಥ.

ಸರಿ, ಗಣತಂತ್ರ ಪರೇಡ್‌ನ ಟ್ಯಾಬ್ಲೊಗಳಾಗಿ ಈ ಶ್ಲೋಕಗಳನ್ನೇ ಆರಿಸಿಕೊಂಡಿದ್ದೇಕೆ ಎಂದು ಕೆಲವರಿಗೆ ಅನೂಹ್ಯ ಆಶ್ಚರ್ಯ ಮತ್ತು ಇನ್ನು ಕೆಲವರಿಗೆ ಅಂದಾಜು ಆಗಿರಬಹುದು. ಇಲ್ಲಿದೆ ವಿವರ. ಈ ಎಲ್ಲ ಶ್ಲೋಕಗಳು/ಸ್ತೋತ್ರಗಳು 'ಭುಜಂಗಪ್ರಯಾತ' ಎಂಬ ಛಂದಸ್ಸನ್ನು ಅನುಸರಿಸಿ ರಚನೆಯಾಗಿರುವವು. ಭುಜಂಗ ಪ್ರಯಾತ ಎಂದರೇನು? ಭುಜಂಗ ಅಂದರೆ ಹಾವು. ಕೈಕಾಲುಗಳಿಲ್ಲದ ಅದು ತನ್ನ ಇಡೀ ದೇಹವನ್ನು ತೆವಳಿಕೊಂಡು ಚಲಿಸುವುದು ತಾನೆ? ಆದರೆ ಸುಮ್ಮನೆ ಉದ್ದಕ್ಕೆ ತೆವಳಿಕೊಂಡು ಹೋಗಲಿಕ್ಕಾಗದು, ದೇಹದ ನಿರ್ದಿಷ್ಟ ಭಾಗವನ್ನೇ ಭುಜಗಳಂತೆ ಬಳಸಿ ನೆಲಕ್ಕೆ ಹಿಮ್ಮುಖ ಒತ್ತಡಹಾಕಿ ಮುಂದಕ್ಕೆ ಚಲಿಸಬೇಕಾಗುತ್ತದೆ. ಹೀಗೆ ಹಾವು ಭುಜಗಳನ್ನು ಬಳಸಿ ಚಲಿಸುವುದರಿಂದ ಭುಜಂಗ. ಪ್ರಯಾತ ಅಂದರೆ ಚಲನೆ. ಹಾವಿನ ಚಲನೆಗೆ ಅಂಕುಡೊಂಕಿನ ವಿನ್ಯಾಸವಿರುತ್ತದೆ. ಈ ಛಂದಸ್ಸಿನಲ್ಲಿರುವ ರಚನೆಗಳನ್ನು ಹಾಡುವಾಗಿನ ಲಯವು ಹಾವಿನ ಚಲನೆಯಂತಿರುತ್ತದೆ. ಆದ್ದರಿಂದ ಭುಜಂಗಪ್ರಯಾತ ಎಂದು ಹೆಸರು. ತಲಾ 12 ಅಕ್ಷರಗಳ ನಾಲ್ಕು ಸಾಲುಗಳು. ಪ್ರತಿಯೊಂದು ಸಾಲಿನ ಅಕ್ಷರಗಳನ್ನು ತಲಾ ಮೂರಕ್ಷರಗಳ ನಾಲ್ಕು ಗುಂಪುಗಳನ್ನಾಗಿಸಿದರೆ ಪ್ರತಿಗುಂಪಿನಲ್ಲೂ ಮೊದಲಿಗೊಂದು ಲಘು, ಆಮೇಲೆರಡು ಗುರು ಅಕ್ಷರಗಳಿರುತ್ತವೆ. ಛಂದಸ್ಸಿನ ಪರಿಭಾಷೆಯಲ್ಲಿ ಇದನ್ನು ಯ–ಗಣ ಎನ್ನುತ್ತೇವೆ. ಶಾಲೆಯಲ್ಲಿ ಕಲಿತಿದ್ದ 'ಯಮಾತಾರಾಜಭಾನಸಲಗಂ' ಸೂತ್ರವನ್ನು ನೀವಿಲ್ಲಿ ಒಮ್ಮೆ ನೆನಪಿಸಿಕೊಳ್ಳಬೇಕಾಗುತ್ತದೆ. ಯ–ಗಣವೆಂದರೆ 'ಯಮಾತಾ'. ಮೊದಲನೆಯದು ಲಘು, ಆಮೇಲಿನೆರಡು ಗುರು. ಹಾಗಾಗಿ ಭುಜಂಗಪ್ರಯಾತ ಪದ್ಯದಲ್ಲಿ ಪ್ರತಿ ಸಾಲಿನ ಲಯ 'ಯಮಾತಾ ಯಮಾತಾ ಯಮಾತಾ ಯಮಾತಾ' ಎಂಬಂತೆ ಇರುತ್ತದೆ. ಸಂಸ್ಕೃತ ಛಂದೋಗ್ರಂಥಗಳಲ್ಲಿ ಇದನ್ನು 'ಭುಜಂಗಪ್ರಯಾತಂ ಚತುರ್ಭಿರ್ಯಕಾರೈಃ' ಅಥವಾ 'ಭುಜಂಗಪ್ರಯಾತಂ ಭವೇದ್ಯೈಶ್ಚತುರ್ಭಿಃ' ಎಂಬ ಸೂತ್ರದಿಂದ ಗುರುತಿಸುತ್ತಾರೆ. ಪ್ರತಿಸಾಲಿನಲ್ಲಿ ನಾಲ್ಕು ಯ–ಗಣಗಳು ಇರುತ್ತವೆಂದು ಸೂತ್ರ ತಿಳಿಸುತ್ತದೆ, ಮತ್ತು ಸಂಸ್ಕೃತ ಸೂತ್ರಗಳ ಸೆಲ್ಫ್–ರೆಫರೆನ್ಸ್ ಸ್ವಾರಸ್ಯದಂತೆಯೇ ಈ ಸೂತ್ರಕ್ಕೇ ಲಘು–ಗುರು ಪ್ರಸ್ತಾರ ಹಾಕಿದರೂ ನಾಲ್ಕು ಯ–ಗಣಗಳೇ ಕಾಣಿಸಿಕೊಳ್ಳುತ್ತವೆ!

ಶಂಕರಾಚಾರ್ಯರು ರಚಿಸಿದ ಬಹಳಷ್ಟು ಸ್ತೋತ್ರಗಳು ಭುಜಂಗಪ್ರಯಾತ ಛಂದಸ್ಸಿನಲ್ಲಿವೆ. ಕೆಲವೊಮ್ಮೆ ಸ್ತೋತ್ರದ ಹೆಸರೇ ಸೂಚಿಸುವುದೂ ಇದೆ– ಭವಾನಿ ಭುಜಂಗ, ಶ್ರೀರಾಮ ಭುಜಂಗ, ಸುಬ್ರಹ್ಮಣ್ಯ ಭುಜಂಗ, ಶಾರದಾ ಭುಜಂಗ, ಹನೂಮಾನ್ ಭುಜಂಗ ಇತ್ಯಾದಿ. ಇವೆಲ್ಲದರ ಲಯ ಒಂದೇ ಆದರೂ ರಾಗ/ಧಾಟಿ ಒಂದೇ ಇರಬೇಕಂತೇನಿಲ್ಲ. ಮೇಲೆ ಪರೇಡ್‌ನಲ್ಲಿ ಕಾಣಿಸಿಕೊಂಡ ಸ್ತೋತ್ರಗಳು ಬೇರೆಬೇರೆ ಧಾಟಿಗಳಲ್ಲಿ ಪ್ರಚಲಿತದಲ್ಲಿವೆಯಷ್ಟೆ? ಅಲ್ಲದೇ ದೇವರ ಸ್ತೋತ್ರಗಳಷ್ಟೇ ಈ ಛಂದಸ್ಸಿನಲ್ಲಿರುವುದು ಅಂತೇನೂ ಇಲ್ಲ. 17ನೆಯ ಶತಮಾನದಲ್ಲಿ ಬಾಳಿದ್ದ ಜಗನ್ನಾಥ ಪಂಡಿತನೆಂಬ ಸಂಸ್ಕೃತ ಕವಿಯ ರಸಿಕತನ ಪ್ರಸಂಗದಲ್ಲಿ ಭುಜಂಗಪ್ರಯಾತ ಛಂದಸ್ಸಿನ ಎರಡು ಪದ್ಯಗಳು ಬರುತ್ತವೆ. ಜಗನ್ನಾಥ ಪಂಡಿತ ಮೊಘಲ್ ದೊರೆ ಜಹಾಂಗೀರನಿಂದ ಆಮೇಲೆ ಶಹಾಜಹಾನದಿಂದಲೂ ಸ್ನೇಹಗೌರವ ಗಳಿಸಿದವನು, ಆಸ್ಥಾನಕವಿಯಾದವನು. ಒಮ್ಮೆ ಜಗನ್ನಾಥ ಪಂಡಿತ ಹಾಗೂ ಶಹಾಜಹಾನ್ ರಾಜಮಂದಿರದಲ್ಲಿ ಪಗಡೆಯಾಡುತ್ತ ಕುಳಿತಿದ್ದರು. ದೊರೆಗೆ ಬಾಯಾರಿಕೆಯಾಯ್ತು. ದಾಸಿಯ ಮಗಳೊಬ್ಬಳು ಸ್ಫುರದ್ರೂಪಿ ತರುಣಿ ಚಿನ್ನದ ಹೂಜಿಯಲ್ಲಿ ನೀರು ತಂದಳು. ಜಗನ್ನಾಥ ಆಟವಾಡುವ ಬದಲು ಬಿಟ್ಟ ಕಣ್ಣು ಬಿಟ್ಟುಕೊಂಡು ಅವಳನ್ನೇ ನೋಡುತ್ತಿದ್ದನು. ಅದನ್ನು ಗಮನಿಸಿದ ಶಹಾಜಹಾನನಿಗೆ ತುಂಟತನ ಮಾಡುವ ಮನಸ್ಸಾಯಿತು. ಪದ್ಯ ರಚಿಸಿ ಈ ತರುಣಿಯನ್ನು ವರ್ಣಿಸು ಎಂದು ಜಗನ್ನಾಥನನ್ನು ಕೇಳಿದಾಗ ಥಟ್ಟನೆ ಬಂದ ಉತ್ತರ ಈ ಶ್ಲೋಕ: 'ಇಯಂ ಸುಸ್ತನೀ ಮಸ್ತಕನ್ಯಸ್ತಕುಂಭಾ। ಕುಸುಂಭಾರುಣಂ ಚಾರು ಚೇಲಂ ವಸಾನಾ। ಸಮಸ್ತಸ್ಯ ಲೋಕಸ್ಯ ಚೇತಃಪ್ರವೃತ್ತೀಮ್। ಗೃಹೀತ್ವಾ ಘಟೇ ವಿನ್ಯಸ್ಯ ಯಾತೀವ ಭಾತಿ॥'– ಅಂದರೆ, ಈ ಚೆಲುವೆಯು ಅರುಣಾಗಸದ ಬಣ್ಣದ ಬಟ್ಟೆಯನ್ನುಟ್ಟು ತಲೆಮೇಲೆ ಚಿನ್ನದ ಕುಂಭದಲ್ಲಿ ನೀರನ್ನು ಹೊತ್ತುತರುತ್ತಿದ್ದಾಳೆ. ಇನ್ನೆರಡು ಕುಂಭಗಳಲ್ಲಿ ಅಮೃತವಿದೆಯೋ ಏನೋ! ಅಂತೂ ಸಮಸ್ತಲೋಕದ ಚೈತನ್ಯವನ್ನೇ ಹೊತ್ತುತರುತ್ತಿರುವಂತೆ ಮಿಂಚುತ್ತಿದ್ದಾಳೆ ಎಂದರ್ಥ. ಶಹಾಜಹಾನ್ ಸಂತುಷ್ಟನಾದ. ಏನು ಬಹುಮಾನ ಬೇಕೆಂದು ಜಗನ್ನಾಥನನ್ನೇ ಕೇಳಿದ. ಆಗ ಹರಿದುಬಂತು ಮತ್ತೊಂದು ಭುಜಂಗಪ್ರಯಾತ: 'ನ ಯಾಚೇ ಗಜಾಲೀಂ ನ ವಾ ವಾಜಿರಾಜೀಂ। ನ ವಿತ್ತೇಷು ಚಿತ್ತಂ ಮದೀಯಂ ಕದಾಪಿ। ಇಯಂ ಸುಸ್ತನೀ ಮಸ್ತಕನ್ಯಸ್ತಕುಂಭಾ। ಲವಂಗೀ ಕುರಂಗೀ ದೃಗಂಗೀಕರೋತು॥'– ಅಂದರೆ, 'ನನಗೆ ಆನೆಗಳ ಹಿಂಡು ಬೇಡ. ಕುದುರೆಗಳೂ ಬೇಡ. ಸಂಪತ್ತನ್ನು ನಾನು ಬಯಸುವುದಿಲ್ಲ. ಜಿಂಕೆಕಣ್ಣುಗಳುಳ್ಳ ಈ ಪೀನಪಯೋಧರಿ ಚೆಲುವೆ ಲವಂಗಿ ನನ್ನವಳಾಗಬೇಕು!' ಎಂದರ್ಥ. ಕವಿಯ ಮನಸ್ಸಿನಲ್ಲಿದ್ದುದನ್ನು ಅರಿತ ಶಹಜಹಾನ್ ಆ ಮದುವೆಯನ್ನೂ ಏರ್ಪಡಿಸಿದನು.

ಜಗನ್ನಾಥ ಕವಿಯ ರಸಿಕಪದ್ಯಗಳನ್ನೂ ನಾವು ಪಥಸಂಚಲನಕ್ಕೆ ಸೇರಿಸಬಹುದು. ಅಷ್ಟೇಅಲ್ಲ, ಸಂಸ್ಕೃತದ ಈ ಛಂದಸ್ಸು ಹಿಂದಿ ಸಾಹಿತ್ಯದಲ್ಲೂ ಬಳಕೆಯಾಗುತ್ತದೆ ಮತ್ತು ಹಿಂದಿ ಚಿತ್ರಗೀತೆಗಳೂ ಭುಜಂಗಪ್ರಯಾತ ಲಯದವು ಇವೆಯೆಂದರೆ ನಿಮಗೆ ಆಶ್ಚರ್ಯವಾಗಬಹುದು. 'ಯಮಾತಾ ಯಮಾತಾ ಯಮಾತಾ ಯಮಾತಾ' ಎಂಬಂತೆ ಲಯ ಎಂದು ಆಗಲೇ ಹೇಳಿದೆನಷ್ಟೆ? ಇಲ್ಲೊಂದಿಷ್ಟು ಹಿಂದಿ ಚಿತ್ರಗೀತೆಗಳಿವೆ, ಗುನುಗುನಿಸಿ ದೃಢಪಡಿಸಿಕೊಳ್ಳಿ. ಆರಜೂ ಚಿತ್ರದ 'ಅಜೀ ರೂಠಕರ್ ಅಬ್ ಕಹಾಂ ಜಾಇಯೇಗಾ... ' ಮತ್ತು 'ಏ ಫೂಲೋಂಕಿ ರಾನೀ ಬಹಾರೋಂ ಕಿ ಮಲಿಕಾ...' ಹಾಗೆಯೇ, 'ವೊ ಜಬ್ ಯಾದ್ ಆಯೇ ಬಹುತ್ ಯಾದ್ ಆಯೇ...'(ಪಾರಸ್‌ಮಣಿ), 'ತುಮ್ಹೀ ಮೇರೆ ಮಂದಿರ್ ತುಮ್ಹೀ ಮೇರಿ ಪೂಜಾ...' (ಖಾನದಾನ್), 'ಬನೇ ಚಾಹೆ ದುಷ್ಮನ್ ಜಮಾನಾ ಹಮಾರಾ...' (ದೋಸ್ತಾನಾ) ಇತ್ಯಾದಿ ತುಂಬ ಇವೆ. ಯಾಕೋ ಗೊತ್ತಿಲ್ಲ, ಕನ್ನಡ ಕವಿಗಳಿಗೆ ಭುಜಂಗಪ್ರಯಾತ ಛಂದಸ್ಸು ಅಷ್ಟೇನೂ ಹಿಡಿಸಿಲ್ಲವೆಂದು ಕಾಣುತ್ತದೆ. ಅಂತರಜಾಲದಲ್ಲಿ ಹುಡುಕಿದಾಗ ಭರ್ತೃಹರಿಯ ಸುಭಾಷಿತವೊಂದನ್ನು ಕನ್ನಡಕ್ಕೆ ಅನುವಾದಿಸಿದ್ದು ಸಿಕ್ಕಿತು, ಅದೂ ಬಹುಮಟ್ಟಿಗೆ ಸಂಸ್ಕೃತಭೂಯಿಷ್ಠವೇ ಆಗಿದೆ. 'ಕರಂಪಾತ್ರೆ ಭೈಕ್ಷಂ ಪವಿತ್ರಾನ್ನ ಮಾಶೋ। ತ್ಕರಂ ವಸ್ತ್ರಮುರ್ವೀತಲಂ ತಲ್ಪಮಾಗಲ್। ವಿರಕ್ತರ್ ಜನಾಸಂಗದೂರರ್ ಸುತೃಪ್ತರ್। ಕರಂ ಕರ್ಮಮಂ ಕಿಳ್ತು ತಾಂ ಸಂತಮಿರ್ಪ್ಪರ್॥' ಹಳಗನ್ನಡ ಕಷ್ಟಪಟ್ಟು ಅರ್ಥಮಾಡಿಕೊಳ್ಳಬೇಕು. ಅದಕ್ಕಿಂತ ಮಾಡರ್ನ್ ಕನ್ನಡದ್ದೊಂದಿರಲಿ ಎಂದು ನಾನೇ ಒಂದು ರಚಿಸಿದ್ದೇನೆ, ಒಪ್ಪಿಸಿಕೊಳ್ಳಿ: 'ಮಹಾಕುಂಭಮೇಳಕ್ಕೆ ಹೋಗ್ಬಿಟ್ಟು ಬನ್ನೀ। ವಿಹಾರಾರ್ಥ ಬಾಳಲ್ಲಿ ಸಂತೋಷ ತನ್ನಿ। ಬಿಹಾರಕ್ಕು ಹೋಗೀ ಗಯಾ ನೋಡಿ ಬನ್ನೀ। ಚಹಾಪಾನದಭ್ಯಾಸ ಮಾಡ್ಕೊಂಡವೆನ್ನಿ॥' ತೆಲುಗಿನಲ್ಲಿ ಭುಜಂಗಪ್ರಯಾತ ಕೃಷಿ ಸಾಕಷ್ಟು ಇದೆಯೆಂದೆನಿಸುತ್ತದೆ. ಮರಾಠಿಯಲ್ಲಿ ಸಮರ್ಥರಾಮದಾಸರ 'ಮನಾಚ್ಚೆ ಶ್ಲೋಕ' ಭುಜಂಗಪ್ರಯಾತ ಛಂದದಲ್ಲಿದೆ. ಉರ್ದು ಗಜ಼ಲ್‌ಗಳೂ ಈ ಛಂದಸ್ಸಿನವು ಇವೆಯಂತೆ. ಯಾರೋ ಒಬ್ಬರು ಇಂಗ್ಲಿಷ್‌ನಲ್ಲಿ ಮಾಡಿರುವ ಪ್ರಯೋಗವೂ ಇಂಟರ್‌ನೆಟ್‌ನಲ್ಲಿದೆ. ಗಂಡನ ಕಿರುಕುಳದಿಂದ ರೋಸಿಹೋದ ಹೆಂಡತಿಯ ರಾಗ, ಇಲ್ಲಿದೆ ನೋಡಿ: "Demanding Demanding, denying the request; Demanding to get love, demanding to get heart; Demanding to worship, demanding to follow; Demanding he always, repeating the same words! ಇಲ್ಲಿ ಅಕ್ಷರಗಳ ಎಣಿಕೆಯಲ್ಲ, ಸಿಲೆಬಲ್‌ಗಳನ್ನು ಎಣಿಸಬೇಕು. ಬೇಕಿದ್ರೆ ಕನ್ನಡದಲ್ಲಿ ಬರೆದುಕೊಂಡು ಪ್ರಸ್ತಾರ ಹಾಕಬಹುದು, ಪಕ್ಕಾ ಭುಜಂಗಪ್ರಯಾತ!

ಗಣತಂತ್ರ ದಿವಸದ ಪರೇಡ್‌ನಲ್ಲಿ ಭಾಗವಹಿಸಲಿಕ್ಕೆ ಅತ್ಯಂತ ಯೋಗ್ಯ, ಅರ್ಹ, ಸಮಂಜಸ ಎಂಟ್ರಿಯೆಂದರೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಾರ್ಥನೆ! ಸಂಘದ ಸ್ಥಾಪಕ ಸರಸಂಘಚಾಲಕ ಡಾ. ಕೇಶವ ಬಲಿರಾಮ ಹೆಡಗೇವಾರ್ ಮತ್ತು ದ್ವಿತೀಯ ಸರಸಂಘಚಾಲಕ ಮಾಧವ ಸದಾಶಿವ ಗೋಲ್ವಾಲ್ಕರ್ ಅವರ ನಿರ್ದೇಶನ ಮಾರ್ಗದರ್ಶನದಲ್ಲಿ ನರಹರಿ ನಾರಾಯಣ ಭಿಡೆ ಎಂಬ ಸಂಸ್ಕೃತ ಪಂಡಿತರು 1940ರಲ್ಲಿ ರಚಿಸಿದ ಅತ್ಯುತ್ಕೃಷ್ಟ ದೇಶಭಕ್ತಿಗೀತೆ. ಇದು ಕೂಡ ಭುಜಂಗಪ್ರಯಾತ ಛಂದಸ್ಸಿನದೇ! ಯ–ಗಣ ಪ್ರಭಾತಫೇರಿಗೆ, ಪ್ರತಿ ಚರಣದ ಕನ್ನಡ ಅನುವಾದದೊಂದಿಗೆ, ಸೇರಿಸಿಕೊಂಡರೆ ಪಥಸಂಚಲನದ ಘನತೆ ಹೆಚ್ಚುತ್ತದೆ:

'ನಮಸ್ತೇ ಸದಾ ವತ್ಸಲೇ ಮಾತೃಭೂಮೇ, ತ್ವಯಾ ಹಿಂದುಭೂಮೇ ಸುಖಂ ವರ್ಧಿತೋಹಮ್, ಮಹಾಮಂಗಲೇ ಪುಣ್ಯಭೂಮೇ ತ್ವದರ್ಥೇ, ಪತತ್ವೇಷ ಕಾಯೋ ನಮಸ್ತೇ ನಮಸ್ತೇ॥' (ಪ್ರೀತಿಪಾತ್ರ ಮಾತೃಭೂಮಿಯೇ ನಿನಗೆ ಸದಾ ವಂದಿಸುವೆ. ಹಿಂದೂಭೂಮಿಯೇ ನಿನ್ನಿಂದಾಗಿ ನಾನು ಸುಖದಲ್ಲಿ ಬೆಳೆದಿರುವೆ. ಮಂಗಳಕಾರಿ ಪುಣ್ಯಭೂಮಿಯೇ ನಿನಗಾಗಿಯೇ ಸವೆಸುವೆ ನನ್ನ ದೇಹವನ್ನು. ಮತ್ತೆ ನಾ ನಮಿಸುವೆ ನಿನ್ನ ನಾ ನಮಿಸುವೆ).

'ಪ್ರಭೋ ಶಕ್ತಿಮನ್ ಹಿಂದುರಾಷ್ಟ್ರಾಂಗಭೂತಾ, ಇಮೇ ಸಾದರಂ ತ್ವಾಂ ನಮಾಮೋ ವಯಮ್, ತ್ವದೀಯಾಯ ಕಾರ್ಯಾಯ ಬದ್ಧಾ ಕಟೀಯಂ, ಶುಭಾಮಾಶಿಷಂ ದೇಹಿ ತತ್ಪೂರ್ತಯೇ॥' (ಶಕ್ತಿಶಾಲಿ ಭಗವಂತನೇ, ಹಿಂದೂರಾಷ್ಟ್ರದಿ ಹುಟ್ಟಿದ ನಾವು ಗರ್ವ–ಗೌರವಗಳಿಂದ ನಿನಗೆ ನಮಿಸುತಿಹೆವು. ನಿನ್ನ ಆಣತಿಯನ್ನು ನಡೆಸಲು ನಿಂತಿಹೆವು ಟೊಂಕ ಕಟ್ಟಿ, ಪೂರ್ತಿಗೊಳಿಸಿಯೇ ತೀರುವೆವು ಇರಲು ಬೆಂಬಲವು ಗಟ್ಟಿ).

'ಅಜಯ್ಯಾಂ ಚ ವಿಶ್ವಸ್ಯ ದೇಹೀಶ ಶಕ್ತಿಂ, ಸುಶೀಲಂ ಜಗದ್ಯೇನ ನಮ್ರಂ ಭವೇತ್, ಶ್ರುತಂ ಚೈವ ಯತ್ಕಂಟಕಾಕೀರ್ಣ ಮಾರ್ಗಂ, ಸ್ವಯಂ ಸ್ವೀಕೃತಂ ನಃ ಸುಗಂ ಕಾರಯೇತ್॥' (ವಿಶ್ವದ ಯಾವ ಶಕ್ತಿಗೂ ಸೋಲದಂಥ ಬಲ, ಜಗವೆಲ್ಲ ಗೌರವದಿಂದ ಬಾಗುವಂತೆ ಗುಣ, ಕಠಿನ ಹಾದಿಯನ್ನು ಸುಗಮವಾಗಿ ಕ್ರಮಿಸುವ ಜ್ಞಾನ, ಸವಾಲಾಗಿ ಸ್ವೀಕರಿಸಿದ್ದನ್ನು ಮಾಡಿತೋರಿಸುವ ಛಲ– ಇವೆಲ್ಲವನ್ನೂ ಕರುಣಿಸು).

'ಸಮುತ್ಕರ್ಷನಿಃಶ್ರೇಯಸಸ್ಯೈಕಮುಗ್ರಂ, ಪರಂ ಸಾಧನಂ ನಾಮ ವೀರವ್ರತಮ್, ತದಂತಃ ಸ್ಫುರತ್ವಕ್ಷಯಾ ಧ್ಯೇಯನಿಷ್ಠಾ, ಹೃದಂತಃ ಪ್ರಜಾಗರ್ತು ತೀವ್ರಾನಿಶಮ್॥' (ಸ್ಫೂರ್ತಿಯಾಗಲಿ ನಮಗೆ ನಿಷ್ಠುರ ನಾಯಕತ್ವದ ಕೆಚ್ಚು. ವೀರತ್ವ ಗಳಿಸಲು ಅದಕಿಂತ ಯಾವುದಿದೆ ಹೆಚ್ಚು? ಸ್ಫುರಿಸುತಿರಲಿ ಕೊನೆಯಿಲ್ಲದ ಧ್ಯೇಯ ನಿಷ್ಠೆಗಳು; ಹೃದಯದಲಿ ತೀವ್ರತೆ ಜಾಗೃತವಿರಲಿ ಹಗಲಿರುಳು).

'ವಿಜೇತ್ರೀ ಚ ನಃ ಸಂಹತಾ ಕಾರ್ಯಶಕ್ತಿರ್, ವಿಧಾಯಾಸ್ಯ ಧರ್ಮಸ್ಯ ಸಂರಕ್ಷಣಮ್, ಪರಂ ವೈಭವಂ ನೇತುಮೇತತ್ ಸ್ವರಾಷ್ಟ್ರಂ, ಸಮರ್ಥಾ ಭವತ್ವಾಶಿಷಾ ತೇ ಭೃಶಮ್॥' (ಜಯಶಾಲಿಯಾಗುತ್ತಲೇ ಸಾಗುವ ನಮ್ಮ ಕಾರ್ಯಶಕ್ತಿ, ಧರ್ಮರಕ್ಷಣೆಗೆ ಮುಡಿಪಾಗಲಿ ಇರಿಸಿ ನಿನ್ನಲಿ ಭಕ್ತಿ. ನಮ್ಮ ಈ ರಾಷ್ಟ್ರವನು ವೈಭವದ ಉತ್ತುಂಗಕ್ಕೇರಿಸಿ ಮೆರೆಯುವಂತಾಗಲಿ ಕೀರ್ತಿಪತಾಕೆಯನು ಹಾರಿಸಿ).

ಭಾರತ ಮಾತೆಗೆ ಜಯವಾಗಲಿ!

ಅಧಿಕಾರ, ತ್ಯಾಗ ಮತ್ತು ರಾಜಕೀಯ ಅನಿವಾರ್ಯತೆ



ವಿದ್ಯಮಾನ

ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ

vveditoped@gmail.com

2004ರ ಸಾರ್ವತ್ರಿಕ ಚುನಾವಣೆಯಲ್ಲಿ ಯುಪಿಎಯನ್ನು ಗೆಲುವಿನತ್ತ ಮುನ್ನಡೆಸಿದರೂ ನೀವೇಕೆ ಪ್ರಧಾನಮಂತ್ರಿಯ ಸ್ಥಾನವನ್ನು ಸ್ವೀಕರಿಸಲಿಲ್ಲ? ಎಂದು ಸಂದರ್ಶನವೊಂದರಲ್ಲಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿಯವರನ್ನು ಕೇಳಿದಾಗ, ''ನನಗೆ ನನ್ನ ಮಿತಿಗಳ ಅರಿವಿತ್ತು. ಡಾ.ಮನಮೋಹನ್ ಸಿಂಗ್ ಅವರು ನನಗಿಂತ ಉತ್ತಮ ಪ್ರಧಾನಿಯಾಗುತ್ತಾರೆ ಅನಿಸಿದ್ದರಿಂದ ಅವರನ್ನು ಆ ಹುದ್ದೆಗೆ ಆಯ್ಕೆಮಾಡಲಾಯಿತು'' ಎಂದು ಅವರು ಉತ್ತರಿಸಿದ್ದರು. ಈ ವಿಷಯದಲ್ಲಿ ತಾವು ತ್ಯಾಗ ಮಾಡಿದ್ದಾಗಿ ಸೋನಿಯಾರಿಗೇ ಅನಿಸಿಲ್ಲ; ಆದರೆ ಕರ್ನಾಟಕದ ಕಾಂಗ್ರೆಸ್ಸಿಗರೇಕೋ ಸ್ಪರ್ಧೆಗೆ ಬಿದ್ದವರಂತೆ 20 ವರ್ಷಗಳ ಹಿಂದಿನ ಈ ಘಟನೆಯನ್ನು ನೆನಪಿಸಿಕೊಂಡು ಈಗ ಮಾತಾಡುತ್ತಿದ್ದಾರೆ.

ಸ್ವಾತಂತ್ರ್ಯಪೂರ್ವ ಕಾಲದಲ್ಲಿ ದೇಶವನ್ನು ಏಕಸೂತ್ರದಲ್ಲಿ ಸೇರಿಸಿ, ಸ್ವಾತಂತ್ರ್ಯಕ್ಕಾಗಿ ಜನರನ್ನು ಸಂಘಟಿಸಿ, ಶಾಂತಿ ಮತ್ತು ಸತ್ಯಾಗ್ರಹಗಳ ಮೂಲಕವೇ ದೇಶವನ್ನು ಬ್ರಿಟಿಷರಿಂದ ಮುಕ್ತಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದವರು ಮಹಾತ್ಮ ಗಾಂಧಿಯವರು. ಒಂದೊಮ್ಮೆ ಅವರು ಪ್ರಧಾನಿಯಾಗಿ ದೇಶವನ್ನು ಮುನ್ನಡೆಸುವ ಮಹತ್ವಾಕಾಂಕ್ಷೆಯನ್ನಾಗಲೀ, ರಾಷ್ಟ್ರಪತಿಯಾಗುವ ಇಂಗಿತವನ್ನಾಗಲೀ ವ್ಯಕ್ತಪಡಿಸಿದ್ದಿದ್ದರೆ, ಅಂದು ಅವರಿಗೆದುರಾಗಿ ನಿಲ್ಲುವವರು ಯಾರೂ ಇರಲಿಲ್ಲ. ಆದರೆ, ಅಧಿಕಾರದಿಂದ ದೂರವೇ ಉಳಿಯಲು ನಿರ್ಧರಿಸಿದ್ದ ಗಾಂಧಿಯವರದ್ದು ತ್ಯಾಗ ಎನ್ನಬಹುದು. ಮುಂದೆ, ಯಾರು ಪ್ರಧಾನಿಯಾಗಬೇಕು ಎಂಬ ಚರ್ಚೆ ಕಾಂಗ್ರೆಸ್‌ನಲ್ಲಿ ನಡೆದಾಗ, ದಕ್ಷ ಆಡಳಿತ ನೀಡಬಲ್ಲ ಕ್ಷಮತೆಯಿದ್ದ ಮತ್ತು ಪಕ್ಷದ 80 ಪ್ರತಿಶತ ಸದಸ್ಯರ ಬೆಂಬಲವಿದ್ದರೂ ಗಾಂಧೀಜಿಯ ಮಾತಿಗೆ ಗೌರವ ನೀಡಿ, ನೆಹರು ಅವರು ಪ್ರಥಮ ಪ್ರಧಾನಿಯಾಗಲು ಅವಕಾಶ ಮಾಡಿಕೊಟ್ಟ ಸರ್ದಾರ್ ವಲ್ಲಭಭಾಯಿ ಪಟೇಲರದ್ದು ತ್ಯಾಗ ಎನ್ನಬಹುದು. ಅದನ್ನು ಬಿಟ್ಟು, ಹಿಂದಿನ ಚುನಾವಣೆಯಲ್ಲಿ ತಂದೆಯು ಮಗನಿಗೂ, ಮುಂದಿನ ಚುನಾವಣೆಯಲ್ಲಿ ಮಗನು ತಂದೆಗೂ ಕ್ಷೇತ್ರ ಬಿಟ್ಟುಕೊಟ್ಟರೆಂದು 'ಬಹುದೊಡ್ಡ ತ್ಯಾಗಮಾಡಿದರು' ಎಂದು ವ್ಯಾಖ್ಯಾನಿಸಿದರೆ ಅದೆಷ್ಟು ಸರಿ?

ಬಿಹಾರದ ಲಾಲು ಪ್ರಸಾದ್ ಯಾದವ್ ಹಗರಣಗಳಲ್ಲಿ ಅಪರಾಧಿಯೆಂದು ಸಾಬೀತಾಗಿದ್ದಕ್ಕೆ ತಮ್ಮ ಮಡದಿ ರಾಬ್ಡಿದೇವಿಯವರಿಗೆ ಅಧಿಕಾರ ವಹಿಸಿ, ಹಿಂದಿ ಸೀಟಿನಲ್ಲಿ ತಾವು ಕೂತು ಆಡಳಿತ ನಡೆಸುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ವಿಡಂಬಿಸಿದಾಗ, 'ಅವರು ಮುಖ್ಯಮಂತ್ರಿ ಸ್ಥಾನವನ್ನು ತ್ಯಾಗ ಮಾಡಿ ಉದಾರತೆ ಮೆರೆದರು' ಎಂದರೆ ಹೇಗೆ? ಗಾಂಧೀಜಿ ಮತ್ತು ಪಟೇಲರ ನಿಜವಾದ ತ್ಯಾಗದ ಕುರಿತು ಯಾವತ್ತೂ ಮಾತಾಡದ ಕೆಲವು ಕಾಂಗ್ರೆಸ್ಸಿಗರಿಗೆ, ಸೋನಿಯಾ ಅವರು ಮನಮೋಹನರನ್ನು ಪ್ರಧಾನಿಯಾಗಿಸಿದಾಗ ಮಾತ್ರ ಅದು ಮಹಾತ್ಯಾಗದಂತೆ ತೋರುವುದು ಹೇಗೋ ತಿಳಿಯದು!

ಸೋನಿಯಾ ತಾವು ಪ್ರಧಾನಿಯಾಗದೇ, ಹಿರಿಯರೂ ಅರ್ಹರೂ ಆಗಿದ್ದ ಪ್ರಣಬ್ ಮುಖರ್ಜಿಯವರನ್ನೂ ಆ ಹುದ್ದೆಗೇರಿಸದೇ, ಮನಮೋಹನರನ್ನು ಆಯ್ಕೆಯಾಗುವಂತೆ ಮಾಡಿದ್ದುದು ತ್ಯಾಗವೂ ಆಗಿರಲಿಲ್ಲ, ಆಕಸ್ಮಿಕ ನಿರ್ಧಾರವೂ ಆಗಿರಲಿಲ್ಲ. ಅದು, ಇಡೀ ಪಕ್ಷ ಮತ್ತು ಗಾಂಧಿ ಕುಟುಂಬ, ಅಳೆದು-ತೂಗಿ ತೆಗೆದುಕೊಂಡು ನಿರ್ಧಾರವೇ ಆಗಿತ್ತು. ಹಾಗೆ ನಿರ್ಧರಿಸುವಂತೆ ಅಂದಿನ ರಾಜಕೀಯ ಪರಿಸ್ಥಿತಿಯು ಅವರನ್ನು ಪ್ರೇರೇಪಿಸಿತ್ತು, ಅಷ್ಟೇ. ಅನಿವಾರ್ಯವಾಗಿ ಮಾಡಬೇಕಾಗಿ ಬಂದ ಈ ಕಾರ್ಯವನ್ನು 'ತ್ಯಾಗ' ಎಂದು ಬಣ್ಣಿಸುವುದಾದರೂ ಹೇಗೆ? ಹಾಗಾಗಿಯೇ, ನಂತರದ ದಿನಗಳಲ್ಲೂ ಹಿರಿಯ ಕಾಂಗ್ರೆಸ್ಸಿಗರು '2004ರಲ್ಲಿ ಮನಮೋಹನರ ಬದಲಿಗೆ ಪ್ರಣಬ್‌ರನ್ನು ಪ್ರಧಾನಿ ಮಾಡಿದ್ದಿದ್ದರೆ ಪಕ್ಷಕ್ಕೆ ಹೆಚ್ಚು ಅನುಕೂಲವಾಗುತ್ತಿತ್ತು' ಎನ್ನುತ್ತಿದ್ದರೇ ವಿನಾ, 'ಸೋನಿಯಾ ಪ್ರಧಾನಿ ಆಗಬೇಕಿತ್ತು' ಎಂದವರು ಕಡಿಮೆಯೇ ಎನ್ನಬಹುದು.

ಸೋನಿಯಾ ಅವರು, ರಾಜೀವ್ ಗಾಂಧಿಯವರ ಜತೆಗಿನ ತಮ್ಮ ವೈವಾಹಿಕ ಜೀವನದ ಬಹುಭಾಗವನ್ನು ಕುಟುಂಬ ನಿರ್ವಹಣೆಯಲ್ಲೇ ಕಳೆದವರು, ರಾಜೀವರು ಪ್ರಧಾನಿಯಾಗಿದ್ದಾಗ ಮತ್ತು ನಂತರ ಲೋಕಸಭೆಯಲ್ಲಿ ತಾವು ಕೆಲಕಾಲ ವಿಪಕ್ಷ ನಾಯಕಿಯಾಗಿದ್ದಾಗ ಸಾರ್ವಜನಿಕವಾಗಿ ಸೀಮಿತವಾಗಿ ಕಾಣಿಸಿಕೊಂಡವರು. ದೇಶ-ವಿದೇಶಗಳಲ್ಲಿನ ರಾಜೀವರ ಪ್ರವಾಸಗಳಲ್ಲಿ ಹೆಚ್ಚಾಗಿ ಜತೆಗಿರುತ್ತಿದ್ದ ಸೋನಿಯಾ, ರಾಜೀವರ ಕ್ಷೇತ್ರವಾಗಿದ್ದ ಅಮೇಥಿಯ ಮೇಲ್ವಿಚಾರಣೆಯನ್ನು ನೋಡಿಕೊಂಡಿರುತ್ತಿದ್ದರು. 1991ರಲ್ಲಿ ರಾಜೀವರ ದಾರುಣ ಹತ್ಯೆಯಾದ ನಂತರ, ನರಸಿಂಹರಾವ್ ಅವರು ಸರಕಾರ ಮತ್ತು ಪಕ್ಷವನ್ನು ಗಾಂಧಿ ಕುಟುಂಬದ ನೆರಳಿನಿಂದಾಚೆ ತಂದು ಮುನ್ನಡೆಸಿದರು. ಆ ಸಂದರ್ಭದಲ್ಲಿ ಸೋನಿಯಾ, ''ರಾಜೀವರ ಹತ್ಯೆಯ ಆಘಾತದಿಂದ ಕುಟುಂಬವಿನ್ನೂ ಚೇತರಿಸಿಕೊಂಡಿಲ್ಲ; ಹಾಗಾಗಿ ನಾನು ಮತ್ತು ನನ್ನ ಕುಟುಂಬದವರು 'ಅಧಿಕಾರ ರಾಜಕೀಯ'ದಿಂದ ದೂರವೇ ಉಳಿಯಲು ನಿರ್ಧರಿಸಿದ್ದೇವೆ'' ಎಂದು ಕೂಡ ಹೇಳಿದ್ದರು. ಅಂದಿನ ಅವರ ನಿರ್ಧಾರ ಸ್ವಾಭಾವಿಕ ಕೂಡ ಆಗಿತ್ತು. ಅದಾಗಲೇ ಎರಡೆರಡು ಜೀವಗಳನ್ನು ಬಲಿಕೊಟ್ಟಿದ್ದ ಕುಟುಂಬವದು; ಹೀಗಾಗಿ ಅಧಿಕಾರದ ಕಾರಣಕ್ಕೆ ತಮ್ಮ ಮಕ್ಕಳನ್ನೂ ಬಲಿಕೊಡಲು ಸೋನಿಯಾ ಸಿದ್ಧರಿರಲಿಲ್ಲ. ಆಗಿನ್ನೂ ಎಲ್‌ಟಿಟಿಇ ಪ್ರಸ್ತುತವಾಗಿತ್ತು ಎಂಬುದನ್ನು ಮರೆಯಲಾಗದು. ಇದೇ ಕಾರಣಕ್ಕೆ ಸೋನಿಯಾರು ಪ್ರಧಾನಿಯಾಗುವುದನ್ನು ರಾಹುಲ್ ಗಾಂಧಿ ತಡೆದರು ಎಂದು ಮಾಜಿ ಕಾಂಗ್ರೆಸ್ಸಿಗ ನಟವರಸಿಂಗ್ ತಮ್ಮ ಆತ್ಮಚರಿತ್ರೆಯಲ್ಲಿ ಹೇಳಿಕೊಂಡಿದ್ದಾರೆ. ಸೋನಿಯಾರ ಮಾಜಿ ಸಹಾಯಕ ಆರ್.ಡಿ.ಪ್ರಧಾನ್ ಅವರು ತಮ್ಮ ಪುಸ್ತಕವೊಂದರಲ್ಲಿ, ''ಸೋನಿಯಾ ಅವರು ಪ್ರಧಾನಿಯಾಗದೇ ಇರುವ ಕುರಿತು 1999ರಲ್ಲೇ ಸ್ಪಷ್ಟ ಅಭಿಪ್ರಾಯ ಹೊಂದಿದ್ದರು. ತಮ್ಮ ವಿದೇಶಿ ಮೂಲವು ಈ ಹುದ್ದೆಗೆ ಪ್ರತಿಬಂಧಕವಾಗಲಿದೆ ಎಂಬುದನ್ನು ಅವರು ಅರಿತಿದ್ದರು. ಹಾಗಾಗಿಯೇ, 1999ರಲ್ಲಿ ವಾಜಪೇಯಿಯವರ ಸರಕಾರದ ಪತನದ ನಂತರ ರಾಷ್ಟ್ರಪತಿ ಕೆ.ಆರ್.ನಾರಾಯಣನ್ ಅವರು ಸರಕಾರ ರಚಿಸಲು ತಮ್ಮನ್ನು ಆಹ್ವಾನಿಸಿದರೂ ಸೋನಿಯಾ ಅದಕ್ಕೆ ಆಸಕ್ತಿ ತೋರಿರಲಿಲ್ಲ'' ಎಂದು ಬರೆದುಕೊಂಡಿದ್ದಾರೆ.

ಪಕ್ಷದ ಕಾರ್ಯಕರ್ತರ ಮತ್ತು ಗಾಂಧಿಕುಟುಂಬದ ನಿಷ್ಠರ ಗಾಢ ಒತ್ತಾಯಕ್ಕೆ ಮಣಿದ ಸೋನಿಯಾ, 1998ರ ಲೋಕಸಭಾ ಚುನಾವಣೆಗೆ ಸ್ವಲ್ಪ ಮೊದಲು ಕಾಂಗ್ರೆಸ್ ಅಧಿನಾಯಕಿಯಾಗಿ ಸಾರ್ವಜನಿಕ ಜೀವನಕ್ಕೆ ಅಡಿಯಿಟ್ಟರು. 2004ರ ಸಾರ್ವತ್ರಿಕ ಚುನಾವಣೆಯಲ್ಲಿ ಅವರ ನೇತೃತ್ವದಲ್ಲಿ ಪ್ರಚಾರಕಾರ್ಯ ನಡೆದು, ಪಕ್ಷವು ಹೆಚ್ಚಿನ ಸ್ಥಾನಗಳನ್ನು ಗಳಿಸಿತು. ತನ್ಮೂಲಕ, ತಮ್ಮ ನಾಯಕತ್ವವನ್ನು ಜನ ಮೆಚ್ಚಿದ್ದಾರೆ ಎಂಬುದನ್ನು ಸೋನಿಯಾ ಸಾಬೀತುಪಡಿಸಿದ್ದರು. ಕಾಂಗ್ರೆಸ್ ಪಕ್ಷವು ಮೈತ್ರಿ ಸರಕಾರದ ನೇತೃತ್ವ ವಹಿಸಲು ಇದು ಅನುವುಮಾಡಿಕೊಟ್ಟಿತು. ಆಗ ಸೋನಿಯಾರನ್ನು ಕಾಂಗ್ರೆಸ್ ಸಂಸತ್ತಿನಲ್ಲಿ ತನ್ನ ನಾಯಕಿಯಾಗಿ ಸರ್ವಾನುಮತದಿಂದ ಆಯ್ಕೆಮಾಡಿದ್ದರಿಂದ, ಅವರು ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸುತ್ತಾರೆಂಬ ನಿರೀಕ್ಷೆ ಎಲ್ಲರಲ್ಲಿತ್ತು. ಆದಾಗ್ಯೂ, ಆ ಸ್ಥಾನವನ್ನು ಸ್ವೀಕರಿಸಲು ಅವರು ನಿರಾಕರಿಸಿ, ಸರಕಾರವನ್ನು ಮುನ್ನಡೆಸಲು ಡಾ.ಮನಮೋಹನ್‌ಸಿಂಗ್‌ರನ್ನು ನಾಮನಿರ್ದೇಶನ ಮಾಡಿ ಎಲ್ಲರಲ್ಲೂ ಅಚ್ಚರಿ ಮೂಡಿಸಿದರು. ಆದರೆ, ಯುಪಿಎ ಅಧ್ಯಕ್ಷೆಯ ಹುದ್ದೆಯಲ್ಲದೆ, ಸಂಸತ್ತಿನಲ್ಲಿ ಕಾಂಗ್ರೆಸ್‌ನ ಸಂಸದೀಯ ಪಕ್ಷದ ನಾಯಕಿಯಾಗಿಯೂ ಅವರು ಮುಂದುವರಿದರು. ಡಾ.ಸಿಂಗ್ ಪ್ರಧಾನಿಯಾಗಿದ್ದರೂ, ಸರಕಾರದ ಸರ್ವ ನಿರ್ಧಾರಗಳೂ ಸೋನಿಯಾರ '10, ಜನಪಥ್ ನಿವಾಸ'ನಲ್ಲೇ ಆಗುತ್ತಿದ್ದವು. ಹಾಗಾಗಿಯೇ, 'ವಿಶ್ವದ ಅತ್ಯಂತ ಶಕ್ತಿಶಾಲಿ ಮಹಿಳೆಯರಲ್ಲಿ ಸೋನಿಯಾ ಒಬ್ಬರು' ಎಂದು ಆಗ ಅನೇಕ ಪತ್ರಿಕೆಗಳು ಬಣ್ಣಿಸುತ್ತಿದ್ದವು. ಹಾಗಾದರೆ, ತಮ್ಮದೇ ನಾಯಕತ್ವದಲ್ಲಿ ಎದುರಿಸಿದ ಚುನಾವಣೆಯಲ್ಲಿ ಅತಿದೊಡ್ಡ ಪಕ್ಷವಾಗಿ ಹೊಮ್ಮಿದ್ದ ಕಾಂಗ್ರೆಸ್‌ನಲ್ಲಿ ನಿರ್ವಿವಾದವಾಗಿ ನಾಯಕಿಯಾಗಿ ಆಯ್ಕೆಯಾಗಿದ್ದ ಸೋನಿಯಾ, ಪ್ರಧಾನಿ ಸ್ಥಾನವನ್ನು ಒಪ್ಪಿಕೊಳ್ಳದಿರುವುದಕ್ಕೆ ಏನಾದರೂ ಕಾರಣಗಳಿರಬೇಕಲ್ಲ!

ಡಾ.ಸುಬ್ರಮಣಿಯನ್ ಸ್ವಾಮಿಯವರು ಅಂದಿನ ರಾಷ್ಟ್ರಪತಿ ಡಾ.ಅಬ್ದುಲ್ ಕಲಾಂರಿಗೆ ಬರೆದ ಪತ್ರವು, 2004ರಲ್ಲಿ ಕೇಂದ್ರ ಸರಕಾರದ ರಚನೆಯಲ್ಲಿ ನಿರ್ಣಾಯಕ ಪಾತ್ರ ವಹಿಸಿತು ಎನ್ನಲಾಗುತ್ತದೆ. ಈ ಪತ್ರದ ಆಧಾರದ ಮೇಲೆ ಕಲಾಂ ಅವರು ಸೋನಿಯಾರನ್ನು ಸರಕಾರ ರಚಿಸಲು ಆಹ್ವಾನಿಸಿರಲಿಲ್ಲ ಎಂಬುದು ಮಾಹಿತಿ ಹಕ್ಕು ಪ್ರಶ್ನೆಯೊಂದರಿಂದ ತಿಳಿದುಬಂದಿದೆ. ಪೌರತ್ವ ಕಾಯ್ದೆಯ ನಿಬಂಧನೆಗಳ ಪ್ರಕಾರ, ಸೋನಿಯಾರನ್ನು ಪ್ರಧಾನಿಯನ್ನಾಗಿ ಮಾಡಲು ಸಾಧ್ಯವಿಲ್ಲವೆಂದು ಯುಪಿಎ ಸರಕಾರ ರಚನೆಯಾಗುವ ಮುನ್ನ ಕಲಾಂರಿಗೆ ತಾವು ಪತ್ರ ಬರೆದಿದ್ದಾಗಿ ಸ್ವಾಮಿ ಸ್ವತಃ ಹೇಳಿಕೊಂಡಿದ್ದಾರೆ. ಅವರನ್ನು ಪ್ರಧಾನಿಯನ್ನಾಗಿ ಮಾಡಿದರೆ, ಆ ನಿರ್ಧಾರವನ್ನು ತಾವು ನ್ಯಾಯಾಲಯದಲ್ಲಿ ಪ್ರಶ್ನಿಸುವುದಾಗಿಯೂ ಸ್ವಾಮಿ ಆ ಪತ್ರದಲ್ಲಿ ತಿಳಿಸಿದ್ದರಂತೆ. ಭಾರತೀಯ ಮೂಲದ ಯಾವುದೇ ಇಟಾಲಿಯನ್ ಪ್ರಜೆಯು ಇಟಲಿಯಲ್ಲಿ ಪ್ರಧಾನಿಯಾಗಲು ಹೇಗೆ ಸಾಧ್ಯವಿಲ್ಲವೋ, ಹಾಗೆಯೇ ಇಟಲಿ ಮೂಲದವರೊಬ್ಬರು ಭಾರತದ ಪ್ರಧಾನಿ ಸ್ಥಾನಕ್ಕೇರುವುದು ಸಾಧ್ಯವಿಲ್ಲವೆಂಬುದು ಸ್ವಾಮಿಯವರ ವಾದವಾಗಿತ್ತು.

ಚುನಾವಣೆಯಲ್ಲಿ ಸ್ಪರ್ಧಿಸದಂತೆ ಸೋನಿಯಾರನ್ನು ನಿರ್ಬಂಧಿಸುವಂತೆ ಎನ್‌ಡಿಎ ಮೈತ್ರಿಕೂಟವು ಭಾರತದ ಚುನಾವಣಾ ಆಯೋಗವನ್ನು ಕೇಳಿಕೊಂಡಿತ್ತು. ಆದರೆ, ಯಾವುದೇ ಶಾಸನಬದ್ಧ ಸಂಸ್ಥೆಗಾಗಿನ ಚುನಾವಣೆಯಲ್ಲಿ ಸ್ಪರ್ಧಿಸದಂತೆ ಸೋನಿಯಾರನ್ನು ನಿರ್ಬಂಧಿಸಲು ಭಾರತದ ಸಂವಿಧಾನದಲ್ಲಿ ಯಾವುದೇ ನಿಯಮಗಳಿಲ್ಲದ ಕಾರಣ, ಈ ಬೇಡಿಕೆಯನ್ನು ಆಯೋಗವು ತಿರಸ್ಕರಿಸಿತ್ತು. ಆದ್ದರಿಂದ ಡಾ. ಸ್ವಾಮಿ ಹೇಳಿರುವಂತೆ, ಸೋನಿಯಾ ಅವರು ಪ್ರಧಾನಿ ಹುದ್ದೆಗೇರಲು ಬೇಕಾದ ಅರ್ಹತೆಯನ್ನು ನಿರ್ಧರಿಸುವಲ್ಲಿ ಭಾರತದ ರಾಷ್ಟ್ರಪತಿಗಳಿಗೆ ಯಾವುದೇ ಅಧಿಕಾರ ಇರಲಿಲ್ಲ, ಚುನಾವಣಾ ಆಯೋಗವೇ ಅವರನ್ನು ಅರ್ಹರೆಂದು ತೀರ್ಮಾನಿಸಿದ ಮೇಲೆ ರಾಷ್ಟ್ರಪತಿಗಳು ತಡೆಯಲು ಸಾಧ್ಯವಿರಲಿಲ್ಲ ಎಂದು ಕಾಂಗ್ರೆಸ್ ಹೇಳಿಕೊಂಡಿತ್ತು.

ಸೋನಿಯಾ ಅವರು ಚುನಾವಣೆಗೆ ಸ್ಪರ್ಧಿಸುವುದನ್ನು ಮತ್ತು ಪ್ರಧಾನಿಯಾಗುವುದನ್ನು ತಡೆಯಲು ಕಾನೂನಾತ್ಮಕ ಸವಾಲನ್ನು ಒಡ್ಡುವಲ್ಲಿ ವಿಫಲವಾದ ಬಿಜೆಪಿ ಆಗ ಭಾವನಾತ್ಮಕ 'ಬ್ಲ್ಯಾಕ್‌ಮೇಲ್' ತಂತ್ರಕ್ಕೆ ಮೊರೆಹೋಯಿತು. ಪಕ್ಷದ ಇಬ್ಬರು ಪ್ರಮುಖ ನಾಯಕಿಯರಾಗಿದ್ದ ಸುಷ್ಮಾ ಸ್ವರಾಜ್ ಮತ್ತು ಉಮಾ ಭಾರತಿ ಅವರು, ''ಸೋನಿಯಾ ಅವರು ಭಾರತದ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದರೆ, ತಲೆ ಬೋಳಿಸಿಕೊಂಡು ಬಿಳಿಬಟ್ಟೆ ಧರಿಸಿ ಮತ್ತು ನೆಲದ ಮೇಲೆ ಮಲಗಿ ಹಿಂದೂ ವಿಧವೆಯರಂತೆ ಬದುಕುತ್ತೇವೆ'' ಎಂದು ಘೋಷಿಸಿಬಿಟ್ಟರು. 'ದೇಶವನ್ನು ಮುನ್ನಡೆಸಲು ದೇಶಸ್ಥರು ಯಾರೂ ಸಿಗುವುದಿಲ್ಲ, ಆ ಕೆಲಸಕ್ಕೆ ಕಾಂಗ್ರೆಸ್ಸಿಗರು ವಿದೇಶಿ ಮೂಲದವರನ್ನು ಆಯ್ಕೆಮಾಡುತ್ತಾರೆಂದರೆ, ಅದು ಶತಕೋಟಿ ಭಾರತೀಯರೆಲ್ಲರೂ ಅಸಮರ್ಥರು ಎಂದಂತಾಗುತ್ತದೆ' ಎಂಬುದು ಅವರ ತರ್ಕವಾಗಿತ್ತು.

ಸೋನಿಯಾ ಪ್ರಧಾನಿಯಾಗುವುದಕ್ಕೆ ಪಕ್ಷದಲ್ಲೂ ಸಣ್ಣ ಪ್ರಮಾಣದ ವಿರೋಧವಿದ್ದೇ ಇತ್ತು. ಚುನಾವಣಾಪೂರ್ವ ಯುಪಿಎ ಮೈತ್ರಿಕೂಟಕ್ಕೆ 222 ಸ್ಥಾನಗಳಷ್ಟೇ ಸಿಕ್ಕಿದ್ದರಿಂದ, ಬಹುಮತಕ್ಕಾಗಿ ಎಡಪಕ್ಷಗಳನ್ನು ಗೋಗರೆಯುವ ಸ್ಥಿತಿ ಕಾಂಗ್ರೆಸ್‌ಗೆ ಎದುರಾಗಿತ್ತು. ಮಿತ್ರಪಕ್ಷಗಳಲ್ಲಿ ಕೆಲವಕ್ಕೆ, ಅದರಲ್ಲೂ ಎಡಪಕ್ಷಗಳಿಗೆ ಸೋನಿಯಾ ಪ್ರಧಾನಿಯಾಗುವುದು ಇಷ್ಟವಿರಲಿಲ್ಲ ಎನ್ನುವುದಕ್ಕಿಂತ, ಅಲ್ಪಮತದ ಸರಕಾರವನ್ನು ಮುನ್ನಡೆಸುವ ಅನುಭವ ಅವರಿಗಿರದ ಕಾರಣ, ಬೇರೆ ಯಾರಾದರೂ ಅನುಭವಿಗಳು ಅಥವಾ ತಟಸ್ಥ ವ್ಯಕ್ತಿತ್ವದವರು ಪ್ರಧಾನಿಯಾಗಲಿ ಎನ್ನುವ ಮನಸ್ಥಿತಿ ಅವಕ್ಕಿತ್ತು. 189 ಸ್ಥಾನಗಳನ್ನು ಗೆದ್ದಿದ್ದ ಎನ್‌ಡಿಎ ಒಕ್ಕೂಟದ ಜನಪ್ರಿಯತೆ ಕಡಿಮೆಯಾಗಿರಲಿಲ್ಲ ಮತ್ತು ಸೋನಿಯಾರ ವಿದೇಶಿ ಮೂಲದ ವಿರುದ್ಧ ಚುನಾವಣೆಗೆ ಮೊದಲೇ ರಾಷ್ಟ್ರಾದ್ಯಂತ ಜನಾಭಿಪ್ರಾಯ ಮೂಡಿಸುವಲ್ಲಿ ಬಿಜೆಪಿ ಯಶಸ್ವಿಯಾಗಿತ್ತು. ಅದೇ ವಿಷಯದಲ್ಲೀಗ ಸುಷ್ಮಾ ಸ್ವರಾಜ್ ಮತ್ತು ಉಮಾ ಭಾರತಿ 2ನೇ ಸುತ್ತಿನ ಯುದ್ಧಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ವಿದೇಶಿ ಮೂಲದವರು ಪ್ರಧಾನಿಯಾಗಬಹುದಾ ಎನ್ನುವ ವಿಷಯದಲ್ಲಿ ಕಾನೂನಿನ ಸ್ಪಷ್ಟತೆಯಿರದ ಕಾರಣ, ಇಂದಿರಾ ಗಾಂಧಿಯವರ ಕಾಲದಿಂದಲೂ ಗಾಂಧಿ ಕುಟುಂಬವನ್ನು ಕಾಡುತ್ತಲೇ ಬಂದಿದ್ದ ಡಾ. ಸುಬ್ರಮಣಿಯನ್ ಸ್ವಾಮಿಯವರ ಕಾನೂನು ಹೋರಾಟದ ಭಯವು ಅಂದು ಸೋನಿಯಾರಿಗೂ ಇತ್ತು. ತಾಂತ್ರಿಕವಾಗಿ ಅರ್ಹರಾಗಿದ್ದರೂ, ಮೇಲೆ ತಿಳಿಸಿದ ವಿವಿಧ ಕಾರಣಗಳಿಂದಾಗಿ ಪ್ರಧಾನಿ ಸ್ಥಾನವನ್ನು ಒಪ್ಪುವ ಮನಸ್ಸು ಮಾಡಿರಲಿಲ್ಲ ಸೋನಿಯಾ ಅವರು. ಅಧಿಕಾರವಂತೂ ತಮ್ಮಲ್ಲೇ ಇರುವುದು ಖಾತ್ರಿಯಾದ ಮೇಲೆ, ಹುದ್ದೆಯಿಂದ ಏನಾಗಲಿಕ್ಕಿದೆ ಎನ್ನುವ ಲೆಕ್ಕಾಚಾರ ಅವರಲ್ಲಿ ಇದ್ದಿರಲಿಕ್ಕೂ ಸಾಕು!

ಹಾಗಾಗಿ, ಸೋನಿಯಾ ಅವರು ಪ್ರಧಾನಿ ಸ್ಥಾನವನ್ನು ತ್ಯಾಗಮಾಡಿದ್ದಾರೆ ಎನ್ನುವುದಕ್ಕಿಂತ, 2004-2014ರ ಅವಧಿಯಲ್ಲಿ ಪ್ರಧಾನಿಯಾಗಿದ್ದ ಮನಮೋಹನ್ ಸಿಂಗ್‌ರವರು ಆ ಹುದ್ದೆಯ ಅಧಿಕಾರಗಳನ್ನೂ, ಪ್ರಮುಖ ಸಂದರ್ಭಗಳಲ್ಲಿ ನಿರ್ಧಾರ ತೆಗೆದುಕೊಳ್ಳಬೇಕಾದ ಸ್ವಾತಂತ್ರ್ಯವನ್ನೂ ತ್ಯಾಗಮಾಡಿದ್ದರು ಎಂದರೆ ಹೆಚ್ಚು ಸರಿಯಾದೀತು!

ಬಣ್ಣದ ಲೋಕದ ಒಂದೆರಡು ಕಪ್ಪು-ಬಿಳುಪು ಕಥೆಗಳು

ರಸದೌತಣ

ಯಗಟಿ ರಘು ನಾಡಿಗ್

naadigru@gmail.com

ಇದು 1967ರಲ್ಲಿ ನಡೆದ ಪ್ರಸಂಗ. ಡಾ.ರಾಜ್‌ಕುಮಾರ್ ಮತ್ತು ಕಲ್ಪನಾ ಅಭಿನಯದ 'ಸರ್ವಮಂಗಳಾ' ಚಲನಚಿತ್ರದ ಸನ್ನಿವೇಶವೊಂದರ ಚಿತ್ರೀಕರಣಕ್ಕೆ ತಂಡದವರು ಸಜ್ಜಾಗುತ್ತಿದ್ದರು. ಇದು 'ಚದುರಂಗ' ಎಂದೇ ಖ್ಯಾತರಾಗಿದ್ದ ಸಾಹಿತಿ ಸುಬ್ರಹ್ಮಣ್ಯರಾಜೇ ಅರಸ್ ಅವರ ಅದೇ ಹೆಸರಿನ ಕಾದಂಬರಿಯನ್ನು ಆಧರಿಸಿದ್ದ ಚಿತ್ರ. ಸ್ವತಃ ಚದುರಂಗರೇ ನಿರ್ದೇಶಕರ ಕ್ಯಾಪ್ ತೊಟ್ಟಿದ್ದರು. ಮೈಸೂರಿನ ಪಶ್ಚಿಮಕ್ಕೆ, ಕೊಡಗಿಗೆ ತಾಗಿಕೊಂಡಂತಿರುವ ಕಲ್ಲಹಳ್ಳಿಯ ಪರಿಸರದಲ್ಲಿ 1930ರ ಆಸುಪಾಸಿನಲ್ಲಿ ನಡೆಯುವ ಕಥೆಯನ್ನು ಒಳಗೊಂಡಿತ್ತು 'ಸರ್ವಮಂಗಳಾ'. ಕಾದಂಬರಿಯಾಗಿ ಅಪಾರ ಜನಮೆಚ್ಚುಗೆ ಪಡೆದಿದ್ದ 'ಸರ್ವಮಂಗಳಾ'ಳನ್ನು ಬೆಳ್ಳಿತೆರೆಯ ಮೇಲೂ ಕಣ್ತುಂಬಿಕೊಳ್ಳಲು ಚಿತ್ರರಸಿಕರು ಬಯಸಿದಾಗ, ಕಾದಂಬರಿಕಾರ ಚದುರಂಗರೇ ಚಿತ್ರವನ್ನೂ ನಿರ್ದೇಶಿಸಲಿ ಎಂಬ ಆಶಯ ಹೊಮ್ಮಿತು. ಅಂತೆಯೇ ಈ ನೊಗವನ್ನು ಹೊರಲು ಮುಂದಾದರು ಚದುರಂಗರು.

ಕಥೆಯ ಪ್ರಕಾರ, ಈ ಚಿತ್ರದ ಒಂದು ಸನ್ನಿವೇಶದಲ್ಲಿ, ಕಥಾನಾಯಕಿ ಕಲ್ಪನಾ ಅವರು ಬೆನ್ನಿಗೆ ಉಪ್ಪಿನ ಶಾಖ ಕೊಡಿಸಿಕೊಳ್ಳುವ ದೃಶ್ಯ ಬರುತ್ತದೆ. ಆ ಸಂದರ್ಭವನ್ನು ಕಲ್ಪನಾರಿಗೆ ವಿವರಿಸಲು ಮುಂದಾದ ಚದುರಂಗರು, ''ನೀವು ಈ ದೃಶ್ಯದಲ್ಲಿ ರವಿಕೆಯನ್ನು ಬಿಚ್ಚಿ ಬೆನ್ನಿನ ಭಾಗವನ್ನು ಬೆತ್ತಲೆಯಾಗಿಸಿ ಕೂತಿರಬೇಕು, ಮತ್ತೊಬ್ಬ ಪಾತ್ರಧಾರಿ ಬೆನ್ನಿನ ಹಿಂದಿದ್ದು ಉಪ್ಪಿನ ಶಾಖ ಕೊಡುತ್ತಾರೆ...'' ಎಂದು ಹೇಳುತ್ತಾ ಹೋದರು. ಅಷ್ಟನ್ನೂ ತದೇಕಚಿತ್ತರಾಗಿ ಕೇಳಿಸಿಕೊಂಡ ಮತ್ತು ನೇರನುಡಿಗೆ ಹೆಸರಾಗಿದ್ದ ಕಲ್ಪನಾ ಅವರು ಚದುರಂಗರ ಕಣ್ಣುಗಳನ್ನೇ ದಿಟ್ಟಿಸುತ್ತಾ, ''ಚದುರಂಗರೇ, ನೀವೊಬ್ಬರು ದೊಡ್ಡ ಸಾಹಿತಿ ಮತ್ತು ದೊಡ್ಡ ಮನುಷ್ಯ ಅಂದುಕೊಂಡಿದ್ದೆ. ಆದರೆ ನೀವು ಕೂಡ, ಒಬ್ಬ ಕಮರ್ಷಿಯಲ್ ಫಿಲ್ಮ್ ಡೈರೆಕ್ಟರ್ ಥರ, 'ರವಿಕೆಯನ್ನು ಬಿಚ್ಚಿ ಬೆನ್ನಿನ ಭಾಗವನ್ನು ಬೆತ್ತಲೆಯಾಗಿಸಿ ಕೂರಬೇಕು' ಅನ್ನುತ್ತಿದ್ದೀರಲ್ಲಾ? ಜೊಲ್ಲು ಸುರಿಸಿಕೊಂಡು ನೋಡುವ ಪ್ರೇಕ್ಷಕರಿಗೆಂದು ಚಿತ್ರದಲ್ಲಿ ರಸವತ್ತಾದ ಕ್ಷಣವನ್ನು ತುಂಬಿಸಬೇಕೆಂಬ ಗೀಳಿಗೆ ನೀವೂ ಬಲಿಯಾಗಿಬಿಟ್ಟಿರಾ...?'' ಎಂಬರ್ಥದಲ್ಲಿ ಕೂರಂಬನ್ನು ತೂರಿಬಿಟ್ಟರು.

ವಯಸ್ಸಿನಲ್ಲಿ ತಮಗಿಂತ ಸಾಕಷ್ಟು ವರ್ಷ ಚಿಕ್ಕವರಾಗಿದ್ದ ಕಲ್ಪನಾ ಆಡಿದ ಅಷ್ಟೂ ಮಾತುಗಳನ್ನು ಶಾಂತಚಿತ್ತರಾಗಿಯೇ ಕೇಳಿಸಿಕೊಂಡ ಚದುರಂಗರು ತಮ್ಮ ಸ್ವಭಾವ-ಸಹಜ ನವಿರುದನಿಯಲ್ಲಿ, ''ತಾಯೀ, ಇದು 1930ರ ಆಸುಪಾಸಿನಲ್ಲಿ, ಗ್ರಾಮೀಣ ಪರಿಸರದಲ್ಲಿ ನಡೆಯುವ ಕಥೆ. ನೀವು ಹೇಳಿದಂಥ ಚಪಲ ನನಗಿಲ್ಲ ಕಣವ್ವಾ. ಸಾಕಷ್ಟು ಗಟ್ಟಿಯಾಗಿರುವ 'ಸರ್ವಮಂಗಳಾ' ಕಥೆಯ ಪ್ರಸ್ತುತಿಗೆ ಅಂಥ ಚೀಪ್ ಗಿಮಿಕ್‌ನ ಅಗತ್ಯವೂ ಇಲ್ಲ. ಪಾತ್ರಧಾರಿಯು ನಿಮ್ಮ ಬೆನ್ನಿಗೆ ಉಪ್ಪಿನಶಾಖ ಕೊಡುವಾಗ ನೀವು ಪ್ರೇಕ್ಷಕರಿಗೆ ಆ ಬೆನ್ನುತೋರಿಸಿಕೊಂಡು ಕೂತಿರುವುದಿಲ್ಲ, ಬದಲಿಗೆ ಮನದಾಳದ ನೋವನ್ನು-ಭಾವನೆಗಳನ್ನು ಬಿಂಬಿಸುವ ನಿಮ್ಮ ಮುಖದ ರೇಖೆಗಳನ್ನು ಕ್ಯಾಮರಾ ಸೆರೆಹಿಡಿಯುತ್ತಿರುತ್ತದೆ. ಹಾಗೊಮ್ಮೆ ನಿಮ್ಮ ಬೆತ್ತಲೆ ಮೈಯನ್ನು ತೋರಿಸಬೇಕೆಂಬ ಕೀಳುಕಾಮನೆ ನನ್ನಲ್ಲಿ ಇದ್ದಿದ್ದರೆ, ಬೆನ್ನಿನ ಬದಲು ದೇಹದ ಮುಂಭಾಗವನ್ನು ಬೆತ್ತಲೆಯಾಗಿಸಿ ಅದರ ಮೇಲೆ ಕ್ಯಾಮರಾ ಕಣ್ಣು ಹರಿದಾಡುವಂತೆ ಮಾಡುತ್ತಿದ್ದೆ...'' ಎಂದು ಶಿಷ್ಟಭಾಷೆಯಲ್ಲೇ ಮನವರಿಕೆ ಮಾಡಿಕೊಟ್ಟರು. ಚದುರಂಗರ ಮಾತು ಮುಗಿಯುವ ಹೊತ್ತಿಗಾಗಲೇ ಕಲ್ಪನಾರ ಕಣ್ಣುಗಳು ಅಕ್ಷರಶಃ ಕೊಳಗಳಾಗಿದ್ದವು. ''ನನ್ನನ್ನು ಕ್ಷಮಿಸಿಬಿಡಿ ಚದುರಂಗರೇ, ಚಿತ್ರೋದ್ಯಮದಲ್ಲಿ ಇಷ್ಟೂ ವರ್ಷ ಕೆಲವೊಂದು ಆಷಾಢಭೂತಿಗಳನ್ನು ನೋಡಿಕೊಂಡೇ, ನೋವನ್ನು ನುಂಗಿಕೊಂಡೇ ಬಂದ ನಾನು, ನೀವೂ ಹಾಗೆಯೇ ಅಂತ ತಪ್ಪಾಗಿ ತಿಳ್ಕೊಂಡುಬಿಟ್ಟಿದ್ದೆ, ನನ್ನ ಉದ್ಧಟತನವನ್ನು ಮನ್ನಿಸಿ...'' ಎಂದು ಹೇಳಿ ಎದ್ದುನಿಂತು ಕೈಮುಗಿದರು!

''ಪರವಾಗಿಲ್ಲ ಕಣಮ್ಮಾ, ನಿಮ್ಮ ಸಂದೇಹ ಪರಿಹಾರವಾಯ್ತಲ್ಲಾ, ನನಗಷ್ಟು ಸಾಕು'' ಎನ್ನುತ್ತಾ ಚದುರಂಗರು ಮುಂದಿನ ದೃಶ್ಯದ ಸಂಯೋಜನೆಗೆಂದು ಛಾಯಾಗ್ರಾಹಕರ ಜತೆ ಸಮಾಲೋಚಿಸಲು ತೆರಳಿದರು. ಇತ್ತ ಕಲ್ಪನಾ ಅವರು ಬಹಳ ಕಾಲದವರೆಗೂ ಚದುರಂಗರನ್ನೇ ಕೃತಜ್ಞತಾಪೂರ್ವಕ ಭಾವದಿಂದ ನೋಡುತ್ತಿದ್ದರು...

1968ರಲ್ಲಿ 'ಸರ್ವಮಂಗಳಾ' ಬಿಡುಗಡೆಯಾಯಿತು. 1930ರ ಕಾಲಘಟ್ಟದಲ್ಲಿನ ಕಲ್ಲಹಳ್ಳಿಯ ಪರಿಸರದ ದಟ್ಟ ವಿವರವನ್ನು, ಹರೆಯದ ಬೆಚ್ಚನೆಯ ಭಾವನೆಗಳು, ಭಗ್ನಪ್ರೇಮ, ಸಮಾಜದ ನೈತಿಕತೆಯ ಚೌಕಟ್ಟುಗಳ ಚಿತ್ರಣದೊಂದಿಗೆ ಹದವಾಗಿ ಮಿಳಿತಗೊಳಿಸಿಕೊಂಡಿದ್ದ, ಅದುವರೆಗೂ ಪುಸ್ತಕ ರೂಪದಲ್ಲಿ ಓದುಗರನ್ನು ರಂಜಿಸಿದ್ದ 'ಸರ್ವಮಂಗಳಾ', ರಾಜ್‌ಕುಮಾರ್ ಹಾಗೂ ಕಲ್ಪನಾರ ಶ್ರೇಷ್ಠ ಅಭಿನಯದಿಂದಾಗಿ ಚಿತ್ರರಸಿಕರನ್ನೂ ಮನರಂಜಿಸಿದಳು. ರಾಜ್ಯ ಸರಕಾರದ ವತಿಯಿಂದ 'ತೃತೀಯ ಅತ್ಯುತ್ತಮ ಚಿತ್ರ' ಪುರಸ್ಕಾರವನ್ನು ನಿರ್ಮಾತೃಗಳಿಗೆ ದಕ್ಕಿಸಿಕೊಟ್ಟಿದ್ದರ ಜತೆಗೆ, ಉತ್ತಮ ಕಥೆ ಹಾಗೂ ಸಂಭಾಷಣೆಗೆಂದು ಚದುರಂಗರಿಗೆ 2 ಪ್ರಶಸ್ತಿಗಳನ್ನು ಮೊಗೆದುಕೊಟ್ಟಳು 'ಸರ್ವಮಂಗಳಾ'...

''ಸಿನಿಮಾ ಮಾಡೋಣ ಅಂದ್ರೆ, ಕನ್ನಡದಲ್ಲಿ ಒಳ್ಳೆಯ ಕಥೆಗಳೇ ಸಿಗೋದಿಲ್ಲ'' ಎಂದು ಕುಂಟುನೆಪ ಹೇಳುವವರು ಇಂದು ಸಾಕಷ್ಟು ಸಿಗುತ್ತಾರೆ. ಅನರ್ಘ್ಯ ಮುತ್ತುಗಳನ್ನು ಹೆಕ್ಕಬೇಕು ಎಂದರೆ ಸೊಂಟಕ್ಕೆ ಹಗ್ಗಬಿಗಿದುಕೊಂಡು ಕಡಲಾಳಕ್ಕೆ ಧುಮುಕಲೇಬೇಕು ಎಂಬ ಸಾರ್ವಕಾಲಿಕ ಸತ್ಯವನ್ನು ಇಂಥ ಪ್ರಭೃತಿಗಳಿಗೆ ಮನವರಿಕೆ ಮಾಡಿಕೊಡುವವರು ಯಾರು? ಆದರೆ, ಇಂಥ ಸಾಧ್ಯತೆಯನ್ನು 1968ರಲ್ಲೇ ತೋರಿಸಿಕೊಟ್ಟವರು ಚದುರಂಗರು. ಈ ಪರಂಪರೆಗೆ ಸಾಥ್ ಕೊಟ್ಟವರಲ್ಲಿ ಪುಟ್ಟಣ್ಣ ಕಣಗಾಲರು, ಎಸ್.ಸಿದ್ದಲಿಂಗಯ್ಯ, ದೊರೆ-ಭಗವಾನ್, ಕೆ.ವಿ.ಜಯರಾಂ ಮುಂತಾದ ನಿರ್ದೇಶಕರೂ ಸೇರಿದ್ದಾರೆ ಎಂಬುದನ್ನು ಮರೆಯಲಾಗದು.

• • •

ಈಗ ಹೇಳಲಿರುವ ಪ್ರಸಂಗವು ಈಗಾಗಲೇ ಬಹುತೇಕರು ಮೆಲುಕುಹಾಕಿರುವಂಥದ್ದೇ. ಆದರೂ, ಆ ಊಟವನ್ನು ಮಿಸ್ ಮಾಡಿಕೊಂಡವರಿಗಾಗಿ ಮತ್ತೊಮ್ಮೆ ಈ ಕೈತುತ್ತು! ಅದೊಂದು ಭಕ್ತಿಪ್ರಧಾನ ಚಲನಚಿತ್ರದ ನಿರ್ಮಾಣ-ಪೂರ್ವ ಸಂದರ್ಭ. ಚಿತ್ರದ ಚಿತ್ರೀಕರಣಕ್ಕೆ ತೆರಳುವುದಕ್ಕೂ ಮೊದಲು ಗೀತೆಗಳ ರಚನೆ ಆಗಬೇಕಿತ್ತು. ಆದರೆ ಗೀತರಚನೆಕಾರರು ಎಷ್ಟು ತಿಣುಕಾಡಿದರೂ ಪದಗಳೇ ಹೊಮ್ಮುತ್ತಿಲ್ಲ. ಅಷ್ಟೊತ್ತಿಗಾಗಲೇ ಸಾಕಷ್ಟು ಚಿತ್ರಗಳಿಗೆ ಕಥೆ-ಚಿತ್ರಕಥೆ-ಸಂಭಾಷಣೆ-ಗೀತೆ-ನಿರ್ದೇಶನವನ್ನು ನೀಡಿದ್ದ ದೈತ್ಯಪ್ರತಿಭೆ ಅದು, ಆದರೂ ಅಂದೇಕೋ ಏನೂ ಗಿಟ್ಟಲಿಲ್ಲ. ಬಹಳ ಹೊತ್ತಿನಿಂದ ಅವರ ತೊಳಲಾಟವನ್ನು ನೋಡುತ್ತಲೇ ಇದ್ದ ಸಂಗೀತ ನಿರ್ದೇಶಕರು, ''ಒಂದು ಸಲ ದಮ್ ಹೊಡಿ, ಏನಾದ್ರೂ ಐಡಿಯಾ ಹೊಳೆಯಬಹುದು'' ಎಂದು ತಿದಿಯೊತ್ತಿದರು. ಅಂತೆಯೇ ಸದರಿ ಚಿತ್ರಸಾಹಿತಿ ಸಿಗರೇಟನ್ನು ಹಚ್ಚಿ ತುಟಿಗಿಟ್ಟುಕೊಂಡರು. ದಮ್ ಎಳೆಯುವಾಗೊಮ್ಮೆ ಸಿಗರೇಟಿನ ಕಿಡಿ ಬಿದ್ದು ಚರ್ಮ ಸುಟ್ಟುಹೋಯಿತು. ಇತ್ತ ಸಂಗೀತ ನಿರ್ದೇಶಕರು ಗಾಬರಿಗೊಂಡರೆ, ಗೀತಸಾಹಿತಿಯ ಮುಖದಲ್ಲಿ ಮಂದಹಾಸ ಅರಳಿತ್ತು. ಕಾರಣ, ಗೀತೆಯ ಆರಂಭಿಕ ಸಾಲು ಮನದಲ್ಲಿ ಸ್ಫುರಿಸಿತ್ತು. ಅದುವೇ, ''ಮಾನವ ದೇಹವು ಮೂಳೆ ಮಾಂಸದ ತಡಿಕೆ, ಇದರ ಮೇಲಿದೆ ತೊಗಲಿನ ಹೊದಿಕೆ, ತುಂಬಿದೆ ಒಳಗೆ ಕಾಮಾದಿ ಬಯಕೆ'' ಎಂಬ ಫಿಲಾಸಫಿಕಲ್ ಹೂರಣದ ಒಬ್ಬಟ್ಟು! ಸಿಗರೇಟಿನ ಕಿಡಿಯನ್ನು ಹಾಗೆ ಚರ್ಮದ ಮೇಲೆ ಬೀಳಿಸಿಕೊಂಡು ಸುಟ್ಟುಕೊಂಡು ಇಂಥ ಅನುಪಮ ಗೀತೆಯನ್ನು ಕಟ್ಟಿಕೊಟ್ಟವರು ಅಭಿಜಾತ ಪ್ರತಿಭೆ ಹುಣಸೂರು ಕೃಷ್ಣಮೂರ್ತಿಯವರು. ಅದಕ್ಕೆ ಲಗತ್ತಾದ ರಾಗ ಸಂಯೋಜಿಸಿ, ಸಾಹಿತ್ಯದ ಮೌಲ್ಯವನ್ನು ಮತ್ತಷ್ಟು ಉನ್ನತೀಕರಿಸಿದವರು ಸಂಗೀತ ನಿರ್ದೇಶಕ ಜಿ.ಕೆ.ವೆಂಕಟೇಶ್ ಅವರು. ಈ ಎರಡೂ ರಸಗಳನ್ನು ಸಮರ್ಥವಾಗಿಯೇ ಮೈಗಿಳಿಸಿಕೊಂಡು ಅಭಿನಯದಲ್ಲಿ ಸಮರ್ಥ ರಸಾನುಭೂತಿ ಮೂಡಿಸಿದವರು ಡಾ.ರಾಜ್‌ಕುಮಾರ್ ಅವರು! ಆ ಚಿತ್ರವೇ 'ಭಕ್ತ ಕುಂಬಾರ' ಎಂಬುದು ನಿಮಗೀಗಾಗಲೇ ಗೊತ್ತಾಗಿರಲಿಕ್ಕೂ ಸಾಕು!

ಸಾಕಷ್ಟು ತಿಂಗಳ ಕಾಲ ಧೇನಿಸಿ ಹಾಡು ಬರೆಯುವುದಕ್ಕೆ ಅನುವುಮಾಡಿಕೊಡದ, ಆಶುಸಾಹಿತ್ಯಕ್ಕೇ ಬಹುತೇಕ ಮಣೆ ಹಾಕಬೇಕಾಗಿ ಬರುವ, ಇಷ್ಟು ಸಾಲದೆಂಬಂತೆ ಪೂರ್ವಭಾವಿಯಾಗಿ ಸಿದ್ಧಪಡಿಸಲಾದ ಟ್ಯೂನ್‌ಗಳಿಗೆ 'ಸಂತೆಯ ಹೊತ್ತಿಗೆ ಮೂರು ಮೊಳ ನೇಯ್ದಂತೆ' ಹಾಡಿನ ಸಾಲುಗಳನ್ನು ಹೊಸೆಯಬೇಕಾದ ಅನಿವಾರ್ಯತೆಯಿರುವ ಚಲನಚಿತ್ರರಂಗದಲ್ಲಿ, ಇಂಥ ಎಲ್ಲ ಸವಾಲುಗಳ ನಡುವೆಯೂ ಅನುಪಮ ಗೀತೆಗಳನ್ನು ಹುಣಸೂರರು ಕಟ್ಟಿಕೊಟ್ಟರೆಂದರೆ, ಅವರ ಓದಿನ ಆಳ, ಅಧ್ಯಯನದಲ್ಲಿನ ತಾಳ್ಮೆ ಮತ್ತು ಏಕಾಗ್ರತೆಯ ತಾಕತ್ತು ಅದಿನ್ನೆಷ್ಟಿರಬೇಕು ಎಂಬುದನ್ನೊಮ್ಮೆ ಕಲ್ಪಿಸಿಕೊಳ್ಳಿ.

ತಮಾಷೆಯೆಂದರೆ, ಹುಣಸೂರು ಕೃಷ್ಣಮೂರ್ತಿಯವರ ಈ 'ಸಿಗರೇಟು ಕಿಡಿ'ಯ ಪ್ರಸಂಗವನ್ನು ಕೇಳಿ ತಿಳಿದುಕೊಂಡ ಕೆಲವರು, ಗೀತೆ ರಚನೆಯ ವೇಳೆ 'ಸ್ಫೂರ್ತಿಗೆ' ಎಂದು ನೆಪ ಹೇಳಿ ಪ್ಯಾಕುಗಟ್ಟಲೆ ಸಿಗರೇಟು ಸೇದಿದ್ದಿದೆ. ಆದರೆ ಇಂಥ ಬಹುತೇಕ ಸಂದರ್ಭಗಳಲ್ಲಿ ಸೃಷ್ಟಿಯಾಗಿರುವುದು 'ಸಿಗರೇಟಿನ ಬೂದಿಯಂಥ' ಸಾಹಿತ್ಯವಷ್ಟೇ ಎಂಬುದು ವಿಪರ್ಯಾಸ!

ಗೀತೆಯೊಂದರ ರಚನೆಯ ಹಿಂದೆ ಇರುವ ಶ್ರಮವೆಷ್ಟು ಎಂಬುದನ್ನು ಅರ್ಥಮಾಡಿಕೊಳ್ಳದ ಚಿತ್ರೋದ್ಯಮದ ಕೆಲವೊಂದು ಬೃಹಸ್ಪತಿಗಳು Two Minute Noodles ತಯಾರಿಸುವ ರೀತಿಯಲ್ಲೇ ಗೀತೆಯನ್ನು ಹೊಸೆಯಲು ಹೇಳಿದಾಗ, ಹೊಟ್ಟೆಪಾಡಿನ ಕಾರಣಕ್ಕೋ, ಸ್ನೇಹದ ಹಂಗಿಗೋ, ಅವಕಾಶ ಕೊಡುತ್ತಿದ್ದಾರಲ್ಲಾ ಎಂಬ ದಾಕ್ಷಿಣ್ಯಕ್ಕೋ ಹಾಗೆ ಆಶುಕವಿತೆಗಳನ್ನು ರಚಿಸಿದವರಲ್ಲಿ ಎದ್ದುಕಾಣುವ ಹೆಸರು ಚಿ.ಉದಯಶಂಕರ್ ಅವರದ್ದು. ಹಾಡಿನ ಸಂದರ್ಭವನ್ನು ಒಮ್ಮೆ ವಿವರಿಸಿ ಟ್ಯೂನ್ ನೀಡಿಬಿಟ್ಟರೆ ಒಂದರ ಹಿಂದೆ ಒಂದರಂತೆ ಮೂರ್‍ನಾಲ್ಕು ಗೀತೆಗಳನ್ನೂ, ಅದಕ್ಕೆ ಸಾಕಷ್ಟು 'ಪರ್ಯಾಯ ಪಲ್ಲವಿ'ಗಳನ್ನೂ ಮೊಗೆದು ಕೊಡುತ್ತಿದ್ದ ಸಾಹಿತ್ಯದೈತ್ಯ ಅವರು. ''ಚಿ.ಉದಯಶಂಕರ್ ಅವರು ತಮ್ಮದೇ 10 ಗೀತೆಗಳನ್ನು ಇಟ್ಟುಕೊಂಡು 11ನೆಯ ಗೀತೆಯನ್ನು ರಚಿಸಿಬಿಡುತ್ತಾರೆ'' ಎಂಬ ಟೀಕೆಗಳು ಈ ಸಂದರ್ಭದಲ್ಲಿ ಹೊಮ್ಮಿದರೂ ನೊಂದುಕೊಳ್ಳದೆ, ಅಕ್ಷರಕೃಷಿಯನ್ನೇ ನೆಚ್ಚಿದ್ದ ಜೀವವದು. ''ನಿಮ್ಮ ಹಾಡುಗಳಲ್ಲಿ 'ಸಂತೋಷ-ಉಲ್ಲಾಸ', 'ಆಟ-ನೋಟ', 'ಆಸೆ-ಭಾಷೆ' ಇಂಥ ಸರಳ ಪದಗಳೇ ತುಂಬಿಕೊಂಡಿರುತ್ತವಲ್ಲಾ? ಗಹನ ಸಾಹಿತ್ಯವನ್ನು ನೀಡೋಕ್ಕೆ ನಿಮಗೆ ಬರೋಲ್ವಾ?'' ಎಂದೂ ಕೆಲವರು ಉದಯಶಂಕರರ ಕಾಲೆಳೆದಿದ್ದುಂಟು. ಆಗೆಲ್ಲಾ ಉದಯಶಂಕರ್, ''ನೋಡೀ, ಚಲನಚಿತ್ರವನ್ನು ವೀಕ್ಷಿಸಲು ಅಕ್ಷರಸ್ಥರು, ಭಾರಿ ವಿದ್ಯಾವಂತರು ಮಾತ್ರವೇ ಬರೋಲ್ಲ; ಓದು-ಬರಹ ಅರಿಯದವರೂ ಚಿತ್ರಮಂದಿರದಲ್ಲಿ ಸಾಕಷ್ಟು ತುಂಬಿಕೊಂಡಿರ್ತಾರೆ. ನಾನು ಹಾಡು ಬರೆಯುವಾಗ 'ತಿಣುಕಿ ತಿಣುಕಿ' ಬರೆದ್ರೆ, ಇಂಥ ಪ್ರೇಕ್ಷಕರು ಅದನ್ನು ಅರ್ಥಮಾಡಿಕೊಳ್ಳುವಾಗಲೂ ತಿಣುಕಬೇಕಾಗುತ್ತೆ. ಹೀಗಾಗಿ ಲಭ್ಯವಿರುವ ಸಮಯದಲ್ಲೇ ಸರಳ ಪದಗಳಿಂದ ಹಾಡು ಕಟ್ಟೋದು ನನ್ನ ಶೈಲಿ'' ಎಂದು ಉತ್ತರಿಸಿದ್ದುಂಟು. ಈ ಕಾರಣಕ್ಕೇ ಇರಬೇಕು, ''ಎತ್ತಣ ಮಾಮರ ಎತ್ತಣ ಕೋಗಿಲೆ, ಎತ್ತಣಿಂದೆತ್ತ ಸಂಬಂಧವಯ್ಯಾ?'' ಎಂಬ ಅಲ್ಲಮಪ್ರಭುಗಳ ವಚನವನ್ನು ಓದಲರಿಯದವರು, ''ಮಾಮರವೆಲ್ಲೋ ಕೋಗಿಲೆ ಯೆಲ್ಲೋ, ಏನೀ ಸ್ನೇಹ ಸಂಬಂಧ, ಎಲ್ಲಿಯದೋ ಈ ಅನುಬಂಧ'' (ಚಿತ್ರ: ದೇವರಗುಡಿ) ಎಂಬ ಹಾಡನ್ನು ಸುಲಭವಾಗಿ ಗುನುಗುತ್ತಾರೆ, ಅದರ ಸಾರವನ್ನು ಸಾಧ್ಯವಾದಷ್ಟರ ಮಟ್ಟಿಗೆ ಗ್ರಹಿಸುತ್ತಾರೆ. ಅಂತೆಯೇ, ''ನೆಲ ಹೊತ್ತಿ ಉರಿದಡೆ ನಿಲಬಹುದಲ್ಲದೆ, ಧರೆ ಹೊತ್ತಿ ಉರಿದಡೆ ನಿಲಲುಬಾರದು'' ಎಂಬ ಬಸವಣ್ಣನವರ ವಚನವು 'ಎರಡು ಕನಸು' ಚಿತ್ರದ 'ಬಾಡಿಹೋದ ಬಳ್ಳಿಯಿಂದ' ಗೀತೆಯಲ್ಲಿ ''ಹಣತೆಯಲ್ಲಿ ದೀಪ ಉರಿಯೆ ಬೆಳಕಿನಲ್ಲಿ ಬಾಳುವೆ, ಧರೆಯೆ ಹತ್ತಿ ಉರಿಯುವಾಗ ಬದುಕಲೆಲ್ಲಿ ಓಡುವೆ?'' ಎಂಬ ಸಾಲಾಗಿ ಚಿತ್ರಪ್ರೇಮಿಗಳ ನಾಲಿಗೆಯಲ್ಲೂ ನಲಿದಾಡುತ್ತದೆ. ಈ ಎರಡೂ ಗೀತೆಗಳನ್ನು ರಚಿಸಿದವರು ಚಿ. ಉದಯಶಂಕರ್ ಅವರೇ!

ಚದುರಂಗರಂಥ ಸಾಹಿತಿ ಮತ್ತು ನಿರ್ದೇಶಕರಿಗೆ, ಹುಣಸೂರು ಕೃಷ್ಣಮೂರ್ತಿ ಹಾಗೂ ಚಿ.ಉದಯಶಂಕರರಂಥ ಚಿತ್ರಸಾಹಿತಿಗಳಿಗೆ ಜನ್ಮವಿತ್ತ 'ಕರುನಾಡು' ನಮ್ಮದು ಎಂಬುದು ಹೆಮ್ಮೆಪಡುವ ಸಂಗತಿಯಲ್ಲವೇ?

ದಕ್ಷಿಣ ಭಾರತದ ಹೌಸ್ ವೈಫ್- ಸೌಟ್ ಇಂಡಿಯನ್

ಸಿನಿಗನ್ನಡ

ತುಂಟರಗಾಳಿ

ಹರಿ ಪರಾಕ್

vveditoped@gmail.com

ಸ್ಟಾರ್‌ಗಳಿಲ್ಲದ ಸಿನಿಮಾ ಮಾಡುವಾಗ ನಿರ್ದೇಶಕರು ಸಾಮಾನ್ಯವಾಗಿ ಸ್ವಲ್ಪ ಸೇಫ್ ಅನ್ನಿಸುವಂಥ ಸಬ್ಜೆಕ್ಟ್ ತಗೋತಾರೆ. ಆದರೆ ಮೊನ್ನೆ ಬಿಡುಗಡೆಯಾದ 'ಫಾರೆಸ್ಟ್' ಸಿನಿಮಾದಲ್ಲಿ ನಿರ್ದೇಶಕ ಚಂದ್ರಮೋಹನ್ ಅವರು ವೀರಪ್ಪನ್ ಇದ್ದ ಕಾಡಿನೊಳಗೆ ಹೋಗಿ, ಅನ್‌ಸೇಫ್ ಅನ್ನಿಸಿಕೊಳ್ಳುವ ಘಟನೆಗಳಿಗೆ ಸಾಕ್ಷಿ ಆಗೋ ನಾಲ್ಕೈದು ಜನರ ಕಥೆ ಹೇಳಿದ್ದಾರೆ. ಈ ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಇತಿಹಾಸ ಸೃಷ್ಟಿಸುತ್ತೋ ಇಲ್ವೋ ಗೊತ್ತಿಲ್ಲ, ಆದರೆ ಈ ಚಿತ್ರಕ್ಕೆ ಒಂದು ಇತಿಹಾಸ ಇದೆ. ಪೊಲೀಸರಿಗೆ ವರ್ಷಾನುಗಟ್ಟಲೆ ಚಳ್ಳೆಹಣ್ಣು ತಿನ್ನಿಸಿದರೂ, ಕೊನೆಗೆ ಪೊಲೀಸರು ಅವನನ್ನು ಅರೆಸ್ಟ್ ಮಾಡೋಕೆ ಆಗದಿದ್ರೂ, ಅವರ ಕೈಯಲ್ಲೇ ಸಾವಿಗೀಡಾಗಿ 'ರೆಸ್ಟ್ ಇನ್ ಪೀಸ್' ಎನ್ನಿಸಿಕೊಂಡ ಕಾಡುಗಳ್ಳ ವೀರಪ್ಪನ್‌ನ ಹಿನ್ನೆಲೆ ಫಾರೆಸ್ಟ್ ಸಿನಿಮಾಗೆ ಇದೆ. ಚಿತ್ರದ ಪ್ರಮುಖ ಪಾತ್ರಗಳಿಗೆ 'ಊರು ಹೋಗು' ಅನ್ನುವಷ್ಟು ವಯಸ್ಸಾಗಿಲ್ಲದಿದ್ದರೂ, 'ಕಾಡು ಬಾ' ಅಂತಿದೆ ಅನ್ನುವಂಥ ಸನ್ನಿವೇಶ ಎದುರಾಗುತ್ತೆ. ಕಡುಬಡವರನ್ನು ಕಾಡು ಶ್ರೀಮಂತರನ್ನಾಗಿ ಮಾಡುತ್ತೆ ಅನ್ನೋ ಆಸೆ. ಅವರೆಲ್ಲ ಬಂಗಾರದ ಮೇಲಿನ ಆಸೆಯಿಂದ, ತಮಗೆ ಸಿಗುವ ಗೋಲ್ಡನ್ ಆಪರ್ಚುನಿಟಿಯನ್ನ ಬಳಸಿಕೊಂಡು ಅದೃಷ್ಟ ಪರೀಕ್ಷೆಗೆ ಜಂಗಲ್‌ಗೆ ಇಳಿಯುವ ಕಥೆ ಒಂಥರಾ ಜಂಗ್ಲಿ ರಮ್ಮಿ ಥರ ಅನ್ನೋದು. ಆದ್ರೆ ಕೊನೆಯಲ್ಲಿ ಜಾಕ್‌ಪಾಟ್ ಹೊಡೆಯುತ್ತಾ ಇಲ್ವಾ ಅನ್ನೋದು ಸಸ್ಪೆನ್ಸ್. ಕ್ಲೈಮ್ಯಾಕ್ಸ್‌ನಲ್ಲಿ ಪ್ರೇಕ್ಷಕನಿಗೆ ಸರ್‌ಪ್ರೈಸ್ ಮೇಲೆ ಸರ್‌ಪ್ರೈಸ್ ಕೊಟ್ಟು ಪ್ರೇಕ್ಷಕ ಪ್ರಭುವಿನಿಂದ ಮನರಂಜನೆ ವಿಷಯದಲ್ಲಿ ಫಸ್ಟ್ ಪ್ರೈಸ್ ಗಿಟ್ಟಿಸಿಕೊಳ್ಳುತ್ತಾರೆ ನಿರ್ದೇಶಕ ಚಂದ್ರಮೋಹನ್. ಯಾಕಂದ್ರೆ ಪ್ರೇಕ್ಷಕನಿಗೆ ಅವನು ಟಿಕೆಟ್‌ಗೆ ಕೊಟ್ಟ ಪ್ರೈಸ್‌ಗಿಂತ ಹೆಚ್ಚೇ ಮಜಾ ಕೊಟ್ಟಿದ್ದಾರೆ ಅವರು. ಕಾಡಿನಲ್ಲಿ ನಡೆಯೋ ಕಥೆ ಆದ್ರೂ, 'ಕಾಡ ನೋಡ ಹೋದ ಕವಿತೆಯೊಡನೆ ಬಂದೆ' ಎನ್ನುವಂಥ ಕವನವಾಸ ಇಲ್ಲಿಲ್ಲ. ಇಲ್ಲಿ ಬರೀ ವನವಾಸ. ಅದರ ಜತೆಗೆ ಭೂತ, ಪ್ರೇತಗಳ ಸಹವಾಸ. ವೀರಪ್ಪನ್‌ನ ಅಟ್ಟಹಾಸ. ಒಟ್ನಾರೆ ಹೇಳೋದಾದ್ರೆ, ಕಾಡಿನಲ್ಲಿ ನಡೆಯುವ ಘಟನೆಗಳ ಸರಮಾಲೆ ಆಗಿರುವ ಫಾರೆಸ್ಟ್ ಅನ್ನೋ ಈ ಸಿನಿಮಾ, ಚಂದ್ರಮೋಹನ್ ಅವರು ಮಾಡಿರುವ ಕಾಡು-ವ ಸಿನಿಮಾ ಅಂತ ಖಂಡಿತಾ ಹೇಳಬಹುದು.

ಲೂಸ್ ಟಾಕ್

ಶ್ರೀರಾಮುಲು

- **ಏನಿದು, ನಿಮ್ಮ ಹಾಗೂ ಜನಾರ್ದನ್ ರೆಡ್ಡಿ ಅವರ ಮಧ್ಯೆ ಜಗಳ?**
- ಏನಿಲ್ಲ, ಇತ್ತೀಚಿಗೆ 'ಲವ್ ರೆಡ್ಡಿ' ಅಂತ ಸಿನಿಮಾ ಬಂದಿತ್ತಲ್ಲ, ಅದಕ್ಕೆ ವಿರುದ್ಧವಾಗಿ 'ಹೇಟ್ ರೆಡ್ಡಿ' ಅಭಿಯಾನ ಶುರುಮಾಡಿದ್ದೀನಿ ಅಷ್ಟೇ.
- **ಓಹೋ, ಸ್ವಾಭಿಮಾನಿಯ ಅಭಿಯಾನ. ಆದ್ರೆ ಎಲ್ ಹೋಯ್ತು ಅಭಿಮಾನ? ನೀವಿಬ್ರು ತುಂಬಾ ಕ್ಲೋಸ್ ಆಗಿದ್ರಲ್ಲ.. ಏನಾಯ್ತು ಇದ್ದಕ್ಕಿದ್ದಂಗೆ?**
- ಕ್ಲೋಸ್ ಆಗಿದ್ದೆಲ್ಲ ಈಗ ಕ್ಲೋಸ್ಡ್ ಚಾಪ್ಟರ್.. ಬಿಟ್ಹಾಕಿ..
- **ಇತ್ತೀಚೆಗೆ ನೀವು ಜನಾರ್ದನ ರೆಡ್ಡಿ ಅವರ ಮಾತು ಕೇಳ್ತಾ ಇಲ್ವಂತೆ?**
- ಅವರ ಮಾತು ಕೇಳೋಕೆ ನಾನೇನು ಅವರ ಸೇವಕ ಅಲ್ಲ, ನಾನು ಜನತಾ ಜನಾರ್ದನನ ಸೇವೆ ಮಾಡೋಕೆ ರಾಜಕೀಯಕ್ಕೆ ಬಂದಿರೋದು, ಜನಾರ್ದನನ ಸೇವೆ ಮಾಡೋಕೆ ಅಲ್ಲ..
- **ನೀವು ರಾಜಕೀಯಕ್ಕೆ ಬಂದಿದ್ದೇ ಜನಾರ್ದನ್ ರೆಡ್ಡಿ ಅವರ ಅಕೌಂಟ್‌ನಿಂದ ಅಂತೆ?**
- ನಂಗೆ ಮೋದಿ ಅವರ ಜನಧನ್ ಅಕೌಂಟ್ ಅಷ್ಟೇ ಗೊತ್ತು, ಜನಾರ್ದನ್ ಅಕೌಂಟ್ ಎಲ್ಲ ಗೊತ್ತಿಲ್ಲ..
- **ಅಂದ ಹಾಗೆ, ನೀವು ಕಾಂಗ್ರೆಸ್‌ಗೆ ಹೋಗ್ತೀರಿ ಅನ್ನೋ ಸುದ್ದಿ ಇದೆಯಲ್ಲ?**
- ರೀ, ಶ್ರೀರಾಮುಲು ಅಂತ ಹೆಸರಿಟ್ಟುಕೊಂಡು, ಶ್ರೀರಾಮನ ಪಕ್ಷ ಬಿಜೆಪಿ ಬಿಟ್ಟು, ಕಾಂಗ್ರೆಸ್‌ಗೆ ಹೆಂಗ್ರಿ ಹೋಗ್ಲಿ?

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ನ್ಯಾಷನಲ್ ಹೈವೇನಲ್ಲಿ ಎರಡು ಕಾರುಗಳು ಡಿಕ್ಕಿಯಾಗಿ ದೊಡ್ಡ ಅಪಘಾತವೇ ಆಯಿತು. ಕಾರು ಚಲಾಯಿಸುತ್ತಿದ್ದ ಖೇಮು ಕೆಳಗಿಳಿದು ಬಂದು ನೋಡಿದ. ಇನ್ನೊಂದು ಕಾರಿನಲ್ಲಿದ್ದಿದ್ದು ಒಂದು ಹುಡುಗಿ. ಹಾಗೆ ನೋಡಿದರೆ ಖೇಮುದೇನೂ ತಪ್ಪಿರಲಿಲ್ಲ. ಆಕೆಯೇ ಫಾಸ್ಟ್ ಆಗಿ ರಾಂಗ್ ಸೈಡಲ್ಲಿ ಬಂದು ಗುದ್ದಿದ್ದಳು. ಇಬ್ಬರ ಕಾರಿಗೂ ಡ್ಯಾಮೇಜ್ ಆಗಿತ್ತು. ಖೇಮು ಅವಳ ಬಳಿ ಎಲ್ಲದರ ಖರ್ಚು ವಸೂಲಿ ಮಾಡಬೇಕು ಎಂದುಕೊಂಡು ಬಂದ. ಆದರೆ ಹುಡುಗಿಯನ್ನ ನೋಡಿ ಒಂದು ಕ್ಷಣ ಮೈಮರೆತ. ಅಷ್ಟು ಚೆನ್ನಾಗಿದ್ಲು ಹುಡುಗಿ. ಅವಳು ಸೀದಾ ಇವನ ಬಳಿ ಬಂದವಳೇ, ಕಾಮ್ ಆಗಿ ಮಾತಾಡಿದಳು. ''ಇಲ್ನೋಡಿ, ಇಬ್ಬರ ಕಾರೂ ಸಿಕ್ಕಾಪಟ್ಟೆ ಡ್ಯಾಮೇಜ್ ಆಗಿದೆ. ಆದರೆ ನಮಗಿಬ್ಬರಿಗೂ ಏನೂ ಆಗಿಲ್ಲ. ಇದರರ್ಥ ಏನು?'' ಅಂತ ಕೇಳಿದಳು. ''ಏನು?'' ಅಂದ ಖೇಮು. ''ನೋಡಿ, ನಮ್ಮಿಬ್ಬರನ್ನು ಸೇರಿಸೋಕೆ ಅಂತನೇ ದೇವರು ಈ ರೀತಿ ಮಾಡಿದ್ದಾನೆ. ಅವನ ಮನಸ್ಸಿನಲ್ಲಿ ನಾವಿಬ್ಬರೂ ಜತೆಯಾಗಿ ಜೀವನ ಮಾಡಬೇಕು ಅನ್ನೋ ಆಸೆ ಇದೆ ಅನ್ನಿಸುತ್ತೆ. ಹಾಗಾಗಿ ನಮ್ಮನ್ನ ಈ ರೀತಿ ಭೇಟಿ ಮಾಡಿಸಿದ್ದಾನೆ'' ಅಂತ ರೊಮ್ಯಾಂಟಿಕ್ ಆಗಿ ಹೇಳಿದಳು. ಅದನ್ನು ಕೇಳಿ ಖೇಮು ಒಂದೇ ನಿಮಿಷದಲ್ಲಿ ಅವಳ ಕಡೆ ಆಕರ್ಷಿತನಾದ. ಆ ಹುಡುಗಿ ಮತ್ತೆ ಹೇಳಿದಳು, ''ಅಲ್ನೋಡಿ, ನನ್ನ ಕಾರು ಅಷ್ಟೊಂದ್ ಡ್ಯಾಮೇಜ್ ಆಗಿದ್ದರೂ, ಅದರಲ್ಲಿದ್ದ ಈ ವಿಸ್ಕಿ ಬಾಟಲ್ ಮಾತ್ರ ಹಾಗೇ ಇದೆ. ಇದರರ್ಥ, ದೇವರು ನಮ್ಮ ಜೀವನದ ಈ ಪ್ರಮುಖ ಗಳಿಗೆಯನ್ನು ಎಂಜಾಯ್ ಮಾಡಿ ಅಂತ ನಮಗೆ ಹೇಳ್ತಾ ಇದ್ದಾನೆ''. ಖೇಮು ಹೌದು ಅಂತ ತಲೆ ಆಡಿಸಿದ. ತಕ್ಷಣ ಆ ಹುಡುಗಿ ಖೇಮುಗೆ ಒಂದು ಗ್ಲಾಸಿನಲ್ಲಿ ವಿಸ್ಕಿ ಸುರಿದು ಕೊಟ್ಟಳು. ಅವಳನ್ನು ನೋಡುತ್ತಾ ವಿಸ್ಕಿ ಹೀರುತ್ತಿದ್ದ ಖೇಮುಗೆ ಗ್ಲಾಸ್ ಖಾಲಿ ಆಗಿದ್ದೇ ಗೊತ್ತಾಗಲಿಲ್ಲ. ಮತ್ತೆ ವಿಸ್ಕಿ ಹಾಕಿದಳು ಹುಡುಗಿ. ಅದನ್ನೂ ಹೀರುತ್ತಾ ಖೇಮು, ''ಅರೇ, ಬರೀ ನನಗೇ ಕುಡಿಸುತ್ತಿದ್ದೀಯ, ನೀನು ಕುಡಿಯಲ್ವಾ?'' ಅಂತ ಕೇಳಿದ. ಅದಕ್ಕೆ ಹುಡುಗಿ ಹೇಳಿದಳು, ''ಇಲ್ಲ, ನಾನು ಪೊಲೀಸ್ ಬರ್ಲಿ ಅಂತ ಕಾಯ್ತಾ ಇದ್ದೀನಿ''.

ಲೈನ್ ಮ್ಯಾನ್

- **ಹೊಸ ಸಿನಿಮಾ ಸುದ್ದಿ**
- ಎಸ್.ನಾರಾಯಣ್, ದುನಿಯಾ ವಿಜಯ್ ಕಾಂಬಿನೇಷನ್‌ನಲ್ಲಿ ಆಗ ಚಂಡ, ಈಗ ಮಾರುತ.
- ಒಟ್ನಲ್ಲಿ ಚಂಡ ಮಾರುತ
- **IIT ಬಿಟ್ಟು ಬಾಬಾ ಆದ ವ್ಯಕ್ತಿ**
- ಅಲ್ಲೇ ಇದ್ದಿದ್ರೆ ಹೋಮಿ ಜಹಾಂಗೀರ್ ಬಾಬಾ ಥರ ಆಗ್ಬೋದಿತ್ತು
- **ಕಾಲ ನಿಯಮ**
- ಮನುಷ್ಯ ಸತ್ತಾಗ ಅವನು ಹೆಂಗ್ ಬದುಕಿದ ಅನ್ನೋ ಪ್ರಶ್ನೆಗಿಂತ, ಅವನ ಉತ್ತರ ಕ್ರಿಯೆ ಬಗ್ಗೆನೇ ಎಲ್ಲರೂ ಜಾಸ್ತಿ ತಲೆ ಕೆಡಿಸ್ಕೊತಾರೆ..
- **ಕೆಲವು ಹೋಟೆಲ್ ಚಿಕನ್ ಡಿಶ್‌ಗಳಲ್ಲಿ ನಾರಿನ ಪೀಸ್‌ಗಳೇ ಜಾಸ್ತಿ ಇರುತ್ತೆ.**
- 'ಮಾಂಸದ ಜತೆ ನಾರೂ ಹೊಟ್ಟೆ ಸೇರಿತು' ಅನ್ನೋ ಥರ.
- **ಎಣ್ಣೆ ಹೊಡೆದು ಕವನ ಹೇಳಿ ಟಾರ್ಚರ್ ಕೊಡುವ ಸಾಹಿತಿಯ ಪುಣ್ಯಕೋಟಿ ಶೈಲಿಯ 'ನೋವಿನ ಹಾಡು'**
- ಗದ್ಯವಿದೆಕೋ.. ಪದ್ಯವಿದೆಕೋ.. ಗುಂಡೆದೆಯ ಬಿಸಿ ಮದ್ಯವಿದೆಕೋ.. ಕಂಡ ಕಂಡವರನ್ನು ಕಾಡುವ ಅಖಂಡ ಕಾವ್ಯವ ಸಹಿಸಿಕೋ...
- **ದಕ್ಷಿಣ ಭಾರತದಲ್ಲಿರೋ ಹೌಸ್‌ವೈಫ್‌ಗಳನ್ನು ಏನಂತ ಕರೀಬಹುದು?**
- 'ಸೌಟ್' ಇಂಡಿಯನ್ಸ್
- **ಟೈಮ್‌ಪಾಸ್‌ಗೆ ಯಾರಿಗಾದರೂ ಕೊಡಬಹುದಾದ ಗಿಫ್ಟ್**
- ವಾಚ್
- **ಎಚ್‌ಆರ್‌ನಲ್ಲಿ ಕೆಲಸ ಮಾಡೋರು ತಮ್ಮ ಆಫೀಸಿನಲ್ಲಿ ತಮ್ಮ ಮದುವೆ ಕಾರ್ಡ್ ಕೊಡುವಾಗ ಅದರ ಮೇಲೆ ಏನಂತ ಬರೆದಿರ್ತಾರೆ?**
- ನಿಮ್ಮ ಹೆಸರು ನಮ್ಮ ಅಟೆಂಡೆನ್ಸ್ ರಿಜಿಸ್ಟರ್‌ನಲ್ಲಿದೆ. ಸೋ, ಮದುವೆಗೆ ದಯವಿಟ್ಟು ಅಟೆಂಡ್ ಮಾಡಿ.
- **ಬುದ್ಧಿಜೀವಿಗಳಿಗೆ ಇರಬೇಕಾದ ಅರ್ಹತೆ**
- ಒಂದೋ, ತಲೆಕೂದಲಿಗೆ ಡೈ ಹಾಕಿರಬೇಕು, ಇಲ್ಲಾಂದ್ರೆ, ಟೈ ಹಾಕಿರಬೇಕು. ಅವಾಗವಾಗ ಟ್ವೀಟ್ ಆಗಿರಬೇಕು.

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 262

ಸಮಾಚಾರ ಸಣ್ಣದಲ್ಲ

ಹರಿಯಾಣ ಬಿಎಸ್‌ಪಿ ನಾಯಕ ಸಿಂಗ್ ಹತ್ಯೆ

ಅಂಬಾಲಾ: ಹರಿಯಾಣದ ಅಂಬಾಲಾದ ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ನಾಯಕ ಹರ್‌ಬಿಲಾಸ್ ಸಿಂಗ್ ರಜ್ಜುಮಜ್ರಾನನ್ನು ನರೈಂಗರ್‌ನಲ್ಲಿ ಶಸ್ತ್ರಸಜ್ಜಿತ ದಾಳಿಕೋರರು ಗುಂಡಿಕ್ಕಿ ಕೊಂದಿದ್ದಾರೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ. ಸಿಂಗ್ ಶುಕ್ರವಾರ ಸಂಜೆ ಪುನೀತ್ ಮತ್ತು ಗುಗಲ್ ಎಂಬ ಇಬ್ಬರು ಸ್ನೇಹಿತರು ಕಾರಿನಲ್ಲಿ ಕುಳಿತಿದ್ದಾಗ ದುಷ್ಕರ್ಮಿಗಳು ದಾಳಿ ನಡೆಸಿದ್ದಾರೆ. ಪುನೀತ್‌ಗೂ ಗುಂಡು ತಗುಲಿದೆ. ನಂತರ ಸಿಂಗ್ ಅವರನ್ನು ಚಂಡೀಗಢ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಅಲ್ಲಿ ತಡರಾತ್ರಿ ಅಸುನೀಗಿದ್ದಾರೆ. ಪುನೀತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ದಾಳಿಕೋರರನ್ನು ಗುರುತಿಸಲಾಗಿಲ್ಲ. ಶೋಧ ಕಾರ್ಯ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಲಂಕಾ ಮಾಜಿ ಅಧ್ಯಕ್ಷ ಪುತ್ರ ಯೋಶಿರಾ ಸೆರೆ

ಕೊಲಂಬೊ: ಶ್ರೀಲಂಕಾದ ಮಾಜಿ ಅಧ್ಯಕ್ಷ ಮಹಿಂದಾ ರಾಜಪಕ್ಸೆ ಅವರ ಪುತ್ರ, ಯೋಶಿತಾ ರಾಜಪಕ್ಸೆ ಅವರನ್ನು ಆಸ್ತಿ ಖರೀದಿ ಪ್ರಕರಣದಲ್ಲಿ ಭ್ರಷ್ಟಾಚಾರ ಆರೋಪದಡಿ ಕೊಲಂಬೊ ಪೊಲೀಸರು ಶನಿವಾರ ಬಂಧಿಸಿದ್ದಾರೆ.

2015ಕ್ಕೆ ಮುನ್ನ ತಂದೆ ಮಹಿಂದಾ ರಾಜಪಕ್ಸೆ ದೇಶದ ಅಧ್ಯಕ್ಷರಾಗಿದ್ದಾಗ ಆಸ್ತಿ ಖರೀದಿಯಲ್ಲಿ ಭ್ರಷ್ಟಾಚಾರ ನಡೆಸಲಾಗಿದೆ ಎಂಬ ಆರೋಪದಡಿ ನೌಕಾಪಡೆ ಮಾಜಿ ಅಧಿಕಾರಿ ಯೋಶಿತಾರನ್ನು ಬೆಲಿಯಾಟ್ಟಾದಲ್ಲಿನ ಮನೆಯಲ್ಲಿ ಬಂಧಿಸಲಾಗಿದೆ. ಮಹಿಂದಾರ ಮೂವರು ಪುತ್ರರಲ್ಲಿ ಯೋಶಿತಾ ಎರಡನೆಯವರು. ಯೋಶಿರಾ ಅವರ ಚಿಕ್ಕಪ್ಪ, ಮಾಜಿ ಅಧ್ಯಕ್ಷ ಗೋಟಬಯ ರಾಜಪಕ್ಸೆ ಅವರನ್ನು ಕಳೆದವಾರ ಪೊಲೀಸರು ವಿಚಾರಣೆಗೊಳಪಡಿಸಿದ್ದರು.

ವೀಸಾ ಮುಗಿದಿದ್ದ 6 ನೈಜೀರಿಯ ಪ್ರಜೆಗಳ ಸೆರೆ

ದೆಹಲಿ: ವೀಸಾ ಅವಧಿ ಮುಗಿದಿದ್ದರೂ 4 ವರ್ಷಗಳಿಗೂ ಹೆಚ್ಚು ಸಮಯದಿಂದ ದೆಹಲಿಯ ಆಗ್ನೇಯ ಭಾಗದಲ್ಲಿ ವಾಸಿಸುತ್ತಿದ್ದ ಇಬ್ಬರು ಮಹಿಳೆಯರು ಸೇರಿದಂತೆ ಆರು ನೈಜೀರಿಯನ್ ಪ್ರಜೆಗಳನ್ನು ದೆಹಲಿ ಪೊಲೀಸರು ಶನಿವಾರ ಬಂಧಿಸಿದ್ದಾರೆ. ಖಚಿತ ಮಾಹಿತಿ ಮೇರೆಗೆ ಸನ್‌ಲೈಟ್ ಕಾಲೋನಿಯಲ್ಲಿ ಕಾರ್ಯಾಚರಣೆ ನಡೆಸಲಾಗಿದೆ. ಎಜಿಯೊಗು ಒಬಿಯೋರಾ ಫ್ರಾಂಕ್ಲಿನ್ ಹೊವಾಡ್ (31), ಬೋಡು ನ್ಯಾನ್ಸಿ(30), ಕೌಡಿಯೊಯೋಪೋ ಲಿಯೋಪೋಲ್ಡ್(28), ಹೆನ್ರಿ (27), ಮೇರಿ ಥೆರೆಸಾ (26) ಮತ್ತು ಸ್ಯಾಂಡಿ ಪ್ಯಾಟ್ರಿಕ್ (35) ಬಂಧಿತರು. ವೀಸಾ ಅವಧಿ ಮುಗಿದ ವಿದೇಶಿಯರಿಗೆ ಮನೆ ನೀಡಿದ್ದಕ್ಕಾಗಿ ಮನೆ ಮಾಲೀಕರ ವಿರುದ್ಧವೂ ಸನ್‌ಲೈಟ್ ಕಾಲೋನಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವೈಎಸ್‌ಆರ್‌ಸಿಪಿ ಸಂಸದ ರೆಡ್ಡಿ ರಾಜೀನಾಮೆ

ದೆಹಲಿ: ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ನಾಯಕ ವಿ.ವಿಜಯಸಾಯಿ ರೆಡ್ಡಿ ವೈಯಕ್ತಿಕ ಕಾರಣಕ್ಕೆ ರಾಜ್ಯಸಭಾ ಸ್ಥಾನಕ್ಕೆ ಶನಿವಾರ ರಾಜೀನಾಮೆ ನೀಡಿದ್ದು,

ಸಭಾಪತಿ ಜಗದೀಪ್ ಧನಕರ್ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ. ಸಭಾಪತಿ ಅಂಗೀಕರಿಸಿದ್ದಾರೆ. ರಾಜಕೀಯವನ್ನೇ ತೊರೆಯುತ್ತಿ ರುವೆ. ಬೇರಾವುದೇ ಪಕ್ಷ ಸೇರುವುದಿಲ್ಲ, ಸ್ಥಾನ, ಲಾಭ, ಹಣಕ್ಕಾಗಿ ರಾಜೀನಾಮೆ ನೀಡುತ್ತಿಲ್ಲ. ಇದು ವೈಯಕ್ತಿಕ ನಿರ್ಧಾರ ಎಂದು ರೆಡ್ಡಿ ಸ್ಪಷ್ಟಪಡಿಸಿದ್ದಾರೆ. ಆರು ವರ್ಷಗಳ ರಾಜ್ಯಸಭಾ ಸದಸ್ಯತ್ವ ಅವಧಿಯಲ್ಲಿನ್ನೂ ಮೂರುವರೆ ವರ್ಷ ಬಾಕಿ ಇದ್ದರೂ ರೆಡ್ಡಿ ರಾಜೀನಾಮೆ ನೀಡಿದ್ದಾರೆ. ಜಗನ್ ಮೋಹನ್ ರೆಡ್ಡಿ ನೇತೃತ್ವದ ವೈಎಸ್‌ಆರಸಿಪಿಯಲ್ಲಿ ಆಂತರಿಕ ಸಮಸ್ಯೆಗಳಿಲ್ಲ ಎಂದು ಸ್ಪಷ್ಟ ಪಡಿಸಿರುವ ಪಕ್ಷದ ನಾಯಕಿ ಮಡ್ಡಿಲ ಗುರುಮೂರ್ತಿ, ಪಕ್ಷ ತ್ಯಾಗ ನಿರ್ಧಾರ ಮರುಪರಿಶೀಲಿಸುವಂತೆ ರೆಡ್ಡಿ ಅವರನ್ನು ಒತ್ತಾಯಿಸಿದರು. ಪಕ್ಷದ ಏಕತೆಗಾಗಿ ರಾಜಕೀಯದಲ್ಲೇ ಇರುವಂತೆ ರೆಡ್ಡಿ ಅವರಿಗೆ ವೈಎಸ್ ಆರ್‌ಸಿಪಿಯ ಕೆಲ ನಾಯಕರು ಮನವಿ ಮಾಡಿದರು.

ಮಣಿಪುರ ಮಹಿಳೆ ಸೆರೆ

ಚೆನ್ನೈ: ನೋವು ನಿವಾರಕ ಮಾತ್ರೆಗಳನ್ನು ಚೆನ್ನೈನಲ್ಲಿ ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ಮಣಿಪುರದಲ್ಲಿನ ಕುಕಿ ಬುಡಕಟ್ಟು ಜನಾಂಗದ ಚುರಾಚಂದಪುರ ಜಿಲ್ಲೆಯ ಸಿಂಘಾಟ್ ನಿವಾಸಿ ಮಹಿಳೆ ವುಂಗ್ಲಿಯಾಚಿಂಗ್ ಅಲಿಯಾಸ್ ರೆಬೆಕ್ಕಾ (30) ಎಂಬಾಕೆಯನ್ನು ಪೊಲೀಸರು ಬಂಧಿಸಿದ್ದಾರೆ. ಆರೋಪಿಯಿಂದ 8,100 ಮಾತ್ರೆಗಳು ಮತ್ತು ಐಫೋನ್ ವಶಪಡಿಸಿಕೊಳ್ಳಲಾಗಿದೆ.

ಪೊಲೀಸ್, ಗೃಹ, ಅಗ್ನಿಶಾಮಕ, ನಾಗರಿಕ ರಕ್ಷಣೆಯ 942 ಸಿಬ್ಬಂದಿಗೆ ಶೌರ್ಯ ಪ್ರಶಸ್ತಿ

76ನೇ ಗಣರಾಜ್ಯೋತ್ಸವ: ಇಂದು ಯೋಧರಿಗೆ ಶೌರ್ಯ ಪದಕ ಗೌರವ

ದೆಹಲಿ: 76ನೇ ಗಣರಾಜ್ಯೋತ್ಸವ ಆಚರಣೆ ಹಿನ್ನೆಲೆ ದೆಹಲಿಯ ಕೆಂಪುಕೋಟೆಯಲ್ಲಿ ಗಣರಾಜ್ಯೋತ್ಸವ ಸಂಭ್ರಮಕ್ಕಾಗಿ ಸಕಲ ಸಿದ್ಧತೆ ನಡೆದಿದ್ದು, ಶನಿವಾರ ಅಂತಿಮ ಹಂತದ ತಯಾರಿ ಪೂರ್ಣಗೊಂಡಿದೆ. ಭಾನುವಾರ ಬೆಳಗ್ಗೆ 10.30ಕ್ಕೆ ಗಣರಾಜ್ಯೋತ್ಸವ ಕಾರ್ಯಕ್ರಮ ಆರಂಭಗೊಳ್ಳಲಿದೆ.

ರಾಷ್ಟ್ರ ರಾಜಧಾನಿ ದೆಹಲಿಯ ಕರ್ತವ್ಯ ಪಥದಲ್ಲಿ ಭಾನುವಾರ ಜರಗುವ ಗಣರಾಜ್ಯೋತ್ಸವ ಪರೇಡ್‌ಗಾಗಿ ಅಂತಿಮ ಹಂತದ ತಯಾರಿಗಳನ್ನು ಶನಿವಾರ ನಡೆಸಲಾಗಿದೆ. ಭಾರತೀಯ ಸೇನಾಪಡೆಗಳ ಮೂರೂ ವಿಭಾಗಗಳು ತಮ್ಮ ಬಲ-ಸಾಮರ್ಥ್ಯ-ಕೌಶಲ ಪ್ರದರ್ಶನಕ್ಕೆ ಸಜ್ಜಾಗಿವೆ. ವಿವಿಧ ರಾಜ್ಯಗಳ ಸ್ತಬ್ಧಚಿತ್ರಗಳೂ ಪರೇಡ್‌ನಲ್ಲಿ ಸಾಗಿ ದೇಶದ ಗಮನ ಸೆಳೆಯಲು ಸಿದ್ಧವಾಗಿವೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಸಮ್ಮುಖ 'ಸ್ವರ್ಣಿಮ್ ಭಾರತ್, ವಿರಾಸತ್ ಮತ್ತು ವಿಕಾಸ್'(ಸುವರ್ಣ ಭಾರತ, ಪರಂಪರೆ ಮತ್ತು ಅಭಿವೃದ್ಧಿ) ಪರಿಕಲ್ಪನೆಯಲ್ಲಿ ಈ ಬಾರಿಯ ಗಣರಾಜ್ಯೋತ್ಸವ ಆಚರಣೆಯಾಗುತ್ತಿದೆ. ಇಂಡೋನೇಷ್ಯಾ ಅಧ್ಯಕ್ಷ ಪ್ರಬೋವೊ ಸುಬಿಯಾಂಟೊ ಈ ಬಾರಿ ಗಣರಾಜ್ಯೋತ್ಸವಕ್ಕೆ ಅತಿಥಿಯಾಗಿ ಆಗಮಿಸಿದ್ದಾರೆ. ಗಣ್ಯರಿಬ್ಬರ ಸಮ್ಮುಖ ಭಾರತದ ಸೇನಾಪಡೆಗಳ ಜತೆಗೆ ಇಂಡೋನೇಷ್ಯಾ ಸೇನೆಯ ಒಂದು ತುಕಡಿ ಮತ್ತು ಬ್ಯಾಂಡ್ ತಂಡ ಪಥ ಸಂಚಲನದಲ್ಲಿ ಭಾಗಿಯಾಗಲಿವೆ. ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಸಚಿವ ಸಂಪುಟ ಸಹೋದ್ಯೋಗಿಗಳು, ಮೂರೂ ಸೇನಾಪಡೆಗಳ ಹಿರಿಯ ಅಧಿಕಾರಿಗಳು ಮತ್ತು ಅವರ ಕುಟುಂಬವರ್ಗ ವಿವಿಧ ಕ್ಷೇತ್ರಗಳ ಗಣ್ಯರು ಉಪಸ್ಥಿತರಿರುವರು. ಪರೇಡ್‌ನಲ್ಲಿ 15 ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಹಾಗೂ ಕೇಂದ್ರ ಸರಕಾರದ ವಿವಿಧ ಸಚಿವಾಲಯಗಳಿಂದ ಸ್ತಬ್ಧಚಿತ್ರ ಪ್ರದರ್ಶನವಾಗಲಿದೆ. ಹತ್ತು ಸಾವಿರಕ್ಕೂ ಅಧಿಕ ವಿಶೇಷ ಅತಿಥಿಗಳು, 1 ಲಕ್ಷಕ್ಕೂ ಅಧಿಕ ಮಂದಿ ಸಾಕ್ಷಿಯಾಗಲಿದ್ದಾರೆ.

ಭದ್ರತೆ: ಕರ್ತವ್ಯ ಪಥದಲ್ಲಿ 6 ಹಂತಗಳಲ್ಲಿ ಭದ್ರತೆ ಹೆಚ್ಚಿಸಲಾಗಿದ್ದು, 15,000ಕ್ಕೂ ಅಧಿಕ ಪೊಲೀಸರು, ಅರೆಸೇನಾ ಪಡೆಗಳ 70 ತುಕಡಿಗಳ ನಿಯೋಜನೆಯಾಗಿದೆ. ಸಿಸಿಟಿವಿ ಕ್ಯಾಮೆರಾ, 500 'ಎಐ' ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. 40 ಕಂಟ್ರೋಲ್ ರೂಂಗಳಿಂದ ಕಾರ್ಯಕ್ರಮದ ಮೇಲೆ ಹದ್ದಿನ ಕಣ್ಣಿಡಲಾಗುತ್ತದೆ.

ಶೌರ್ಯ ಪ್ರಶಸ್ತಿ

ಉತ್ತರ ಪ್ರದೇಶ	17
ಜಮ್ಮು-ಕಾಶ್ಮೀರ	15
ಛತ್ತೀಸ್‌ಗಢ	11
ಒಡಿಶಾ	6
ಅಸ್ಸಾಂ ರೈಫಲ್ಸ್	1
ಬಿಎಸ್‌ಎಫ್	5
ಸಿಆರ್‌ಪಿಎಫ್	19
ಎಸ್‌ಎಸ್‌ಬಿ	4
ಉ.ಪ್ರ ಅಗ್ನಿಶಾಮಕ ದಳ	16
ಜ-ಕಾ ಅಗ್ನಿಶಾಮಕ ದಳ	1

ನಿವೃತ್ತ ಐಜಿಪಿ, ಎಸ್‌ಪಿಗೆ ಶೌರ್ಯಪದಕ

ನಿವೃತ್ತ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೊಲೀಸ್ ವಿಜಯ ಕುಮಾರ್, ಜಮ್ಮು-ಕಾಶ್ಮೀರದ ಶ್ರೀನಗರದಲ್ಲಿ 2022ರಲ್ಲಿ ಅಮರನಾಥ ಯಾತ್ರಿಕರ ಮೇಲೆ ದಾಳಿಗೆ ಹೊಂಚು ಹಾಕಿದ್ದ ಪಾಕಿಸ್ತಾನಿ ಉಗ್ರ ಮತ್ತು ಅವನ ಸಹವರ್ತಿಯನ್ನು ಹೊಡೆದುರುಳಿಸಿದ ನಿವೃತ್ತ ಹಿರಿಯ ಪೊಲೀಸ್ ಅಧಿಕಾರಿ ಎಸ್‌ಪಿ ರಾಕೇಶ್ ಬಲ್ವಾಲ್‌ಗೆ ಈ ಬಾರಿಯ ಗಣರಾಜ್ಯೋತ್ಸವ ಶೌರ್ಯ ಪದಕ ಸಂದಿದೆ.

ರಾಜ್ಯಕ್ಕೆ 3 ವಿಶಿಷ್ಟ ಸೇವಾ ಪದಕ

ದೆಹಲಿ: ದೇಶಕ್ಕಾಗಿ ಅಪ್ರತಿಮ ಸೇವೆ ಸಲ್ಲಿಸಿದ ವಿವಿಧ ಇಲಾಖೆಗಳ ಸಾಧಕರಿಗೆ 76ನೇ ಗಣರಾಜ್ಯೋತ್ಸವ ಹಿನ್ನೆಲೆಯಲ್ಲಿ ಶೌರ್ಯ ಪದಕ, ವಿಶಿಷ್ಟ ಸೇವಾ ರಾಷ್ಟ್ರಪತಿ ಪದಕ, ಸೇವಾ ಪದಕಗಳನ್ನು ಕೇಂದ್ರ ಸರಕಾರ ಶನಿವಾರ ಪ್ರಕಟಿಸಿದೆ. ಕರ್ನಾಟಕಕ್ಕೆ ಗಣ್ಯರ ಸೇವೆಯಡಿ 1 ಪದಕ, ವಿಶಿಷ್ಟ ಸೇವೆಯಡಿ 2 ಪದಕ ಸಂದಿವೆ.

ಪೊಲೀಸ್, ಅಗ್ನಿಶಾಮಕ, ಗೃಹರಕ್ಷಕ ಮತ್ತು ನಾಗರಿಕ ರಕ್ಷಣೆ ಮತ್ತು ಸುಧಾರಣಾ ಸೇವೆಗಳಡಿ ಒಟ್ಟು 942 ಸಿಬ್ಬಂದಿಗಳಿಗೆ ಈ ಸಮ್ಮಾನ ಸಲ್ಲಲಿದೆ. ಕೇಂದ್ರ ಮೀಸಲು ಪೊಲೀಸ್ ಪಡೆಯ(ಸಿಆರ್‌ಪಿಎಫ್) 19 ಮಂದಿ ಮತ್ತು ಜಮ್ಮು-ಕಾಶ್ಮೀರ ಪೊಲೀಸ್ ಇಲಾಖೆಯ 15 ಸಿಬ್ಬಂದಿ ಸೇರಿದಂತೆ ಒಟ್ಟು 95 ಪೊಲೀಸರಿಗೆ ಶೌರ್ಯ ಪದಕ ಸಲ್ಲಲಿದೆ. 101 ಮಂದಿಗೆ ವಿಶಿಷ್ಟ ಸೇವಾ ರಾಷ್ಟ್ರಪತಿ ಪದಕ, 746 ಮಂದಿಗೆ ಪ್ರತಿಭಾನ್ವಿತ ಸೇವಾ ಪದಕಗಳನ್ನು ಪ್ರಕಟಿಸಲಾಗಿದೆ. ಮುಖ್ಯವಾಗಿ 2022ರಲ್ಲಿ ಜಮ್ಮು- ಕಾಶ್ಮೀರದಲ್ಲಿ ಅಮರನಾಥ ಯಾತ್ರಿಕರ ಮೇಲೆ ನಡೆಯಲಿದ್ದ ಉಗ್ರರ ದಾಳಿಯನ್ನು ಸಮಯೋಚಿತ ಕ್ರಮದ ಮೂಲಕ ತಪ್ಪಿಸಿದ ಪೊಲೀಸರು, ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ನಿಯೋಜನೆಗೊಂಡ ಸಿಆರ್‌ಪಿಎಫ್ ಪೊಲೀಸರಿಗೆ ಹೆಚ್ಚಿನ ಪ್ರಮಾಣದಲ್ಲಿ ಶೌರ್ಯ ಪದಕ ಸಲ್ಲಲಿದೆ.

ನಕ್ಸಲ್ ವಲಯದ 28 ಮಂದಿಗೆ, ಜಮ್ಮು- ಕಾಶ್ಮೀರದ 28 ಪೊಲೀಸರಿಗೆ, ಈಶಾನ್ಯ ಭಾರತದಲ್ಲಿ ಕರ್ತವ್ಯ ನಿರತ 3 ಪೊಲೀಸರಿಗೆ ಮತ್ತು ಇತರೆ ಪ್ರದೇಶ ಗಳಲ್ಲಿ ಸೇವೆ ಸಲ್ಲಿಸುತ್ತಿರುವ 36 ಪೊಲೀಸ್ ಸಿಬ್ಬಂದಿಗೆ ಅವರ ಶೌರ್ಯದ ಕಾರ್ಯ ಗುರುತಿಸಿ ಪ್ರತಿಷ್ಠಿತ ಶೌರ್ಯ ಪದಕ ನೀಡಿ ಸನ್ಮಾನಿಸಲಾಗುತ್ತಿದೆ. ಈ ಪಟ್ಟಿಯಲ್ಲಿ 78 ಪೊಲೀಸರು ಮತ್ತು 17 ಅಗ್ನಿಶಾಮಕ ಸಿಬ್ಬಂದಿ ಇದ್ದಾರೆ. ವಿಶೇಷ ಸೇವೆಗಾಗಿ ನೀಡಲಾಗುವ ರಾಷ್ಟ್ರಪತಿಗಳ 101 ವಿಶಿಷ್ಟ ಸೇವಾ ಪದಕಗಳಲ್ಲಿ 85 ಪೊಲೀಸರಿಗೆ, 5 ಅಗ್ನಿಶಾಮಕ ದಳದವರಿಗೆ, 7 ನಾಗರಿಕ ರಕ್ಷಣಾ-ಗೃಹರಕ್ಷಕ ದಳದವರಿಗೆ ಮತ್ತು 4 ಮಂದಿ ಸುಧಾರಣಾ ಇಲಾಖೆ ಸಿಬ್ಬಂದಿಗೆ ಸಲ್ಲಲಿದೆ. ಮೆರಿಟೋರಿಯಸ್(ಪ್ರತಿಭಾವಂತ) ಸೇವೆಗಾಗಿ ನೀಡಲಾಗುವ ರಾಷ್ಟ್ರಪತಿ ವಿಶಿಷ್ಟ ಪ್ರತಿಭಾ ಸೇವಾ 746 ಪದಕಗಳಲ್ಲಿ ಪೊಲೀಸ್ ಇಲಾಖೆಗೆ 634, ಅಗ್ನಿಶಾಮಕ ದಳಕ್ಕೆ 37, ಸಿವಿಲ್ ಡಿಫೆನ್ಸ್-ಗೃಹರಕ್ಷಕರಿಗೆ 39 ಮತ್ತು ತಿದ್ದುಪಡಿ ಸೇವಾ ಸಿಬ್ಬಂದಿಗೆ 36 ಪದಕ ಸಲ್ಲಲಿವೆ.

26/11ದಾಳಿ ರೂವಾರಿ ಸದ್ಯವೇ ಭಾರತಕ್ಕೆ

ತಹಾವುರ್ ರಾಣಾ ಹಸ್ತಾಂತರ ಅಮೆರಿಕ ಸುಪ್ರೀಂ ಒಪ್ಪಿಗೆ

ವಾಷಿಂಗ್ಟನ್: ಭಾರತದ ವಾಣಿಜ್ಯ ರಾಜಧಾನಿ ಮುಂಬೈ ಮಹಾನಗರದ ಮೇಲೆ 2008ರ ನವೆಂಬರ್ 26ರಂದು (26/11) ಭಯೋತ್ಪಾದಕ ದಾಳಿ ನಡೆಸಿ 175 ಜನರ ಸಾವಿಗೆ, 300ಕ್ಕೂ ಅಧಿಕ ಜನರಿಗೆ ಗಾಯಗೊಳ್ಳಲು ಕಾರಣವಾದ ಸಂಚಿನ ಮುಖ್ಯ ರೂವಾರಿಯಾದ ಘೋಷಿತ ಅಪರಾಧಿ ತಹಾವುರ್ ರಾಣಾನನ್ನು ಭಾರತಕ್ಕೆ ಗಡಿಪಾರಾಗುವ ದಿನ ಹತ್ತಿರವಾಗಿದೆ. ಭಾರತಕ್ಕೆ ಗಡಿಪಾರು ಆಗುವುದನ್ನು ತಪ್ಪಿಸಿಕೊಳ್ಳಲು ತಹಾವುರ್ ರಾಣಾ ಸಲ್ಲಿಸಿದ್ದ ಮೇಲ್ಮನವಿಯನ್ನು ಅಮೆರಿಕದ ಸುಪ್ರೀಂ ಕೋರ್ಟ್ ಶನಿವಾರ ವಜಾಗೊಳಿಸಿದೆ. ಪರಿಣಾಮ, ರಾಣಾಗೆ ಗಡಿಪಾರು ಕ್ರಮದಿಂದ ಪಾರಾಗುವ ಕೊನೆಯ ಪ್ರಯತ್ನದಲ್ಲೂ ಸೋಲಾಗಿದೆ.

2008ರ ನವೆಂಬರ್‌ನಲ್ಲಿ ಮುಂಬೈ ಮೇಲೆ ನಡೆದ ಭಯೋತ್ಪಾದಕ ದಾಳಿ ಸಂಬಂಧ ಭಾರತಕ್ಕೆ ಬೇಕಾಗಿದ್ದ ಪಾಕಿಸ್ತಾನಿ ಮೂಲದ ಕೆನಡಾ ಪ್ರಜೆ ತಹಾವುರ್ ರಾಣಾನನ್ನು ಹಸ್ತಾಂತರಿಸುವಂತೆ ಅಮೆರಿಕ ಸರಕಾರವನ್ನು ಕೋರಲಾಗಿತ್ತು. ಭಾರತಕ್ಕೆ ಗಡೀಪಾರು ಆಗದಿರಲು ಹಲವು ಹಂತಗಳಲ್ಲಿ ರಾಣಾ ಕಾನೂನು ಹೋರಾಟ ನಡೆಸಿದ್ದ. ಸುಪ್ರೀಂ ಕೋರ್ಟ್ ಮೇಲ್ಮನವಿ ಅವನ ಕೊನೆ ಕಾನೂನು ಅವಕಾಶವಾಗಿತ್ತು. ಕೋರ್ಟ್ ಅವನ ಅರ್ಜಿ ವಜಾಗೊಳಿಸಿರುವುದರಿಂದ ರಾಣಾ ಭಾರತಕ್ಕೆ ಹಸ್ತಾಂತರಗೊಳ್ಳುವ ಮಾರ್ಗ ಈಗ ಪೂರ್ಣ ಮುಕ್ತವಾಗಿದೆ.

ಇದಕ್ಕೂ ಮೊದಲು: ಸ್ಯಾನ್ ಫ್ರಾನ್ಸಿಸ್ಕೋದ ಯುಎಸ್ ಕೋರ್ಟ್ ಆಫ್ ಅಪೀಲ್ಸ್ ಫಾರ್ ದಿ ನಾರ್ತ್ ಸರ್ಕಿಟ್ ಸೇರಿದಂತೆ ಹಲವು ಫೆಡರಲ್ ನ್ಯಾಯಾಲಯಗಳಲ್ಲಿ ರಾಣಾ ಕಾನೂನು ಹೋರಾಟ ನಡೆಸಿದ್ದ. ಅಲ್ಲೆಲ್ಲಾ ಅವನಿಗೆ ಸೋಲಾಗಿದೆ. ಕಡೆಗೆ 2024ರ ನ.13ರಂದು ರಾಣಾ ಅಮೆರಿಕ ಸುಪ್ರೀಂ ಕೋರ್ಟ್‌ಗೆ ಸರ್ಟಿಯೊರಾರಿ ರಿಟ್ ಅರ್ಜಿ ಸಲ್ಲಿಸಿದ್ದ. ಇದೇ ಜ.21ರಂದು ಸುಪ್ರೀಂ ಕೋರ್ಟ್ ರಾಣಾ ಅರ್ಜಿಯನ್ನು ನಿರಾಕರಿಸಿತ್ತು. ರಾಣಾ, ಪ್ರಸ್ತುತ ಲಾಸ್ ಏಂಜಲೀಸ್‌ನ ಮೆಟ್ರೋಪಾಲಿಟನ್ ಡಿಟೆನ್ಷನ್ ಸೆಂಟರ್‌ನಲ್ಲಿ ಬಂಧಿತನಾಗಿದ್ದಾನೆ.

ಮುಖ್ಯಾಂಶ

- ಮುಂಬೈ ಮೇಲೆ ಪಾಕ್‌ನಿಂದ ಬಂದ ಉಗ್ರರ ತಂಡದ ದಾಳಿ
- 2008 ನ.26 ದಾಳಿಗೆ 175 ಜೀವಬಲಿ, 300 ಜನಕ್ಕೆ ಗಾಯ
- ಪಾಕ್ ಮೂಲದ ಕೆನಡಾ ಉದ್ಯಮಿ ರಾಣಾ ಸಂಚುಕೋರ

ತಹಾವುರ್ ರಾಣಾ

ತಹಾವುರ್ ರಾಣಾ ಪೂರ್ತಿ ಹೆಸರು ತಹಾವುರ್ ಹುಸೇನ್ ರಾಣಾ(63). ಪಾಕಿಸ್ತಾನಿ ಮೂಲದ ಈಗ ಕೆನಡಾ ಪೌರತ್ವ ಹೊಂದಿದ್ದು, ಸದ್ಯ ಅಮೆರಿಕದ ಲಾಸ್ ಏಂಜಲೀಸ್‌ನ ಸೆರೆಮನೆಯಲ್ಲಿ ಕೈದಿಯಾಗಿದ್ದಾನೆ. ರಾಣಾ ಪಾಕ್ ಸೇನೆಯಲ್ಲಿ ವೈದ್ಯನಾಗಿದ್ದ. 1990ರ ದಶಕದಲ್ಲಿ ಕೆನಡಾಕ್ಕೆ ತೆರಳಿ ಅಲ್ಲಿ ಉದ್ಯಮಿಯಾಗಿ ಗುರುತಿಸಿಕೊಂಡು ಪೌರತ್ವ ಪಡೆದಿದ್ದ. 2008ರ ಮುಂಬೈ ಭಯೋತ್ಪಾದಕ ದಾಳಿಯ ಮಾಸ್ಟರ್ ಮೈಂಡ್ ಡೇವಿಡ್ ಹೆಡ್ಲಿ ಈ ದಾಳಿ ಪ್ರಕರಣದಲ್ಲಿ ಶಿಕ್ಷೆಗೊಳಗಾದ. ಈತ ರಾಣಾನ ಸ್ನೇಹಿತ. ಹೆಡ್ಲಿಯನ್ನು ರಾಣಾ ಅಪರಾಧ ಜಗತ್ತಿಗೆ ತಳ್ಳಿದ ಎಂದು ಹೇಳಲಾಗಿದೆ. ಹೆಡ್ಲಿಯನ್ನು ಅಮೆರಿಕ ಪೊಲೀಸರು 2009ರಲ್ಲಿ ಬಂಧಿಸಿದ್ದರು. ಹೆಡ್ಲಿ ವಿಚಾರಣೆ ವೇಳೆ ಮುಂಬೈ ದಾಳಿಯಲ್ಲಿ ರಾಣಾ ಶಾಮೀಲಾಗಿರುವುದು ತಿಳಿದುಬಂದಿತು.

ಚೆನಾಬ್ ರೈಲ್ವೆ ಸೇತುವೆ ದಾಟಿದ ವಂದೇಭಾರತ್

ಶ್ರೀನಗರ: ಭಾರತೀಯ ರೈಲ್ವೆಯ ಅತಿವೇಗದ ರೈಲು 'ವಂದೇ ಭಾರತ್' ಎಕ್ಸ್‌ಪ್ರೆಸ್ ವಿಶ್ವದಲ್ಲೇ ಅತ್ಯಂತ ಎತ್ತರದ ಪ್ರದೇಶದಲ್ಲಿನ ರೈಲು ಮಾರ್ಗದಲ್ಲಿರುವ ಜಮ್ಮು-ಕಾಶ್ಮೀರದ ಚೆನಾಬ್ ನದಿಗೆ ಅಡ್ಡಲಾಗಿ ನಿರ್ಮಿಸಲಾದ ರೈಲ್ವೆ ಸೇತುವೆ ಮೂಲಕ ಯಶಸ್ವಿಯಾಗಿ ಹಾದುಹೋಗಿದೆ. ಈ ಸಂದರ್ಭದ ವಿಡಿಯೊ ವೈರಲ್ ಆಗಿದ್ದು, ನೆಟ್ಟಿಗರು 'ವಾವ್' ಎಂದು ಮೆಚ್ಚುಗೆ ಸೂಚಿಸುತ್ತಿದ್ದಾರೆ.

ಚೆನಾಬ್‌ನಲ್ಲಿ ವಿಶ್ವದಲ್ಲೇ ಅತಿ ಎತ್ತರದ ಪ್ರದೇಶದಲ್ಲಿನ ರೈಲ್ವೆ ಸೇತುವೆ ನಿರ್ಮಿಸಲು ಭಾರತೀಯ ರೈಲ್ವೆ ಇಲಾಖೆಗೆ 20 ವರ್ಷಗಳಷ್ಟು ಸುದೀರ್ಘ ಸಮಯ ಹಿಡಿದಿದೆ. ಕಮಾನಿನ ಆಕಾರದ ಮೂಲ ಆಧಾರದ ಮೇಲೆ ನಿರ್ಮಿತವಾದ ಅತಿ ವಿಶಿಷ್ಟ ಸೇತುವೆ ಇದಾಗಿದೆ. ಎತ್ತರರ ವಿಚಾರದಲ್ಲಿ ಇದು ಪ್ಯಾರಿಸ್‌ನ ವಿಶಿಷ್ಟ ಐಫೆಲ್ ಟವರ್‌ಗಿಂತಲೂ 35 ಮೀ.ಗಳಷ್ಟು ಹೆಚ್ಚು ಎತ್ತರವಾಗಿದೆ.

ಸೇತುವ ನಿರ್ಮಾಣಕ್ಕೆ 14 ಸಾವಿರ ಕೋಟಿ ರು. ಖರ್ಚು ಮಾಡಲಾಗಿದೆ. ಸೇತುವೆ 1,315 ಮೀ. ಉದ್ದ ಮತ್ತು 359 ಮೀ. ಎತ್ತರ ಇದೆ. ಪೂರ್ಣ ಪರಿಶೀಲನೆ ಮತ್ತು ಎಲ್ಲಾ ತಾಂತ್ರಿಕ ಅಂಶಗಳ ಕೆಲಸ ಪೂರ್ಣಗೊಂಡ ನಂತರವೇ ಈ ಮಾರ್ಗದಲ್ಲಿ ರೈಲು ಸಂಚಾರ ಪ್ರಾರಂಭಿಸಲಾಗಿದೆ.

ಸೈಫ್ ರಕ್ತ, ವಸ್ತ್ರ ಸಂಗ್ರಹಿಸಿದ ಪೊಲೀಸ್

ಮುಂಬೈ: ಜ.16ರ ನಸುಕಿನಲ್ಲಿ ಮುಂಬೈನ ಬಾಂದ್ರಾದಲ್ಲಿನ ವಸತಿ ಸಂಕೀರ್ಣದಲ್ಲಿನ ತಮ್ಮ ಮನೆಯಲ್ಲಿಯೇ ನಟ ಸೈಫ್ ಅಲಿಖಾನ್ ಬಾಂಗ್ಲಾ ದೇಶಿ ದುಷ್ಕರ್ಮಿಯಿಂದ 6 ಕಡೆ ಚಾಕು ಇರಿತಕ್ಕೊಳಗಾದ ಘಟನೆಯ ತನಿಖೆಯನ್ನು ಚುರುಕುಗೊಳಿಸಿರುವ ಮುಂಬೈ ಕ್ರೈಂ ಬ್ರಾಂಚ್ ಪೊಲೀಸರು, ಶನಿವಾರ ಸೈಫ್ ಮನೆಗೆ ತೆರಳಿ ಅವರ ರಕ್ತದ ಮಾದರಿ ಮತ್ತು ಘಟನೆ ದಿನ ಧರಿಸಿದ್ದ ಬಟ್ಟೆಗಳನ್ನು ಸಂಗ್ರಹಿಸಿ ಕೊಂಡೊಯ್ದರು.

ಘಟನೆ ನಡೆದ ರಾತ್ರಿ ಆರೋಪಿ ಮೊಹಮ್ಮದ್ ಶರೀಫುಲ್ ಇಸ್ಲಾಂ ಶೆಹಜಾದ್ ಧರಿಸಿದ್ದ ಬಟ್ಟೆಯ ಮೇಲಿದ್ದ ರಕ್ತದ ಕಲೆಗಳು ಪತ್ತೆಯಾಗಿದ್ದು, ಆರೋಪಿಯ ಬಟ್ಟೆಗಳನ್ನೂ ಪೊಲೀಸರು ಸಂಗ್ರಹಿಸಿದ್ದು, ಎಲ್ಲವನ್ನೂ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್‌ಗೆ) ಕಳುಹಿಸಿಕೊಡಲಿದ್ದಾರೆ.

ಈ ಮಧ್ಯೆ, ಬಾಂದ್ರಾದ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಆರೋಪಿ ಶರೀಫುಲ್ ಪೊಲೀಸ್ ಕಸ್ಟಡಿಯನ್ನು ಜ.29ರವರೆಗೆ ವಿಸ್ತರಿಸಿದೆ.

ಫೇಸ್ ರೆಕಗ್ನಿಷನ್: ಬಂಧಿತ ಮೊಹಮ್ಮದ್ ಶರೀಫುಲ್ ಇಸ್ಲಾಂ ಶೆಹಜಾದನೇ ಸೈಫ್ ಮೇಲೆ ದಾಳಿ ನಡೆಸಿದ ವ್ಯಕ್ತಿಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಆತನ ಮುಖಚಹರೆಯನ್ನು ಹಾಗೂ ಜ.16ರ ನಸುಕಿನಲ್ಲಿ ದಾಳಿಕೋರ ವಸತಿ ಸಂಕೀರ್ಣದ ಮೆಟ್ಟಿಲು ಇಳಿಯುವಾಗ ಸಿಸಿಟಿವಿ ಕ್ಯಾಮೆರಾದಲ್ಲಿ ದಾಖಲಾಗಿರುವ ವ್ಯಕ್ತಿಯ ಚಹರೆಗೂ ಹೋಲಿಕೆ ಮಾಡಿ ಖಚಿತಪಡಿಸಿಕೊಳ್ಳಲು 'ಫೇಸ್ ರೆಕಗ್ನಿಷನ್' ತಂತ್ರಜ್ಞಾನವನ್ನು ಬಳಸಿಕೊಳ್ಳಲು ಮುಂಬೈ ಪೊಲೀಸರು ನಿರ್ಧರಿಸಿದ್ದಾರೆ.

ಫೋನ್‌ನಲ್ಲೇ ತಲಾಖ್: ಕೇರಳ ಪತಿ ಸೆರೆ

ಕೊಲ್ಲಂ: ದೂರವಾಣಿ ಮೂಲಕವೇ 2ನೇ ಪತ್ನಿಗೆ ತ್ರಿವಳಿ ತಲಾಖ್ ನೀಡಿದ ಕೊಲ್ಲಂ ಜಿಲ್ಲೆಯಲ್ಲಿನ ವ್ಯಕ್ತಿಯನ್ನು ಬಂಧಿಸಲಾಗಿದೆ ಎಂದು ಕೇರಳ ಪೊಲೀಸರು ಶನಿವಾರ ತಿಳಿಸಿದ್ದಾರೆ.

ಕೊಲ್ಲಂ ಜಿಲ್ಲೆಯ ಮೈನಾಗಪಲ್ಲಿಯ ಅಬ್ದುಲ್ ಬಾಸಿತ್‌ನನ್ನು 2 ದಿನಗಳ ಹಿಂದೆ ಬಂಧಿಸಿ 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ವಿವರ ನೀಡಿದ್ದಾರೆ. ಜ.19ರಂದು ಬಾಸಿತ್ 2ನೇ ಪತ್ನಿಗೆ ಕರೆ ಮಾಡಿ ಮೂರು ಬಾರಿ ತಲಾಖ್ ಹೇಳಿದ್ದು, ತಮ್ಮ ಸಂಬಂಧ ಮುಗಿದಿದೆ ಎಂದು ಘೋಷಿಸಿದ್ದಾನೆಂದು ದೂರಿನಲ್ಲಿ ತಿಳಿಸಲಾಗಿದೆ. ಅಬ್ದುಲ್‌ನ 20 ವರ್ಷದ ಪತ್ನಿ ನೀಡಿದ ದೂರಿನ ಮೇರೆಗೆ ಕ್ರಮ ಜರುಗಿಸಲಾಗಿದೆ. ಬಾಸಿತ್ ಮೊದಲ ಮದುವೆ ಮುಚ್ಚಿಟ್ಟು 2ನೇ ಮದುವೆಯಾಗಿರುವುದು ತನಿಖೆ ವೇಳೆ ತಿಳಿದುಬಂದಿದೆ. ಬಾಸಿತ್ ವಿರುದ್ಧ 'ಮುಸ್ಲಿಂ ಮಹಿಳೆಯರ (ವಿವಾಹ ಹಕ್ಕುಗಳ ರಕ್ಷಣೆ) ಕಾಯ್ದೆಯ ವಿವಿಧ ಕಲಂಗಳು ಮತ್ತು ಭಾರತೀಯ ನ್ಯಾಯ ಸಂಹಿತೆಯ ವಿವಿಧ ಸೆಕ್ಷನ್‌ಗಳಡಿ ಅಪರಾಧ ಪ್ರಕರಣ ದಾಖಲಿಸಲಾಗಿದೆ. ಸದ್ಯ ಆರೋಪಿ ಚವಾರ ಉಪ ಕಾರಾಗೃಹದಲ್ಲಿದ್ದಾನೆ ಎಂದಿದ್ದಾರೆ.

ಕುಂಭಮೇಳಕ್ಕೆ 73 ರಾಯಭಾರಿಗಳು

ಪ್ರಯಾಗ್‌ರಾಜ್: ಉತ್ತರ ಪ್ರದೇಶದ ಪ್ರಯಾಗ್ ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳದಲ್ಲಿ ಭಾಗಿಯಾಗಲು ಹಾಗೂ ತ್ರಿವೇಣಿ ಸಂಗಮದಲ್ಲಿ ಪುಣ್ಯ ಸ್ನಾನ ಮಾಡಲು ರಷ್ಯಾ ಮತ್ತು ಉಕ್ರೇನ್‌ನವರು ಸೇರಿದಂತೆ 73 ದೇಶಗಳ ರಾಯಭಾರಿಗಳು ಫೆ.1ರಂದು ಆಗಮಿಸುತ್ತಿದ್ದಾರೆ ಎಂದು ಮಹಾಕುಂಭ ಮೇಳದ ನಿರ್ವಹಣಾಧಿಕಾರಿ ವಿಜಯ್ ಕಿರಣ್ ಆನಂದ್ ಶನಿವಾರ ಸುದ್ದಿಗಾರರಿಗೆ ಮಾಹಿತಿ ನೀಡಿದ್ದಾರೆ. ಈ ಸಂಬಂಧ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಉತ್ತರ ಪ್ರದೇಶದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದೆ. ಅಮೆರಿಕ, ಜಪಾನ್, ಜರ್ಮನಿ, ನೆದರ್ಲೆಂಡ್ಸ್, ಕ್ಯಾಮರೂನ್, ಕೆನಡಾ, ಸ್ವಿಟ್ಜರ್ಲೆಂಡ್, ಸ್ವೀಡನ್, ಪೋಲೆಂಡ್, ಬೊಲಿವಿಯಾ ಸೇರಿದಂತೆ ವಿವಿಧ ರಾಷ್ಟ್ರಗಳ ರಾಜತಾಂತ್ರಿಕರು ಮಹಾ ಕುಂಭದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದ್ದಾರೆ. ಎಲ್ಲಾ ರಾಜತಾಂತ್ರಿಕರು ದೋಣಿ ಮೂಲಕ ಸಂಗಮ ತಲುಪಿ ಪವಿತ್ರ ಸ್ನಾನ ಮಾಡುವರು.

ರಾಷ್ಟ್ರಪತಿ ಗಣರಾಜ್ಯೋತ್ಸವ ಮುನ್ನಾದಿನ ಭಾಷಣ

1 ಚುನಾವಣೆ ಪ್ರಗತಿಗೆ ಪೂರಕ

ದೆಹಲಿ: 'ಒಂದು ದೇಶ-ಒಂದು ಚುನಾವಣೆ' ಜಾರಿಗೆ ಬಂದಲ್ಲಿ ದೇಶದ ಆಡಳಿತ ವ್ಯವಸ್ಥೆ ಬಾಧಿತವಾಗುವುದು ತಪ್ಪಲಿದೆ ಎಂದು ರಾಷ್ಟ್ರಪತಿ ಮುರ್ಮು ಹೇಳಿದ್ದಾರೆ.

ಗಣರಾಜ್ಯೋತ್ಸವದ ಮುನ್ನಾದಿನವಾದ ಶನಿವಾರ ಸಂಜೆ ದೇಶದ ಜನರನ್ನುದ್ದೇಶಿಸಿ ರಾಷ್ಟ್ರಪತಿ ಭವನದಿಂದಲೇ ಭಾಷಣ ಮಾಡಿದ ರಾಷ್ಟ್ರಪತಿ ದ್ರೌಪತಿ ಮುರ್ಮು ಅವರು, ಪದೇ ಪದೇ ಚುನಾವಣೆಗೆ ಹೋಗುವುದರಿಂದ ಆಡಳಿತಾಂಗದ ಮೇಲೆ ಹೆಚ್ಚುವರಿ ಹೊರೆ ಬೀಳುತ್ತದೆ. ಆಗ ಆಡಳಿತ ವ್ಯವಸ್ಥೆ ಭಾಗಶಃ ಅಭಿವೃದ್ಧಿಯ ಹಾದಿಯಿಂದ ಪಕ್ಕಕ್ಕೆ ಸರಿಯುತ್ತದೆ ಎಂದು ಹೇಳಿದರು. ಹಾಗಾಗಿ ಒಂದು ದೇಶ-ಒಂದು ಚುನಾವಣೆ ದೇಶಕ್ಕೆ ಅನುಕೂಲಕಾರಿಯಾಗಲಿದೆ ಎಂದು ಗಮನ ಸೆಳೆದರು. ದೇಶದ ಆತ್ಮದಲ್ಲೇ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಎಲ್ಲವೂ ಮಿಳಿತವಾಗಿವೆ. ದೇಶದ ಸಂವಿಧಾನ ಇವೆಲ್ಲವನ್ನೂ ದೇಶದ ಜನತೆಗೆ ದಯಪಾಲಿಸಿದೆ. ಇದೆಲ್ಲದರಿಂದಾಗಿಯೇ ಭಾರತದ ನಾಗರಿಕ ಪರಂಪರೆಯೂ ಶ್ರೀಮಂತವಾಗಿದೆ ಎಂದು ಬಣ್ಣಿಸಿದರು. ದೇಶದ ಸಂವಿಧಾನವು ಪ್ರತಿಯೊಬ್ಬ ವ್ಯಕ್ತಿಗೂ ಅವನದೇ ಆದ ಸ್ವಾತಂತ್ರ್ಯ, ಅಭಿವ್ಯಕ್ತಿಯನ್ನು ಒದಗಿಸಿರುವುದ ಜತೆಗೇ ಎಲ್ಲರನ್ನೂ ಒಟ್ಟಾಗಿಸುವಲ್ಲಿಯೂ ಮಹತ್ವದ ಪಾತ್ರ ವಹಿಸಿದೆ ಎಂದರು.

ಎಂಎಸ್‌ಎಂಇ-ಮೂಲಸೌಕರ್ಯ ಕ್ಷೇತ್ರಕ್ಕೆ ಈ ಬಾರಿಯೂ ಒತ್ತು | 146.38 ಕೋಟಿ ಜನರ ದೇಶದಲ್ಲಿ ಮಾನವಶಕ್ತಿಯ ಸದ್ಬಳಕೆ ಮುಖ್ಯ

ಎಂಎಸ್‌ಎಂಇ: ಉದ್ಯೋಗ ಸೃಷ್ಟಿಯತ್ತ ಬಜೆಟ್ ಗಮನ

ದೆಹಲಿ: ಒಂದು ದೇಶ ಯುವಜನರನ್ನು ಶಕ್ತಿ ಎಂದು ಕೊಳ್ಳುವುದಾದರೆ, ಅವರಿಂದ ದೇಶದ ಪ್ರಗತಿಗೆ ಉತ್ತಮ ಕೊಡುಗೆ ಬರಬೇಕು ಎಂದು ನಿರೀಕ್ಷಿಸುವುದಾದರೆ ಉದ್ಯೋಗ ಅವಕಾಶಗಳೂ, ಸ್ವಂತ ಉದ್ದಿಮೆ ಆರಂಭಕ್ಕೆ ಅಗತ್ಯ ವೇದಿಕೆಗಳನ್ನೂ ಸೃಷ್ಟಿಸಿಕೊಡಬೇಕು. ಬದಲಾಗಿ ದೇಶದಲ್ಲಿ ನಿರುದ್ಯೋಗ ಸಮಸ್ಯೆ ಇದ್ದರೆ ಆ ದೇಶದ ಯುವಜನರ ಶಕ್ತಿ ನಿರುಪಯುಕ್ತ, ಪರಿಣಾಮ ಅಭಿವೃದ್ಧಿ ಗತಿಗೆ ಪೆಟ್ಟು.



ಹಾಗಾಗಿಯೇ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ 3.0 ಸರಕಾರ ಈ ಅವಧಿಯ ಮೊದಲ ಬಜೆಟ್‌ನಲ್ಲಿ ಉದ್ಯೋಗಾವಕಾಶ ಸೃಷ್ಟಿಯತ್ತ ಹೆಚ್ಚು ಗಮನ ಹರಿಸಲಿದೆ ಎಂಬ ನಿರೀಕ್ಷೆಗಳಿವೆ. ಅದಕ್ಕಾಗಿ 'ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮ' (ಎಂಎಸ್‌ಎಂಇ) ಹಾಗೂ ಮೂಲಸೌಕರ್ಯ ವಲಯಗಳಿಗೆ ಬಜೆಟ್ ಹೆಚ್ಚಿನ ಗಮನ ಹರಿಸಲಿದೆ ಎಂಬ ನಿರೀಕ್ಷೆ ಇದೆ.

ಈ ಮಧ್ಯೆ, ಕೃತಕ ಬುದ್ಧಿಮತ್ತೆ(ಎಐ) ಎಂಬ ಹೊಸ ತಂತ್ರಜ್ಞಾನ ಉದ್ಯೋಗದ ಅವಕಾಶಗಳನ್ನು ಕಡಿಮೆಯಾಗುವಂತೆ ಮಾಡುತ್ತಿದೆ ಎಂಬುದು ಸದ್ಯದ ಜಾಗತಿಕ ಮಟ್ಟದ ಸಮಸ್ಯೆಯಾಗಿದೆ. 146.38 ಕೋಟಿಗೂ ಅಧಿಕ ಜನಸಂಖ್ಯೆಯ ಭಾರದಿಂದ ಬಸವಳಿದಿರುವ ಭಾರತಕ್ಕೆ 'ನೌಕರಿ ಕಡಿತ'ಕ್ಕೆ ಕಾರಣವಾಗುವ 'ಎಐ' ತಂತ್ರಜ್ಞಾನ ಶಾಪವಾಗುವ ಅಪಾಯವೇ ಅಧಿಕ. ಹಾಗಾಗ ಬಾರದು ಎಂದರೆ ಸರಕಾರ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಗಳು ಸೃಷ್ಟಿಯಾಗುವತ್ತ ಗಮನ ಹರಿಸಲೇಬೇಕಿದೆ.

ಎಂಎಸ್‌ಎಂಇ ಉದ್ಯಮ ನಿರೀಕ್ಷೆ: ಹೆಚ್ಚಿನ ಉದ್ಯೋಗ ಸೃಷ್ಟಿಗೆ ಅವಕಾಶ ಮಾಡಿಕೊಡುವ ಉದ್ಯಮ ಕ್ಷೇತ್ರಗಳಲ್ಲಿ ತಯಾರಿಕಾ ವಲಯಕ್ಕೆ ಮೊದಲ ಸ್ಥಾನ. ನಂತರದಲ್ಲಿ ಮೂಲ ಸೌಕರ್ಯ ನಿರ್ಮಾಣ ಕ್ಷೇತ್ರವಿದೆ. ತಯಾರಿಕಾ ಕ್ಷೇತ್ರದಲ್ಲಿಯೂ ದೊಡ್ಡ ಉದ್ದಿಮೆಗಳಲ್ಲಿ ಯಂತ್ರಗಳ ಬಳಕೆ ಇರುವುದರಿಂದ ದೇಶದ ಜನಸಂಖ್ಯೆ ತಕ್ಕನಾದಷ್ಟು ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿ ಸಾಧ್ಯತೆ ಇರದು. ಹಾಗಾಗಿ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳ ಕ್ಷೇತ್ರಗಳಲ್ಲೇ ಹೆಚ್ಚಿನ ಉದ್ಯೋಗ ಸೃಷ್ಟಿ ಸಾಧ್ಯ ಎಂಬ ಕಾರಣಕ್ಕೆ ಎನ್‌ಡಿಎ ಸರಕಾರವೂ 'ಎಂಎಸ್‌ಎಂಇ' ಕಡೆಗೆ ಕೆಲ ವರ್ಷಗಳಿಂದ ಹೆಚ್ಚಿನ ಒತ್ತು ನೀಡುತ್ತಾ ಬಂದಿದೆ. ಈ ಬಾರಿ ಆ ಪ್ರಮಾಣ ಇನ್ನಷ್ಟು ಹೆಚ್ಚಬೇಕಿದೆ. ಎಂಎಸ್‌ಎಂಇ ಕ್ಷೇತ್ರದ ಉನ್ನತಿಗಾಗಿ ಬಜೆಟ್‌ನಿಂದ ದೊಡ್ಡ ಕೊಡುಗೆಗಳನ್ನು ಉದ್ಯಮ ವಲಯ ನಿರೀಕ್ಷಿಸುತ್ತಿದೆ.

'ಎಐ'ನತ್ತಲೂ ಗಮನ: ಭಾರತೀಯ ಕಂಪನಿಗಳು ಜಾಗತಿಕ ಸ್ಪರ್ಧೆಯಲ್ಲಿ ಮುಂಚೂಣಿಯಲ್ಲಿರಲು ಎಐನ ಬಳಕೆಯ ಕುರಿತಾಗಿಯೂ ಬಜೆಟ್ ಗಮನ ಹರಿಸಲಿದೆ. ಎಐನಿಂದ ಉದ್ಯೋಗಾವಕಾಶ ಕ್ಷೀಣಿಸುತ್ತದೆ ಎಂಬ ಆತಂಕದ ನಡುವೆಯೂ ಈ ವಿನೂತನ ತಂತ್ರಜ್ಞಾನ ವಲಯ ಪ್ರಾಮುಖ್ಯತೆ ಪಡೆದಿದೆ.

ಮೂಲಸೌಕರ್ಯ ಕ್ಷೇತ್ರ: ದೇಶದಲ್ಲಿ ಹೊಸದಾಗಿ ರಾಷ್ಟ್ರೀಯ ಹೆದ್ದಾರಿ, ಸೇತುವೆಗಳು, ಸುರಂಗ ಮಾರ್ಗಗಳು, ರೈಲು ಮತ್ತು ವಿಮಾನ ನಿಲ್ದಾಣಗಳ ನಿರ್ಮಾಣ ದೇಶದ ಮೂಲಸೌಕರ್ಯ ವಲಯವನ್ನು ಬಹಳವಾಗಿ ವಿಸ್ತಾರಗೊಳಿಸಿದೆ.

ಗುಜರಾತ್‌ನಲ್ಲಿ ದೇಶದ ಮೊದಲ ಉಪ ಪ್ರಧಾನಿ, ಉಕ್ಕಿನ ಮನುಷ್ಯ ಎಂದೇ ಹೆಸರಾಗಿದ್ದ ಸರದಾರ್ ವಲ್ಲಭಬಾಯಿ ಅವರ ಕೊಡುಗೆಯ ಸ್ಮರಣಾರ್ಥ ನಿರ್ಮಿಸಿದ 'ಏಕತೆ ಪ್ರತಿಮೆ', ವಿಶ್ವದಲ್ಲೇ ಅತಿ ಉದ್ದದ ಸುರಂಗ ಮಾರ್ಗವೆನಿಸಿದ 'ಅಟಲ್ ಟನಲ್', ಜಮ್ಮು-ಕಾಶ್ಮೀರದಲ್ಲಿ ಅದ್ಭುತ ಎನ್ನುವಂತೆ ನಿರ್ಮಾಣಗೊಂಡ ವಿಶ್ವದ ಅತ್ಯಂತ ಎತ್ತರದ ಸ್ಥಳದಲ್ಲಿನ ರೈಲು ಮಾರ್ಗದ 'ಚೆನಾಬ್ ಸೇತುವೆ' ಮತ್ತು ಏಷ್ಯಾ ಖಂಡದಲ್ಲೇ ಅತಿ ಉದ್ದದ 'ಜೋಜಿಲಾ ಟನಲ್'(ಸುರಂಗ ಮಾರ್ಗ) ಕಳೆದೊಂದು ದಶಕದಲ್ಲಿ ಎನ್‌ಡಿಎ ಸರಕಾರದ ಅವಧಿಯಲ್ಲಿನ ಅದ್ವಿತೀಯ ನಿರ್ಮಾಣಗಳು. ಮೊದಲನೆಯದು ಪ್ರವಾಸೋದ್ಯಮಕ್ಕೆ ಒತ್ತು ನೀಡಿದರೆ, ಉಳಿದ ಮೂರೂ ನಿರ್ಮಾಣಗಳು ದೇಶದ ಮೂಲ ಸೌಕರ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದವು. ಇವುಗಳ ನಿರ್ಮಾಣ ವೇಳೆ ಸಾಕಷ್ಟು ಉದ್ಯೋಗಾವಕಾಶ ಸೃಷ್ಟಿಯಾಗಿತ್ತು ಎಂಬುದು ಗಮನಾರ್ಹ.

ಇನ್ನೊಂದೆಡೆ, ರೈಲು-ವಿಮಾನ ನಿಲ್ದಾಣಗಳು, ಬಂದರುಗಳ ನಿರ್ಮಾಣ ಕಾರ್ಯವೂ ಭರದಿಂದ ಸಾಗುತ್ತಿದೆ. ಹೆದ್ದಾರಿಗಳ ಅಭಿವೃದ್ಧಿಯಂತೂ ನಿರಂತರ ನಡೆದಿದೆ. ಇದರಿಂದಲೂ ಸಾಕಷ್ಟು ಉದ್ಯೋಗಾವಕಾಶ ಸೃಷ್ಟಿಯಾಗುತ್ತಿದೆ. ಈ ಬಾರಿಯ ಬಜೆಟ್‌ನಲ್ಲೂ ಮೂಲ ಸೌಕರ್ಯ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ಸಿಗುವ ನಿರೀಕ್ಷೆ ಇದೆ.

ಹಲ್ವಾ ತಯಾರಿ

ಬಜೆಟ್ ಸಿದ್ಧಪಡಿಸುವ ಕಾರ್ಯ 6 ತಿಂಗಳು ಮುಂಚಿನಿಂದಲೇ ಆರಂಭವಾಗುತ್ತದೆ. ಬಜೆಟ್‌ನ ಅಂತಿಮ ಪ್ರತಿ ಕಡೆಯ 6-7 ದಿನಗಳಲ್ಲಿ ಸಿದ್ಧವಾಗುತ್ತದೆ. ಆ ಅವಧಿಯ ಆರಂಭಕ್ಕೆ ಮುನ್ನ ಕೇಂದ್ರ ವಿತ್ತ ಸಚಿವರ ಉಪಸ್ಥಿತಿಯಲ್ಲೇ 'ಹಲ್ವಾ ತಯಾರಿಕೆ' ಕಾರ್ಯಕ್ರಮವೂ ರೂಢಿಗತವಾಗಿ ನಡೆಯುತ್ತದೆ. ಆ ಬಳಿಕ ಬಜೆಟ್ ಪುಸ್ತಕದ ನೂರಾರು ಪ್ರತಿಗಳ ಮುದ್ರಣಕ್ಕೆ ಚಾಲನೆ ನೀಡಲಾಗುತ್ತದೆ. ಈ ಹಲ್ವಾ ತಯಾರಿ ಶುಕ್ರವಾರ ಸಚಿವೆ ನಿರ್ಮಲಾ ಸೀತಾರಾಮನ್ ಅವರ ಉಪಸ್ಥಿತಿಯಲ್ಲಿ ನೆರವೇರಿದೆ. ಸದನದಲ್ಲಿ ಸಂಸದರಿಗೆ, ಮಾಧ್ಯಮದವರಿಗೆ ವಿತರಿಸಲು 2025-26ನೇ ಹಣಕಾಸು ವರ್ಷದ ಮುಂಗಡಪತ್ರವನ್ನು ಪುಸ್ತಕ ರೂಪದಲ್ಲಿ ಮುದ್ರಿಸಿದರೂ ಕೂಡ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸದನದಲ್ಲಿ ಆ ಪುಸ್ತಕ ಹಿಡಿದು ಬಜೆಟ್ ಭಾಷಣ ಮಾಡುವುದಿಲ್ಲ. ಬದಲಾಗಿ 'ಟ್ಯಾಬ್' ಹಿಡಿದು ಡಿಜಿಟಲ್ ಮಾದರಿಯಲ್ಲಿ ಬಜೆಟ್ ಮಂಡಿಸಲಿದ್ದಾರೆ.

ಆದಾಯ ತೆರಿಗೆ ದಾವೆ ಕಡಿತ ಚಿಂತನೆ

ಆದಾಯ ತೆರಿಗೆಗೆ ಸಂಬಂಧಿಸಿ ಆದಾಯ ತೆರಿಗೆ ಇಲಾಖೆ(ಐಟಿಡಿ) ತೆರಿಗೆ ಪಾವತಿದಾರರಿಗೆ ನೋಟಿಸ್ ನೀಡುವುದು, ದಾವೆ ಹೂಡುವುದು ಇತ್ತೀಚೆಗೆ ಹೆಚ್ಚಿದೆ. ಇಂಥ ಪ್ರಸಂಗಗಳು ಕಡಿಮೆಯಾಗಬೇಕಿದೆ. ಅದಕ್ಕಾಗಿ ಆದಾಯ ತೆರಿಗೆ ಪಾವತಿದಾರರಿಗೆ ತೆರಿಗೆ ಕುರಿತು ಖಚಿತತೆ ಬರುವ ರೀತಿ 'ಐಟಿ ಕಾಯ್ದೆ' ನಿಯಮಗಳು ಇರುವಂತೆ ಮಾಡಲು ಸಚಿವಾಲಯ ಮಟ್ಟದಲ್ಲಿ ಚಿಂತನೆ ನಡೆದಿದೆ. ಐಟಿ ಕಾಯ್ದೆಯಲ್ಲಿ ತಗಾದೆಗೆ ಕಾರಣ ವಾಗುವ ವಿವಿಧ ಅಂಶಗಳ ಪುನರ್ ಪರಿಶೀಲ ನೆಗೆಂದೇ 22 ವಿಶೇಷ ಉಪ ಸಮಿತಿಗಳನ್ನು ರಚಿಸಲಾಗಿದೆ. ಕಾಯ್ದೆಯಲ್ಲಿನ ಭಾಷೆ, ಪದ ಬಳಕೆಯಿಂದ ಗೊಂದಲವಾಗುವುದನ್ನು ತಪ್ಪಿಸಲು ಭಾಷೆ ಸರಳಗೊಳಿಸುವಿ ಕೆಯತ್ತಲೂ ಗಮನ ಹರಿಸಲಾಗುತ್ತಿದೆ. ವಿವಾದಗಳ ಕಡಿತ ಮತ್ತು ಅನಗತ್ಯ ಅಂಶಗಳನ್ನು ಕಾಯ್ದೆಯಿಂದ ತೆಗೆದುಹಾ ಕುವುದು ಸೇರಿ ನಾಲ್ಕು ವಿಭಾಗಗಳಲ್ಲಿ ಸುಧಾರ ಣೆಗೆ ಸಾರ್ವಜನಿಕರಿಂದ ಅಭಿಪ್ರಾಯಗಳನ್ನೂ ಆಹ್ವಾನಿಸಲಾಗಿತ್ತು. ಅದರಂತೆ ಆದಾಯ ತೆರಿಗೆ ಇಲಾಖೆಗೆ 6,500 ಸಲಹೆಗಳು ಬಂದಿವೆ. ಅವು ಗಳನ್ನು ಆಧರಿಸಿ ಕೆಲ ನಿಬಂಧನೆಗಳು ಮತ್ತು ಪರಿ ಚ್ಛೇದಗಳ ಕಡಿತಕ್ಕೆ ಚಿಂತನೆ ನಡೆದಿದೆ ಎಂದು ತಿಳಿದುಬಂದಿದೆ.

ಸಮಾಚಾರ ಸಣ್ಣದಲ್ಲ

ಅಂಗಾಂಗ ದಾನ: ಕುಟುಂಬಸ್ಥರಿಗೆ ಸನ್ಮಾನ

ಧಾರವಾಡ: ಧಾರವಾಡ ಮದಿಹಾಳದ ಸಿದ್ದಾರೋಡ ಕಾಲೋನಿ 2 ನೇ ಕ್ರಾಸ್, ಡಿಪೋ ಸರ್ಕಲ್‌ನಲ್ಲಿ ದಿ. ರೋಹಿತ ಜಗದೀಶ ಕುಂಬಾರ (20) ಅವರು ಅಪಘಾತದಲ್ಲಿ ಮೆದುಳು ನಿಷ್ಕ್ರೀಯಗೊಂಡು ಮರಣ ಹೊಂದಿದ್ದು, ಅವರ ಕುಟುಂಬಸ್ಥರು ಅಂಗಾಂಗ ದಾನ ಮಾಡಲು ಮುಂದೆ ಬಂದು, ಅಗಸ್ಟ 7, 2024 ರಂದು ಧಾರವಾಡ ಎಸ್.ಡಿ.ಎಂ ಆಸ್ಪತ್ರೆಯಲ್ಲಿ ಅಂಗಾಂಗ ದಾನ ಮಾಡಿರುತ್ತಾರೆ. ಕುಟುಂಬಸ್ಥರ ಮಾನವಿತೇಯ ಕಾರ್ಯವನ್ನು ಶ್ಲಾಘಿಸುವ ನಿಟ್ಟಿನಲ್ಲಿ ಘನ ಸರಕಾರವು ಇವರ ಕುಟುಂಬಸ್ಥರನ್ನು ಸನ್ಮಾನಿಸಲು ಇಚ್ಛಿಸಿದ್ದು, ಜಿಲ್ಲಾಡಳಿತದಿಂದ ಜನವರಿ 26 ರಂದು ಗಣಾರಾಜ್ಯೋತ್ಸವದ ದಿನಾಚರಣೆಯ ಅಂಗವಾಗಿ ಧಾರವಾಡದ ಆರ್.ಎನ್.ಶೆಟ್ಟಿ ಕ್ರೀಡಾಂಗಣದಲ್ಲಿ ಜರುಗುವ ಜಿಲ್ಲಾ ಮಟ್ಟದ ಕಾರ್ಯಕ್ರಮದಲ್ಲಿ ಕುಟುಂಬಸ್ಥರನ್ನು ಜಿಲ್ಲಾ ಉಸ್ತುವಾರಿ ಸಚಿವರು ಸನ್ಮಾನಿಸಿ ಗೌರವಿಸುವರು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಂಟರ ಸಂಘದ ವಾರ್ಷಿಕ ಸ್ನೇಹಕೂಟ

ಹುಬ್ಬಳ್ಳಿ: ಹುಬ್ಬಳ್ಳಿ ಧಾರವಾಡ ಬಂಟರ ಸಂಘದ ವಾರ್ಷಿಕ ಸ್ನೇಹಕೂಟವು ಜ.26 ಕ್ಕೆ ಭಾನುವಾರ ಸಂಜೆ 4 ಕ್ಕೆ ಆರ್. ಎನ್. ಶೆಟ್ಟಿ ಕಲ್ಯಾಣ ಮಂಟಪದಲ್ಲಿ ನೆರವೇರಲಿದೆ. ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಹೋಟೆಲ್ ಸಂಘಗಳ ಅಧ್ಯಕ್ಷರಾದ ಗೋಪಾಲ ಕೆ. ಶೆಟ್ಟಿ ಹಾಗೂ ಹುಬ್ಬಳ್ಳಿ ಸೆಂಟ್ರಲ್ ಶಾಸಕರಾದ ಮಹೇಶ್ ಟೆಂಗಿನಕಾಯಿ ಉಪಸ್ಥಿತರಿರುವರು. ಸಂಜೆ 4 ಗಂಟೆಗೆ ವಾರ್ಷಿಕ ಸ್ನೇಹಕೂಟ ಸಮಾರಂಭಕ್ಕೆ ಮುಖ್ಯ ಅತಿಥಿಗಳಾದ ಗೋಪಾಲ ಕೆ. ಶೆಟ್ಟಿ ಹಾಗೂ ಮಹೇಶ್ ಟೆಂಗಿನಕಾಯಿ ಇವರು ಚಾಲನೆ ನೀಡವರು. ದಿವಗಂತ ಕೆ. ಶಂಕರ್ ಶೆಟ್ಟಿ ಅವರ ಸ್ಮರಣಾರ್ಥ ಅವರ ಪುತ್ರ ಪ್ರಸನ್ನ ಶಂಕರ್ ಶೆಟ್ಟಿ ಇವರು ಬಡ ವಿದ್ಯಾರ್ಥಿಗಳಿಗಾಗಿ ಸುಮಾರು 7 ಲಕ್ಷ ರೂಪಾಯಿ ವಿದ್ಯಾರ್ಥಿ ವೇತನ ನೀಡಲಿದ್ದಾರೆ. ನಂತರ ಸಂಜೆ 6 ಗಂಟೆಗೆ ಸಂಘದ ಮಕ್ಕಳು ಹಾಗೂ ಸದಸ್ಯ-ಸದಸ್ಯೆಯರಿಂದ ಮನೋರಂಜನಾ ಕಾರ್ಯಕ್ರಮ ನಡೆಯಲಿದೆ ಎಂದು ಅಧ್ಯಕ್ಷರಾದ ವಿಜಯಾನಂದ್ ಶೆಟ್ಟಿ ಹಾಗೂ ಕಾರ್ಯದರ್ಶಿಗಳಾದ ಪ್ರದೀಪ್ ಟಿ ಪಕ್ಕಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾಡಳಿತದಿಂದ 18 ಸಾಧಕರಿಗೆ ಸನ್ಮಾನ

ಹಾವೇರಿ: ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಜಿಲ್ಲೆಯ ಸಾಧಕರನ್ನು ಹಾಗೂ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಸೇರಿ 18 ಜನರನ್ನು ಜನವರಿ 26 ರಂದು ಜಿಲ್ಲಾಡಳಿತದಿಂದ ಗಣರಾಜ್ಯೋತ್ಸವ ಸಮಾರಂಭದಲ್ಲಿ ಸನ್ಮಾನಿ ಸಲಾಗುತ್ತಿದೆ. ವೈದ್ಯಕೀಯ ಕ್ಷೇತ್ರದಿಂದ ಸಾವಿತ್ರಿ ಪಟಗಾರ, ಕ್ರೀಡಾ ಕ್ಷೇತ್ರದಿಂದ ಬ್ಯಾಡಗಿ ತಾಲೂಕು ಮುತ್ತೂರಿನ ಕು.ಲಕ್ಷ್ಮಿ ಶಿಂಗ್ರಿ, ವಿಶೇಷ ಕ್ಷೇತ್ರದಿಂದ ಮಾರನಬೀಡ ದೈಹಿಕ ಶಿಕ್ಷಕ ಆನಂದ ಗ್ವಾಡಿಹಾಳ, ಜೇಕಿನಕಟ್ಟಿಯ ಕು.ಅನುಷಾ ಹಿರೇಮಠ, ಶಿಕ್ಷಣ ಕ್ಷೇತ್ರದಿಂದ ಹಾವೇರಿಯ ಗೋವಿಂದರಾಜ ಕಡಕೋಳ, ಶೌರ್ಯ ಕ್ಷೇತ್ರದಿಂದ ಕರ್ಜಗಿಯ ಸಿದ್ದಲಿಂಗಸ್ವಾಮಿ ಚರಂತಿಮಠ, ಸಂಕೀರ್ಣ ಕ್ಷೇತ್ರದಿಂದ ಹಾವೇರಿಯ ಪೃಥ್ವಿರಾಜ ಬೆಟಗೇರಿ, ಪರಿಸರ ಕ್ಷೇತ್ರದಿಂದ ಹಾವೇರಿಯ ಜುಬೇದಾ ನಾಯಕ ಅವರನ್ನು ಸನ್ಮಾನಕ್ಕೆ ಆಯ್ಕೆ ಮಾಡಲಾಗಿದೆ. ಮುನಿಶ್ವರ ಎಚ್.ಚೂರಿ, ಹಾಗೂ ಕನಕಾಪೂರದ ಫಕ್ಕೀರಗೌಡ ಗಾಜಿಗೌಡ್ರ, ರೈತ ಧ್ವನಿಯ ಬಂಕಾಪುರದ ಬಸವರಾಜ ಕುರಗೋಡಿ, ಮತ್ತೀತರರನ್ನು ಸನ್ಮಾನಕ್ಕೆ ಆಯ್ಕೆ ಮಾಡಲಾಗಿದೆ.

ಸಾಲ ವಸೂಲಿಗೆ ಒತ್ತಡ ಹಾಕುವಂತಿಲ್ಲ: ಡಿಸಿ

ಹಾವೇರಿ: ಜಿಲ್ಲೆಯಲ್ಲಿರುವ ಮೈಕ್ರೋ ಫೈನಾನ್ಸ್‌ಗಳು ಸಾಲಗಾರರಿಂದ ಒತ್ತಾಪೂರ್ವಕವಾಗಿ ಸಾಲ ವಸೂಲಿಗೆ ಮುಂದಾಗಬಾರದು. ಆರ್.ಬಿ.ಐ ಮಾರ್ಗಸೂಚಿ 2022ರ ಅನುಸಾರ ಕಾರ್ಯನಿರ್ವಹಿಸಬೇಕು ಎಂದು

ಡಿಸಿ ಡಾ. ವಿಜಯ ಮಹಾಂತೇಶ ದಾನಮ್ಮನವರ ಅವರು ಖಡಕ ಸೂಚನೆ ನೀಡಿದರು. ಡಿಸಿ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ ಮೈ ಕ್ರೋ ಫೈನಾನ್ಸ ಸಭೆ ನಡೆಸಿದ ಅವರು, ಸಾಲಗಾರರ ಮನೆ ಬಾಗಿಲಲ್ಲಿ ಕುಳಿತುಕೊಳ್ಳುವುದು ಹಾಗೂ ಕೆಲಸ ಸ್ಥಳಗಳಿಗೆ ಹೋಗಿ ಸಾಲ ಮರುಪಾವತಿಗೆ ಪಟ್ಟುಹಿಡುವುದು ಕಿರುಕುಳ ನೀಡುತ್ತಿರುವುದು ಕಂಡುಬರುತ್ತಿದೆ. ರಾಣೇಬೆನ್ನೂರಿನ ಪ್ರಕರಣವನ್ನು ಗಂಭೀರವಾಗಿ ಪರಿಗಣ ಸಲಾಗಿದ್ದು, ಮೈಕ್ರೋ ಫೈನಾನ್ಸಗಳು ಸಾಲಗಾರರೊಂದಿಗೆ ಸೌಜನ್ಯದಿಂದ ವರ್ತಿಸಬೇಕು ಹಾಗೂ ಅವರ ಆರ್ಥಿಕ ಪರಿಸ್ಥಿತಿ ನೋಡಿಕೊಂಡು ಅವರಿಗೆ ಸಾಲ ಮರುಪಾವತಿಗೆ ಕಾಲಾವಕಾಶ ನೀಡಬೇಕು ಎಂದು ಸೂಚಿಸಿದರು.

{ ಡಿ.ಕೆ.ಶಿವಕುಮಾರ್ } ಉಪಮುಖ್ಯಮಂತ್ರಿ

ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ರಾಜ್ಯ ಸರಕಾರ ಟನಲ್ ರಸ್ತೆ, ಡಬಲ್ ಡೆಕ್ಕರ್ ಮೇಲ್ಸೇತುವೆ, ಪಿಆರ್‌ಆರ್ ಬಿಸಿನೆಸ್ ಕಾರಿಡಾರ್, ನೀರು ಸರಬರಾಜು ಸೇರಿ ಅನೇಕ ಪ್ರಮುಖ ಯೋಜನೆ ಕೈಗೊಂಡಿದ್ದು, ಈ ಯೋಜನೆಗಳಿಗೆ 2025-26ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಅನುದಾನ ನೀಡಿ.

ಪತ್ರಿಕೋದ್ಯಮ ಸಮಾಜ ತಿದ್ದುವ ಶ್ರೇಷ್ಠ ರಂಗ

ಉತ್ತರ ಕನ್ನಡ ಜಿಲ್ಲಾ ಪತ್ರಿಕಾ ಮಂಡಳಿಯ ಸುವರ್ಣ ಮಹೋತ್ಸವ | ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ

ಹೊನ್ನಾವರ: ಸಮಾಜವನ್ನು ತಿದ್ದುವ ಶ್ರೇಷ್ಠ ಕೆಲಸವನ್ನು ಪತ್ರಿಕಾರಂಗ ಮಾಡುತ್ತಿದೆ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಇಲ್ಲಿನ ಮೂಡಲ ಗಣಪತಿ ಸಭಾಭವನದಲ್ಲಿ ಆಯೋಜಿಸಿದ್ದ ಉತ್ತರ ಕನ್ನಡ ಜಿಲ್ಲಾ ಪತ್ರಿಕಾ ಮಂಡಳಿಯ ಸುವರ್ಣ ಮಹೋತ್ಸವಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಂದಿನ ಪತ್ರಿಕೋದ್ಯಮದಲ್ಲಿ ನಿಷ್ಠೆಯಿಂದ ಕೆಲಸ ಮಾಡಿದವರು ಅನೇಕರಿದ್ದರು. ಕಾಲಬದಲಾದಂತೆ ಪತ್ರಿಕೋದ್ಯಮವೂ ಬದಲಾಗಿದೆ. ರಾಜಕಾರಣಿಗಳು ಯಾವ ರೀತಿ ನಡೆದುಕೊಳ್ಳಬೇಕು ಎಂಬುದನ್ನು ಅಂದಿನ ಪತ್ರಕರ್ತರು ಕಲಿಸುತ್ತಿದ್ದರು. ಪತ್ರಿಕಾ ರಂಗ ಸಮಾಜವನ್ನು ತಿದ್ದುವ ಶ್ರೇಷ್ಠ ರಂಗವಾಗಿದೆ. ಜಿ. ಎಸ್. ಅಜ್ಜೀಬಳ ಹೆಗಡೆಯವರು ಉತ್ತರ ಕನ್ನಡ ಜಿಲ್ಲಾ ಪತ್ರಿಕಾ ಮಂಡಳಿ ಸ್ಥಾಪನೆ ಮಾಡಿ ಉತ್ತಮವಾದ ರೀತಿಯಲ್ಲಿ ಮುನ್ನಡೆಸಿದ್ದಾರೆ. ವಸ್ತುನಿಷ್ಠತೆ ಯಿಂದಿರುವ ಪತ್ರಕರ್ತರಿಗೆ ಇಂದಿಗೂ ಎಲ್ಲಾಕಡೆಯಲ್ಲೂ ಗೌರವವಿದೆ ಎನ್ನುವುದಾಗಿ ಅವರು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಸ್ಮರಣೆ ಸಂಚಿಕೆಯನ್ನು ಬಿಡುಗಡೆ ಗೊಳಿಸಿ ಮಾತನಾಡಿ,

ನಮ್ಮ ಜಿಲ್ಲೆಯಲ್ಲಿ 50ವರ್ಷದಿಂದ ಕಷ್ಟ ಪಟ್ಟು ಸಂಘಟನೆ ಮಾಡಿ ಹಿರಿಯರು ಕಟ್ಟಿದ ಮಂಡಳಿ ಸಾರ್ಥಕವಾಗಿದೆ. ರಾಜಕಾರಣಿಗಳು ಹಾಗೂ ಪತ್ರಕರ್ತರ ಉದ್ದೇಶ ಎರಡೂ ಒಂದೇ. ಸಮಾಜದ ಅಭಿವೃದ್ಧಿಯೇ ನಮ್ಮ ಮೂಲ ಉದ್ದೇಶವಾಗಿರುತ್ತದೆ. ಪತ್ರಕರ್ತರ ಮಾರ್ಗದರ್ಶನದಲ್ಲಿ ನನ್ನ ಕೆಲಸವನ್ನು ಮಾಡುತ್ತೇನೆ ಎಂದರು.

ಉತ್ತರ ಕನ್ನಡ ಜಿಲ್ಲಾ ಪತ್ರಿಕಾ ಮಂಡಳಿಯ ಸುವರ್ಣ ಮಹೋತ್ಸವ ಸಮಾರೋಪ ಸಮಾರಂಭವನ್ನು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಉದ್ಘಾಟಿಸಿದರು.

ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮಾತನಾಡಿ, ಉತ್ತರ ಕನ್ನಡ ಜಿಲ್ಲಾ ಪತ್ರಿಕಾ ಮಂಡಳಿ 50ವರ್ಷ ಪೂರೈಸಿದೆ. ರಾಜ್ಯ ಸಂಘ ಪ್ರತಿ ಸಂದರ್ಭದಲ್ಲೂ ಪತ್ರಕರ್ತರ ಸಹಾಯಕ್ಕೆ ನಿಂತಿದೆ. ಒಂದು ಕೋಟಿ ಕ್ಷೇಮ ನಿಧಿಯನ್ನು ರಾಜ್ಯ ಸಂಘ ಹೊಂದಿದೆ. ರಾಜ್ಯ ಸಮ್ಮೇಳನದಲ್ಲಿ ಉತ್ತರ ಕನ್ನಡ ಜಿಲ್ಲಾ ಪತ್ರಿಕಾ ಮಂಡಳಿಯನ್ನು ಉತ್ತಮ ಮಂಡಳಿ ಎಂದು ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ನೈಜ ಪತ್ರಕರ್ತರನ್ನು ಉಳಿಸಿಕೊಳ್ಳುವುದೇ ನಮಗೆ ಸವಾಲಾಗಿದೆ. ಈ ನಿಟ್ಟಿನಲ್ಲಿ ನಾವೆಲ್ಲರೂ ಕಂಕಣ ಬದ್ಧವಾಗಿ ಹೆಜ್ಜೆಯಿಡಬೇಕಾಗಿದೆ ಎಂದರು.

ಈ ಸಂದರ್ಭದಲ್ಲಿ ಹಿರಿಯ ಪತ್ರಕರ್ತ ಮೋಹನ ಹೆಗಡೆ ಯವರಿಗೆ ಪ್ರತಿಷ್ಠಿತ ಕೆ.ಶಾಮರಾವ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಹಿರಿಯ ಪತ್ರಕರ್ತ ಜಿ.ಯು ಭಟ್ ಹೊನ್ನಾವರ ಮಾತನಾಡಿ, ಸಂಘ ಆರಂಭವಾಗಿನಿಂದಲೂ ಸಂಘದ ಜೊತೆಗಿದ್ದೇನೆ. ಪತ್ರಕರ್ತರನ್ನು ಸಮಾಜ ನೋಡುತ್ತೀರುತ್ತದೆ. ನಮ್ಮ ನಿಯತ್ತನ್ನು ನಾವು ಉಳಿಸಿಕೊಳ್ಳ ಬೇಕು.ದುಡ್ಡಿಗಾಗಿ ಪತ್ರಿಕೋದ್ಯಮಕ್ಕೆ ಬರಬಾರದು ಎಂದರು. ಕುಮಟಾ ಶಾಸಕ ದಿನಕರ ಶೆಟ್ಟಿ ಜಿಲ್ಲಾ ಪತ್ರಕರ್ತರ ಯಾದಿಯನ್ನು ಬಿಡುಗಡೆ ಗೊಳಿಸಿ ಮಾತನಾಡಿ, ಜಿಲ್ಲೆಯ ಅಭಿವೃದ್ಧಿಯ ಬಗ್ಗೆ ಪತ್ರಿಕಾ ಸಂಘ ಚಿಂತನೆ ಮಾಡಬೇಕು ಎಂಬ ವಿನಂತಿ ನನ್ನದಾಗಿದೆ ಎಂದರು. ಹಿರಿಯ ಪತ್ರಕರ್ತ ರವೀಂದ್ರ ಭಟ್ ಮಾತನಾಡಿ, ಪತ್ರಿಕಾ ಮಂಡಳಿ 50ವರ್ಷ ಪೂರೈಸಿರುವುದು ಹೆಮ್ಮೆಯ ಸಂಗತಿ ಯಾಗಿದೆ. ಪತ್ರಕರ್ತರಸಂಘವು ಕೇವಲ ಪತ್ರಕರ್ತರ ಯೋಗಕ್ಷೇಮವನ್ನು ನೋಡದೆ ಸಮಾಜದ ಯೋಗಕ್ಷೇಮವನ್ನೂ ನೋಡುತ್ತದೆ. ಪತ್ರಕರ್ತರಿಗೆ ರಾಜಕಾರಣಿಗಳಿಂದ ಬುದ್ದಿ ಹೇಳಿಸಿಕೊಳ್ಳುವ ಮಟ್ಟಕ್ಕೆ ಪತ್ರಕರ್ತರು ಬರಬಾರದು ಎಂದರು.

ಉತ್ತರ ಕನ್ನಡ ಜಿಲ್ಲಾ ಪತ್ರಿಕಾ ಮಂಡಳಿ ಜಿಲ್ಲಾಧ್ಯಕ್ಷ ಸುಬ್ರಾಯ ಭಟ್ ಬಕ್ಕಳ, ಹಿರಿಯ ಪತ್ರಕರ್ತ ಟಿ.ಎಂ ಸುಬ್ಬರಾಯ,ಮಾತನಾಡಿದರು.

ಈ ಸಂದರ್ಭದಲ್ಲಿ ಹಿರಿಯ ಪತ್ರಕರ್ತರಾದ ಜಿ ಯು ಭಟ್ ಹೊನ್ನಾವರ, ಟಿ.ಎಂ ಸುಬ್ಬರಾಯ ಹಾಗೂ ಉತ್ತರ ಕನ್ನಡ ಜಿಲ್ಲಾ ಪತ್ರಿಕಾ ಮಂಡಳಿ ಜಿಲ್ಲಾಧ್ಯಕ್ಷ ಜಿ.ಸುಬ್ರಾಯ ಭಟ್ ಬಕ್ಕಳ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಿ ಗೌರವಿಸಲಾಯಿತು. ಜಿಲ್ಲಾ ಪತ್ರಿಕಾ ಮಂಡಳಿ ಕಾರ್ಯದರ್ಶಿಗಳು, ಉಪಾಧ್ಯಕ್ಷರು, ಸದಸ್ಯರು ಸೇರಿ ಹಲವರು ಇದ್ದರು.

ಸಮಾಜದ ಅಭಿವೃದ್ಧಿಗೆ ಪತ್ರಕರ್ತರು ಹಾಗೂ ಜನಪ್ರತಿನಿಧಿಗಳು ಸದಾ ಶ್ರಮಿಸುತ್ತಾರೆ. ನಿಮಗೆ ತಿಳಿಯದ ಸಮಸ್ಯೆಗಳೂ ಸಹ ಪತ್ರಕರ್ತರಿಗೆ ತಿಳಿಯುತ್ತದೆ. ಪತ್ರಕರ್ತರಿಂದ ಸಾಕಷ್ಟು ಮಾಹಿತಿಗಳನ್ನು ನಾನು ತಿಳಿದುಕೊಂಡು ಜನಸೇವೆ ಮಾಡುತ್ತೇನೆ.

-ಮಂಕಾಳು ವೈದ್ಯ ಜಿಲ್ಲಾ ಉಸ್ತುವಾರಿ ಸಚಿವ.

ದಿ.ಜಿ.ಎಸ್. ಹೆಗಡೆ ಅಜ್ಜೀಬಳ ಅವರು ಸ್ಥಾಪಿಸಿದ ಉತ್ತರ ಕನ್ನಡ ಜಿಲ್ಲಾ ಪತ್ರಿಕಾ ಮಂಡಳಿ ಸುವರ್ಣ ಮಹೋತ್ಸವ ಆಚರಿಸಿ ಮುನ್ನೆಡೆಯುತ್ತಿರುವುದು ಶ್ಲಾಘನೀಯ ಸಂಗತಿ. ಉತ್ತರ ಕನ್ನಡ ಜಿಲ್ಲೆಯ ಪತ್ರಕರ್ತರು ತಮ್ಮ ನಿಷ್ಠೆಯನ್ನು ಉಳಿಸಿಕೊಂಡು ಬಂದಿದ್ದಾರೆ.

-ಬಸವರಾಜ ಹೊರಟ್ಟಿ ವಿಧಾನ ಪರಿಷತ್ ಸಭಾಪತಿ

ಮಕ್ಕಳ ಬೆಳವಣಿಗೆಗೆ ಪ್ರತಿಭಾ ಕಾರಂಜಿ ಸಹಕಾರಿ

ಗದಗನಲ್ಲಿ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ, ಕಲೋತ್ಸವ

ಗದಗ : ಮಕ್ಕಳ ಬೆಳವಣಿಗೆಗೆ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮಗಳು ಸಹಕಾರಿಯಾಗಲಿವೆ ಎಂದು ವಿಧಾನ ಪರಿಷತ್ ಶಾಸಕ ಎಸ್.ವಿ.ಸಂಕನೂರ ತಿಳಿಸಿದರು.

ಗದಗ ಬೆಟಗೇರಿಯ ಲೊಯೊಲಾ ಪ್ರಾಥಮಿಕ ಹಾಗೂ ಪ್ರೌಢಶಾಲೆ ಆವರಣದಲ್ಲಿ ಶನಿವಾರ ಗದಗ ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಮಕ್ಕಳ ಮಾನಸಿಕ, ದೈಹಿಕ ಹಾಗೂ ಭಾವನಾತ್ಮಕ ಬೆಳವಣಿಗೆಗೆ ಸರಕಾರದಂದ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಪ್ರತಿಭಾ ಕಾರಂಜಿಯೂ ಸಹ ಒಂದು ಮಹತ್ವದ ಕಾರ್ಯಕ್ರಮವಾಗಿದ್ದು ಮಕ್ಕಳಲ್ಲಿ ಸುಪ್ತವಾಗಿರುವ ಪ್ರತಿಭೆಯನ್ನು ತಿಳಿದುಕೊಂಡು ಅದನ್ನು ಪ್ರೋತ್ಸಾಹಿಸಿ ಬೆಳೆಸುವುದು ಅವಶ್ಯಕವಾಗಿದೆ. ಮಕ್ಕಳು ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಬೇಕಾದರೆ ಉದಾಸೀನ ಮನೋಭಾವನೆ ಹೊಂದದೇ ಉತ್ಸಾಹದಿಂದ ಮುನ್ನುಗ್ಗಬೇಕು ಕರೆ ನೀಡಿದರು.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಆರ್.ಎಸ್. ಬುರಡಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಗದಗ ಬೆಟಗೇರಿ

ಗದಗ ಬೆಟಗೇರಿಯ ಲೊಯೊಲಾ ಶಾಲೆಯಲ್ಲಿ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮವನ್ನು ವಿಧಾನ ಪರಿಷತ್ ಶಾಸಕ ಎಸ್.ವಿ.ಸಂಕನೂರ ಉದ್ಘಾಟಿಸಿದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಜಿ, ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್, ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭರತ್ ಎಸ್, ಲೋಯಲಾ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಮುಖ್ಯೋ ಪಾಧ್ಯಾಯರುಗಳಾದ ಸಿಸ್ಟರ್ ಬೆಂಗೆರಾ ಬಿ. ಎಸ್, ಸಿಸ್ಟರ್ ಪಿಂಟೋ, ಶಿಕ್ಷಣಾಧಿಕಾರಿಗಳ ಸಂಘದ ಜಿಲ್ಲಾ ಅಧ್ಯಕ್ಷರಾದ ಜಿ.ಎಲ್. ಬಾರಾಟಕ್ಕೆ, ಬಿ.ಎಫ್. ಪೂಜಾರ, ವಿ.ಎಂ. ಹಿರೇಮಠ, ಎಂ.ಕೆ. ಲಮಾಣಿ, ವಿಜಯ ಕಿರೇಸೂರ, ಶಿವಾನಂದ ಗಿಡ್ನಂದಿ, ಬಿ. ಕೆ.ನಿಂಬನಗೌಡ್ರ , ವಸಂತ ಕಲಕಂಬಿ , ರವಿ ಕೋಟಿಯವರ, ಆರ್.ಎಂ. ಶಿರಹಟ್ಟಿ, ಹಾಲನಗೌಡ ಪಾಟೀಲ, ಎಂ.ಎಸ್. ಕುಚಬಾಳ, ರಾಜು ಚೌವ್ಹಾಣ, ಸರಸ್ವತಿ ಡಿ ಕನವಳ್ಳಿ , ವಿವಿಧ ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು ಹಾಜರಿದ್ದರು.

ಮಕ್ಕಳು ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಮನೋಭಾವನೆ ಹೊಂದಬೇಕು. ಮಕ್ಕಳಲ್ಲಿ ಹುದುಗಿರುವ ಕಲೆಗಳನ್ನು ಪ್ರೋತ್ಸಾಹಿಸುವುದು ಪಾಲಕರ ಹಾಗೂ ಶಿಕ್ಷಕರ ಕರ್ತವ್ಯವಾಗಿದೆ. ಜಿಲ್ಲೆಯ ಮಕ್ಕಳು ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ರಾಜ್ಯ ಮಟ್ಟದಲ್ಲಿಯೂ ಸಹ ಗದಗ ಜಿಲ್ಲೆಯ ಕೀರ್ತಿ ತರಬೇಕು.

-ಕೃಷ್ಣಗೌಡ ಎಚ್. ಪಾಟೀಲ, ತಾಲೂಕು ಗ್ಯಾರಂಟಿ ಸಮಿತಿ ಸದಸ್ಯ

ಮತದಾನ ಸಂವಿಧಾನಿಕ ಹಕ್ಕು, ಕರ್ತವ್ಯ

ಹಾವೇರಿ: ಮತದಾನ ಸಂವಿಧಾನಿಕ ಹಕ್ಕು ಮತ್ತು ಕರ್ತವ್ಯವಾಗಿದೆ. ಪ್ರಜಾಪ್ರಭುತ್ವದ ಸುಭದ್ರತೆಗೆ 18 ವರ್ಷ ತುಂಬಿದ ದೇಶದ ಪ್ರತಿಯೊಬ್ಬ ಪ್ರಜೆಯೂ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿ, ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕು ಎಂದು ಅಪರ ಡಿಸಿ ಡಾ.ಎಲ್.ನಾಗರಾಜ ಅವರು ಹೇಳಿದರು.

ನಗರದ ಗುರುಭವನದಲ್ಲಿ ಶನಿವಾರ ಭಾರತ ಚುನಾವಣಾ ಆಯೋಗ, ಜಿಲ್ಲಾಡಳಿತ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದಲ್ಲಿ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಜಿಲ್ಲೆಯಲ್ಲಿ 35 ಸಾವಿರ ಯುವ ಮತದಾರರಿದ್ದಾರೆ. ಮತದಾರರ ಪಟ್ಟಿಯಲ್ಲಿ ನಿಮ್ಮ ಹೆಸರು ಇರುವ ಬಗ್ಗೆ ಪರಿಶೀಲಿಸಲು ತಿಳಿಸಬೇಕು. 18 ವರ್ಷ ಪೂರೈಸಿದ ಪ್ರತಿಯೊಬ್ಬರು ಮತದಾರರ ಪಟ್ಟಿಯಲ್ಲಿ ನೋಂದಾಯಿಸಿಕೊಳ್ಳಬೇಕು. ಮತದಾನದ ಅರಿವು ಮೂಡಿಸುವ ಹಿನ್ನಲೆಯಲ್ಲಿ ಶಾಲಾ-ಕಾಲೇಜುಗಳಲ್ಲಿ ಕ್ಲಬ್‌ಗಳನ್ನು ರಚನೆ ಮಾಡಲಾಗಿದೆ ಎಂದರು.

ಮತಗಟ್ಟೆ ಅಧಿಕಾರಿಗಳು ಹಾಗೂ ಚುನಾವಣಾ ಆ್ಯಪ್ ಮೂಲಕ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ ಮಾಡಿಕೊಳ್ಳಬಹುದು. ಚುನಾವಣೆ ಪ್ರಕ್ರಿಯೆಗಳು ವರ್ಷದ 12 ತಿಂಗಳು ನಿರಂತರ ನಡೆಯುತ್ತಿರುತ್ತದೆ. ಆದರೆ ಸಾರ್ವಜನಿಕರಿಗೆ ಚುನಾವಣೆ ಸಂದರ್ಭದಲ್ಲಿ ಮಾತ್ರ ಕಾಣುತ್ತದೆ. ಜಾತಿ, ಧರ್ಮ, ಪುರುಷ-ಮಹಿಳೆ ಎನ್ನದೇ ಎಲ್ಲರಿಗೂ ಮತದಾನದ ಸಮಾನ ಹಕ್ಕು ನೀಡಲಾಗಿದೆ. ಯಾವುದೇ ಆಸೆ-ಆಮಿಷಗಳಿಗೆ ಒಳಗಾಗದೇ ಮತದಾನಮಾಡಬೇಕು ಎಂದರು. ಹಿರಿಯ ದಿವಾಣ ನ್ಯಾಯಾಧೀಶರು ಬಾಲಮುಕುಂದ ಆರ್.ಮುತಾಲಿಕದೇಸಾಯಿ ಮಾತನಾಡಿದರು.

ಜಿಪಂ ಉಪ ಕಾರ್ಯದರ್ಶಿ ಡಾ.ರಾಂಗಸ್ವಾಮಿ ಮಾತನಾಡಿದರು. ಮತದಾರರ ನೋಂದಣಿಯಲ್ಲಿ ಅತ್ಯುತ್ತಮ ಕಾರ್ಯನಿರ್ವಹಿಸಿದ ಇ.ಎಲ್.ಸಿ. ನೋಡಲ್ ಅಧಿಕಾರಿಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಡಾ.ಉಮೇಶಪ್ಪ ಎಚ್., ಸುರೇಶ ಹುಗ್ಗಿ, ಚನ್ನಪ್ಪ, ಶೈಲಜಾ, ಸಿದ್ದರಾಮಪ್ಪ ಬರಗಿಮಠ, ರಮೇಶ ಎಂ.ಎಸ್, ಮುರಳಿಧರ ಇದ್ದರು.

ಜಿಲ್ಲಾಡಳಿತ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದಲ್ಲಿ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮನ್ನು ಡಿಸಿ ಡಾ.ಎಲ್.ನಾಗರಾಜ ಉದ್ಘಾಟಿಸಿದರು.

ಆಮಿಷಕ್ಕೆ ಒಳಗಾಗದೆ ಮತದಾನ ಮಾಡಿ

ಧಾರವಾಡ: ದೇಶದ ಅಭಿವೃದ್ಧಿಗಾಗಿ ಯೋಗ್ಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಯುವ ಮತದಾರರಲ್ಲಿ ಜಾಗೃತಿಯನ್ನು ಮೂಡಿಸಿ ಸಕ್ರಿಯವಾಗಿ ಮತದಾನದ ದಿನದಂದು ಮತ ಚಲಾಯಿಸುವುದು ಅವರ ಕರ್ತವ್ಯವಾಗಿದೆ ಎಂದು ಜನತಾ ಶಿಕ್ಷಣ ಸಮಿತಿಯ ಕಾರ್ಯದರ್ಶಿ ಡಾ. ಅಜಿತ ಪ್ರಸಾದ ಹೇಳಿದರು.

ಜೆಎಸ್‌ಎಸ್.ಶ್ರೀ ಮಂಜುನಾಥೇಶ್ವರ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಸಂಸ್ಥೆಯ ಮಾನವ ಹಕ್ಕುಗಳ ಸಂಘ ಮತ್ತು ಎನ್.ಎಸ್.ಎಸ್. ಘಟಕದ ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ಮತದಾರರ ದಿನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ. ಡಾ.ಅಜೀತ ಪ್ರಸಾದ, ಮತವು ಬುಲೆಟಿಗಿಂತ ಬಲಯುತವಾದದ್ದು. ಮತದಾನ ಮಾಡುವುದು ಪ್ರತಿಯೊಬ್ಬ ನಾಗರಿಕರ ಜವಾಬ್ದಾರಿ.

18 ವರ್ಷ ಮೇಲ್ಪಟ್ಟ ಎಲ್ಲರೂ ಮತದಾನಕ್ಕೆ ಅರ್ಹರು. ಚುನಾವಣೆಯಲ್ಲಿ ಯಾರನ್ನಾದರೂ ಆಯ್ಕೆ ಮಾಡಿ ಆದರೆ ಉತ್ತಮರನ್ನು ಆಯ್ಕೆ ಮಾಡಿ. ಆಮಿಷಗಳಿಗೆ ಒಳಗಾಗಿ ಎಂದಿಗೂ ಮತ ಚಲಾಯಿಸಬೇಡಿ. ಹೀಗಾಗಿ ಎಲ್ಲ ವಿದ್ಯಾರ್ಥಿಗಳು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಕಡ್ಡಾಯವಾಗಿ ನೋಂದಾಯಿಸಿಕೊಳ್ಳಬೇಕು. ಆ ಮೂಲಕ ರಾಷ್ಟ್ರವನ್ನು ಮುನ್ನಡೆಸಲು ದಕ್ಷ ಸಮರ್ಥ ನಾಯಕನನ್ನು ಆಯ್ಕೆ ಮಾಡಬೇಕು ಎಂದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಹುಬ್ಬಳ್ಳಿಯ ಲೋಕಸಭಾ ಮಾಜಿ ಸದಸ್ಯರಾದ ಐ. ಜಿ. ಸನದಿ ಅವರು ಮಾತನಾಡಿ, ಮತದಾನದ ದಿನ ಮತದಾರರು ಸುಶಿಕ್ಷಿತವಾಗಿ, ಪ್ರಾಮಾಣಿಕವಾಗಿ, ನಿರ್ಭಯದಿಂದ ಯಾವುದೇ ಆಮಿಷಕ್ಕೆ ಒಳಗಾಗದೆ ಮತ ಚಲಾಯಿಸಿದರೆ ಮತದಾನದ ಪಾವಿತ್ರ್ಯತೆಯನ್ನು ಎತ್ತಿ ಹಿಡಿಯಬಹುದು ಎಂದರು.

ಇದೇ ಸಂದರ್ಭದಲ್ಲಿ ಹುಬ್ಬಳ್ಳಿಯ ಲೋಕಸಭಾ ಮಾಜಿ ಸದಸ್ಯರಾದ ಐ.ಜಿ.ಸನದಿಯವರನ್ನು ಜನತಾ ಶಿಕ್ಷಣ ಸಮಿತಿಯ ಪರವಾಗಿ ಸನ್ಮಾನಿಸಲಾಯಿತು. ಶೇಖರ ನಡೋಣಿ ಕವನ ವಾಚನ ಮಾಡಿದರು. ಡಾ. ಸೂರಜ ಜೈನ್, ಮಹಾವೀರ ಉಪಾ ಧ್ಯೆ, ಪ್ರೊ. ಆರ್.ವಿ.ಚಿಟಗುಪ್ಪಿ, ಪ್ರೊ. ಬಲಭೀಮ ಹಾವನೂರ ಮತ್ತು ಪ್ರೊ. ಮಹಾಂತ ದೇಸಾಯಿ,ಕುಲಕರ್ಣಿ ಕು. ಸಿದ್ಧಲಿಂಗಯ್ಯ ಹಿರೇಮಠ, ಸೃಜನಾ ಮುರುಗೋಡ ಇದ್ದರು.

ರಾಷ್ಟ್ರೀಯ ಮತದಾರರ ದಿನ ಕಾರ್ಯಕ್ರಮವನ್ನು ಡಾ. ಅಜಿತ ಪ್ರಸಾದ ಮತದಾನದ ಪತ್ರಿಜ್ಞಾವಿಧಿ ಬೋಧಿಸಿದರು.

ಶಿಕ್ಷಣದಿಂದ ಸಧೃಡ ಸಮಾಜ ಕಟ್ಟಲು ಸಾಧ್ಯ

ಬಸವರಡ್ಡಿ ಶಿಕ್ಷಣ ಸಂಸ್ಥೆಯ 34ನೇ ವರ್ಷದ ವಾರ್ಷಿಕೋತ್ಸವ | ಶ್ರೀಗಳು

ಕಾರ್ಯಕ್ರಮದಲ್ಲಿ ವಿವಿಧ ಸಾಧಕರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಧಾರವಾಡ: ಹಣದ ವ್ಯಾಮೋಹವಿಲ್ಲದೇ, ಶಿಕ್ಷಣ ಸಂಸ್ಥೆಯನ್ನು ನಡೆಸಿದರೆ, ಸಧೃಡ ಸಮಾಜವನ್ನು ಕಟ್ಟಬಹುದು ಎಂದು, ಉಪ್ಪಿನಬೆಟಗೇರಿಯ ಶ್ರೀ ಮೂರುಸಾವಿರ ವೀರಕ್ತಮಠದ ಪರಮಪೂಜ್ಯ ಶ್ರೀಮದ್ ನಿರಂಜನ ಪ್ರಣವ ಸ್ವರೂಪಿ ಕುಮಾರ ವಿರೂಪಾಕ್ಷ ಮಹಾಸ್ವಾಮಿಗಳು ಹೇಳಿದರು.

ಬಸವರಡ್ಡಿ ಶಿಕ್ಷಣ ಸಂಸ್ಥೆಯ, ಬಸವರಡ್ಡಿ ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪೂರ್ವ ಪ್ರಾಥಮಿಕ ಶಾಲೆಯ 34 ನೇ ವರ್ಷದ ಸಾಂಸ್ಕೃತಿಕ ಉತ್ಸವ-2025 ವಾರ್ಷಿಕೋತ್ಸವ ಕಾರ್ಯಕ್ರಮವನ್ನು, ಬಸವರಡ್ಡಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಉದ್ಘಾಟಿಸಿ ಮಾತನಾಡಿದ ಶ್ರೀಗಳು, ಸಾಧಿಸುವ ಛಲವಿದ್ದರೆ ಮೌಂಟ್ ಎವರೆಸ್ಟ್ ಶಿಖರವನ್ನು ಏರಬಹುದು. ಈ ನಿಟ್ಟಿನಲ್ಲಿ ಬಸವರಡ್ಡಿ ಶಿಕ್ಷಣ ಸಂಸ್ಥೆ ಹಗಲಿರುಳು ಕೆಲಸ ಮಾಡುತ್ತಿದ್ದು, ಉತ್ತರೋತ್ತರ ಏಳಿಗೆ ಆಗಲಿ ಎಂದು ಆಶಿಸಿದರು.

ಬಸವರಡ್ಡಿ ಶಿಕ್ಷಣ ಸಂಸ್ಥೆ ಅಧ್ಯಕ್ಷರಾದ ಶಂಕರ.ವಿ.ಬಸವರಡ್ಡಿ ಮಾತನಾಡಿ, ಗುಣಮಟ್ಟದ ಶಿಕ್ಷಣ ಕೊಡುವಲ್ಲಿ ನಮ್ಮ ಶಿಕ್ಷಣ ಸಂಸ್ಥೆ ಎಂದಿಗೂ ರಾಜಿಯಾಗುವ ಮಾತಿಲ್ಲಾ. ಆಟದ ಜತೆಗೆ ಪಠ್ಯಕ್ಕೂ ಅಷ್ಟೇ ಪ್ರಾಮುಖ್ಯತೆ ಕೊಡುವುದರ ಜತೆಗೆ ಮಕ್ಕಳ ಆರೋಗ್ಯದ ಕಡೆಗೂ ನ್ಯೂಟ್ರಿಶನ್ ಫುಡ್ ಉತ್ತಮ ಎಂದು ಮನಗಂಡಿರುವ ಸಂಸ್ಥೆ ನಮ್ಮದು. ಬರುವ ದಿನಗಳಲ್ಲಿ ಕಲಘಟಗಿ ಹಾಗೂ ರೋಣದಲ್ಲಿ ಶಾಲೆ ಪ್ರಾರಂಭಮಾಡಲಾಗುವುದು ಎಂದರು.

ಬಸವರಡ್ಡಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಸೃಷ್ಟಿ, ಶಂಕರ ಬಸವರಡ್ಡಿ ಪ್ರಾಸ್ತಾವಿಕವಾಗಿ ಮಾತನಾಡಿ, ಯುವ ಪೀಳಿಗೆಯ ನವ ಆಲೋಚನೆ, ಸಂಸ್ಥೆಯ ಬೆಳವಣಿಗೆ ಹಾಗೂ ಸಂಸ್ಥೆಯ ಮುಂದಿನ ಯೋಚನೆಗಳನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಸಾಧಕರಿಗೆ ಸನ್ಮಾನಿಸಿ ಗೌರವಿಸಲಾಯಿತು. ಬಸವರಡ್ಡಿ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ರಮೇಶ ಮಡಿವಾಳ, ಕವಿತಾ ನಿಲೇಕಣಿ ಹಾಗೂ ವಿಜಯಲಕ್ಷ್ಮಿ ಹೂಗಾರ, ಚಂದ್ರು ಲಮಾಣಿ ಇದ್ದರು.

ಉಪ್ಪಿನಬೆಟಗೇರಿ ನೂತನ ಅಂಚೆ ಕಚೇರಿ

ಧಾರವಾಡ: ಉಪ್ಪಿನಬೆಟಗೇರಿ ಗ್ರಾಮದ ಖಾಸಗಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಉಪ ಅಂಚೆ ಕಚೇರಿಯು ಗ್ರಾಮದ ಬಸ್ ನಿಲ್ದಾಣ ಹತ್ತಿರದ ಸ್ವಂತ ಹೊಸ ಕಟ್ಟಡದಲ್ಲಿ ಜನವರಿ 20 ರಿಂದ ಕಾರ್ಯ ನಿರ್ವಹಿಸುತ್ತಿದೆ. ಕೇಂದ್ರ ಸರಕಾರದ ಅಂಚೆ ಮತ್ತು ಸಂವಹನ ಮಂತ್ರಾಲಯದ ಅನುದಾನದಲ್ಲಿ ಈ ಕಟ್ಟಡ ನಿರ್ಮಿಸಲಾಗಿದ್ದು, ಉಪ ಅಂಚೆ ಕಚೇರಿಯು ಉಪ್ಪಿನಬೆಟಗೇರಿ, ಹನುಮನಾಳ, ಲೋಕುರ, ಕಲ್ಲೂರ, ಪುಡಕಲಕಟ್ಟಿ ಮತ್ತು ಯಾದವಾಡ ಗ್ರಾಮಗಳ ಸಾರ್ವಜನಿಕರಿಗೆ ಅಂಚೆ ಇಲಾಖೆಯ ವಿವಿಧ ಸೇವೆಗಳನ್ನು ನೀಡುತ್ತಿದೆ.

ಸಾರ್ವಜನಿಕರಿಗೆ ಅಗತ್ಯ ಸೇವೆಯನ್ನು ತಕ್ಷಣಕ್ಕೆ ನೀಡಲು ಅನಕೂಲವಾಗಲು ನೂತನ ಕಟ್ಟಡದಲ್ಲಿ ಜ.20 ರಿಂದ ಉಪ ಅಂಚೆ ಕಚೇರಿ ಕಾರ್ಯ ಆರಂಭಿಸಿದ್ದು, ಸದ್ಯದಲ್ಲಿಯೇ ನೂತನ ಕಟ್ಟಡದ ಲೋಕಾರ್ಪಣೆ ಕಾರ್ಯಕ್ರಮ ಜರುಗಲಿದೆ ಎಂದು ಧಾರವಾಡ ವಿಭಾಗದ ಹಿರಿಯ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇಶದ ಅಭಿವೃದ್ಧಿಗೆ ಸಮರ್ಥರನ್ನು ಆಯ್ಕೆ ಮಾಡಿ

ಗದಗ: ಅರ್ಹ ಮತದಾರರೆಲ್ಲರೂ ಮತದಾನದ ದಿನದಂದು ತಪ್ಪದೆ ಮತಗಟ್ಟೆಗೆ ತೆರಳಿ ನಿರ್ಭೀತಿಯಿಂದ ಮತ ಚಲಾಯಿಸಿ ನಿಮ್ಮಿಷ್ಟದ ವ್ಯಕ್ತಿ ಅಥವಾ ಸರಕಾರ ರಚಿಸಲು ಮುಂದಾಗಬೇಕು ಎಂದು ಪ್ರಧಾನ ಜಿಲ್ಲಾ ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಅವರು ಹೇಳಿದರು.

ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಆಶ್ರಯದಲ್ಲಿ ಜರುಗಿದ ರಾಷ್ಟ್ರೀಯ ಮತದಾರರ ದಿನಾಚರಣೆಯ ಜಿಲ್ಲಾ ಮಟ್ಟದ ಕಾರ್ಯಕ್ರಮವನ್ನು ಉಧ್ಘಾಟಿಸಿ ಅವರು ಮಾತನಾಡಿದರು.

ಮತದಾನದ ದಿನದಂದು ಮತ ಚಲಾವಣೆಗಾಗಿಯೇ ಅವಕಾಶ ಮಾಡಿಕೊಡಲಾಗುತ್ತದೆ. ಅದನ್ನು ಚಲಾಯಿಸಿ ತಮ್ಮಿಷ್ಟದ ವ್ಯಕ್ತಿಗಳ ಆಯ್ಕೆ ಮಾಡುವ ಹಕ್ಕನ್ನು ಮತದಾನದ ಮೂಲಕ ಮಾಡಿ. ಚುನಾವಣೆ ಎಂಬುದು ಪ್ರಜಾಪ್ರಭುತ್ವದ ಹಬ್ಬ. ಈ ಹಬ್ಬದಲ್ಲಿ ನಾವೆಲ್ಲರೂ ಹುರುಪಿನಿಂದ ಪಾಲ್ಗೊಂಡು

ಜಿಲ್ಲಾ ಮಟ್ಟದ ಕಾರ್ಯಕ್ರಮವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಉಧ್ವಾಟಿಸಿದರು.

ಮತ ಚಲಾಯಿಸಿ ಬಲಿಷ್ಠ ಪ್ರಜಾಪ್ರಭುತ್ವ ನಿರ್ಮಾಣದೊಂದಿಗೆ ಬಲಿಷ್ಠ ಭಾರತ ನಿರ್ಮಿಸೋಣ. ಯುವಜನರು ನಿಮ್ಮಿಷ್ಟದ ಸರಕಾರ ರಚನೆಯಲ್ಲಿ ಮತದಾನದ ಮೂಲಕ ಪಾಲ್ಗೊಳ್ಳಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಉತ್ತಮ ಚುನಾವಣಾ ಕಾರ್ಯ ನಿರ್ವಹಿಸಿದ ಐ. ಎಲ್.ಒ.ಗಳಿಗೆ ಸನ್ಮಾನಿಸಲಾಯಿತು.

ಜಿಪಂ ಸಿಇಒ ಭರತ್ ಎಸ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್ .ನೇಮಗೌಡ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಿ ಎಸ್ ಶಿವನಗೌಡ, ಜಿ.ಪಂ ಉಪಕಾರ್ಯದರ್ಶಿ ಸಿ ಆರ್. ಮುಂಡರಗಿ ಉಪಸ್ಥಿತರಿದ್ದರು.

ಯುವಜನತೆ ತಮ್ಮ ಜ್ಞಾನ ಭಂಡಾರ, ಅನುಭವವನ್ನು ಮತ್ತು ರಾಷ್ಟ್ರಾಭಿಮಾನವನ್ನು ಬೆಳೆಸಿಕೊಂಡು ಮತದಾನ ಮಾಡುವುದರ ಮೂಲಕ ದೇಶವನ್ನು ಸುಭದ್ರಗೊಳಿಸಬೇಕು. ಮತದಾನದ ವೇಳೆಯಲ್ಲಿ ಯಾವ ಅಭ್ಯರ್ಥಿಯು ಸೂಕ್ತವಲ್ಲ ಎನಿಸಿದರೆ ನೋಟಾ ಒತ್ತುವುದರ ಮೂಲಕ ಮತಚಲಾಯಿಸಿ ಎಂದು ಹೇಳಿದರು.

-ಎಸ್.ಜಿ. ಪಲ್ಲೇದ, ಜಿಲ್ಲಾಧಿಕಾರಿಗಳ ಕಾನೂನು ಸಲಹೆಗಾರ

ಮಹನೀಯರ ಜಯಂತಿ ಆಚರಣೆಗೆ ನಿರ್ಧಾರ

ಧಾರವಾಡ: ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಅವರ ಅಧ್ಯಕ್ಷತೆಯಲ್ಲಿ, ಬೆಳಿಗ್ಗೆ ಜಿಲ್ಲಾಧಿಕಾರಿ ಕಚೇರಿ ನೂತನ ಸಭಾಂಗಣದಲ್ಲಿ ವಿವಿಧ ಜಯಂತಿಗಳ ಆಚರಣೆ ಕುರಿತು ಪೂರ್ವಭಾವಿ ಸಭೆ ಜರುಗಿತು.ಸಭೆಯಲ್ಲಿ ಅಪರ ಜಿಲ್ಲಾಧಿಕಾರಿಗಳು ಮಾತನಾಡಿ, ಫೆ.1 ರಂದು ಶ್ರೀ ಮಡಿವಾಳ ಮಾಚಿದೇವ ಜಯಂತಿ ಮತ್ತು ಫೆ.5ರಂದು ಶ್ರೀ ಸವಿತಾ ಮಹರ್ಷಿ ಜಯಂತಿ ಹಾಗೂ ಫೆ.10ರಂದು ಕಾಯಕ ಶರಣರ ಜಯಂತಿಯನ್ನು ಎಲ್ಲ ಸಮಾಜದ ಮುಖಂಡರ, ಸಾರ್ವಜನಿಕರ ಸಹಕಾರದಲ್ಲಿ ಆಚರಿಸಲಾಗುತ್ತದೆ ಎಂದು ಹೇಳಿದರು. ಜಯಂತಿಯ ದಿನಗಳಂದು ನಗರದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಬೆಳಗ್ಗೆ 11 ಗಂಟೆಗೆ ಮಹಾತ್ಮರ ಭಾವಚಿತ್ರಕ್ಕೆ ಪೂಜೆ, ಪುಷ್ಪಾರ್ಪಣೆ ಸಲ್ಲಿಸಲಾ ಗುತ್ತದೆ. ಸಮಾಜದ ಮುಖಂಡರ ಕೋರಿಕೆ ಹಾಗೂ ಸಹಕಾರದಲ್ಲಿ ಮಹಾತ್ಮರ ಭಾವಚಿತ್ರದ ಭವ್ಯ ಮೆರವಣಿಗೆಯನ್ನು ನಗರದಲ್ಲಿ ಜಯಂತಿ ದಿನಗಳಂದು ಆಯೋಜಿಸಲಾಗುತ್ತದೆ. ಇದರಲ್ಲಿ ಕಲಾ ತಂಡಗಳು ಭಾಗವಹಿಸುತ್ತವೆ ಎಂದು ಅಪರ ಜಿಲ್ಲಾಧಿಕಾರಿಗಳು ತಿಳಿಸಿದರು. ಜಿ ಪಂ ಉಪಕಾರ್ಯದರ್ಶಿ ಬಿ.ಎಸ್.ಮೂಗನೂರಮಠ ಅವರು ಮಾತನಾಡಿ, ಮಹಾತ್ಮ ಮತ್ತು ಶರಣರ ವಿಚಾರಧಾರೆಗಳು, ಜೀವನ ಸಿದ್ದಾಂತಗಳನ್ನು ಸಾರ್ವಜನಿಕರಿಗೆ ಪರಿಚಯಿಸುವ ಅರ್ಥಪೂರ್ಣವಾಗಿ ಆಚರಿಸಬೇಕು. ಮಹಾತ್ಮ ರನ್ನು ಜಾತಿ, ಸಮುದಾಯಗಳಿಗೆ ಸೀಮಿತಗೊಳಿಸಬಾರದು ಎಂದರು.

ಸಮಾಚಾರ ಸಣ್ಣದಲ್ಲ

ಆಸ್ಟ್ರೇಲಿಯನ್ ಓಪನ್ ಕೀಸ್‌ಗೆ ಚೊಚ್ಚಲ ಕಿರೀಟ

ಮೆಲ್ಬರ್ನ್: ಆಸ್ಟ್ರೇಲಿಯನ್ ಓಪನ್ ಗ್ರ್ಯಾನ್ ಸ್ಲ್ಯಾಮ್ ಟೆನಿಸ್ ಟೂರ್ನಿಯ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಅಮೆರಿಕದ ಮ್ಯಾಡಿಸನ್ ಕೀಸ್ ಚೊಚ್ಚಲ ಕಿರೀಟ ಮುಡಿಗೇರಿಸಿಕೊಂಡಿದ್ದಾರೆ. ಶನಿವಾರ ನಡೆದ ಜಿದ್ದಾಜಿದ್ದಿನ ಹಣಾಹಣಿಯಲ್ಲಿ ಮ್ಯಾಡಿಸನ್ ಅವರು ಅಗ್ರ ಶ್ರೇಯಾಂಕಿತೆ ಬೆಲರೂಸ್‌ನ ಅರಿನಾ ಸಬಲೆಂಕಾ ವಿರುದ್ಧ 6-3, 2-6, 7-5ರ ಅಂತರದಲ್ಲಿ ರೋಚಕ ಜಯ ಗಳಿಸಿದ್ದಾರೆ. ಇದರೊಂದಿಗೆ ಸಬಲೆಂಕಾ ಅವರ ಆಸ್ಟ್ರೇಲಿಯನ್ ಓಪನ್ ಪ್ರಶಸ್ತಿಯ ಹ್ಯಾಟ್ರಿಕ್ ಕನಸು ಭಗ್ನಗೊಂಡಿದೆ. 2023 ಹಾಗೂ 2024ನೇ ಸಾಲಿನಲ್ಲಿ ಸಬಲೆಂಕಾ ಚಾಂಪಿಯನ್ ಎನಿಸಿಕೊಂಡಿದ್ದರು. ಕಳೆದ ವರ್ಷ ಅಮೆರಿಕನ್ ಓಪನ್ ಪ್ರಶಸ್ತಿ ಕೂಡ ಗೆದ್ದಿದ್ದರು. ಮತ್ತೊಂದೆಡೆ ಮ್ಯಾಡಿಸನ್ ಅವರಿಗೆ ಇದು ಚೊಚ್ಚಲ ಗ್ರ್ಯಾನ್‌ಸ್ಲ್ಯಾಮ್ ಪ್ರಶಸ್ತಿ ಸಾಧನೆಯಾಗಿದೆ. ಮೊದಲ ಸೆಟ್ 6-3ರ ಅಂತರ ದಲ್ಲಿ ಗೆದ್ದ ಮ್ಯಾಡಿಸನ್ ಮುನ್ನಡೆ ಸಾಧಿಸಿದರು. ಆದರೆ ಸಬಲೆಂಕಾ 2ನೇ ಸೆಟ್ 6-2ರಲ್ಲಿ ಗೆದ್ದು ಸಮಬಲ ಸಾಧಿಸಿದರು. 3ನೇ ಹಾಗೂ ಅಂತಿಮ ಸೆಟ್‌ನಲ್ಲಿ ಇಬ್ಬರು ಸಮಬಲದ ಹೋರಾಟ ನೀಡಿದರು. ಆದರೆ ಕೊನೆಯ ಕ್ಷಣದಲ್ಲಿ ಒತ್ತಡವನ್ನು ನಿಭಾಯಿಸಿದ ಮ್ಯಾಡಿಸನ್ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ಗುಕೇಶ್ ಪಂದ್ಯ ಡ್ರಾ

ವಿಯ್ಕ್ ಆನ್ ಝೀ: ವಿಶ್ವ ಚಾಂಪಿಯನ್ ಡಿ. ಗುಕೇಶ್, ಟಾಟಾ ಸ್ಟೀಲ್ ಚೆಸ್ ಟೂರ್ನಿಯ ಆರನೇ ಸುತ್ತಿನಲ್ಲಿ ಉಜ್ಬೇಕಿಸ್ತಾನದ ನದಿರ್ಬೆಕ್ ಅಬ್ದುಸತ್ತಾರೋವ್ ಜತೆ 64 ನಡೆಗಳ ನಂತರ ಡ್ರಾ ಮಾಡಿಕೊಂಡರು. ಅಬ್ದುಸತ್ತಾರೊವ್ ಜತೆ ಜಂಟಿಯಾಗಿ ಅಗ್ರಸ್ಥಾನದಲ್ಲಿರುವ ಭಾರತದ ಪ್ರಜ್ಞಾನಂದ ಇನ್ನೊಂದು ಪಂದ್ಯದಲ್ಲಿ ಚೀನಾದ ವೀ ಯಿ ಜತೆ ಪಾಯಿಂಟ್ ಹಂಚಿಕೊಂಡರು. 14 ಆಟಗಾರರು ಭಾಗವಹಿಸುತ್ತಿರುವ ಈ ಟೂರ್ನಿಯಲ್ಲಿ ಪ್ರಜ್ಞಾನಂದ ಮತ್ತು ಅಬ್ದುಸತ್ತಾರೋವ್ ತಲಾ 4.5 ಪಾಯಿಂಟ್ಸ್ ಗಳಿಸಿದ್ದಾರೆ. ಇವರ ಬೆನ್ನುಬಿದ್ದಿರುವ ಗುಕೇಶ್ (4) ಎರಡನೇ ಸ್ಥಾನದಲ್ಲಿದ್ದಾರೆ. ವರ್ಷದ ಈ ಮೊದಲ ಪ್ರಮುಖ ಟೂರ್ನಿಯಲ್ಲಿ ಇನ್ನೂ ಏಳು ಸುತ್ತಿನ ಪಂದ್ಯಗಳು ಬಾಕಿ ಉಳಿದಿವೆ.

ರಣಜಿ: ಪಂಜಾಬ್ ವಿರುದ್ಧ ರಾಜ್ಯಕ್ಕೆ ಇನ್ನಿಂಗ್ಸ್ ಜಯ, ಗಿಲ್ ಶತಕ ವ್ಯರ್ಥ

ಕರ್ನಾಟಕಕ್ಕೆ ಸ್ಮರಣೀಯ ಜಯ

ಬೆಂಗಳೂರು: ನಗರದ ಎಂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ರಣಜಿ ಟ್ರೋಫಿ ಪಂದ್ಯದಲ್ಲಿ ಪಂಜಾಬ್ ವಿರುದ್ಧ ಕರ್ನಾಟಕ ತಂಡ ಭರ್ಜರಿ ಗೆಲುವು ಸಾಧಿಸಿದೆ. ಪಂಜಾಬ್ ನಾಯಕ ಶುಭ ಮನ್ ಗಿಲ್ (102) ಶತಕ ಬಾರಿಸಿದರೂ, ಕರ್ನಾಟಕ ವಿರುದ್ಧ ಇನಿಂಗ್ಸ್ ಸೋಲಿನಿಂದ ತಂಡವನ್ನು ರಕ್ಷಿಸಲು ಸಾಧ್ಯವಾಗಲಿಲ್ಲ. ಇನ್ನಿಂಗ್ಸ್ ಮತ್ತು 207 ರನ್‌ಗಳ ಅಂತರದ ಗೆಲುವಿನೊಂದಿಗೆ ಕರ್ನಾಟಕದ ಬೋನಸ್ ಪಾಯಿಂಟ್ ಸೇರಿದಂತೆ ಏಳು ಪಾಯಿಂಟ್‌ಗಳನ್ನು ಕಲೆಹಾಕಿದೆ. ಈ ಮೂಲಕ ಸಿ ಗುಂಪಿನಲ್ಲಿ 2ನೇ ಸ್ಥಾನಕ್ಕೇರಿದೆ.

ಟಾಸ್ ಗೆದ್ದ ಕರ್ನಾಟಕ ಮೊದಲಿಗೆ ಬೌಲಿಂಗ್ ಆಯ್ಕೆ ಮಾಡಿಕೊಂಡಿತ್ತು. ಮೊದಲ ಇನಿಂಗ್ಸ್‌ನಲ್ಲಿ ಪಂಜಾಬ್ ತಂಡ 55 ರನ್‌ಗಳಿಗೆ ಸರ್ವಪತನ ಕಂಡಿತ್ತು. ಈ ಇನಿಂಗ್ಸ್‌ನಲ್ಲಿ ಗಿಲ್ ಕೇವಲ ನಾಲ್ಕು ರನ್ ಗಳಿಸಲಷ್ಟೇ ಶಕ್ತರಾಗಿದ್ದರು. ಕರ್ನಾಟಕದ ಪರ ವಿ ಕೌಶಿಕ್ 4 ವಿಕೆಟ್ ಪಡೆದರೆ, ಅಭಿಲಾಷ್ ಶೆಟ್ಟಿ 3, ಪ್ರಸಿದ್ ಕೃಷ್ಣ 2 ವಿಕೆಟ್ ಕಬಳಿಸಿದ್ದರು.

ಮೊದಲ ಇನಿಂಗ್ಸ್‌ನಲ್ಲಿ ಭರ್ಜರಿ ಬ್ಯಾಟಿಂಗ್ ಪ್ರದರ್ಶಿಸಿದ್ದ ಕರ್ನಾಟಕ 475 ರನ್ ಗಳಿಸಿ ಆಲೌಟ್ ಆಗಿತ್ತು. ಈ ಮೂಲಕ 420 ರನ್‌ಗಳ ಬೃಹತ್ ಮುನ್ನಡೆ ಕಾಯ್ದುಕೊಂಡಿತ್ತು. ಸ್ಮರಣ್ ರವಿಚಂದ್ರನ್ ಅವರ ಅಮೋಘ ದ್ವಿಶತಕ ಕರ್ನಾಟಕವು ಮುನ್ನಡೆ ಪಡೆಯಲು ಕಾರಣ ವಾಯಿತು.

ಎರಡನೇ ಇನ್ನಿಂಗ್ಸ್ ಆರಂಭಿಸಿದ ಪಂಜಾಬ್ ಎರಡನೇ ದಿನದಾಟದ ಅಂತ್ಯಕ್ಕೆ 23 ರನ್ ಗಳಿಸು ವಷ್ಟರಲ್ಲಿ 2 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಶುಭಮನ್ ಗಿಲ್ ಹೊರತುಪಡಿಸಿ ಉಳಿದ ಯೊವೊಬ್ಬ ಆಟಗಾರರು ಕರ್ನಾಟಕದ ಬೌಲಿಂಗ್ ದಾಳಿಗೆ ತಕ್ಕ ಉತ್ತರ ನೀಡುವಲ್ಲಿ ವಿಫಲರಾದರು. ಗಿಲ್ ಅವರು 171 ಎಸೆತಗಳಲ್ಲಿ 14 ಬೌಂಡರಿ ಮತ್ತು ಮೂರು ಸಿಕ್ಸರ್ ಸಿಡಿಸುವ ಮೂಲಕ 102 ರನ್‌ಗಳನ್ನು ಕಲೆಹಾಕಿದರು. ಬಳಿಕ ಶ್ರೇಯಸ್ ಗೋಪಾಲ್ ಅವರ ಎಸೆತದಲ್ಲಿ ಔಟ್ ಆದರು. ಅಂತಿಮವಾಗಿ ಪಂಜಾಬ್ 63.4 ಓವರ್ ಗಳಲ್ಲಿ 213 ರನ್‌ಗಳಿಗೆ ಆಲೌಟ್ ಆಯಿತು.

ಎರಡನೇ ಇನ್ನಿಂಗ್ಸ್‌ನಲ್ಲಿ ಕರ್ನಾಟಕದ ಪರ ಯಶೋ ವರ್ಧನ್ ಪರಂತಾಪ್ 37ಕ್ಕೆ 3, ಶ್ರೇಯಸ್ ಗೋಪಾಲ್ ಶ್ರೇಯಸ್ ಗೋಪಾಲ್ 19ಕ್ಕೆ 3 ವಿಕೆಟ್ ಪಡೆದರೆ ಪ್ರಸಿದ್ ಕೃಷ್ಣ 57ಕ್ಕೆ 2 ವಿಕೆಟ್ ಪಡೆದರು. ವಾಸುಕಿ ಕೌಶಿಕ್ 37ಕ್ಕೆ 1ಮತ್ತು ಅಭಿಲಾಷ್ ಶೆಟ್ಟಿ 58ಕ್ಕೆ1 ಒಂದು ವಿಕೆಟ್ ಪಡೆದು ತಂಡಕ್ಕೆ ನೆರವಾದರು.

2ನೇ ಸ್ಥಾನಕ್ಕೆ ಲಗ್ಗೆ

ಹಾಲಿ ರಣಜಿ ಟೂರ್ನಿಯಲ್ಲಿ ಏಳುಬೀಳಿನ ಹಾದಿಯಲ್ಲಿರುವ ಕರ್ನಾಟಕ ತಂಡಕ್ಕೆ ಇದು 2ನೇ ಗೆಲುವಾಗಿದೆ. 6 ಪಂದ್ಯಗಳಲ್ಲಿ 2 ಗೆಲುವು, 4 ಡ್ರಾ ಸಾಧಿಸಿರುವ ಕರ್ನಾಟಕ ತಂಡ 19 ಅಂಕ ಪಡೆದು ಸಿ ಗುಂಪಿನಲ್ಲಿ 2ನೇ ಸ್ಥಾನದಲ್ಲಿದೆ. ಹರಿಯಾಣ 5 ಪಂದ್ಯಗಳಲ್ಲಿ 2 ಗೆಲುವಿನೊಂದಿಗೆ 20 ಅಂಕ ಪಡೆದು ಅಗ್ರ ಸ್ಥಾನದಲ್ಲಿದೆ. ಇದೀಗ 6ನೇ ಸುತ್ತಿನ ಪಂದ್ಯದಲ್ಲೂ ಹರಿಯಾಣದ ಗೆಲುವು ಪಕ್ಕಾ ಆಗಿದ್ದು, ಅಗ್ರಸ್ಥಾನದಲ್ಲೇ ಮುಂದುವರಿಯಲಿದೆ.

ಮುಂಬೈಗೆ ಸೋಲುಣಿಸಿದ ಜಮ್ಮು-ಕಾಶ್ಮೀರ

ರೋಹಿತ್ ಪಡೆಗೆ ಮುಖಭಂಗ

ಜಮ್ಮು: ಟೀಮ್ ಇಂಡಿಯಾದ 7 ಆಟಗಾರರನ್ನು ಒಳಗೊಂಡ ಮುಂಬೈ ತಂಡಕ್ಕೆ ಜಮ್ಮು ಕಾಶ್ಮೀರ ತಂಡ 5 ವಿಕೆಟ್‌ಗಳಿಂದ ಸೋಲುಣಿಸಿದೆ. 42 ಬಾರಿಯ ಚಾಂಪಿಯನ್ ಮುಂಬೈ ತಂಡ ವನ್ನು ಜಮ್ಮು ಮತ್ತು ಕಾಶ್ಮೀರ ಸೋಲಿಸಿರುವುದು 2024-25ರ ಸಾಲಿನ ರಣಜಿಯ ಚಿತ್ರಣ ಬದಲಿಸಿದೆ. ಮುಂಬೈ ಮೊದಲ ಇನಿಂಗ್ಸ್‌ನಲ್ಲಿ ಕೇವಲ 120 ರನ್‌ಗಳಿಗೆ ಆಲೌಟ್ ಆಗಿತ್ತು. ಪ್ರತಿ ಯಾಗಿ ಜಮ್ಮು ಮತ್ತು ಕಾಶ್ಮೀರ ತಂಡ ಮೊದಲ ಇನಿಂಗ್ಸ್‌ನಲ್ಲಿ 206 ರನ್ ಗಳಿಸಿ ಮುಂಬೈ ವಿರುದ್ಧ 86 ರನ್‌ಗಳ ಮುನ್ನಡೆ ಸಾಧಿಸಿತ್ತು. ಮುಂಬೈ ಎರಡನೇ ಇನ್ನಿಂಗ್ಸ್‌ನಲ್ಲಿ 290 ರನ್ ಗಳಿಸಿ ಆಲೌಟ್ ಆಗಿದ್ದು, ಜಮ್ಮು ಮತ್ತು ಕಾಶ್ಮೀರ ಗೆಲುವಿಗೆ 205 ರನ್‌ಗಳ ಗುರಿ ಪಡೆದಿತ್ತು. ಈ ಗುರಿ ಬೆನ್ನಟ್ಟಿದ ಜಮ್ಮು ಮತ್ತು ಕಾಶ್ಮೀರ 5 ವಿಕೆಟ್ ಕಳೆದುಕೊಂಡು 207 ರನ್ ಗಳಿಸಿತು. ಇದರೊಂದಿಗೆ ಮುಂಬೈ 5 ವಿಕೆಟ್‌ಗಳಿಂದ ಸೋಲನುಭವಿಸ ಬೇಕಾಯಿತು. ಜಮ್ಮು ಕಾಶ್ಮೀರ ವಿರುದ್ಧದ ಪಂದ್ಯದಲ್ಲಿ ಮುಂಬೈ ಪರ ಟೀಮ್ ಇಂಡಿಯಾ ಆಟಗಾರರಾದ ರೋಹಿತ್ ಶರ್ಮಾ, ಯಶಸ್ವಿ ಜೈಸ್ವಾಲ್, ಅಜಿಂಕ್ಯ ರಹಾನೆ, ಶ್ರೇಯಸ್ ಅಯ್ಯರ್, ಶಿವಂ ದುಬೆ, ಶಾರ್ದೂಲ್ ಠಾಕೂರ್ ಹಾಗೂ ತನುಷ್ ಕೋಟ್ಯಾನ್ ಕಣಕ್ಕಿಳಿದಿದ್ದರು. ಇಷ್ಟಾದರೂ ಮುಂಬೈ ತಂಡಕ್ಕೆ ಗೆಲ್ಲಲು ಸಾಧ್ಯವಾಗಿಲ್ಲ.

ಟೀಂ ಇಂಡಿಯಾದ ನಾಲ್ವರಿಗೆ ಸ್ಥಾನ | ಭಾರತೀಯ ಆಟಗಾರರದ್ದೇ ಅಧಿಪತ್ಯ

ಐಸಿಸಿ ವರ್ಷದ ಟಿ20 ತಂಡಕ್ಕೆ ರೋಹಿತ್ ನಾಯಕ

ದುಬೈ: ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಪ್ರಕಟಿಸಿರುವ 2024ರ ವರ್ಷದ ಪುರುಷರ ಟ್ವೆಂಟಿ- 20 ಕ್ರಿಕೆಟ್ ತಂಡಕ್ಕೆ ಭಾರತದ ರೋಹಿತ್ ಶರ್ಮಾ ನಾಯಕರಾಗಿ ಆಯ್ಕೆಯಾಗಿದ್ದಾರೆ.

ಐಸಿಸಿ ವರ್ಷದ ಪುರುಷರ ಟಿ20 ತಂಡದಲ್ಲಿ ಭಾರತೀಯ ಆಟಗಾರರು ಅಧಿಪತ್ಯ ಸ್ಥಾಪಿಸಿದ್ದಾರೆ. ನಾಯಕ ರೋಹಿತ್ ಸೇರಿದಂತೆ ನಾಲ್ವರು ಆಟಗಾರರು ಸ್ಥಾನ ಪಡೆದಿದ್ದಾರೆ. ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ, ಬೌಲರ್‌ಗಳಾದ ಜಸ್ಪ್ರೀತ್ ಬೂಮ್ರಾ ಮತ್ತು ಅರ್ಷದೀಪ್ ಸಿಂಗ್ ತಂಡದಲ್ಲಿದ್ದಾರೆ.

ನಾಯಕ ರೋಹಿತ್ ಆರಂಭಿಕನಾಗಿ ಗುರುತಿಸಿದ್ದಾರೆ. ಆಸ್ಟ್ರೇಲಿಯಾದ ಟ್ರಾವಿಸ್ ಹೆಡ್, ಇಂಗ್ಲೆಂಡ್‌ನ ಫಿಲ್ ಸಾಲ್ಟ್, ಪಾಕಿಸ್ತಾನದ ಬಾಬರ್ ಆಜಂ, ವೆಸ್ಟ್ ಇಂಡೀಸ್‌ನ ನಿಕೋಲಸ್ ಪೂರನ್ (ವಿಕೆಟ್ ಕೀಪರ್), ಅಫ್ಘಾನಿಸ್ತಾನದ ರಶೀದ್ ಖಾನ್ ಮತ್ತು ಶ್ರೀಲಂಕಾದ ವನಿಂದು ಹಸರಂಗ ತಂಡದಲ್ಲಿದ್ದಾರೆ.

ರೋಹಿತ್ ಶರ್ಮಾ ನಾಯಕತ್ವದಲ್ಲೇ ಭಾರತ ಐಸಿಸಿ ಟ್ವೆಂಟಿ-20 ವಿಶ್ವಕಪ್ ಜಯಿಸಿತ್ತು. ಈ ಅವಧಿಯಲ್ಲಿ ರೋಹಿತ್ 11 ಪಂದ್ಯಗಳಲ್ಲಿ 42ರ ಸರಾಸರಿಯಲ್ಲಿ (160.16) 378 ರನ್ ಗಳಿಸಿದ್ದಾರೆ. ಒಂದು ಶತಕವನ್ನು (121) ಬಾರಿಸಿದ್ದಾರೆ. ಹಾರ್ದಿಕ್ ಪಾಂಡ್ಯ 17 ಪಂದ್ಯಗಳಲ್ಲಿ 352 ರನ್ ಮತ್ತು 16 ವಿಕೆಟ್‌ಗಳನ್ನು ಗಳಿಸಿದ್ದಾರೆ. ಬಲಗೈ ವೇಗದ ಬೌಲರ್ ಜಸ್ಪ್ರೀತ್ ಬೂಮ್ರಾ 8 ಪಂದ್ಯಗಳಲ್ಲಿ 15 ವಿಕೆಟ್‌ಗಳನ್ನು ಕಬಳಿಸಿದ್ದಾರೆ. ಹಾಗೆಯೇ ಗಮನಾರ್ಹ ಪ್ರದರ್ಶನ ನೀಡಿರುವ ಅರ್ಷದೀಪ್ ಸಿಂಗ್ 18 ಪಂದ್ಯಗಳಲ್ಲಿ 36 ವಿಕೆಟ್‌ಗಳನ್ನು ಗಳಿಸಿದ್ದಾರೆ.

ಐಸಿಸಿ ವರ್ಷದ ಪುರುಷರ ಏಕದಿನ ತಂಡದಲ್ಲಿ ಭಾರತದ ಯಾವುದೇ ಆಟಗಾರರಿಗೆ ಸ್ಥಾನ ಲಭಿಸಿರಲಿಲ್ಲ. ಆದರೆ ಐಸಿಸಿ ವರ್ಷದ ಪುರುಷರ ಟೆಸ್ಟ್ ತಂಡದಲ್ಲಿ ಜಸ್ಪ್ರೀತ್ ಬೂಮ್ರಾ, ರವೀಂದ್ರ ಜಡೇಜ ಮತ್ತು ಯಶಸ್ವಿ ಜೈಸ್ವಾಲ್ ಸ್ಥಾನ ಪಡೆದಿದ್ದರು.

ಪ್ರಶಸ್ತಿ ಗೆದ್ದ ಅರ್ಷದೀಪ್ ಸಿಂಗ್

ದುಬೈ: ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿಯ (ಐಸಿಸಿ) 2024ನೇ ಸಾಲಿನ ವರ್ಷದ ಪುರುಷರ ಟ್ವೆಂಟಿ-20 ಕ್ರಿಕೆಟಿಗ ಪ್ರಶಸ್ತಿಗೆ ಟೀಮ್ ಇಂಡಿಯಾದ ಎಡಗೈ ವೇಗದ ಬೌಲರ್ ಅರ್ಷದೀಪ್ ಸಿಂಗ್ ಭಾಜನರಾಗಿದ್ದಾರೆ. 2024ರಲ್ಲಿ ಭಾರತ ತಂಡವು ಅಮೆರಿಕ ಹಾಗೂ ಕೆರೆಬಿಯನ್ ಜಂಟಿ ಆತಿಥ್ಯದಲ್ಲಿ ನಡೆದ ಐಸಿಸಿ ಟ್ವೆಂಟಿ-20 ವಿಶ್ವಕಪ್ ಗೆಲ್ಲುವಲ್ಲಿ ಅರ್ಷದೀಪ್ ಮಹತ್ವದ ಪಾತ್ರ ವಹಿಸಿದ್ದರು. 25 ವರ್ಷದ ಅರ್ಷದೀಪ್, ಕಳೆದ ಸಾಲಿನಲ್ಲಿ ಆಡಿರುವ 18 ಪಂದ್ಯಗಳಲ್ಲಿ ಒಟ್ಟು 36 ವಿಕೆಟ್‌ಗಳನ್ನು ಗಳಿಸಿದ್ದರು. ಈ ಪೈಕಿ ಟಿ20 ವಿಶ್ವಕಪ್‌ನಲ್ಲಿ ಎಂಟು ಪಂದ್ಯಗಳಲ್ಲಿ 17 ವಿಕೆಟ್‌ಗಳನ್ನು ಕಬಳಿಸಿ ದ್ದರು. ಪಾಕಿಸ್ತಾನದ ಬಾಬರ್ ಆಜಂ ಹಾಗೂ ಆಸ್ಟ್ರೇಲಿಯಾದ ಟ್ರಾವಿಸ್ ಹೆಡ್ ಅವರನ್ನು ಹಿಂದಿಕ್ಕಿ ಅರ್ಷದೀಪ್ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ. ಐಸಿಸಿ ವರ್ಷದ ಪುರುಷರ ಟಿ20 ಕ್ರಿಕೆಟ್ ತಂಡದಲ್ಲೂ ಅರ್ಷದೀಪ್ ಸಿಂಗ್ ಕಾಣಿಸಿಕೊಂಡಿದ್ದಾರೆ. ರೋಹಿತ್ ಶರ್ಮಾ ನಾಯಕರಾಗಿದ್ದು, ಹಾರ್ದಿಕ್ ಪಾಂಡ್ಯ ಹಾಗೂ ಜಸ್ಪ್ರೀತ್ ಬೂಮ್ರಾ ಸ್ಥಾನ ಪಡೆದಿದ್ದಾರೆ.

ವಿಟಾಕೀಸ್

ತಾಯವ್ವನಿಗೆ ಸುದೀಪ್ ಸಾಥ್

ಎರಡೂವರೆ ದಶಕಗಳ ಹಿಂದೆ ತಾಯವ್ವ ಶೀರ್ಷಿಕೆಯಲ್ಲಿ ಚಿತ್ರ ತೆರೆಗೆ ಬಂದಿತ್ತು. ಕಿಚ್ಚ ಸುದೀಪ್ ಈ ಚಿತ್ರದ ಮೂಲಕ ನಾಯಕರಾಗಿ ಗುರುತಿಸಿಕೊಂಡರು. ಹಿರಿಯ ನಟಿ ಉಮಾಶ್ರೀ ತಾಯವ್ವನ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಈಗ ಅದೇ ತಾಯವ್ವ ಎಂಬ ಹೆಸರಿ ನಲ್ಲಿ, ಮತ್ತೊಂದು ಚಿತ್ರ ತೆರೆಗೆ ಬರಲು ಸಿದ್ಧ ವಾಗಿದೆ. ಸದ್ದಿಲ್ಲದೆ ಚಿತ್ರೀರಣ ಮುಗಿಸಿರುವ ಚಿತ್ರತಂಡ ಬಿಡುಗಡೆಯ ಹೊಸ್ತಿಲ್ಲಿದೆ. ಈ ಬಾರಿ ತಾಯವ್ವನಾಗಿ ಗೀತಪ್ರಿಯಾ ಕಾಣಿಸಿಕೊಳ್ಳುತ್ತಿದ್ದಾರೆ. ಸದ್ಯ ತಾಯವ್ವ ಚಿತ್ರದ ಹಾಡುಗಳು ಬಿಡುಗಡೆಯಾಗಿವೆ, ಕಿಚ್ಚ ಸುದೀಪ್ ತಾಯವ್ವನ ಹಾಡುಗಳನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು.

ಅನಂತ ಆರ್ಯನ್ ಸಂಗೀತ ಸಂಯೋಜನೆಯಲ್ಲಿ ಮೂಡಿಬಂದಿರುವ ತಾಯವ್ವ ಚಿತ್ರದ ಗೀತೆಗಳಿಗೆ ಗೀತಪ್ರಿಯಾ ಅವರೇ ದನಿಯಾಗಿದ್ದಾರೆ. ಅಪ್ಪಟ ಗ್ರಾಮೀಣ ಸೊಗಡಿನ ಜನಪದ ಗೀತೆಗಳ ಗುಚ್ಛವನ್ನು ತಾಯವ್ವ ಚಿತ್ರದಲ್ಲಿ ಹೊಸರೂಪದಲ್ಲಿ ತೆರೆಮೇಲೆ ತರಲಾಗುತ್ತಿರುವುದು ವಿಶೇಷ. ತಾಯವ್ವ ಚಿತ್ರದ ಮೂಲಕ ಗೀತಪ್ರಿಯಾ ಚಿತ್ರರಂಗಕ್ಕೆ ಪ್ರವೇಶಿಸುತ್ತಿದ್ದಾರೆ. ಇದೊಂದು ಅಪ್ಪಟ ಗ್ರಾಮೀಣ ಸೊಗಡಿನ ಸಿನಿಮಾವಾಗಿದ್ದು, ಹೆಣ್ಣುಮಕ್ಕಳನ್ನು ಉಳಿಸಿ, ಬೆಳೆಸಿ ಎಂಬ ಸಂದೇಶವನ್ನು ಇಟ್ಟುಕೊಂಡು ಸಿನಿಮಾ ನಿರ್ದೇಶಿಸಲಾಗಿದೆ. ಇದರಲ್ಲಿ ನಾನು ತಾಯವ್ವ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಚಿತ್ರದಲ್ಲಿ ಒಂದು ಒಳ್ಳೆಯ ಸಂದೇಶವಿದೆ ಎಂದು ಗೀತಪ್ರಿಯಾ ಹೇಳಿದರು.



> ನಾನು ಆಗಷ್ಟೇ ಕಾಲೇಜು ಮುಗಿಸಿದ ಹೊತ್ತಿನಲ್ಲಿ ತಾಯವ್ವ ಸಿನಿಮಾದಲ್ಲಿ ಅಭಿನಯಿಸುವ ಅವಕಾಶ ಸಿಕ್ಕಿತ್ತು. ಮೊದಲ ಬಾರಿಗೆ ಮುಖ್ಯಪಾತ್ರದಲ್ಲಿ ಅಭಿನಯಿಸಿದ್ದ ಈ ಸಿನಿಮಾ ನನಗೆ ಸಾಕಷ್ಟು ಕಲಿಸಿದೆ. ತಾಯವ್ವ ನನ್ನ ವೃತ್ತಿ ಜೀವನದ ಸುಮಧುರ ಸಿನಿಮಾವಾಗಿ ನೆನಪಿನಲ್ಲಿ ಉಳಿದಿದೆ. ಈಗ ತಾಯವ್ವ ಹೆಸರಿನಲ್ಲಿ ಮತ್ತೊಂದು ಸಿನಿಮಾ ತೆರೆಗೆ ಬರುತ್ತಿರುವುದು ಖುಷಿಕೊಟ್ಟಿದೆ. ತಾಯವ್ವ ಹೆಸರಿನಲ್ಲಿಯೇ ಒಂದು ಭಾವನಾತ್ಮಕ ಸೆಳೆತವಿದೆ.
> -**ಕಿಚ್ಚ ಸುದೀಪ್**, ನಟ

ಅಂದೊಂದಿತ್ತು ಕಾಲದ ಮಧುರ ಪ್ರೇಮ ಗಾನ

ವಿನಯ್ ರಾಜ್‌ಕುಮಾರ್ ಮತ್ತೊಂದು ಮಧುರವಾದ ಪ್ರೇಮ ಕಥೆಯ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಅಂದೊಂದಿತ್ತು ಕಾಲ ಶೀರ್ಷಿಕೆಯಲ್ಲಿ ಮೂಡಿಬರುತ್ತಿರುವ ಈ ಚಿತ್ರದಲ್ಲಿ ಅದಿತಿ ಪ್ರಭುದೇವ ನಾಯಕಿಯಾಗಿ ನಟಿಸಿದ್ದಾರೆ. ಕ್ರೇಜಿಸ್ಟಾರ್ ರವಿಚಂದ್ರನ್ ಕೂಡ ಚಿತ್ರ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ತೊಂಬತ್ತರ ದಶಕದ ವಾಸ್ತವದ ಪ್ರೀತಿಗೆ ಈ ಚಿತ್ರ ಕನ್ನಡಿ ಹಿಡಿಯಲಿದೆಯಂತೆ. ಸದ್ಯ ಚಿತ್ರೀಕರಣ ಮುಗಿಸಿರುವ ಅಂದೊಂದಿತ್ತು ಕಾಲ ಬಿಡುಗಡೆಗೆ ಸಿದ್ಧವಾಗಿದೆ.

ಈಗ ಚಿತ್ರದ ಮೊದಲು ಹಾಡು ರಿಲೀಸ್ ಆಗಿದೆ. ಮುಂಗಾರು ಮಳೆಯಲ್ಲಿ ತಂದಲ್ಲೆ ನೀನಿಲ್ಲಿ ಪ್ರೀತಿಯ ಮುನ್ಸೂಚನೆ.. ಎಂಬ ಹಾಡು ಇದಾಗಿದ್ದು, ಧನಂಜಯ್ ರಂಜನ್ ಸಾಹಿತ್ಯ ರಚಿಸಿದ್ದು, ಸಿದ್ ಶ್ರೀರಾಮ್ ದನಿಯಾಗಿದ್ದಾರೆ. ತೀರ್ಥಹಳ್ಳಿ ಸುತ್ತ ಮುತ್ತಲ ಸುಂದರ ತಾಣದಲ್ಲಿ ಹಾಡಿನ ಚಿತ್ರೀಕರಣ ನಡೆಸಿದ್ದು, ಆರ್.ಜೆ.ರಘು ನೃತ್ಯ ನಿರ್ದೇಶನ ಮಾಡಿದ್ದಾರೆ. ನಟ ಗಣೇಶ್, ನಟಿ ಪೂಜಾ ಗಾಂಧಿ ಹಾಗೂ ನಿರ್ದೇಶಕ ಯೋಗರಾಜ್ ಭಟ್ ಈ ಹಾಡು ಬಿಡುಗಡೆ ಮಾಡಿ ಚಿತ್ರಕ್ಕೆ ಶುಭ ಹಾರೈಸಿದ್ದಾರೆ.

ವಿನಯ್ ರಾಜ್‌ಕುಮಾರ್ ನಟಿಸಿರುವ ಈವರೆಗಿನ ಸಿನಿಮಾಗಳ ಪೈಕಿ ಅಂದೊಂದಿತ್ತು ಕಾಲ ಚಿತ್ರದ ಆಡಿಯೊ ರೈಟ್ಸ್ ಅತಿ ಹೆಚ್ಚು ಬೆಲೆಗೆ ಮಾರಾಟವಾಗಿದೆ ಆಗಿದೆ. ವಿ.ರಾಘವೇಂದ್ರ ಸಂಗೀತ ಸಂಯೋಜಿಸಿರುವ ಚಿತ್ರದ ಹಾಡುಗಳಿಗೆ ವಿ.ನಾಗೇಂದ್ರ ಪ್ರಸಾದ್ ಹಾಗೂ ಧನಂಜಯ್ ರಂಜನ್ ಸಾಹಿತ್ಯ ರಚಿಸಿದ್ದು, ಸಿದ್ ಶ್ರೀರಾಮ್, ವಿಜಯಪ್ರಕಾಶ್ ಸೇರಿದಂತೆ ಅನೇಕ ಖ್ಯಾತ ಗಾಯಕರು ದನಿಯಾಗಿದ್ದಾರೆ.

ನಿಶಾ ಮಿಲನಾ, ಅರುಣಾ ಬಾಲರಾಜ್, ಕಡ್ಡಿಪುಡಿ ಚಂದ್ರು, ಜಗ್ಗಪ್ಪ, ಗೋವಿಂದೇ ಗೌಡ, ಧರ್ಮೇಂದ್ರ ಅರಸ್ ಮುಂತಾದವರು ತಾರಾಗಣದಲ್ಲಿದ್ದಾರೆ. ಕೀರ್ತಿ ಕೃಷ್ಣ ನಿರ್ದೇಶನದಲ್ಲಿ ಚಿತ್ರ ಸಿದ್ಧವಾಗಿದ್ದು, ಭುವನ್ ಮೂವೀಸ್ ಬ್ಯಾನರ್‌ನಲ್ಲಿ ಭುವನ್ ಸುರೇಶ್ ನಿರ್ಮಾಣ ಮಾಡಿದ್ದಾರೆ. ಸಂತೋಷ್ ಮುಂದಿನಮನೆ ಸಂಭಾಷಣೆ ಬರೆದಿದ್ದು, ಅಭಿಷೇಕ್ ಛಾಯಾಗ್ರಹಣದ ಜವಾಬ್ದಾರಿ ನಿರ್ವಹಿಸಿದ್ದಾರೆ.

ಅಮೆರಿಕದ ಹೊಸ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ತಾವು ಅಧಿಕಾರ ಸ್ವೀಕರಿಸಿದ ದಿನವೇ ಸುಮಾರು 80 ಕಾರ್ಯನಿರ್ವಹಣಾ ಆದೇಶಗಳನ್ನು ಹೊರಡಿಸಿದ್ದಾರೆ! ಇವುಗಳ ಪೈಕಿ, 'ಜನ್ಮ ಆಧಾರಿತ ಪೌರತ್ವ'ದ ಆದೇಶವು, ಅಲ್ಲಿ ನೆಲೆಸಿರುವ ಭಾರತೀಯರ ಮೇಲೆ ಬಹಳ ಪರಿಣಾಮ ಬೀರುತ್ತದೆ. ಗ್ರೀನ್ ಕಾರ್ಡ್ ಹೊಂದಿದ ದಂಪತಿಗೆ ಜನಿಸಿದ ಮಕ್ಕಳು ಮಾತ್ರ ಯುಎಸ್ ಪೌರತ್ವ ಪಡೆಯುತ್ತಾರೆ ಎಂಬ ಈ ಹೊಸ ಆದೇಶ ನಿಜಕ್ಕೂ ಕ್ರಾಂತಿಕಾರಿ ನಡೆ. ಅಂದರೆ, ಎಚ್1ಬಿ ವೀಸಾ ಪಡೆದು ಅಲ್ಲಿ ವೃತ್ತಿನಿರತರಾಗಿರುವ ಭಾರತೀಯರಿಗೆ ಅಲ್ಲಿ ಮಕ್ಕಳು ಹುಟ್ಟಿದರೆ, ಆ ಮಕ್ಕಳಿಗೆ ಅಲ್ಲಿನ ಪೌರತ್ವವು ತಕ್ಷಣ ದೊರಕುವುದಿಲ್ಲ; 1868ರಿಂದ ಲಭ್ಯವಿರುವ ಈ ಸೌಲಭ್ಯವನ್ನು ಟ್ರಂಪ್ ತೆಗೆದುಹಾಕಲು ಆದೇಶ ಹೊರಡಿಸಿದ್ದಾರೆ. ಅಕ್ರಮ ವಲಸಿಗರ ವಿರುದ್ಧ ಈ ನಡೆ ಎಂಬುದು ಅವರು ನೀಡುವ ನೆಪ. ಅಂದರೆ, ಹೊರಗಿನಿಂದ ಬಂದು, ಅಮೆರಿಕದ ಪೌರತ್ವವನ್ನು ಪಡೆಯುವವರ ಸಂಖ್ಯೆಯನ್ನು ಕಡಿಮೆಗೊಳಿಸಲು ಈ ಕ್ರಮ ಎಂಬುದು ಅವರ ಸಮರ್ಥನೆ. ಈಗ, ಈ ಆದೇಶವು ಸಂವಿಧಾನಕ್ಕೆ ವಿರುದ್ಧ ಎಂದು ಅಲ್ಲಿನ ನ್ಯಾಯಾಲಯ ಅಭಿಪ್ರಾಯ ಪಟ್ಟಿದ್ದರೂ, ಮುಂದಿನ ದಿನಗಳಲ್ಲಿ ಟ್ರಂಪ್ ಈ ನಿಟ್ಟಿನಲ್ಲಿ ಇನ್ನಷ್ಟು ಬಿಗಿಯಾದ ಹೆಜ್ಜೆಗಳನ್ನಿಡಬಹುದು ಎಂದೇ ಯೋಚಿಸಲಾಗಿದೆ.

26.01.2025
ಭಾನುವಾರ
ವಿಶ್ವವಾಣಿ
ವಿರಾಮ
ಓದುವ ಲೋಕಕ್ಕೆ ಓದುವ ನಿಲ್ದಾಣ

ಟ್ರಂಪ್ ತಂದಿಟ್ಟ ತಲೆನೋವು!

» ನಾರಾಯಣ ಯಾಜಿ

ಡೊನಾಲ್ಡ್ ಟ್ರಂಪ್ ಅವರು ಅಮೆರಿಕದ ಅಧ್ಯಕ್ಷರಾದ ತಕ್ಷಣವೇ ಹೊರಡಿಸಿದ ಸುಮಾರು 80 ಕಾರ್ಯನಿರ್ವಹಣಾ ಆದೇಶಗಳು ಜಗತ್ತಿನ ಅನೇಕ ರಾಷ್ಟ್ರಗಳ ನಿದ್ದೆಯನ್ನು ಕೆಡಿಸಿವೆ. ಇಂದು ಅಮೆರಿಕದಲ್ಲಿ ಜ್ವರ ಬಂದರೆ ಭಾರತದಲ್ಲಿ ನೆಗಡಿ ಯಾಗುವಷ್ಟರ ಮಟ್ಟಿಗೆ ನಮ್ಮ ದೇಶದ ಜನರ ಪರಿಸ್ಥಿತಿ ಇದೆ. ಇದಕ್ಕೆ ಕಾರಣ ಅಲ್ಲಿನ ಅಧ್ಯಕ್ಷರು ಹೊರಡಿಸಿದ ಜನ್ಮಾಧರಿತ ನಾಗರಿಕತೆ.

ಕಾರ್ಯನಿರ್ವಹಣಾ ಆದೇಶ ಹೊರಡಿಸಲು ಅಮೆರಿಕದ ಕಾಂಗ್ರೆಸ್‌ನ ಅನುಮೋದನೆಯ ಅಗತ್ಯವಿರುವುದಿಲ್ಲ. ಫೆಡರಲ್ ಸರ್ಕಾರದ ಕಾರ್ಯಾಚರಣೆಗಳನ್ನು ನಿರ್ವಹಿಸಲು, ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಜಾರಿಗೊಳಿಸಲು ಅಥವಾ ಅವರ ಚಟುವಟಿಕೆಗಳಲ್ಲಿ ನಿರ್ದಿಷ್ಟ ಸರ್ಕಾರಿ ಏಜೆನ್ಸಿಗಳಿಗೆ ನಿರ್ದೇಶಿಸಲು ಕಾರ್ಯನಿರ್ವಾಹಕ ಆದೇಶಗಳನ್ನು ನೀಡುವ ಅಧಿಕಾರವನ್ನು ಅಧ್ಯಕ್ಷರು ಹೊಂದಿದ್ದಾರೆ. ಈ ಆದೇಶವು ಭಾರತ ಸರಕಾರ ಹೊರಡಿಸುವ ಸುಗ್ರೀವಾಜ್ಞೆಯ ರೀತಿಯದಲ್ಲ. ಸುಗ್ರೀವಾಜ್ಞೆಯನ್ನು ಹೊರಡಿಸಿದ ಆರು ತಿಂಗಳ ಒಳಗೆ ಅದನ್ನು ಸಂಸತ್ತು ಅನುಮೋದಿಸಬೇಕಾಗುತ್ತದೆ. ಕಾರ್ಯನಿರ್ವಹಣಾ ಆದೇಶ ಹಾಗಲ್ಲ; ಅಧ್ಯಕ್ಷ ತನಗನಿಸಿದ್ದನ್ನು ಮಾಡಲು ಇರುವ ಮಹತ್ವದ ಉಪಕರಣ ಇದು. ಇದುತನಕ ಅಮೆರಿಕದ ಅಧ್ಯಕ್ಷರುಗಳನೇಕರು ಕಾರ್ಯನಿರ್ವಹಣಾ ಆದೇಶದ ಮೂಲಕವೇ ಅನೇಕ ಮಹತ್ವದ ಆಡಳಿತದ ಸುಧಾರಣೆಯನ್ನು ಜಾರಿಗೆ ತಂದಿದ್ದಾರೆ.

ಅದರಲ್ಲಿ ಮಹತ್ವದ್ದೆಂದರೆ ಅಬ್ರಹಾಂ ಲಿಂಕನ್ ಜನವರಿ 1, 1863ರಂದು ಜಾರಿಗೆ ತಂದ ಗುಲಾಮಗಿರಿಯ ವಿಮೋಚನಾ ಆದೇಶ. ಅದೇ ರೀತಿ ಹ್ಯಾರಿ ಎಸ್. ಟ್ರೂಮನ್ 1948 ರಲ್ಲಿ ಅಮೆರಿಕದ ಸೇನೆಯಲ್ಲಿದ್ದ ವರ್ಣ, ಲಿಂಗ, ಜನಾಂಗಿಯ ಬೇಧಗಳನ್ನು ನೀಷೇಸಿದ್ದರು. ಲಿಂಡನ್ ಜಾನ್ಸನ್ ಅವರು 1965ರಲ್ಲಿ ಹೊರಡಿಸಿದ ಆದೇಶ ಫೆಡರಲ್ ಗುತ್ತಿಗೆದಾರರನ್ನು ವರ್ಣಬೇಧ, ಲಿಂಗ, ರಾಷ್ಟ್ರೀಯತೆಯ ಆಧಾರದಮೇಲೆ ಭೇದ 'ಮಾಡುವುದನ್ನು ನಿಷೇಧಿಸಿ ಎಲ್ಲರಿಗೂ ಸಮಾನ ಉದ್ಯೋಗವಕಾಶವನ್ನು ಒದಗಿಸುವ ನಿಟ್ಟಿನಲ್ಲಿ ಖಚಿತವಾದ ಕ್ರಮವನ್ನು ತೆಗೆದುಕೊಳ್ಳುವ ಅಧಿಕಾರವನ್ನು ನೀಡಿತು. ಅತಿ ಹೆಚ್ಚು ಕಾರ್ಯನಿರ್ವಹಣಾ ಆದೇಶವನ್ನು ಹೊರಡಿ ಸಿದವರು ಫ್ರಾಂಕ್ಲಿನ್ ಡಿ ರೂಸ್‌ವೆಲ್ಟ್. ಅವರು ತಮ್ಮ ಅಧಿಕಾರಾವಧಿಯಲ್ಲಿ ಒಟ್ಟೂ 3,721 ಆದೇಶವನ್ನು ಹೊರಡಿಸಿದ್ದರು. ಇಲ್ಲಿಯವರೆಗೆ ಹೊರಡಿಸಿದ ಹೆಚ್ಚಿನ ಆದೇಶಗಳು ಜನಪರವಾಗಿದ್ದು ಅವುಗಳ ವಿಷಯದಲ್ಲಿ ವಿವಾದಕ್ಕೆ ಆಸ್ಪದ ಕಡಿಮೆಯಾಗಿತ್ತು. ಆದರೆ ಟ್ರಂಪ್ ಎರಡನೆಯ ಸಲ ಅಧಿಕಾರ ಸ್ವೀಕರಿಸಿದ ದಿನಗಳಿಂದಲೇ ತಮ್ಮ ಮುಂದಿನ ಗುರಿಯೇನು ಎನ್ನುವದನ್ನು ಸ್ಪಷ್ಟಪಡಿಸಿದ್ದಾರೆ.

ಜನ್ಮ ಆಧಾರಿತ ಪೌರತ್ವ

ಟ್ರಂಪ್ ತಮ್ಮ ಇದುವರಿಗಿನ ಅಧಿಕಾರಾವಧಿಯಲ್ಲಿ ಮೊದಲ ಸಲ 220 ಮತ್ತು ಈಗಿನ 80 ಸೇರಿ ಒಟ್ಟೂ 300 ಆದೇಶಗಳನ್ನು ಹೊರಡಿಸಿದ್ದಾರೆ. ಇದೀಗ ಅವರು ಹೊರಡಿಸಿದ ಆದೇಶಗಳ ಪೈಕಿ ಮುಖ್ಯವಾದ ಅದರಲ್ಲಿಯೂ ಭಾರತೀಯರನ್ನು ಕಾಡುತ್ತಿರುವ 'ಜನ್ಮಾಧರಿತ ಪೌರತ್ವ' ಯ ಆದೇಶದ ಕುರಿತು ವಿವೇಚಿಸುವುದಾದರೆ, ಇದು ತನಕ ಅಮೆರಿಕದಲ್ಲಿ ಜನಿಸಿದ ಎನ್ನುವ ಕಾರಣಕ್ಕೆ ಅಲ್ಲಿನ ನಾಗರಿಕರರಾಗಿಬಿಡುತ್ತಿದ್ದರು. ವಿವೇಕ ರಾಮಸ್ವಾಮಿಯ ವರಂತೆ ನಂತರದ ದಿನಗಳಲ್ಲಿ ಅಂಥವರು ಅಮೆರಿಕದ ಅಧ್ಯಕ್ಷತೆಗೂ ಸ್ಪರ್ಧಿಸಬಹುದು. ಅಮೆರಿಕ ದೇಶವೇ ವಲಸಿಗರ ನಾಡು. ಮೂಲ ನಿವಾಸಿಗಳು ಅಲ್ಲಿ ನಿರ್ಲಕ್ಷಿತರಾಗಿದ್ದಾರೆ. ಹೊಸ ಆದೇಶದ ಪ್ರಕಾರ, ಗ್ರೀನ್ ಕಾರ್ಡ್ ಹೊಂದಿದವರಿಗೆ ಮಾತ್ರ ಈ ಸೌಲಭ್ಯ ಎಂದದ್ದಾರೆ ಟ್ರಂಪ್! (ಈ ಆದೇಶವು ಸಂವಿಧಾನಕ್ಕೆ ಅನುಗುಣವಾಗಿಲ್ಲ ಎಂದು ಈಗ ಅಲ್ಲಿನ ನ್ಯಾಯಾಲಯ ಹೇಳಿದೆ)

ಅಲ್ಲಿ ಈ ಜನ್ಮಾಧರಿತ ನಾಗರಿಕತೆ ಬಂದಿರುವುದು 1868 ರಲ್ಲಿ ಸಂವಿಧಾನಕ್ಕೆ ತಂದ 14 ತಿದ್ದುಪಡಿಯ ಮೂಲಕ. ಅಮೆರಿಕದ ಸಂವಿಧಾನಕ್ಕೆ 249 ವರ್ಷಗಳ ಇತಿಹಾಸವಿದೆ. ಇಲ್ಲಿನತನಕ ಅದರ ಒಟ್ಟೂ ತಿದ್ದುಪಡಿಗಳ ಸಂಖ್ಯೆ 27. ಭಾರತದ ಸಂವಿಧಾನದ ಈ 75 ವರ್ಷಗಳಲ್ಲಿ 106 ಸಲ ತಿದ್ದುಪಡಿಗಳಾಗಿವೆ. ಅಮೆರಿಕದಲ್ಲಿ ಸಂವಿಧಾನದ ತಿದ್ದುಪಡಿ ಅಷ್ಟು ಸುಲಭವಲ್ಲ.

ಈಚಿನ ವರ್ಷಗಳಲ್ಲಿ ಅಧ್ಯಕ್ಷರಿಗಿರುವ ಈ ಅಧಿಕಾರದ ಮೇಲೆ ವ್ಯಾಪಕವಾದ ಚರ್ಚೆಯಾಗುತ್ತಿದೆ. ಅದಕ್ಕೆ ಕಾರಣ.

1. ಅಮೆರಿಕದ ಸಂವಿಧಾನದಲ್ಲಿ ಎಲ್ಲಿಯೂ ಅಧ್ಯಕ್ಷರಿಗೆ ಸಂವಿಧಾನಾತ್ಮಕವಾಗಿ ಈ ರೀತಿ ಆದೇಶವನ್ನು ಹೊರಡಿಸುವ ಅಧಿಕಾರವನ್ನು ನೀಡಿಲ್ಲ. ಆದರೆ ನಡಾವಳಿಕೆಯಂತೆ ಈ ಅಧಿಕಾರ ಅಧ್ಯಕ್ಷರ ಹುದ್ದೆಗೆ ಅಂತರ್ಗತವಾಗಿರುವ ಹಕ್ಕು ಎಂದೇ ಸ್ವೀಕೃತವಾಗಿದೆ.

2. **ಅಧ್ಯಕ್ಷರ ವಿವೇಚನೆ:** ಅಧಿಕಾರಪತ್ರಗಳು ಸಂವಿಧಾನಿಕ ಅಥವಾ ವರ್ಗಾಯಿಸಿದ ಅಧಿಕಾರಗಳ ಆಧಾರದಲ್ಲಿ ಹೊರಡಿಸಬೇಕಾದರೂ, ಅಧ್ಯಕ್ಷರಿಗೆ ಈ ಆದೇಶಗಳನ್ನು ನೀಡಲು ತುಂಬಾ ಸ್ವಾತಂತ್ರ್ಯವಿದೆ. ಇದು ಕಾಂಗ್ರೆಸ್ಸಿನ ಅನುಮೋದನೆ ಅವಶ್ಯಕವಿಲ್ಲದೆ ಬಹುಮತದಲ್ಲಿ ಕಾರ್ಯಗಳನ್ನು ರೂಪಿಸಲು ಸಾಧ್ಯವಾಗಿಸುತ್ತದೆ.

ಕಾನೂನು ಬಲವಿದೆ, ಆದರೆ ಶಾಶ್ವತವಲ್ಲ: ಅಧಿಕಾರಪತ್ರಗಳು ಕಾನೂನಿನ ಬಲವನ್ನು ಹೊಂದಿದ್ದು, ವೈಶಿಷ್ಟ್ಯಪೂರ್ಣ ನೀತಿಗಳನ್ನು ಅನುಷ್ಠಾನಗೊಳಿಸಬಹುದು. ಆದರೆ ಇವು ಶಾಶ್ವತವಲ್ಲ. ಕಾಂಗ್ರೆಸ್ಸು ಇದನ್ನು ಭಾಗಶಃ ಅಥವಾ ಪೂರ್ಣ ಪ್ರಮಾಣದಲ್ಲಿ ರದ್ದುಪಡಿಸಬಹುದು. ಅದಕ್ಕೆ ಆರ್ಥಿಕ ಮೂಲವನ್ನು ಕೊಡದೇ ಇಂತಹ ಆದೇಶವನ್ನು ನಿರುಪಯೋಗಿ ಮಾಡಬಹುದು. ನ್ಯಾಯಾಂಗದ ಪ್ರವೇಶ ಅವುಗಳ ಪರಿಣಾಮವನ್ನು ಸೀಮಿತ ಮಾಡಬಹುದು ಅಥವಾ ರದ್ದುಪಡಿಸಬಹುದು.

ವಿವಾದಾತ್ಮಕ ಸ್ವರೂಪ

ಕಾರ್ಯನಿರ್ವಹಣಾ ಆದೇಶಗಳು ಸಾಮಾನ್ಯವಾಗಿ ಕಾಂಗ್ರೆಸ್ಸಿನ ಮಹತ್ವ ಕಡಿಮೆಮಾಡುವುದರಿಂದ ಹಾಗೂ ಅಧ್ಯಕ್ಷರಿಗೆ ಅನಿಯಮಿತ ಅಧಿಕಾರಗಳನ್ನು ಕೊಡುವುದರಿಂದ ಪ್ರಜಾಸತ್ತಾತ್ಮಕ ವಿಧಾನಗಳಿಗೆ ವಿರುದ್ಧವಾಗಿದೆ; ಶಾಸಕಾಂಗದ ಪಾತ್ರವನ್ನು ದುರ್ಬಲಮಾಡುತ್ತದೆ ಎಂದು ಟೀಕಾಕಾರರು ವಾದಿಸುತ್ತಾರೆ.

ಅಕ್ರಮ ವಲಸಿಗರ ತಲೆನೋವು

ಈ ಎಲ್ಲ ಹಿನ್ನೆಲೆಯಲ್ಲಿ ಮುಖ್ಯವಾಗಿ ಜನ್ಮಾಧರಿತ ಪೌರತ್ವವನ್ನು ಗಮನಿಸುವುದಾದರೆ, ಮೂಲತಃ ಇದು ಅಕ್ರಮ ವಲಸಿಗರ ವಿರುದ್ಧ ತಂದಿರುವುದಾಗಿದೆ. ಅಮೆರಿಕದಲ್ಲಿ ಇಂಥವರ ಸಂಖ್ಯೆ ಸುಮಾರು 11.7 ಮಿಲಿಯನ್. ಇದು ಅಲ್ಲಿನ ಜನಸಂಖ್ಯೆಯ 3.5% ರಷ್ಟಾಗುತ್ತದೆ. ಹೊಸ ಆದೇಶದ ಪ್ರಕಾರ, ತಂದೆ, ತಾಯಿ ಇಬ್ಬರಲ್ಲಿ ಯಾರಾದರೂ ಓರ್ವರು ಅಮೆರಿಕದ ಪೌರರಾಗಿದ್ದರೆ ಅಥವಾ ಗ್ರೀನ್ ಕಾರ್ಡ ಹೊಂದಿದ್ದರೆ ಮಾತ್ರ ಅವರ ಮಕ್ಕಳಿಗೆ ಅಲ್ಲಿನ ಪೌರತ್ವ ಸಿಗುತ್ತದೆ.

ಕಾನೂನು ಸವಾಲುಗಳು

ಅನೇಕ ಕಾನೂನು ತಜ್ಞರು ಈಗಾಗಲೇ ಈ ವಿಷಯದಲ್ಲಿ ಸ್ಪಷ್ಟನೆ ನೀಡಿದಂತೆ ಅಮೆರಿಕದ ಅಧ್ಯಕ್ಷರು ಸಂವಿಧಾನದಂತೆ ಕಾರ್ಯ ನಿರ್ವಹಿಸಬೇಕು. ಸಂವಿಧಾನಾತ್ಮಕವಾಗಿ (14 ತಿದ್ದುಪಡಿಯ ಪ್ರಕಾರ) ಜನ್ಮಾಧರಿತ ಪೌರತ್ವ ಮೂಲಭೂತ ಅಂಶವಾಗಿದ್ದು, ಅದರ ಪೂರ್ತಿಯಾಗಿಯಾಗಲೀ, ಅಥವಾ ಭಾಗಶಃವಾಗಲೀ ಅದರ ನಿರಾಕರಣೆ ಸ್ಪಷ್ಟವಾಗಿ ಸಂವಿಧಾನದತ್ತ ಹಕ್ಕಿನ ಉಲ್ಲಂಘನೆಯಾಗಿದೆ. ಕಾರ್ಯನಿರ್ವಹಣಾ ಆದೇಶಗಳು ಸಂವಿಧಾನ ಮತ್ತು ಅಸ್ತಿತ್ವದಲ್ಲಿರುವ ಕಾನೂನನ್ನು ಮೀರದಂತೆ ಕಾರ್ಯನಿರ್ವಹಿಸಬೇಕು. ಅವು ಸಂವಿಧಾನವನ್ನು ಬದಲಾಯಿಸಲು ಅಥವಾ ಸರಳವಾಗಿ ಸಂವಿಧಾನದ ನಿಯಮಗಳನ್ನು ತಿರಸ್ಕರಿಸಲು ಬಳಸಲಾಗುವುದಿಲ್ಲ. ಹಾಗಾಗಿ ಟ್ರಂಪ್ ಅವರ ಜನ್ಮಕಾರಣ ಪೌರತ್ವವನ್ನು ನಿರಾಕರಿಸಲು ಕಾರ್ಯನಿರ್ವಹಣಾ ಆದೇಶ 14ನೆಯ ತಿದ್ದುಪಡಿಯ ಸ್ಪಷ್ಟವಾದ ಉಲ್ಲಂಘನೆ ಪ್ರಕ್ರಿಯೆಯಾಗುತ್ತದೆ. 14ನೇ ತಿದ್ದುಪಡಿ ಬದಲಾಯಿಸಲು, ಬದಲಾವಣೆಯು ಸಂವಿಧಾನಿಕ ತಿದ್ದುಪಡಿ ಅಥವಾ ಕಾನೂನು ಬದಲಾವಣೆ ಮೂಲಕ ಆಗಬೇಕಾಗುತ್ತದೆ, ಮತ್ತು ಅವು ಕಠಿಣ ಪ್ರಕ್ರಿಯೆಗಳಾಗಿವೆ.

ಸುಲಭವಿಲ್ಲ!

ಸಂವಿಧಾನದ ತಿದ್ದುಪಡಿ ಅಮೆರಿಕದಲ್ಲಿ ಅಷ್ಟು ಸುಲಭವೂ ಅಲ್ಲ. ಈಗಾಗಲೆ ಅಮೆರಿಕದಲ್ಲಿನ ಹಲವರು ಈ ಆದೇಶದ ವಿರುದ್ಧ ತಿರುಗಿ ಬಿದ್ದಿದ್ದಾರೆ. 22 ಅಮೆರಿಕದ ರಾಜ್ಯಗಳು ನ್ಯಾಯಾಲಯದಲ್ಲಿ ಟ್ರಂಪ್ ವಿರುದ್ಧ ಕೇಸನ್ನು ದಾಖಲಿಸಿವೆ. ಇದೀಗ ತಾನೇ ಬಂದ ಸುದ್ದಿಯಂತೆ ಸಿಯಾಟಲ್ಲಿನ ಫೆಡರಲ್ ನ್ಯಾಯಾಲಯದ ನ್ಯಾಯಧೀಶರಾದ ಜಾನ್ ಕಾಫೆನಾರ್ (84 ವರ್ಷ) 'ಈ ಆದೇಶ ಸಂವಿಧಾನದ ನಿರ್ಲಜ್ಜ ಉಲ್ಲಂಘನೆಯಾಗಿದೆ' ಎಂದು ಹೇಳಿ, ಈ ಆದೇಶಕ್ಕೆ ಹದಿನಾಲ್ಕು ದಿನಗಳ ಮಟ್ಟಿಗೆ ತಾತ್ಕಾಲಿಕ ತಡೆ ನೀಡಿದ್ದಾರೆ. ಟ್ರಂಪ್ ಕೂಡಾ ಘಾಟಿ ಮನುಷ್ಯ, ಆತನ ವಿರುದ್ಧ ನಿರ್ಧಾರಗಳು ಬಂದರೆ ಆತ ಸುಪ್ರೀಂ ಕೋರ್ಟಿನ ಕದ ತಟ್ಟುತ್ತಾನೆ.

ಏನೇ ಆದರೂ, ಅಕ್ರಮ ವಲಸಿಗರ ವಿರುದ್ಧ ಎಂದು ಟ್ರಂಪ್ ತೆಗೆದುಕೊಂಡಿರುವ ಇಂತಹ ಕಠಿಣ ನಿರ್ಣಯಗಳು, ಅಮೆರಿಕದಲ್ಲಿ ನೆಲೆಸಿರುವ ನಮ್ಮ ದೇಶದ ಲಕ್ಷಾಂತರ ಜನರ ಮೇಲೆ ಪರಿಣಾಮ ಬೀರುವುದಂತೂ ನಿಜ.

ಭಾರತದ ಮುಂದಿರುವ ಆಯ್ಕೆಗಳು

ಭಾರತ ಅಮೆರಿಕದ ಬಹುಮುಖ್ಯ ಭಾಗಿದಾರ ದೇಶವಾಗಿರುವುದರಿಂದ ಎಚ್1ಬಿ ಮತ್ತು ಗ್ರೀನ್ ಕಾರ್ಡ್‌ಗಳ ಮೇಲಿರುವ ದೇಶದ ಮಿತಿಗಳನ್ನು ತೆಗೆದು ಹಾಕಲು ಪ್ರಯತ್ನಿಸಬೇಕು. ಟ್ರಂಪ್ ಕೌಶಲ್ಯಾಧಾರಿತ ಎಚ್1ಬಿ ಮತ್ತು ಗ್ರೀನ್ ಕಾರ್ಡ್ ಗಳ ಕಡೆ ಒಲವನ್ನು ತೋರುತ್ತಿರುವುದರಿಂದ ಆ ಕುರಿತು ಪ್ರಯತ್ನಿಸಿದರೆ ಗ್ರೀನ್ ಕಾರ್ಡ್ ಆಧಾರದಲ್ಲಿ ಅಲ್ಲಿ ಹುಟ್ಟುವ ಭಾರತೀಯ ಮೂಲದ ಮಕ್ಕಳಿಗೆ ರಕ್ಷಣೆಯನ್ನು ಕೊಡಿಸಬಹುದು. ಅಲ್ಲಿಯ ತನಕ ಅಮೆರಿಕದಲ್ಲಿರುವ ಭಾರತೀಯ ಮೂಲದವರಿಗೆ ತಲೆಬಿಸಿ ತಪ್ಪಿದ್ದಲ್ಲ.

ಜಪಾನ್‌ನಲ್ಲಿ ಸರಸ್ವತಿ!

» ಡಾ.ಜಯಂತಿ ಮನೋಹರ್

ಆಧುನಿಕ ತಂತ್ರಜ್ಞಾನದಲ್ಲಿ ಮೇಲ್ಪಂಕ್ತಿಯಲ್ಲಿ ಕಾಣುವ ಜಪಾನ್‌ನಲ್ಲಿ ಇರುವ ನಮ್ಮ ದೇವತೆಗಳ ಅಧ್ಯಯನ ರೋಚಕವಾದುದು. 2009 ರಲ್ಲಿ ಜಪಾನಿನ ಕ್ಯೋಟೋ ನಗರದಲ್ಲಿ ನಡೆದ 'ವಿಶ್ವಸಂಸ್ಕೃತ ಸಮ್ಮೇಳನ'ದಲ್ಲಿ ಭಾಗವಹಿಸಿದ ಲೇಖಕಿಯ ಅಧ್ಯಯನದ ವಿಚಾರಗಳು ಇಲ್ಲಿವೆ.

ಇಂದು ಜಪಾನಿನಲ್ಲಿ ಬೌದ್ಧ ಹಾಗೂ ಶಿಂಗಾನ್ ಪಂಥಗಳೆರಡೂ ಕಾಣುತ್ತದಾದರೂ ಅವೆರಡರ ನಡುವಿನ ಭೇದಗಳು ಇಂದು ಅಷ್ಟಾಗಿ ಕಾಣುವುದಿಲ್ಲ. ಶಿಂಟೋ ಪಂಥದ ಆಧ್ಯಾತ್ಮಿಕ ತತ್ತ್ವ ಚಿಂತನೆಗಳಲ್ಲಿ ವೇದಕಾಲೀನ ಚಿಂತನೆಗಳ ಸಾರವಿದೆ ಎಂದು ವಿದ್ವಾಂಸರು ಗುರುತಿಸುತ್ತಾರೆ. ಬೌದ್ಧ ಮತ ಹರಡುವ ಮೊದಲೇ ಜಪಾನ್ ತಲುಪಿ ನೆಲೆಗೊಂಡಿರುವ ಹಿಂದೂ ದೇವತಾರಾಧನೆಯ ಪರಿಕಲ್ಪನೆಗಳು ಅಲ್ಲಿ ರೂಪುಗೊಂಡಿದೆ.

ಭಾರತದಿಂದ ಜಪಾನಿಗೆ ಪ್ರಯಾಣ ಮಾಡಿದ ನಮ್ಮ ದೇವತೆಗಳು ಮೊದಲು ತಲುಪಿದ್ದು ಚೀನಾದೇಶ. ಹಾಗಾಗಿ, ಈ ದೇವತೆಗಳಿಗೆ ಜಪಾನಿನಲ್ಲಿ ಚೀನೀ ಪ್ರಭಾವದ ಹೆಸರುಗಳಿವೆ. ಇಂದ್ರ (ತೈಶಾಕು-ಟೆನ್), ವರುಣ (ಸೂಯಿ-ಟೆನ್), ಯಮ (ಎಮ್ಮ), ಅಗ್ನಿ (ಕಾಟೆನ್), ವಾಯು (ಹೂ-ಟೆನ್), ಮುಂತಾದ ದೇವತೆಗಳೊಂದಿಗೆ ನಮ್ಮ ಋಗ್ವೇದ ಮೂಲದ ಸರಸ್ವತಿ ದೇವಿ ಅಲ್ಲಿ ಬೆಂಜಟೇನ್ ಮುಂತಾದ ಹಲವಾರು ಹೆಸರುಗಳಲ್ಲಿ

ಹಲವು ಶತಮಾನಗಳಿಂದಲೂ ವ್ಯಾಪಕವಾಗಿ ಪೂಜೆಗೊಳ್ಳುತ್ತಿದ್ದಾಳೆ.

ವೀಣೆ ಕೈಯಲ್ಲಿ ಹಿಡಿದು ದೇವವಾಣಿಯನ್ನು ಸಂಕೇತಿಸುವ ಸರಸ್ವತಿ ಅಲ್ಲಿ 'ಬೆನ್‌ಟೆನ್' ಅಂದರೆ ವಾಣಿಯ ದೇವತೆ. ಮ್ಯೆಯೋ ಟೇನ್ ಮಧುರ ಸ್ವರದ ದೇವತೆ, ಡೈ ಬೆನ್ಜಟೇನ್ – ಬುದ್ಧಿಪ್ರದಾಯಿನಿ ದೇವತೆ ಹಾಗೂ ಸಾಮಾಬೆನ್ಜಮಿನಿಯಾಗಿ ಕವಿಗಳಿಗೆ ಹಾಗೂ ಕಲಾವಿದರಿಗೆ ಪ್ರೇರಣೆ ಕೊಡುತ್ತಾಳೆ ಎನ್ನುವ ಜಪಾನೀಯರ ನಂಬಿಕೆ ಚೋದಯಿತ್ರೀ ಸೂನೃತಾನಾಂ ..ಪ್ರಚೇತಯತಿ ಕೇತುನಾ (ಋ:1.3.12) ಎಂಬ ಋಗ್ವೇದದ ಮಂತ್ರಾರ್ಥವನ್ನು ಪ್ರತಿಬಿಂಬಿಸುತ್ತದೆ.

ಭಾರತದಲ್ಲಿ, ಹಿಂದೆ ಬೃಹತ್ತಾಗಿ ಹರಿಯುತ್ತಿದ್ದ ನದಿಯನ್ನು ದೇವಿ ಸರಸ್ವತಿ ಎಂದು ಕರೆದ ವೇದಕಾಲೀನ ಋಷಿಗಳು ಅತ್ಯಂತ ಬೃಹತ್ತಾದ ನದಿ ಅಂಬಿತಮೇ ಎಂದು ವರ್ಣಿಸುತ್ತಾರೆ. ಈ ನಂಬಿಕೆಯಂತೆ, ಜಪಾನಿನಲ್ಲಿ ಸರಸ್ವತಿಯನ್ನು ನದಿ ದೇವತೆ ಎಂದೂ ಪೂಜಿಸುತ್ತಾರೆ. ಅಲ್ಲಿ ಅವಳ ಮಂದಿರಗಳೆಲ್ಲವೂ ನದಿಯ ದಡದಲ್ಲಿ ಅಥವಾ ಕೆರೆಗಳ ಬಳಿ ನಿರ್ಮಿಸಿದ್ದಾರೆ. ಸರಸ್ವತಿ ಮೂರ್ತಿಯೊಂದಿಗೆ ಅವಳ ದೂತರೆಂದು ಅಲ್ಲಿ ಭಾವಿಸುವ ಸರ್ಪಗಳ ಮೂರ್ತಿಗಳೂ ಕಾಣುತ್ತವೆ. ಜ್ಞಾನ, ಐಶ್ವರ್ಯ, ಆನಂದ, ಸಂಗೀತ – ನೃತ್ಯ ಮುಂತಾದ ಕಲೆಗಳ ಅಧಿದೇವತೆಯಾದ ಬೆಂಜಟೈನ್ ಸೌಂದರ್ಯದ ಖನಿಯಾಗಿ ಅಲ್ಲಿನ ಚಿತ್ರಗಳಲ್ಲಿ, ಶಿಲ್ಪಗಳಲ್ಲಿ ಕಂಗೊಳಿಸುತ್ತಾಳೆ. ಹೆಣ್ಣುಮಗುವನ್ನು ಪಡೆಯಲು ನವ ದಂಪತಿಗಳು ಅವಳಿಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ. ಸರಸ್ವತಿ ಕುರಿತ ನಾಟಕಗಳು ಅಲ್ಲಿ ಪ್ರಯೋಗಗೊಳ್ಳುತ್ತವೆ.

ಸರಸ್ವತಿ ನದೀತೀರದಲ್ಲಿ ಪಲ್ಲವಿಸಿದ ವೇದ ಸಂಸ್ಕೃತಿಯಲ್ಲಿ ಸರಸ್ವತಿ ಅತ್ಯುನ್ನತ ದೇವಿ (ದೇವಿತಮೇ). ಬುದ್ಧಿಶಕ್ತಿಯನ್ನು ಕೊಡುವ, ಒಳ್ಳೆಯ ಆಲೋಚನೆಗಳನ್ನು ಪ್ರೇರೇಪಿಸುವ ಅವಳು ಜ್ಞಾನದ ಅಧಿದೇವತೆ. ವಿದ್ಯಾದಾಯಿನಿ, ಒಳ್ಳೆಯ ಮಾತನ್ನಾಡಲು ಸ್ಫೂರ್ತಿಕೊಡುವವಳು, ಯಜ್ಞವನ್ನು ಅಂದರೆ, ಒಳ್ಳೆಯ ಕೆಲಸವನ್ನು ರಕ್ಷಿಸುವವಳು ಎಂದೆಲ್ಲಾ ಹೇಳುವುದರೊಂದಿಗೆ, ಸರಸ್ವತಿಯನ್ನು ''ವೃತ್ರಘ್ನಿ – ವೃತ್ರಾಸುರನ ವಧೆಮಾಡಿದವಳು'' (ಋ:6.61.7) ಎಂದು ಋಗ್ವೇದದಲ್ಲಿ ಹೇಳುವಲ್ಲಿ, ಅವಳ ಶಕ್ತಿ ಸ್ವರೂಪದ ವರ್ಣನೆಯೂ ಕಾಣಿಸುತ್ತದೆ.

ದುರ್ಗೆಯಂತೆ ಕಾಣುವ ಕ್ರೋಧ ಸರಸ್ವತಿ – ಬೆಂಜಟೇನ್ ವಿಚಾರ ವಿಶೇಷ ಎನಿಸಿದೆ. ಜಪಾನಿನಲ್ಲಿ ಅವಳ ಶಕ್ತಿಸ್ವರೂಪದ ಆರಾಧನೆ ವಿಶೇಷವಾದದು. ಅಲ್ಲಿ ಅವಳು ಎಂಟು ಕೈಗಳಲ್ಲಿ ಬಿಲ್ಲು-ಬಾಣ, ಕತ್ತಿ, ತ್ರಿಶೂಲ, ವಜ್ರಾಯುಧ, ಶಂಖ, ಮುಸಲ ಹಾಗೂ ಚಕ್ರಾಯುಧಗಳನ್ನು ಹಿಡಿದು ದುರ್ಗಿ ಸ್ವರೂಪದಲ್ಲಿ ಯುದ್ಧದಲ್ಲಿ ಯೋಧರನ್ನು ರಕ್ಷಿಸುತ್ತಾಳೆ ಎನ್ನುವ ನಂಬಿಕೆಯಿದೆ.

ಎಂಟನೇ ಶತಮಾನದಲ್ಲಿದ್ದ ಚಕ್ರವರ್ತಿ ಶೋಮು ಜಪಾನಿನ ಎಲ್ಲಾ ಪ್ರದೇಶಗಳಲ್ಲಿ ಈ ಸೂತ್ರದ ಪಠಣ ಮಾಡಲು ಆದೇಶಿಸಿದ್ದ.

ಸ್ವಾಹಾ ? ನಮೋ ಸರಸ್ವತ್ಯೈ ಮಹಾದೇವ್ಯೈ ಸ್ವಾಹಾ? ನಮೋ ಭಗವತಿ ಮಹಾದೇವಿ ಸರಸ್ವತಿ? ಸಿಧ್ಯಂತು ಮಂತ್ರಪದಾನಿ ಸ್ವಾಹಾ? (ಶಿಕಾಕು 12ನೇ.ಶ.)

ಯುದ್ಧರಂಗದಲ್ಲಿ ಸರಸ್ವತಿ ನಮ್ಮನ್ನು ರಕ್ಷಿಸಲಿ ಎನ್ನುವ ಈ ಪ್ರಭಾವಿ ಮಂತ್ರವನ್ನು ಜಪಾನಿನ ಮಹಾದಂಡನಾಯಕರು ಯುದ್ಧರಂಗದಲ್ಲಿ ಪಠಿಸುತ್ತಿದ್ದ ಉಲ್ಲೇಖ ಅಲ್ಲಿನ ಕಾವ್ಯಗಳಲ್ಲಿ ಕಾಣುತ್ತದೆ.

ಸುವರ್ಣಭಾಷೋತ್ತಮ ಸೂತ್ರ ಎನ್ನುವುದು ಬೌದ್ಧಮತದ ಪ್ರಸಿದ್ಧ ಸೂತ್ರ. ಅದರ ಏಳನೇ ಅಧ್ಯಾಯದಲ್ಲಿ ಸಂಪೂರ್ಣವಾಗಿ ದೇವಿ ಸರಸ್ವತಿಯ ಆರಾಧನೆಯ ವಿವರಗಳು ಕಾಣುತ್ತವೆ. ಇಲ್ಲಿ ಅವಳು ವಿವೇಕದಾಯಿಯಾದ ಪ್ರಭಾವಿ ಶಕ್ತಿದೇವತೆಯಾಗಿ ತೋರುತ್ತಾಳೆ.

ಷೋಶೊ (1205-82) ಬರೆದಿರುವ ಅಸಬಶೊ ಎನ್ನುವ ಬೃಹತ್ ಗ್ರಂಥದಲ್ಲಿ ದೇವಿ ಸರಸ್ವತಿಯನ್ನು ಕುರಿತು ವಿಸ್ತೃತ ಮಾಹಿತಿ ಇದೆ. ಅಂತೆಯೇ, ಸರಸ್ವತಿ ಆರಾಧನೆಯಲ್ಲಿ ಪ್ರಚಲಿತವಿರುವ ಪಾರಂಪರಿಕ ಆಚರಣೆಗಳ ದೀರ್ಘ ವಿವರಣೆಯನ್ನು ರೈಸನ್ (1279-1349) ಬರೆದಿರುವ ಬೈಕು- ಹೊಕ್ಕು-ಶೊ

(ಭಾರತೀಯ ಶ್ವೇತ ರತ್ನ) ಎನ್ನುವ ಗ್ರಂಥದಲ್ಲಿ ದಾಖಲಾಗಿದೆ. ಸರಸ್ವತಿ ಮಂತ್ರಗಳು ಹಾಗೂ ಅದನ್ನು ಪಠಿಸಿದಾಗ ದೊರಕುವ ಸರಸ್ವತಿಯ ವಿಶೇಷ ಕೃಪೆಯನ್ನು ಅದು ಹೇಳುತ್ತದೆ.

ಐತಿಹ್ಯಗಳು

ಸರಸ್ವತಿಯ ಆರಾಧನೆಯೊಂದಿಗೆ ಹಲವಾರು ಪವಾಡಗಳ ಐತಿಹ್ಯಗಳು ಜಪಾನಿನಲ್ಲಿ ಇಂದಿಗೂ ಹೊಸ ಅಧ್ಯಾಯಗಳನ್ನು ಸೇರಿಸುತ್ತಿವೆ. ಕವಿ ಮಿಯಾಕೋ ಯೋಷಿಕ (824-879)ನಿಗೆ ಶಿಕುಬುಶಿಕ ಮಂದಿರದ ಬೆಂಜಟೈನ್ ಕನಸಿನಲ್ಲಿ ಬಂದು ಕವಿತೆಯ ಸಾಲೊಂದನ್ನು ಹೇಳಿ ಪ್ರೇರಣೆ ಕೊಟ್ಟಳು ಎನ್ನುವ ಒಂದು ಉಲ್ಲೇಖ ನಮ್ಮ ಕವಿ ಕಾಳಿದಾಸನಿಗೆ ಮಹಾಕಾಳಿ ನೀಡಿದ ವರವನ್ನು ನೆನಪಿಸುತ್ತದೆ. 1934 ರಲ್ಲಿ ಶಿಬೋನ್ ಸೋನಿಯೋ ಎಂಬ ಪ್ರಭಾವಿ ಮಹಿಳೆ ಬೆನ್‌ಟೆನ್‌ಶು ಎಂಬ ನವೀನ ಸರಸ್ವತಿ ಪಂಥವನ್ನು ಪ್ರಾರಂಭಿಸಿದಳು. ದೇವಿ ತನ್ನ ದೇಹವನ್ನು ಸೇರಿದ್ದಾಳೆ ಎನ್ನುತ್ತಿದ್ದ ಅವಳು, ಅದುವರೆಗೂ ಅವಳಿಗೆ ಅಪರಿಚಿತವಾಗಿದ್ದ ಸಂಸ್ಕೃತ ಭಾಷೆಯಲ್ಲಿ ಬರೆಯಲು ಪ್ರಾರಂಭಿಸಿದಳು ಎಂಬ ಮಾಹಿತಿ ಸಿಗುತ್ತದೆ.

ಸುಮಾರು ಎಂಟನೇ ಶತಮಾನದಲ್ಲಿದ್ದ ವಿದ್ವಾಂಸ, ಕೊಬೊದೈಷಿಯಿಂದ ಅಲ್ಲಿ ಸಂಸ್ಕೃತ ಭಾಷೆಯ ಅಧ್ಯಯನ ಪ್ರಾರಂಭವಾಯಿತು. ಅವನು ಸಂಸ್ಕೃತ ಕಲಿತದ್ದು ಚೀನಾದಲ್ಲಿದ್ದ ಕಾಶ್ಮೀರಿ ಗುರು, ಪ್ರಾಜ್ಞನಿಂದ. ಅಧ್ಯಯನ ಮುಗಿಸಿ ಜಪಾನಿಗೆ ಮರಳಿದ ಕೊಬೊದೈಷಿ ವಿದ್ಯಾ ಕ್ಷೇತ್ರದಲ್ಲಿ ಮಾಡಿದ ಹಲವಾರು ಕಾರ್ಯಗಳನ್ನು ಅವರು ಗೌರವದಿಂದ ನೆನೆಯುತ್ತಾರೆ. ಅವನು ಸಂಸ್ಕೃತ ಮಂತ್ರಗಳನ್ನು ಬರೆಯಲು ಭಾರತೀಯ ಲಿಪಿಮಾಲೆಯನ್ನು ಬಳಕೆಗೆ ತಂದು, ಸಾಮಾನ್ಯಜನರಿಗಾಗಿ ಶಾಲೆ ಆರಂಭಿಸಿದವನು.

ಜಪಾನಿನ ಪ್ರಸಿದ್ಧ ವಿದ್ವಾಂಸರಾದ ಹಜಿಮ ನಾಕಮುರ (1912 – 1999), ಭಾರತದ ಪ್ರಭಾವವಿಲ್ಲದಿದ್ದರೆ, ಜಪಾನಿನ ಸಂಸ್ಕೃತಿ ಈಗಿರುವಂತೆ ಇರುತ್ತಿರಲಿಲ್ಲ. ಇಂದು ಬೌದ್ಧ ಮತವನ್ನು ಅನುಸರಿಸುವ ಜಪಾನೀಯರು ಭಾರತದ ವಿಚಾರಗಳಿಂದ ಬಹುವಾಗಿ ಪ್ರಭಾವಿತರಾಗಿದ್ದಾರೆ ಎನ್ನುತ್ತಾ, ಭಾರತ ಸಾಂಸ್ಕೃತಿಕವಾಗಿ, ಜಪಾನಿನ ಮಾತೆ ಎಂದು ಹೇಳುತ್ತಾರೆ.

ಜಪಾನಿನಲ್ಲಿ ಸಂಸ್ಕೃತ ಭಾಷೆ

ಜಪಾನಿನಲ್ಲಿ ಸಂಸ್ಕೃತ ಭಾಷೆಯ ಅಧ್ಯಯನ 1500 ವರ್ಷಗಳಿಗೂ ಹಿಂದಿನಿಂದಲೂ ನಡೆಯುತ್ತಿದೆ. ಅಲ್ಲಿನ ಹಲವಾರು ವಿಶ್ವವಿದ್ಯಾಲಯಗಳಲ್ಲಿ ಹಾಗೂ ದೇವಾಲಯಗಳಲ್ಲಿ ಈಗಲೂ ಸಂಸ್ಕೃತ ಭಾಷೆಯಲ್ಲಿರುವ ಗ್ರಂಥಗಳ ಅಧ್ಯಯನ ನಡೆಯುತ್ತಿದೆ. ಸಂಸ್ಕೃತ ಭಾಷೆ ಜಪಾನ್ ತಲುಪಿದ್ದು ಚೀನಾ ಮೂಲಕವೇ. ಅಲ್ಲಿ ಭಾರತದಲ್ಲಿರುವುದಕ್ಕಿಂತಲೂ ಹಿಂದಿನ ಕೈಬರಹದ ಸಂಸ್ಕೃತ ಗ್ರಂಥಗಳಿವೆ ಎಂದು ಅವರು ಹೆಮ್ಮೆಯಿಂದ ಹೇಳುತ್ತಾರೆ. ಅವೆಲ್ಲವೂ ಅಲ್ಲಿನ ದೇವಾಲಯಗಳಲ್ಲಿ ಸುರಕ್ಷಿತವಾಗಿವೆ. ಅವುಗಳಲ್ಲಿ ಚೀನೀ ಭಾಷೆಯಲ್ಲಿರುವ ಸಂಸ್ಕೃತ ಗ್ರಂಥಗಳ ಸಂಖ್ಯೆಯೂ ದೊಡ್ಡದೇ.

ಪುಸ್ತಕ ವಿಮಾನ

» ರಾ.ನಂ. ಚಂದ್ರಶೇಖರ

ಪರಿಸರ ಕಾಳಜಿಯ ಬರಹದ ದೀವಟಿಗೆ

ಶಶಿಧರ ಹಾಲಾಡಿಯವರು ಕಾದಂಬರಿ, ವ್ಯಕ್ತಿ ಚಿತ್ರ, ಪ್ರವಾಸ ಕಥನ, ಪ್ರಬಂಧ, ಅಂಕಣ ಬರಹ ಹೀಗೆ ಸಾಹಿತ್ಯ ಕ್ಷೇತ್ರದ ಹಲವು ಪ್ರಕಾರಗಳಲ್ಲಿ ಬರೆದು ಅಪರೂಪದ ಲೇಖಕರಾಗಿದ್ದಾರೆ. ಇವರ ವೈಶಿಷ್ಟ್ಯವೆಂದರೆ ಚೇತೋಹಾರಿ ಬರಹದ ಮೂಲಕ ಪರಿಸರ ಜಾಗೃತಿ ಮೂಡಿಸುವ ಪ್ರಯತ್ನ. ಇತ್ತೀಚೆಗೆ ಪರಿಸರ ಕುರಿತ ಜೀವ ವೈವಿಧ್ಯಗಳ ಕುರಿತು ಆಸಕ್ತಿ ಇರಿಸಿಕೊಂಡ ಕಥಾನಾಯಕ ಇರುವ 'ಅಬ್ಬೆ' ಕಾದಂಬರಿಯ ಮೂಲಕ ಸಾಹಿತ್ಯಾಸಕ್ತರಲ್ಲಿ ವಿಸ್ಮಯ ಮೂಡಿಸಿದ್ದ ಹಾಲಾಡಿಯವರು, 'ಪರಿಸರದ ಒಡನಾಟ' ಲೇಖನಗಳ ಸಂಕಲನದಲ್ಲಿ ಪರಿಸರ ಕಾಳಜಿಯ ಅಗತ್ಯವನ್ನು ಹೃದ್ಯವಾಗಿ ಹೇಳುವ ಪ್ರಯತ್ನ ಮಾಡಿದ್ದಾರೆ.

ಪರಿಸರದ ಬರಹ ಎಂದರೆ ತಾತ್ವಿಕ ಚಿಂತನೆ,

ಇಲ್ಲಿನ ಪ್ರಬಂಧಗಳಲ್ಲಿ ಅಂಕಿಅಂಶಗಳ ಭಾರವಿಲ್ಲ; ಸ್ವ ಅನುಭವದ ಆಪ್ತ ನಿರೂಪಣೆಯಿದೆ, ಪರಿಸರ ಕಾಳಜಿ ಇದೆ.

ಮಾರ್ಗದರ್ಶನ, ಬೋದನೆಗಳೇ ಹೆಚ್ಚು. ಆದರೆ, ಪರಿಸರದ ಒಡನಾಟದಲ್ಲಿ ಸಂಕಲನದಲ್ಲಿ 42 ಪ್ರಬಂಧಗಳಿದ್ದು, ನಾಶವಾಗುತ್ತಿರುವ ಪರಿಸರವನ್ನು ಪುನಃ ಮೂಲಸ್ಥಿತಿಗೆ ತರಬೇಕು, ಈಗ ಇರುವ ಸ್ಥಿತಿಯಲ್ಲಾದರೂ ಪರಿಸರವನ್ನು ರಕ್ಷಿಸ್ಕಿಕೊಳ್ಳಬೇಕೆಂಬ ಕಾಳಜಿಯೇ ಕೇಂದ್ರವಾಗಿದ್ದರೂ ಅದು ಭೋದನೆಗಿಳಿಯುವುದಿಲ್ಲ. ಅಂಕಿ-ಅಂಶಗಳೇ ಪ್ರಧಾನವಾಗಿ ಓದುಗನ ತಾಳ್ಮೆ ಪರೀಕ್ಷಿಸುವುದಿಲ್ಲ. ಊರಿನ ಶಾಲೆ, ಮರೆಯಾಗುತ್ತಿರುವ ಆಹಾರ ಪರಂಪರೆ, ವೈವಿಧ್ಯತೆ, ಕಣ್ಮರೆಯಾಗುತ್ತಿರುವ ನಾಟಿ ವೈದ್ಯ ಪದ್ಧತಿಗಳು, ಹೀಗೇ ಮುಂದುವರೆದು ಸ್ಥಳನಾಮದ ವಿವೇಚನೆಯನ್ನು ಮಾಡಿದ್ದಾರೆ.

ಈ ಸಂಕಲನದಲ್ಲಿರುವ, ಸುಲಭವಾಗಿ ಓದಿಸಿಕೊಳ್ಳುವ ಚೇತೋಹಾರಿ ಬರಹಗಳ ಶೈಲಿ ಬೆರಗು ಹುಟ್ಟಿಸುವಂತಹದ್ದು. ಅದಕ್ಕೊಂದು ನಿದರ್ಶನ ಅವರ 'ಮಿಣುಕುಹುಳುಗಳ ಬೆಳಕಿನ ಪರಿಷೆ' ಪ್ರಬಂಧದ ಈ ಸಾಲುಗಳು – 'ಭಾವಜೀವಿಗಳ ಮನದ ತುಂಬಾ ಬೆಳಕನ್ನು ತುಂಬಬಲ್ಲ ಮಿಣುಕು ಹುಳಗಳ ಮಾಯಾಲೋಕದ ಬೆರಗನ್ನು ಪೂರ್ತಿಯಾಗಿ ಅನುಭವಿಸಬೇಕಾದರೆ, ನೀವೊಮ್ಮೆ ಅವುಗಳ ಬೆಳಕಿನಾಟವನ್ನು ನೋಡಲೇಬೇಕು, ಹೊರತು ಅಕ್ಷರದಲ್ಲಿ ವರ್ಣಿಸುವುದು ಕಷ್ಟ. ಅದರಲ್ಲೂ, ಮಿಣುಕುಹುಳಗಳು, ಒಮ್ಮೊಮ್ಮೆ ನಡೆಸುವ 'ಬೆಳಕಿನ ಪರಿಷೆ'ಯಂತೂ, ಈ ನಿಸರ್ಗಲೋಕದ ಅದ್ಭುತ ದೃಶ್ಯಗಳಲ್ಲಿ ಒಂದು ಮತ್ತು ಅದೊಂದು ವಿಸ್ಮಯಕಾರಿ ವಿದ್ಯಮಾನ' ದಿಂದ ಆರಂಭ ಮಾಡಿ 'ಎಲ್ಲ ಊರುಗಳಲ್ಲೂ ಮಿಣುಕು ಹುಳುಗಳಿರಬಹುದು; ಕತ್ತಲ ರಾತ್ರಿಯಲ್ಲಿ ಆ ವಿಶಿಷ್ಟ ಕೀಟಗಳನ್ನು ಗುರುತಿಸುವ ಪ್ರಯತ್ನ ಮಾಡಿ, ನಿಸರ್ಗದ ವಿಸ್ಮಯಕಾರಿ ಬೆಳಕಿನ ಕಾವ್ಯಕ್ಕೆ ಸಾಕ್ಷಿಯಾಗಿ!'



ಪರಿಸರದ ಒಡನಾಟ
ಲೇ: ಶಶಿಧರ ಹಾಲಾಡಿ
ಪ್ರ: ಸಪ್ನ ಬುಕ್ ಹೌಸ್
ಬೆಂಗಳೂರು
08040114455
ಬೆಲೆ ರು.250/-

ಎಂದು ಮುಗಿಸುತ್ತಾರೆ. ಇದು ಓದುಗರಲ್ಲೂ ಪರಿಸರ ಚಟುವಟಿಕೆಯನ್ನು ಪ್ರೇರೇಪಿಸುವಂತಹ ಬರಹ.

ಮಲೆನಾಡಿನಿಂದ ಬಂದವರಿಗೆ ಇಲ್ಲಿರುವ 'ಮನೆ ಹತ್ತಿರವೇ ಹುಲಿಕಡ್ಜುಳನ ಗೂಡು, ಆ ಪುಟ್ಟ ಜೀವಿಯ ಮೈಮೇಲೆ ಬೆಳಕಿ ಬಾಸುಂಡೆ'ಯಂತಹ ಬರಹಗಳು ನಮ್ಮ ಬಾಲ್ಯವನ್ನು ನೆನಪಿಗೆತರುತ್ತವೆ. ಹಾಗೇ ಹಿರಿಕರು ಮನೆಗೆ ಬಂದ ಕ್ರಿಮಿ ಕೀಟಗಳನ್ನು ಹೊರಗೆ ಹಾಕುತ್ತದ್ದರೇ ಹೊರತು ಸಾಯಿಸುತ್ತಿರಲಿಲ್ಲ ಅನ್ನುವ ಮಾಹಿತಿ ಹೇಗೆ ಹಿಂದಿನ ಕಾಲದಲ್ಲಿ ಪರಿಸರದೊಂದಿಗೆ ಸಹಜೀವನ ಸಾಗಿಸುತ್ತಿದ್ದರು ಎಂಬುದಕ್ಕೆ ನಿದರ್ಶನವಾಗಿವೆ. ಮನೆಯ ಸುತ್ತಮುತ್ತ ಇದ್ದ ಹಣ್ಣು ಹೂವಿನ ಗಿಡಗಳನ್ನು ಇವರೇ ನನ್ನ ಸ್ನೇಹಿತರು! ಹೇಳುವಾಗ ಲೇಖಕರ ಪರಿಸರದ ನೆಂಟಿನ ಸೆಳತ ಕಾಣುತ್ತದೆ.

ಇವರ ಲೇಖನಗಳು ಅನುಭವದಿಂದ ಆರಂಭವಾದರೂ ವೈಜ್ಞಾನಿಕ ಮಾಹಿತಿ, ವಿವರಣೆಗಳನ್ನು ನೀಡುವುದು ಗಮನೀಯ. ಡಾ. ಬಿ.ಜಿ.ಎಲ್. ಸ್ವಾಮಿ ರಚಿಸಿದ 'ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೇರಿಕ'ದಲ್ಲಿ ನಾವು ಬಳಸುವ ಹಣ್ಣು ತರಕಾರಿಗಳಲ್ಲಿ ಕೆಲವು ಅಮೇರಿಕಾದಿಂದ ಬಂದ ವಿವರ ನೀಡಿದ್ದಾರೆ. ಇದಕ್ಕೆ ಪ್ರತಿಯಾಗಿ 'ಪರಿಸರದ ಒಡನಾಟ' ಸಂಕಲನದ 'ಜಗತ್ತಿನ ಹೊಟ್ಟೆಯಲ್ಲಿ ನಮ್ಮ ದೇಶದ ಸಿಟ್ರಸ್!' ಲೇಖನದಲ್ಲಿ ನಮ್ಮ ದೇಶದಿಂದ ಪಾಶ್ಚಾತ್ಯ ದೇಶಗಳಿಗೆ ಹೋದ ಹುಳಿ ಹಣ್ಣುಗಳ (ಲಿಂಬೆ, ಕಿತ್ತಳೆ ಇತ್ಯಾದಿ) ಬಗ್ಗೆ ಹೇಳುತ್ತಾರೆ. 'ಗೊತ್ತಾ ನಿಮಗೆ ಮುಷ್ಠ?'ದಲ್ಲಿ ವಿಶಿಷ್ಟ ವಕ್ಷಿಮುಷ್ಠ, ನಾಟಿ ವೈದ್ಯ ಪದ್ಧತಿ ಬಗ್ಗೆ ಹೇಳುತ್ತಾರೆ. 'ತೊಂಡೆಕಾಯಿ ತಿನ್ನುವ ಕಾಯಿಕಳ್ಳ' ತೊಂಡೆಕಾಯಿ ಕುರಿತ ವಿವರಗಳಿಂದ ಆರಂಭವಾಗಿ, ಅದನ್ನು ತಿನ್ನುವ ಕಾಯಿಕಳ್ಳ ಎಂದರೆ ಒತಿಕ್ಯಾತದ ವಿವರದವರೆಗೆ ಸಾಗುತ್ತದೆ. ಇಲ್ಲಿನ ನವಿರಾದ ನಿರೂಪಣೆ ಒದುಗನ್ನು ಆವರಿಸಿಕೊಳ್ಳುತ್ತದೆ.

ನಮ್ಮ ರಾಜ್ಯದಲ್ಲಿ ಒಂದು ಹಸಿರು ಪ್ರವಾಸಿ ಮಾರ್ಗ, ಚಾರಣದಿಂದ ಪರಿಸರಕ್ಕೆ ಹಾನಿಯಾದೀತೆ? ನಮ್ಮ ಸರ್ಕಾರ ವಿಶೇಷವಾಗಿ ಪ್ರವಾಸೋದ್ಯಮ ಇಲಾಖೆ ಗಮನಿಸಲೇ ಬೇಕಾದ ಲೇಖನಗಳು. ಇಲ್ಲಿ ನಾನು ಕೆಲವು ಲೇಖನಗಳನ್ನಷ್ಟೇ ಉಲ್ಲೇಖಿಸಿದ್ದೇನೆ. ಎಲ್ಲ ಲೇಖನಗಳು ಅಪೂರ್ವವಾಗಿವೆ.

ಪರಿಸರ ಕಾಳಜಿ ಮತ್ತು ನೆಲಮೂಲ (ನ್ಯಾಸ್ಟಾಜಿಕ್) ಚಿಂತನೆಗಳು ಹಾಲಾಡಿಯವರ ಬರಹಗಳ ಮುಖ್ಯ ದ್ರವ್ಯ. ಅಡಂಬರವಿಲ್ಲದ ನೇರ ಚಿಂತನೆಯ, ತಾವು ಕಂಡ ಸುತ್ತಲಿನ ಪರಿಸರದ ವಾಸ್ತವ ಚಿತ್ರಣ ನೀಡಿರುವ ಈ ಕೃತಿಯಲ್ಲಿ ಕುಂದಾಪುರ ಕನ್ನಡದ ಸೊಗಡು, ಸೊಬಗು ಕಾಣಿಸುವುದು ವಿಶೇಷ. ಹಾಗೆ ವೈಜ್ಞಾನಿಕವಾಗಿ ಇಲ್ಲಿನ ವಸ್ತು-ವಿಷಯಗಳನ್ನು ವಿಶ್ಲೇಷಿಸಿರುವುದು ಇನ್ನೊಂದು ವಿಶೇಷ. ಕೃತಿಯನ್ನು ಓದುತ್ತಾ ಹೋದಂತೆ ಒಟ್ಟಾರೆಯಾಗಿ ಲೇಖಕರು ತಾವು ಹುಟ್ಟಿ ಬೆಳೆದ ಪರಿಸರದಲ್ಲಿ ಕಂಡ ವಾಸ್ತವಗಳನ್ನು ವೈಚಾರಿಕತೆಯ ಬೆಳಕಿನಲ್ಲಿ ಆಕರ್ಷಕವಾಗಿ ಸರಳ ಭಾಷೆಯಲ್ಲಿ ನಿರೂಪಿಸಿ ಓದುಗರ ಮನಮುಟ್ಟುವಲ್ಲಿ ಯಶಸ್ವಿಯಾಗಿದ್ದಾರೆ.

ವಿಶ್ವವಾಣಿ ಅಂಕಿತ ಟಾಪ್ ಟೆನ್

1



ಕನಕಾಂಗಿ ಕಲ್ಯಾಣ
(ಕುಂವೀ ಹೊಸ ಕಥಾಸಂಕಲನ)
ಲೇ: ಕುಂವೀ
ಪ್ರ: ಸಪ್ನ ಬುಕ್ ಹೌಸ್, ಬೆಂಗಳೂರು
ಬೆಲೆ : ರೂ 195/-

2



ನಾಗಾಸಾಧುಗಳ ರಹಸ್ಯ ಪ್ರಪಂಚ
(ನಾಗಾ ಸಾಧುಗಳ ಜೀವನ ಕುರಿತ ಕಾದಂಬರಿ)
ಲೇ: ಸಂತೋಷ ಶ್ರೀವಾತ್ಸವ
ಅನು : ಎಂ.ವಿ.ನಾಗರಾಜರಾವ್
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 350/-

3



ಕಿಶೋರ ಚಂದ್ರ ವಾಣಿ
(ಕುವೆಂಪು ಅವರ ಇಂಗ್ಲಿಷ್ ಕವನಗಳ ಕನ್ನಡಾನುವಾದ)
ಅನು : ಆರ್.ವಿಜಯರಾಘವನ್
ಕೆ.ಸಿ.ಶಿವಾರೆಡ್ಡಿ
ಪ್ರ: ಎಂ. ಮೂನಿಸ್ವಾಮಿ ಅಂಡ್ ಸನ್ಸ್, ಬೆಂಗಳೂರು
ಬೆಲೆ : ರೂ 250/-

4



ನುಡಿಗಳ ಅಳಿವು
(ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕೃತಿ)
ಲೇ: ಕೆ.ವಿ. ನಾರಾಯಣ
ಪ್ರ: ಅಹರ್ನಿಶಿ ಪ್ರಕಾಶನ, ಶಿವಮೊಗ್ಗ
ಬೆಲೆ : ರೂ 125/-

5

ಸಂಪಾದಕರ ಸದ್ಯಶೋಧನೆ - 3
(ಜನಪ್ರಿಯ ಅಂಕಣ ಬರಹಗಳು)
ಲೇ: ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ : ರೂ 250/-

6

ದೇವರಾಗಲು ಮೂರೇ ಗೇಣು
(ಚಡಗ ಕಾದಂಬರಿ ಪ್ರಶಸ್ತಿ ಪಡೆದ ಕೃತಿ)
ಲೇ: ಡಾ। ಶಾಂತಲ
ಪ್ರ: ಹರಿವು ಬುಕ್ಸ್, ಬೆಂಗಳೂರು
ಬೆಲೆ : ರೂ 300/-

7

ಭೂಮ್ತಾಯಿಯ ಕಕ್ಷೆಯಲಿ ಪಕ್ಷಿಯಾಗಿ
(ಪ್ರಕೃತಿಯ ಏಳುಬೀಳಿನ ಕುರಿತ ಬರಹಗಳು)
ಲೇ: ರೂಪ ಹಾಸನ
ಪ್ರ: ಜನಪ್ರಕಾಶನ, ಬೆಂಗಳೂರು
ಬೆಲೆ : ರೂ 250/-

8



ಸರ್ವೆ ನಂಬರ್ - 97
(ಕಥೆಗಳು)
ಲೇ: ಅನಿಲ್ ಗುನ್ನಾಪೂರ
ಪ್ರ: ಹೊಂಗಿರಣ ಪ್ರಕಾಶನ, ಹಿರೇಮಸಳಿ
ಬೆಲೆ : ರೂ 120/-

9

ಐಲಾ ಮಲಿಕಾಳ ಪವಿತ್ರ ಪೆಟ್ಟಿಗೆ
(ಪ್ರವಾಸ ಕಥನ)
ಲೇ: ಬೊಳುವಾರು
ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು
ಬೆಲೆ : ರೂ 195/-

10



ಹವೇಲಿ ದೊರೆಸಾನಿ
(ಕಥಾ ಸಂಕಲನ)
ಲೇ: ಮಲ್ಲಿಕಾರ್ಜುನ ಶೆಲ್ಲಿಕೇರಿ
ಪ್ರ: ಅಮೂಲ್ಯ ಪುಸ್ತಕ, ಬೆಂಗಳೂರು
ಬೆಲೆ : ರೂ 175/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755
ಮೊಬೈಲ್ ನಂ: 9019190502

ಪರಮಪದವೆಂಬ ಪದ

» ಡಾ. ಟಿ. ಎಸ್. ಸತ್ಯವತಿ

ಸದುಕ್ತಿ, ಸೂಕ್ತಿ, ಸುಭಾಷಿತಾ ಈ ಎಲ್ಲಾ ಮಾತುಗಳು ಹೇಳುವುದೂ – ನಮ್ಮ ಬದುಕಿಗೆ ನೇರವಾಗಿ ಸಂಬಂಧಿಸಿದ, ಅನುಭವ ದಿಂದ ಅನುಗ್ರಹಣಿತವಾಗಿರುವಂತಹ, ಎಲ್ಲಾರಿಗೂ ಉಪಯುಕ್ತವಾಗುವಂತಹ ಒಳ್ಳೆಯ ಮಾತು. ಅದೇ ಸುಭಾಷಿತ. ಭಾಷೆಯಲ್ಲಿನ ಶ್ಲೇಷಾರ್ಥಗಳು, ವಿಶೇಷ ಅರ್ಥಗಳು, ಒಳಾರ್ಥಗಳು ಇವೆಲ್ಲವನ್ನು ತಿಳಿದುಕೊಳ್ಳಲು ಸುಭಾಷಿತಗಳಿಂದ ಸಾಧ್ಯವಾಗುತ್ತದೆ. ಛಂದೋಬದ್ಧವಾಗಿರುವ ಕಾರಣಕ್ಕೆ ಇವುಗಳನ್ನು ನಾವು ಸುಲಭವಾಗಿ ನೆನಪಿಟ್ಟುಕೊಳ್ಳಲು ಸಾಧ್ಯವಾಗುತ್ತದೆ.

ಕೆ. ಜಿ. ರಾಘವನ್ ಅವರ 'ಸುಭಾಷಿತಗಳು' ಕೃತಿ ಈ ನಿಟ್ಟಿನಲ್ಲಿ ಗಮನಾರ್ಹ ಕೊಡುಗೆ. ರಾಘವನ್ ದೊಡ್ಡ ವಾಗ್ಮಿ, ಮೇಧಾವಿ ಕೂಡ. ಅವರು ಸೌಭಾಷಿತಗಳ ಹಲವು ಗ್ರಂಥಗಳಿಂದ ಹೃದಯಕ್ಕೆ ಹತ್ತಿರವಾದ ನೂರು ಸುಭಾಷಿತಗಳನ್ನು ಆರಿಸಿ, ಬೇರೆ ಬೇರೆ ರೀತಿಯಿಂದ, ವಿಭಿನ್ನ ಸಂಸ್ಕೃತಿಯ, ವಿಭಿನ್ನ ಭಾಷೆಯ ವಿಷಯಗಳನ್ನು ಇದಕ್ಕೆ ಸಮೀಕರಣ ಮಾಡಿ ಪ್ರಕಟಿಸಿದ್ದಾರೆ. ಸಂಸ್ಕೃತ ಮೂಲದ ಜತೆಗೆ ಉಚ್ಚಾರವನ್ನೂ ಇಂಗ್ಲಿಷಿನಲ್ಲಿ ಕೊಟ್ಟಿರುವುದು ಓದುಗರಿಗೆ ಅನುಕೂಲವಾಗಲಿದೆ. ಸುಭಾಷಿತಗಳ ಮೂಲಕ ಜಗತ್ತಿನ ಬೇರೆ ಬೇರೆ ಜ್ಞಾನಶಾಖೆಗಳ ಬಾಗಿಲನ್ನು ತೆರೆದಿದ್ದಾರೆ. ಪುಸ್ತಕ ಪ್ರಕಟಿಸಿದ ವಿದ್ಯಾಭವನಕ್ಕೆ ಅಭಿನಂದನೆಗಳು. ಈ ಪುಸ್ತಕದ ಪ್ರಭಾವದಿಂದ ಗಾದೆ ನಮ್ಮ ಮಾತಿನ ಮಧ್ಯದಲ್ಲಿ ಹೇಗೆ ಬರುತ್ತೋ ಹಾಗೆ ಸುಭಾಷಿತಗಳು ಬರುವಂತಾದರೆ ದೊಡ್ಡ



ಸುಭಾಷಿತಗಳು
ಲೇ: ಕೆ.ಜಿ.ರಾಘವನ್
ಪ್ರ: ಭಾರತೀಯ ವಿದ್ಯಾ ಭವನ

ಸಾಧನೆ. ನಮ್ಮ ಎಳೆಯ ವಯಸ್ಸಿನ ಮಕ್ಕಳಿಗೆ ಕೇವಲ ಇವುಗಳನ್ನು ಕೇವಲ ಪಾಠಗಳಂತೆ ಹೇಳಿಕೊಡದೆ ಅರ್ಥಮಾಡಿಸುವಂತಾದರೆ, ಇದಕ್ಕೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗಾಗಿ ವಿಶೇಷ ಕಾರ್ಯಾಗಾರಗಳನ್ನು ಏರ್ಪಡಿಸುವಂತಾದರೆ, ತರಬೇತಿ ಕೇಂದ್ರಗಳ ಮೂಲಕ ಕಾರ್ಪೋರೇಟ್ ಕಛೇರಿಗಳು, ಸಂಘಸಂಸ್ಥೆಗಳಲ್ಲಿ ಅಥವಾ ಕಾಲೇಜುಗಳಲ್ಲಿ ಸುಭಾಷಿತದ ತರಗತಿಗಳು ಆರಂಭಗೊಂಡರೆ ಈ ಪುಸ್ತಕದ ಶ್ರಮ ಸಾರ್ಥಕ.

ಬಹುಮುಖಿ ತೇಜಸ್ವಿ

» ಶ.ಹಾ.

ಇತ್ತೀಚೆಗೆ, ತೇಜಸ್ವಿಯವರು ರಚಿಸಿದ ಎಲ್ಲಾ ಪುಸ್ತಕಗಳ ಸಮಗ್ರ ಸಂಪುಟ ಪ್ರಕಟಗೊಂಡಿತು. ಆ ಮೂಲಕ, ಕನ್ನಡದ ಪ್ರಮುಖ ಮತ್ತು ವಿಶಿಷ್ಟ ಸಾಹಿತಿಯೊಬ್ಬರ ಎಲ್ಲಾ ಬರಹಗಳು ಒಂದೇ ಕಡೆ ಸಿಗುವಂತಾಗಿ, ಓದುಗರಿಗೆ, ವಿದ್ವಾಂಸರಿಗೆ, ಸಂಶೋಧಕರಿಗೆ ಅನುಕೂಲವಾಯಿತು. ಪೂರ್ಣಚಂದ್ರ ತೇಜಸ್ವಿಯವರು ಪ್ರಮುಖ ವಾಗಿ ಪರಿಸರ ಸಂಬಂಧಿ ಬರಹ ಮತ್ತು ಕೃತಿಗ ಳಿಂದಲೇ ಹೆಸರಾಗಿದ್ದರೂ, ಅವರು ನಮ್ಮ ಸಾಹಿ ತ್ಯಕ ಪರಿಸರದಲ್ಲಿ ವಿಭಿನ್ನ ಹಾದಿ ತುಳಿದವರು. ಆ ಮೂಲಕ, ಕನ್ನಡ ಸಾಹಿತ್ಯದಲ್ಲಿ ಹೊಸ ಸಾಧ್ಯತೆಯನ್ನು ಸಹ ತೋರಿಸಿಕೊಟ್ಟವರು.

ಇದೇ ಸಂದರ್ಭದಲ್ಲಿ ಎಂಬಂತೆ, ತೇಜಸ್ವಿಯವರ ಸಾಹಿತ್ಯದ ಕುರಿತು ಸರಣಿ ಲೇಖನಗಳಲ್ಲಿ ಪ್ರಕಟಿಸಿದ 'ಸಮಾಜಮುಖಿ' ಪತ್ರಿಕೆಯು, ಆ ಲೇಖನಗಳನ್ನು ಒಂದು ಪುಸ್ತಕದಲ್ಲಿ ಅಡಕಗೊಳಿಸಿ, ತೇಜಸ್ವಿಯವರ ಕುರಿತು ಓದಲು ಬಯಸುವವರಿಗೆ ಒಂದು ಉತ್ತಮ ಆಕರಗ್ರಂಥ ವನ್ನು ಒದಗಿಸಿದೆ. ಈ ಪುಸ್ತಕದ 'ಪ್ರವೇಶ'ದಲ್ಲಿರುವ ಮಾತುಗಳು ಬಹಳ ಕುತೂಹಲಕಾರಿ ಮತ್ತು ಪರಿಶೀಲನೆಗೆ ಅರ್ಹವಾದುದು : '. . . ತೇಜಸ್ವಿ ಸಾಹಿತ್ಯವು ವಿಶ್ವದ ಅಗ್ರಮಾನ್ಯ ಸಾಹಿತ್ಯ ಪ್ರಕಾರವೆಂದೂ, ಕುವೆಂಪು ಸಾಹಿತ್ಯ ಕೊಡುಗೆಗೆ ಸರಿಸಮವೆಂದೂ (ತೇಜಸ್ವಿ ಅಭಿಮಾನಿ ಗಳು) ಹೇಳಿದ್ದಾರೆ. ಇದಕ್ಕೆ ಪ್ರತಿಯಾಗಿ, ತೇಜಸ್ವಿ ಬದುಕು ಬರೆಹಗಳು ಪಲಾಯನವಾ ದವೆಂದೂ, ದೈನಂದಿನ ಬದುಕು ಬವಣೆಗಳಿಗೆ ನಿರುತ್ತರವೆಂದೂ, ಕೇವಲ ಅರಣ್ಯರೋದನವೆಂದೂ, ಸ್ವಾನುಭವಕ್ಕೆ ಸೀಮಿತವೆಂದೂ ಹಾಗೂ ಪರಿಣಾಮ ಫಲಿತಾಂಶ ಶೂನ್ಯವೆಂದೂ ಗೊಣಗುವವರ ಸಂಖ್ಯೆಯೂ ಸಾಕಷ್ಟಿದೆ. . . . ತೇಜಸ್ವಿ ಸಾಹಿತ್ಯವನ್ನು ಮೆಚ್ಚುಗೆ, ಟೀಕೆ ಮತ್ತು ವಿಶ್ಲೇಷಣೆಗೆ ಈಡು ಮಾಡಿದ, ಸಮಾಜಮುಖಿಯಲ್ಲಿ ಪ್ರಕಟವಾದ ಆಯ್ದ ಲೇಖನಗಳ ಸಂಕಲನವೇ ಈ ಕೃತಿ. ' (ಪುಟ 3).

ಈ ಸಂಕಲನದಲ್ಲಿ 15 ಬರಹಗಳಿವೆ. ತೇಜಸ್ವಿಯವರನ್ನು ಮೆಚ್ಚುವ, ಅವರ ಸಾಹಿತ್ಯದ ಬಹುಮುಖ್ಯ ಅಂಶಗಳನ್ನು ಎತ್ತಿತೋರುವ ಬರಹಗಳ ಜತೆಯಲ್ಲೇ, ತೇಜಸ್ವಿಯವರ ಬರಹಗಳ ಕೊರತೆಯನ್ನು ಗುರುತಿಸುವ ಲೇಖನಗಳೂ ಇಲ್ಲಿವೆ. ಆ ಮೂಲಕ, ಒಬ್ಬ ಓದುಗನಿಗೆ ತೇಜಸ್ವಿಯವರ ಸಮಗ್ರ ಪರಿಚಯವನ್ನೂ ಮಾಡಿಸುವ ಪ್ರಯತ್ನವಿದೆ. ಇಲ್ಲಿನ ಕೆಲವು ಬರಹಗಳ ತಲೆಬರಹಗಳು, ಒಟ್ಟಾರೆ ಈ ಪುಸ್ತಕದ ಆಶಯವನ್ನು



ವಿಸ್ಮಯ ವಿಮರ್ಶೆ
ಸಂ: ಚಂದ್ರಕಾಂತ ವಡ್ಡು
ಪ್ರ: ಸಮಾಜಮುಖಿ ಪ್ರಕಾಶನ
ಬೆಂಗಳೂರು
9606934018
ಬೆಲೆ ರು. 100/-

ಬಿಂಬಿಸುತ್ತವೆ ಎನ್ನಬಹುದು. 'ತೇಜಸ್ವಿ ರೂಪಿಸಿದ ಇಕಾಲಜಿ', 'ತೇಜಸ್ವಿ ಸಮಗ್ರ ಕೃತಿ ಜಗತ್ತು', 'ರಾಜಕೀಯ ಮತ್ತು ಸಾಮಾಜಿಕ ಚಿಂತನೆಗಳು', 'ಶಿವರಾಮಕಾರಂತರ ಹೊಸ ಆವೃತ್ತಿ', 'ಪೂರ್ಣಚಂದ್ರ ತೇಜಸ್ವಿ : ವಿಸ್ಮಯ-ವೈರುಧ್ಯ', 'ತೇಜಸ್ವಿಯವರ ನಗದೀಕರಣ' ಇತ್ಯಾದಿ. ಈ ಪುಸ್ತಕವನ್ನು ಓದಿದಾಗ, ಎದ್ದುಕಾಣುವ ಪ್ರಮುಖ ಅಂಶವೆಂದರೆ, ಸಮತೋಲಿತ ಬರವಣಿಗೆ: ತೇಜಸ್ವಿಯವರ ಬರಹಗಳ ತೀಕ್ಷ್ಣ ವಿಮರ್ಶೆಯೂ ಇಲ್ಲಿರುವುದು ಸಹ ಗಮನಾರ್ಹ. ತೇಜಸ್ವಿಯ ವರನ್ನು, ಅವರ ಬರಹಗಳ ಸ್ವರೂಪವನ್ನು ತಿಳಿದುಕೊಳ್ಳಲು ಸಹಾಯಕವಾಗಬಲ್ಲ ಇದು ಒಂದು ಉತ್ತಮ ಪುಸ್ತಕ.

ದ್ವೀಪದಲ್ಲಿ ಬೀಸಿದ ಸಮಾನತೆಯ ಗಾಳಿ

» ಪಾರ್ವತಿ ಜಿ.ಐತಾಳ್

ಕುರು ದ್ವೀಪ'ದ ಓದು ಇತರ ಸಾಮಾನ್ಯ ಜನಪ್ರಿಯ ಕಾದಂಬರಿಗಳಿಗಿಂತ ಭಿನ್ನವಾದ ಒಂದು ವಿಶಿಷ್ಟ ಅನುಭವವನ್ನು ನೀಡುತ್ತದೆ. ಇದು ಒಂದು ಅಪ್ಪಟ ಗ್ರಾಮೀಣ ಪ್ರದೇಶದ ಕಥೆ. ಆದ್ದರಿಂದ ಇಲ್ಲಿ ಹಸುರು ಗಿಡ ಮರಗಳು, ನದಿಗಳು, ಪ್ರಾಣಿ-ಪಕ್ಷಿಗಳು, ದೋಣಿ ವಿಹಾರಗಳು, ಸಮುದ್ರ, ಬಯಲು, ಕೃಷಿ ವಿವರಗಳು ಸಮೃದ್ಧವಾಗಿ ಸಿಗುತ್ತವೆ.

ಶ್ರೇಯಸ್ ಇಲ್ಲಿನ ಕಥಾನಾಯಕ. ಸದಾ ಮೌನಿ ಮತ್ತು ಅಂತರ್ಮುಖಿ. ಅವನ ಈ ಸ್ವಭಾವವನ್ನು ತಪ್ಪಾಗಿ ತಿಳಿದುಕೊಂಡು ಅವನ ಅಪ್ಪ ನಾಗೇಂದ್ರ ಅವನನ್ನು ಪೆದ್ದ, ಅಪ್ರಯೋಜಕನೆಂದು ಸದಾ ಹೀಯಾಳಿಸುತ್ತ ಇರುತ್ತಾನೆ. ಅವನು ಪ್ರೀತಿಸಿದ ಹುಡುಗಿ ಸ್ವಾತಿ ಕೂಡಾ ಅವನ ಸರಳತೆಯನ್ನು ನೋಡಿ ಅವನನ್ನು ಕಡೆಗಣಿಸಿ ಬೇರೆ ಮದುವೆಯಾಗುತ್ತಾಳೆ. ಅಮ್ಮ ಮತ್ತು ತಾತ ಜಗನ್ನಾಥ ಮಾತ್ರ ಶ್ರೇಯಸ್ಸನನ್ನು ಬೆಂಬಲಿಸುತ್ತಾರೆ. ತಾತನ ಪ್ರೋತ್ಸಾಹದಿಂದಲೇ ಶ್ರೇಯಸ್ ಸ್ವತಂತ್ರವಾಗಿ ಬದುಕು ಕಟ್ಟಿಕೊಳ್ಳಲು ಮನೆ ಬಿಟ್ಟು ಹೋಗುತ್ತಾನೆ. ಸೌಪರ್ಣಿಕಾ ನದಿಯಲ್ಲಿ ದೋಣಿಯಲ್ಲಿ ಹೋಗಿ ಅವನು ತಲುಪುವುದು ಮೂರು ಮೈಲುಗಳಷ್ಟು ದೂರದಲ್ಲಿರುವ ಕುರುದ್ವೀಪ.

ಅದೊಂದು ನಾಲ್ಕೈದು ಮನೆಗಳಷ್ಟೇ ಇರುವ ಪುಟ್ಟ ದ್ವೀಪ. ಅಲ್ಲಿರುವ ಜನರು ಕಷ್ಟಜೀವಿಗಳು. ಬದುಕಲು ಬೇಕಾದ ಮೂಲಭೂತ ಸೌಕರ್ಯಗಳ ಅಭಾವವಿರುವ ಸ್ಥಿತಿ ಮತ್ತು ಪ್ರಾಕೃತಿಕ ವಿಕೋಪಗಳಿಂದಾಗಿ ಇತರ ಸಾಮಾನ್ಯರಂತೆ ಜೀವನ ಸಾಗಿಸಲು ಅವರಿಗೆ ಸಾಧ್ಯವಾಗುತ್ತಿಲ್ಲ. ಅಲ್ಲಿಗೆ ಹೋಗಿ ಸೇರಿದ ಶ್ರೇಯಸ್ ಅಲ್ಲಿ ವಾಸಿಸುವ ಹಿರಿಯ ವ್ಯಕ್ತಿ ರಮಾನಂದ ರಾಯರು, ಅವರ ಹೆಂಡತಿ ದೇವಿಕಾ, ಕೆಲಸದ ಹೆಂಗಸು ದ್ಯಾವಮ್ಮ, ಅವಳ ಮಗಳು ಸಾರಿಕಾ ಜೊತೆಗೆ ಹೇಗೆ ಬದುಕುತ್ತಾನೆ, ಜಾಣ್ಮೆಯಿಂದ ವ್ಯವಹರಿಸಿ ಅಪೂರ್ವ ಯಶಸ್ಸು ಸಾಧಿಸುತ್ತಾನೆ ಅನ್ನುವುದನ್ನು ಕಥೆ ಹೇಳುತ್ತದೆ. ಕುರು ದ್ವೀಪದಲ್ಲಿ ಅಪಾರ ಸಂಖ್ಯೆಯ ನವಿಲುಗಳನ್ನು ನೋಡಿ ರಾಷ್ಟ್ರೀಯ ಪಕ್ಷಿಯ ಉಳಿವಿಗಾಗಿ ತಾನೇನಾದರೂ ಮಾಡಬೇಕೆಂದು ಅವನಿಗೆ ಅನ್ನಿಸುವುದು ಮತ್ತು ಅದಕ್ಕಾಗಿ ನವಿಲು ಹಿಡಿಯುವ ಬೋನುಗಳನ್ನು ತಯಾರಿಸುವುದು ವನ್ಯಮೃಗಗಳ ಸಂರಕ್ಷಣೆಯ ಬಗ್ಗೆ ಅವನಿಗಿರುವ ಕಾಳಜಿಯನ್ನು ತೋರಿಸುತ್ತದೆ.

ಕುರುದ್ವೀಪ
ಕಾದಂಬರಿ
ಲೇ: ವೀಣಾ ರಾವ್
ಪ್ರ: ಗೋಮಿನಿ ಪ್ರಕಾಶನ ತುಮಕೂರು
9986692342
ಬೆಲೆ ರು.160/-

ನವಿಲುಗಳನ್ನು ಸಂರಕ್ಷಿಸುವ ಬಂಕಾಪುರ ಅಭಯಾರಣ್ಯಕ್ಕೆ ಹೋಗಿ ಹಲವು ವಿಷಯಗಳನ್ನು ತಿಳಿದುಕೊಳ್ಳುವುದು ಅವನ ಜ್ಞಾನ ದಾಹಕ್ಕೆ ನಿದರ್ಶನ. ತನಗೆ ಆಶ್ರಯ ಕೊಟ್ಟ ಕುರುದ್ವೀಪದ ಸರ್ವತೋಮುಖ ಅಭಿವೃದ್ಧಿಗಾಗಿಯೂ ಅವನು ದುಡಿಯುತ್ತಾನೆ. ಅಲ್ಲಿಯ ಜನರು ವಿದ್ಯಾವಂತರಾಗಬೇಕು, ಅರ್ಥಹೀನ ಸಂಪ್ರದಾಯಗಳನ್ನು ಬಿಟ್ಟು ಬದುಕಬೇಕು, ಜಾತಿ ಧರ್ಮಗಳ ಭೇದವನ್ನು ಮರೆತು ಒಗ್ಗಟ್ಟಾಗಿ ಇರಬೇಕು ಎಂದು ಅವನು ಬಯಸುತ್ತಾನೆ. ಇಲ್ಲಿ ದ್ಯಾವಮ್ಮನ ಪಾತ್ರಕ್ಕೆ ಲೇಖಕಿ ಜೀವ ತುಂಬಿದ್ದಾರೆ.

ಅನಕ್ಷರಸ್ಥಳಾದರೂ ಅವಳಲ್ಲಿ ಬದುಕಿನ ಕುರಿತಾದ ಗಂಭೀರ ಚಿಂತನೆಗಳಿವೆ. ಔಷಧೀಯ ಸಸ್ಯಗಳ ಬಗ್ಗೆ ಕೂಡಾ ದ್ಯಾವಮ್ಮನಿಗೆ ತುಂಬಾ ತಿಳುವಳಿಕೆ ಇದೆ. ಮರ್ಮ ಚಿಕಿತ್ಸೆಯನ್ನು ಮಾಡಿ ಸ್ವಾತಿ ಎಂಬ ಹುಡುಗಿಯ ಹುಚ್ಚನ್ನು ಅವಳು ಗುಣಪಡಿಸುತ್ತಾಳೆ.

ನದಿ ಮಧ್ಯದಲ್ಲಿರುವ ಕುರುದ್ವೀಪದಲ್ಲಿ ಇರುವುದು ನಾಲ್ಕಾರು ಮನೆಗಳು; ಅಲ್ಲಿಗೆ ಬಂದ ಕಥಾನಾಯಕನು, ಮೌಢ್ಯಗಳ ವಿರುದ್ಧ ಈಜುತ್ತಾ, ಸಮಾನತೆಯನ್ನು ತರಲು ಪ್ರಯತ್ನಿಸುತ್ತಾನೆ, ಜನ ಮೆಚ್ಚುಗೆ ಗಳಿಸುತ್ತಾನೆ.

ಜಾತಿ ಭೇದವನ್ನು ಮರೆತು ಶ್ರೇಯಸ್ ಅವಳ ಮಗಳು ಸಾರಿಕಾಳನ್ನು ಮದುವೆಯಾದಾಗ ಸಂತೋಷ ಪಡುತ್ತಾಳೆ.

ಕಾದಂಬರಿಯನ್ನು ವಿಶಾಲ ಅರ್ಥದಲ್ಲಿ ತೆಗೆದುಕೊಂಡಾಗ ಮಾನವೀಯ ನೆಲೆಯ ಒಂದು ಚಿಂತನೆ ಇಲ್ಲಿ ಅಡಕವಾಗಿರುವಂತೆ ಕಾಣುತ್ತದೆ. ಸಂಘಜೀವಿಯಾದ ಮನುಷ್ಯನಿಗೆ ಇತರರಿಂದ ಬೇರೆಯಾಗಿ ದ್ವೀಪದಂತೆ ಇರಲು ಸಾಧ್ಯವಾಗದು. ಕುರುದ್ವೀಪದ ಮಂದಿ ಮುಖ್ಯ ಭೂಪ್ರದೇಶದಿಂದ ಬೇರೆಯಾಗಿದ್ದುದರಿಂದ ಅನೇಕ ರೀತಿಯ ಸೌಕರ್ಯ-ಸವಲತ್ತುಗಳಿಂದ ವಂಚಿತರಾಗಿದ್ದಾರೆ. ಶ್ರೇಯಸ್ ಆಧುನಿಕ ತಂತ್ರಜ್ಞಾನಗಳನ್ನು ಬಳಸಿ ಮಾಡಿದ ಪ್ರಯತ್ನ-ಪರಿಶ್ರಮಗಳಿಂದ ಪಲ್ಲಟಗಳಾಗಿ ದ್ವೀಪವು ಹೊರಜಗತ್ತಿನೊಂದಿಗೆ ಸಂಪರ್ಕ ಸಾಧಿಸಲು ಸಾಧ್ಯವಾಗುತ್ತದೆ. ಇಂದಿನ ಸಂದರ್ಭಕ್ಕೆ ಪ್ರಸ್ತುತ ವಾದಂತಹ ಒಂದು ವಸ್ತುವನ್ನು ಲೇಖಕಿ ವೀಣಾ ರಾವ್ ಆಯ್ದುಕೊಂಡಿದ್ದಾರೆ. ಕಾದಂಬರಿಯ ರಚನಾ ಬಂಧ ಬಿಗಿಯಾಗಿದ್ದು ಎಲ್ಲೂ ಸಡಿಲ ತುದಿಗಳು ಇಲ್ಲ. ತಪ್ಪು ಮಾಡಿದವರಿಗೆ ಶಿಕ್ಷೆ, ಪ್ರಾಮಾಣಿಕತೆಗೆ ತಕ್ಕ ಪ್ರತಿಫಲ ಅನ್ನುವ ಸಾಂಪ್ರದಾಯಿಕ ಕಾವ್ಯ ನ್ಯಾಯವನ್ನು ಲೇಖಕಿ ಪಾಲಿಸಿದ್ದಾರೆ. ಕಥನದ ವಿನ್ಯಾಸ ಮತ್ತು ನಿರೂಪಣೆಯ ಶೈಲಿ ಆಕರ್ಷಕವಾಗಿದ್ದು ಕಾದಂಬರಿಗೆ ಮೆರುಗನ್ನಿತ್ತಿವೆ. (ವೀಣಾ ರಾವ್ ಅವರ 'ಕುರುದ್ವೀಪ' ಕಾದಂಬರಿಯ ಮುನ್ನುಡಿಯ ಆಯ್ದ ಭಾಗಗಳು)

ನೂರು ವರ್ಷದ ಹಿಂದಿನ ಕಥೆಗಳು

ನಮ್ಮ ರಾಜ್ಯದೊಂದಿಗೆ ಗಡಿಯನ್ನು ಹಂಚಿಕೊಂಡಿರುವ ಅನಂತಪುರ ಜಿಲ್ಲೆಯು, ಸಾಂಸ್ಕೃತಿಕವಾಗಿ ನಮ್ಮೊಂದಿಗೆ ಹೆಚ್ಚು ಸಂಪರ್ಕ ಹೊಂದಿದೆ ಎನ್ನಬಹುದು. ಹಂಪೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ವಿಜಯನಗರ ಸಾಮ್ರಾಜ್ಯವನ್ನು ಆಳಿದ ರಾಜರು, ಹಂಪೆಯ ಪತನದ ನಂತರ, ಅನಂತಪುರ ಜಿಲ್ಲೆಯ ಪೆನುಕೊಂಡೆಗೆ ತಮ್ಮ ರಾಜಧಾನಿಯನ್ನು ಸ್ಥಳಾಂತರಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅನಂತಪುರ ಜಿಲ್ಲೆಯ ಐತಿಹಾಸಿಕ ಕಥೆಗಳನ್ನು ಅವಲೋಕಿಸಿದರೆ, ಕರ್ನಾಟಕದ ಬೇರುಗಳನ್ನು ಹುಡುಕಲು ಸಾಧ್ಯ. 1916ರಲ್ಲಿ ಪ್ರಕಟಗೊಂಡ 'ಅನಂಪುರ ಜಿಲ್ಲೆಯ ಐತಿಹಾಸಿಕ ಕಥೆಗಳು' ಇದರ ಕನ್ನಡ ಅನುವಾದವನ್ನು ಕಲಬುರಗಿಯ ಚಾಲುಕ್ಯ ಸಂಸ್ಕೃತಿ ಅಧ್ಯಯನ ಪೀಠ ಪ್ರಕಟಿಸಿದೆ. ವಿಜಯನಗರ ಸಾಮ್ರಾಜ್ಯದಲ್ಲಿ ಬುಕ್ಕರಾಯನ ರಾಜ್ಯದಲ್ಲಿ ಮಂತ್ರಿಯಾಗಿದ್ದ ಚಿಕ್ಕಪ್ಪ ಎಂಬಾತನು, ಕಟ್ಟಿಸಿದ ಅನಂತಸಾಗರಂ ಕೆರೆಯ ಮೂಲಕ ಅನಂತಪುರ ಸ್ಥಿರಗೊಂಡ ವಿಷಯ ಕುತೂಹಲಕಾರಿ ಎನಿಸಿದೆ. 1916ರಲ್ಲಿ ಪ್ರಕಟಗೊಂಡ ತೆಲುಗು ಪುಸ್ತಕವನ್ನು ಅನುವಾದಿಸುವ ಪ್ರಮುಖ ಕೆಲಸವನ್ನು ಮಾಡಿದ ನೇತಿ ರಘುರಾಮ ಅವರ ಪ್ರಯತ್ನ ಶ್ಲಾಘನೀಯ. 'ಮುಖ್ಯವಾಗಿ ವಿದ್ಯಾರ್ಥಿಗಳ ಕಲಿಕೆಗೆ ಅನುಕೂಲವಾಗುವ ದೃಷ್ಟಿಯಿಂದ ಅನುವಾದಕರು ಹಂಡೆ ಅರಸರಿಗೆ ಸಂಬಂಧಿಸಿದ ಒಟ್ಟು 26 ಚಿಕ್ಕ ಚಿಕ್ಕ ಕಥೆಗಳನ್ನು ರೂಪಿಸಿದ್ದಾರೆ. ಅಲ್ಲದೆ ಮಕ್ಕಳಲ್ಲಿ ಅವುಗಳನ್ನು ಹೇಗೆ ಸಂವಹನಗೊಳಿಸಬೇಕು ಎಂಬುದರ ಬಗೆಗೂ ಹೇಳಿದ್ದಾರೆ.'(ಬೆನ್ನುಡಿಯಲ್ಲಿ)



ಅನಂತಪುರ ಜಿಲ್ಲೆಯ ಐತಿಹಾಸಿಕ ಕಥೆಗಳು
ತೆಲುಗು ಮೂಲ:ಎನ್.ವಾಸುದೇವ ರಾವ್
ಕನ್ನಡಕ್ಕೆ : ನೇತಿ ರಘುರಾಮ
ಪ್ರ: ಚಾಲುಕ್ಯ ಸಂಸ್ಕೃತಿ ಅಧ್ಯಯನ ಪೀಠ ಕಲಬುರಗಿ
ಬೆಲೆ ರು.150/-
ದೂ.9241288581



ನೆನಪಿನ ಮಲ್ಲಿಗೆಯ ಮಾಲೆ

ಕೆ.ಎಸ್.ನ ಅವರ ಕುರಿತು ಇರುವ ಆಕ್ಷೇಪವೆಂದರೆ ಅವರು ನಿತ್ಯದ ವಿವರಗಳನ್ನು, ಭಾಷೆಗಳನ್ನು ಬಳಸಿ ಕಾವ್ಯವನ್ನು ಕಟ್ಟುತ್ತಾರೆ ಎನ್ನುವುದು. ಆದರೆ ಅವರು ನಿತ್ಯದ ಅನುಭವದಿಂದ ಪ್ರೇರಣೆ ಪಡೆದರೂ ಅದಕ್ಕೆ ಸಾರ್ವತ್ರಿಕ ನೆಲೆಯನ್ನು ನೀಡುತ್ತಾರೆ. ಇದರಿಂದ ಮಣ್ಣಿನ ಸಂಪರ್ಕ ಪಡೆದರೂ ಆಕಾಶದ ಕಡೆಗೆ ಕೈಚಾಚುವುದು ಅವರಿಗೆ ಸಾಧ್ಯವಾಗಿದೆ.

ಇವತ್ತು ಗಣರಾಜ್ಯೋತ್ಸವ; ಇದು ಒಲವಿನ ಕವಿ ಕೆ.ಎಸ್.ನರಸಿಂಹ ಸ್ವಾಮಿಯವರ ಜನ್ಮದಿನ (1915) ಕೂಡ! ಕೆ.ಎಸ್. ನರಸಿಂಹ ಸ್ವಾಮಿಗಳು ನನಗೂ ಪ್ರಿಯವಾಗಿದ್ದು ಮೈಸೂರು ಮಲ್ಲಿಗೆ ಕವಿತೆಗಳ ಮೂಲಕವೇ. ನಾನು ಎರಡನೇ ಬಿ.ಎ.ಯಲ್ಲಿ ಇದ್ದಾಗ ಪಠ್ಯವಾಗಿದ್ದ 'ಕಾವ್ಯ

ಒಡನಾಟ

» ಎನ್.ಎಸ್.ಶ್ರೀಧರ ಮೂರ್ತಿ

ಸಂಚಯ'ದಲ್ಲಿ ನರಸಿಂಹ ಸ್ವಾಮಿಯವರ ಕವಿತೆಗಳು ನಮಗೆ ಇದ್ದವು. ಅದರಲ್ಲಿ ಗಡಿಯಾರದಂಗಡಿಯ ಮುಂದೆ ಕವಿತೆ ಒಂದು ದಿನ ಆಕಸ್ಮಿಕವಾಗಿ ನನ್ನ ಕಣ್ಣಿಗೆ ಬಿದ್ದಿತು. ಒಲವಿನ ಕವಿತೆಗಳಿಗಿಂತ ಭಿನ್ನವಾಗಿದ್ದ ಅದನ್ನು ಮತ್ತೆ ಮತ್ತೆ ಓದಿ ಚರ್ಚಿಸಿದ್ದೂ ಆಯಿತು. ಆಗ ನಮ್ಮ ಶೃಂಗೇರಿಯ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ಬಹಳ ಸಕ್ರಿಯವಾಗಿ ಅಧ್ಯಯನ ಕೂಟದಲ್ಲಿ ಅದರ ಬಗ್ಗೆ ಒಂದು ಪ್ರಬಂಧ ಮಂಡಿಸಿದ್ದೂ ಆಯಿತು. ನರಸಿಂಹ ಸ್ವಾಮಿ ನನ್ನ ಅರಿವಿನ ಲೋಕವನ್ನು ಪ್ರವೇಶಿಸಿದ್ದು ಹೀಗೆ.

ಬೆಂಗಳೂರಿಗೆ ಬಂದ ಮೇಲೆ ಕೆ.ಎಸ್.ನ. ಒಡನಾಟ ದೊರಕಿತು. ಅವರ ಮನೆಗೆ ಭೇಟಿ ನೀಡುವ ಅವಕಾಶಗಳೂ ದೊರೆತವು. ಕೆ.ಎಸ್.ನ. ಮಾತಿನವರಲ್ಲ. ನಾನು ಏನಾದರೂ ಹೇಳಿದರೆ ಬೆರಗು ಕಣ್ಣಿನಿಂದ ನೋಡುತ್ತಾ ಕುಳಿತು ಕೊಂಡುಬಿಡುತ್ತಿದ್ದರು. ಆದರೆ ವೆಂಕಮ್ಮನವರದ್ದೇ ಮಾತು. ಅಷ್ಟೇ ಅಲ್ಲ ಸೊಗಸಾದ ಆತಿಥ್ಯ. ಹಾಗೆ ನೋಡಿದರೆ ನನಗೆ ಅವರ ಜೊತೆಗೇ ಸಲಿಗೆ ಜಾಸ್ತಿ. 'ಇಷ್ಟೊಂದು ಪ್ರೀತಿಯ ಕವಿತೆಗಳನ್ನು ಬರೆಯುವ ಕೆ.ಎಸ್.ನ. ನಿಮ್ಮನ್ನು ಹೇಗೆ ನೋಡಿಕೊಂಡಿದ್ದರು' ಅವರು ನಕ್ಕು ಹೇಳಿದರು. 'ಅವರಿಗೆ ಚೆನ್ನಾಗಿ ನೋಡಿಕೋ ಬೇಕು ಎನ್ನೋ ಆಸೆ ಇತ್ತು, ಆದರೆ ಬಹಳ ಕಷ್ಟದ ದಿನಗಳು, ಹೇಗೋ ಸಂಸಾರ ಸಾಗಿಸಿದೆವು, ಇವರು ಪ್ರೀತಿಯ ಬಗ್ಗೆ ಪದ್ಯ ಬರೀತಾರೆ ಅಷ್ಟೇ, ಅದನ್ನು ತೋರಿಸೋಕೆ ಬರಲ್ಲ, ಒಂದು ದಿನವೂ ಒಂದು ಮೊಳ ಮಲ್ಲಿಗೆ ಹೂವನ್ನು ತಂದಿದ್ದನ್ನು ನಾನು ಕಾಣೆ' ಈ ಮಾತಿನಲ್ಲಿ ಹಲವು ಅರ್ಥಗಳಿದ್ದವು.

ಇನ್ನೊಂದು ಸಲ ಕೆ.ಎಸ್.ನ. ಮನೆಯಲ್ಲಿ ಕೆಲವು ಹಿರಿಯ ಕವಿಗಳು ಸೇರಿದ್ದರು. ಕೆ.ಎಸ್.ನ. ಅವರ ಕಾವ್ಯದ ಮಹತ್ವದ ಕುರಿತು ಚರ್ಚೆ ಆರಂಭವಾಯಿತು. ಕೆ.ಎಸ್.ನ. ಅಭಿನಂದನ ಗ್ರಂಥ ಚಂದನದಲ್ಲಿ (1972) ಡಿ.ಎ.ಶಂಕರ್ 'ವಸ್ತು ವೈವಿಧ್ಯವಿದ್ದೂ ಕೆ.ಎಸ್.ನ. ಕವನಗಳು ನಮ್ಮ ಮೇಜರ್ ವಾಯ್ಸ್' ಆಗಲಿಲ್ಲ ಎಂಬ ಪ್ರಶ್ನೆಯ ಸುತ್ತ ಚರ್ಚೆ ನಡೆಯಿತು. ನಾನು ಡಾ. ಕೆ.ವಿ.ನಾರಾಯಣ್ 'ಕೆ.ಎಸ್.ನ. ಅವರು ಮೇಜರ್ ವಾಯ್ಸ್ ಆಗಲಿಲ್ಲವೋ ಅಥವಾ ಹೇಗೆಂದು ಗುರುತಿಸಲಿಲ್ಲವೋ ಎಂಬ ಅಂಶ ಕನ್ನಡ ವಿಮರ್ಶೆಯ ವಿಸಂಗತಿಗೆ ಬಿಟ್ಟಿದ್ದು' ಎಂದು ನೀಡಿದ ಉತ್ತರದ ಕುರಿತು ಗಮನ ಸೆಳೆದೆ (ಬೇರು ಕಾಂಡ ಚಿಗುರು ಪು 215). ಕೆ.ಎಸ್.ನ ಅವರ ಕುರಿತು ಇರುವ ಆಕ್ಷೇಪವೆಂದರೆ ಅವರು ನಿತ್ಯದ ವಿವರಗಳನ್ನು, ಭಾಷೆಗಳನ್ನು ಬಳಸಿ ಕಾವ್ಯವನ್ನು ಕಟ್ಟುತ್ತಾರೆ ಎನ್ನುವುದು. ಆದರೆ ಅವರು ನಿತ್ಯದ ಅನುಭವದಿಂದ ಪ್ರೇರಣೆ ಪಡೆದರೂ ಅದಕ್ಕೆ ಸಾರ್ವತ್ರಿಕ ನೆಲೆಯನ್ನು ನೀಡುತ್ತಾರೆ. ಇದರಿಂದ ಮಣ್ಣಿನ ಸಂಪರ್ಕ ಪಡೆದರೂ ಆಕಾಶದ ಕಡೆಗೆ ಕೈಚಾಚುವುದು ಅವರಿಗೆ ಸಾಧ್ಯವಾಗಿದೆ. ಕೆ.ಎಸ್.ನ. ಕನ್ನಡದ ದೇಸಿ ಗುಣದ ಮೇಜರ್ ವಾಯ್ಸ್ ಆಗಿದ್ದಾರೆ, ಅದಕ್ಕೇ ಅವರ ಕಾವ್ಯ ಅನೇಕ ಮರುಓದುಗಳನ್ನು ಪಡೆಯುತ್ತಿದೆ. ಹೀಗೆ ಚರ್ಚೆ ಮುಂದುವರೆಯುತ್ತಿತ್ತು. ನಾನು ಎಲ್ಲರಿಗೂ ಕಾಫಿ ತರಲು ಅಡುಗೆ ಮನೆಗೆ ಹೋದೆ. ಇದೆಲ್ಲವನ್ನೂ ಕೇಳಿಸಿ ಕೊಳ್ಳುತ್ತಿದ್ದ ವೆಂಕಮ್ಮನವರು ನನ್ನ ಬಳಿ 'ಅವರ ವಾಯ್ಸ್ ಮನೆಯಲ್ಲಿಯೇ ಕೇಳಲ್ಲ, ಇನ್ನು ಎಲ್ಲರಿಗೂ ಹೇಗೆ ಕೇಳಬೇಕು' ಎಂದು ಗೊಣಗಿಸಿದರು. ಸತ್ಯವೆಂದರೆ ಕೆ.ಎಸ್.ನ. ಅವರ ಜೊತೆಗೆ ಸಾಹಿತ್ಯ ಚರ್ಚೆ ಮಾಡಿದ ಒಂದು ಪ್ರಸಂಗವೂ ನೆನಪಾಗುವದಿಲ್ಲ. ಅವರದೇನಿದ್ದರೂ ಗಂಭೀರ ಧ್ವನಿಯ ಶ್ರೀಕಾರ ಅಷ್ಟೇ!

ನಾನು 'ಮಲ್ಲಿಗೆ' ಮಾಸಪತ್ರಿಕೆಯಲ್ಲಿ ಇದ್ದಾಗ ಕೆ.ಎಸ್.ನ. ಅವರ ಹೊಸ ಕವಿತೆಗಳನ್ನು ಮಾಲಿಕೆಯಾಗಿ ಪ್ರಕಟಿಸುವ ಯೋಜನೆ ಸಿದ್ಧವಾಯಿತು. ಆಗ ನರಸಿಂಹ ಸ್ವಾಮಿಯವರಿಗೆ ಕಣ್ಣು ಬಹುಮಟ್ಟಿಗೆ ಕಾಣುತ್ತಿರಲಿಲ್ಲ ಸುಮನಾ (ಎಂ.ವಿ.ವೆಂಕಟೇಶ ಮೂರ್ತಿ) ಅವರಿಗೆ ಕಣ್ಣಾಗಿದ್ದರು; ಅಂದರೆ ಕವಿತೆಗಳನ್ನು ಹೇಳಿದರೆ

ಬರೆದುಕೊಳ್ಳುತ್ತಿದ್ದರು. ಕವಿತೆ ಬರೆದುಕೊಳ್ಳುವಾಗ ಅವರ ಜೊತೆ ಹೋಗುವುದು, ಅದರ ಸಂಭ್ರಮ ನೋಡುವುದು ಎಲ್ಲವೂ ನನ್ನ ಬದುಕಿನ ಪುಣ್ಯದಂತೆ ಬಂದೊದಗಿತು. ಒಂದು ದಿನ ನಾನೊಬ್ಬನೇ ನರಸಿಂಹ ಸ್ವಾಮಿಯವರ ಮನೆಗೆ ಹೋಗಿದ್ದೆ. ಏನೋ ಮಾತಿನ ನಡುವೆ 'ಸರ್, ಮಲ್ಲಿಗೆ ನಿಮಗೆ ಪ್ರಿಯವಾದ ಹೂವು, ನಮ್ಮ ಪತ್ರಿಕೆಯೂ ಮಲ್ಲಿಗೆ.. ಒಂದು ಕವಿತೆ ಮಲ್ಲಿಗೆ ಬಗ್ಗೆ ಬರೆದು ಕೊಡಿ ಎಂದೆ'. ಹೀಗೆ ಹೇಳಿ ಒಂದು ಕ್ಷಣವೂ ಆಗಿಲ್ಲ

ಎಲ್ಲ ಹೂಗಳ ನಡುವೆ ಮಲ್ಲಿಗೆಯ ಮೆಚ್ಚುವೆನು
ಏಕೆಂದರಲ್ಲಿಲ್ಲ ಹಮ್ಮು-ಬಿಮ್ಮು
ತುಂಬೆ ವಿಷ್ಣುಕಾಂತಿ ಚೆಲುವ ಹನಿ, ಹೂವಲ್ಲ
ಮುಟ್ಟಿದರೆ ಸುಡುವುದು ಗುಲಾಬಿ ಹೂವು

ಕವಿತೆ ಆರಂಭವಾಗಿಯೇ ಬಿಟ್ಟಿತು. ಒಂದೇ ಓಘ, ನಾನು ಸಂಭ್ರಮದಿಂದ ಪೇಪರ್ ಪೆನ್ನು ಹುಡುಕಿ ಬರೆದು ಕೊಂಡೆ. ನೆಚ್ಚಿನ ಕವಿಯ ಕವಿತೆಯ ಲಿಪಿಕಾರನಾಗುವ ಸೌಭಾಗ್ಯ ಅಚಾನಕ್ಕಾಗಿ ಸಿಕ್ಕಿ ಬಿಟ್ಟಿತ್ತು. ಒಂದು ಅಕ್ಷರವೂ ವ್ಯತ್ಯಾಸವಿಲ್ಲ. ಒಂದೇ ಸಲಕ್ಕೆ ಕವಿತೆ ಸಿದ್ಧವಾಗಿಯೇ ಬಿಟ್ಟಿತು. 'ಸಂಜೆ ಹಾಡು' ಸಂಕಲನದ ಬಹುತೇಕ ಕವಿತೆಗಳ ಮೊದಲ ಓದುಗನಾಗುವ ಅದೃಷ್ಟ ನನಗೆ ಸಿಕ್ಕಿತು. ಬಹುಶಃ ಕೆ.ಎಸ್.ನ. ಸಂಕಲನಗಳಲ್ಲಿ ಅತಿ ಹೆಚ್ಚು ಕವಿತೆಗಳಿರುವ ಸಂಕಲನ ಅದೇ ಇರಬೇಕು. ಅದೊಂದು ರೀತಿ ಕಾವ್ಯ ಸಂಭ್ರಮದ ಕಾಲ, ನನ್ನ ಬದುಕಿ ಸಾರ್ಥಕ ಘಟ್ಟ.

ಕೆ.ಎಸ್.ನ ಹುಟ್ಟು ಹಬ್ಬ ಎಂದರೆ ಅದು ನಮ್ಮ ಮನೆ ಕಾರ್ಯಕ್ರಮದ ತರಹವೇ; ಹಿಂದಿನ ದಿನವೇ ಸಿದ್ಧತೆ; ಯಾರೆಲ್ಲಾ ಬರುತ್ತಾರೆ, ಏನು ತಿಂಡಿ, ಯಾರದು ಗಾಯನ, ಯಾವ್ಯಾವ ಕವಿತೆ ಹಾಡುವುದು ಎಂಬ ಪಟ್ಟಿ ಅದಕ್ಕಾಗಿ ಚರ್ಚೆ, ಕಿತ್ತಾಟ, ಹುಸಿ ಕೋಪ.. ಎಲ್ಲವೂ ಉತ್ಸವದ ಭಾಗವೇ. ಎಷ್ಟೋ ವರ್ಷ ನನಗೆ ಅದು ಗಣರಾಜ್ಯೋತ್ಸವ ಎನ್ನುವುದನ್ನೂ ಮರೆಯುವಂತಾಗುತ್ತಿತ್ತು. ಶುಭ್ರ ಬಿಳಿ ಬಣ್ಣದ ಶರ್ಟ್ ಮತ್ತು ಪಂಚೆ ಧರಿಸಿ ಅದನ್ನೂ ಎಲ್ಲಾ ನಶ್ಯ ಮಾಡಿ ಕೊಂಡು ಒಂದು ಮೂಲೆಯಲ್ಲಿ ಚಿಕ್ಕ ಮಗುವಿನಂತೆ ನರಸಿಂಹ ಸ್ವಾಮಿ ಕುಳಿತಿರುತ್ತಿದ್ದರು. ವೆಂಕಮ್ಮನವರೇ ಮದುವೆ ಮನೆ ಸಂಭ್ರಮದಂತೆ ಓಡಾಡುತ್ತಾ. ಜಿ.ಎಸ್.ಎಸ್. ಬಂದರು, ಪುತಿನ ಬಂದರು, ಅಶ್ವಥ್ ಬಂದರು, ಭರಣ ಬಂದ, ಇದೋ ಎಚ್.ಎಸ್.ವಿ, ಬಿ.ಆರ್.ಎಲ್. ಒಟ್ಟಿಗೆ ಬಂದರು ಅಂತ ಗಂಡನ ಕಿವಿಯಲ್ಲಿ ರಿಪೋರ್ಟ್ ಕೊಡ್ತಾ ಇದ್ದರು. ಬಂದವರಿಗೆ ಉಪ್ಪಿಟ್ಟು, ಕೇಸರಿ ಬಾತ್, ಕಾಫಿ ಸರಬರಾಜು ಮಾಡುವ ಹೊಣೆ ನಮಗೆ. ಇಂತಹ ಎಷ್ಟೊಂದು ಹುಟ್ಟು ಹಬ್ಬಗಳಲ್ಲಿ ನಾನು ಭಾಗಿ ಆಗಿದ್ದೇನೆ.

ಕೆ.ಎಸ್.ನ. ಅವರ ತೊಂಬತ್ತನೇ ಹುಟ್ಟು ಹಬ್ಬಕ್ಕೆ ಅವರ ಸಮಗ್ರ ಮಲ್ಲಿಗೆ ಮಾಲೆ ತರುವುದು ನಿಶ್ಚಯವಾಗಿತ್ತು. ಆದರೆ ಹುಟ್ಟು ಹಬ್ಬಕ್ಕೆ ಇನ್ನೂ ಒಂದು ತಿಂಗಳಿಲ್ಲ ಕೆ.ಎಸ್.ನ. ಚಂದಿರನ ದಾಟಿ ಹೊರಟೇ ಬಿಟ್ಟರು.(ಡಿಸಂಬರ್ 27,2003) ಆಮೇಲೆ ಸಂಕಲನವೂ ಬಂದಿತು. ಒಂದು ವರ್ಷವೂ ಕಳೆಯಿತು. ಒಂದು ದಿನ ಇದ್ದಕ್ಕಿದ್ದ ಹಾಗೆ ಅವರ ಮಗ ಹರಿಹರ ನನ್ನನ್ನು ಹುಡುಕಿಕೊಂಡು ಬಂದರು. ಅದೂ ಇದು ಮಾತಿನ ನಂತರ ಹೊರಡುವಾಗ. 'ಇವತ್ತು ಅಪ್ಪನ ವರ್ಷಾಂತಕ, ಅಮ್ಮ ನಿಮಗೆ ಪ್ರಸಾದ ಕೊಟ್ಟು ಬಾ'' ಎಂದು ಕಳುಹಿಸಿದಳು. ಎಂದರು. ಭಾವನೆಗಳನ್ನು ಎಂದಿಗೂ ಹಿಡಿತದಲ್ಲಿ ಇಟ್ಟು ಕೊಳ್ಳುವ ನನ್ನ ಕಣ್ಣಿನಲ್ಲಿ ನಿಯಂತ್ರಣ ತಪ್ಪಿ ಕಂಬನಿ ಚಿಮ್ಮಿತು. ಯಾವ ಜನ್ಮದ ಋಣ ಇದು! (ಕಳೆದ ಒಂದು ವರ್ಷದಿಂದ ಪ್ರತಿ ವಾರ ಪ್ರಕಟವಾಗುತ್ತಿರುವ 'ಒಡನಾಟ' ಅಂಕಣದ ಕೊನೆಯ ಕಂತು ಇದು.)

ಆಡದೆ ಉಳಿದಿಹ ಮಾತೂ ನೂರಿದೆ!

ಒಂದು ವರ್ಷದಿಂದ ಬರುತ್ತಿದ್ದ ನನ್ನ 'ಒಡನಾಟ' ಅಂಕಣ ಮುಕ್ತಾಯವಾಗುತ್ತಿದೆ. ನನ್ನ ಗುರು ಮತ್ತು ಗುರುತು ಆಗಿರುವ ಆರ್.ಎನ್.ಜಯಗೋಪಾಲ್ ಅವರಿಂದ ಆರಂಭವಾದ ಸರಣಿ, ಒಲವಿನ ಕವಿ ಕೆ.ಎಸ್.ನರಸಿಂಹ ಸ್ವಾಮಿಯವರಿಂದ ಮುಕ್ತಾಯವಾಗುತ್ತಿದೆ. ಈ ಆದಿ ಮತ್ತು ಅಂತ್ಯವನ್ನು ನಾನೇ ನಿರ್ಧಾರ ಮಾಡಿದ್ದೆ.

ಈ ಸರಣಿ ರೂಪುಗೊಂಡಿದ್ದು ಬರವಣಿಗೆಯ ಕುರಿತು ನಾನು ನಂಬಿಕೆ ಕಳೆದು ಕೊಳ್ಳುತ್ತಿದ್ದ ದಿನಗಳಲ್ಲಿ! ನನ್ನ ಜೀವನದಲ್ಲಿ ಬಂದ ಹಿರಿಯರು ಹಾಕಿ ಕೊಟ್ಟ ಮೌಲ್ಯದ ಪರಂಪರೆಯನ್ನು ಉಳಿಸಿ ಕೊಳ್ಳಲು ಆಗುತ್ತಿಲ್ಲ ಎಂಬ ಆತಂಕ ಕಾಡುತ್ತಿದ್ದ ಸಂದರ್ಭದಲ್ಲಿ. ಈ ಮಾಲಿಕೆ ಒಂದು ರೀತಿಯಲ್ಲಿ ನನ್ನ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ ಎಂದರೆ ತಪ್ಪಾಗಲಾರದು. ಇದಕ್ಕೆ ಅವಕಾಶ ನೀಡಿ, ನನ್ನಿಷ್ಟದಂತೆ ಬರೆಯಲು ಅವಕಾಶ ಕೊಟ್ಟ ಸಂಪಾದಕರಾದ ವಿಶ್ವೇಶ್ವರ ಭಟ್ ಅವರಿಗೆ ಧನ್ಯವಾದಗಳು. ನಾನು ಈ ಮಾಲಿಕೆಯಲ್ಲಿ ನಮ್ಮೊಡನೆ ಇಲ್ಲದ, ನನ್ನ ಅರಿವಿನ ಲೋಕವನ್ನು ವಿಸ್ತರಿಸಿದ ಹಿರಿಯರು ಎಂದು ಉದ್ದೇಶಿಸಿದ್ದೆ, ಆದರೆ ನಾನು ಮಾಲಿಕೆ ಆರಂಭಿಸಿದಾಗ ನಮ್ಮೊಡನಿದ್ದ ನಂತರ ನಮ್ಮನ್ನು ಅಗಲಿದ ಲೀಲಾವತಿ,ಕೆ.ಟಿ.ಗಟ್ಟಿ, ಅಪರ್ಣ, ನಾ.ಡಿಸೋಜ ಇದರಲ್ಲಿ ಸೇರಿ ಕೊಂಡಿದ್ದು ನಿಜಕ್ಕೂ ನೋವಿನ ಸಂಗತಿ.

ಈ ಅಂಕಣದಲ್ಲಿ ಬಂದ ಎಲ್ಲಾ 56 ಹಿರಿಯರೂ ಒಂದಲ್ಲ ಒಂದು ರೀತಿಯಲ್ಲಿ ನನ್ನನ್ನು ಬೆಳೆಸಿದ್ದಾರೆ. ಹೀಗೆ ಬರೆಯುವಾಗ ಈ ಅಂಶಕ್ಕೆ ಮಹತ್ವ ನೀಡಿ ಸಾಧ್ಯವಾದ ಮಟ್ಟಿಗೆ ಸ್ವಕೀಯ ನೆಲೆ ಮುಖ್ಯವಾಗದ ಹಾಗೆ ಬರೆಯಲು ಪ್ರಯತ್ನ ಪಟ್ಟಿದ್ದೇನೆ. ಪ್ರತಿವಾರವೂ ಹಿರಿಯ ನೆನಪುಗಳನ್ನು ಜೋಡಿಸಿ ಕೊಳ್ಳುತ್ತಾ ಅದಕ್ಕೆ ಲೇಖನ ರೂಪವನ್ನು ನೀಡಲು ಮಾಡಿದ ಪ್ರಯತ್ನ ನನ್ನಲ್ಲಿ ಧನ್ಯತೆಯ ಭಾವವನ್ನು ಮೂಡಿಸಿದೆ.

ನಾನು ಒಡನಾಟ ಎನ್ನುವುದನ್ನು ವಿಶಾಲ ನೆಲೆಯಲ್ಲಿ ಗ್ರಹಿಸಿ ಕೊಳ್ಳಲು ಪ್ರಯತ್ನಿಸಿದ್ದೇನೆ. ನನಗೆ ನಿಕಟರಾಗಿದ್ದ ಕೆಲವು ಇನ್ನೂ ಕೆಲವು ಮಹನೀಯರ ಕುರಿತು ಈಗಾಗಲೇ ಬಂದಿರುವದಕ್ಕಿಂತ ಭಿನ್ನವಾಗಿ ಬರೆಯುವ ಅನುಭವ ನನ್ನದಲ್ಲ ಎನ್ನಿಸಿದ ಕಾರಣ ಕೈ ಬಿಟ್ಟಿದ್ದೇನೆ, ಇದು ಒಂದು ರೀತಿಯಲ್ಲಿ ನನಗೂ ಇರಸು ಮುರುಸು ಎನ್ನಿಸಿದರೂ ನನ್ನ ಅನುಭವಗಳಿಗೆ ನಾನು ನಿಷ್ಟನಾಗಿರಬೇಕು ಎನ್ನುವುದು ಇದಕ್ಕೆ ಕಾರಣ. ಶಿವರಾಮ ಕಾರಂತರನ್ನು ನಾನು ಭೇಟಿ ಮಾಡಿದ್ದರೂ ಅದು ಒಡನಾಟದ ನೆಲೆಗೆ ಬರಲಾರದು. ಪ್ರೊ.ಬಿ.ಜಿ.ಎಲ್.ಸ್ವಾಮಿ ನಮ್ಮ ಪುಟ್ಟ ಮನೆಗೆ ಬಂದಿದ್ದರು ಎನ್ನುವುದು ರೋಮಾಂಚನ ನೀಡುವ ನೆನಪು ನಿಜ, ಆದರೆ ಆಗ ನಾನು ಬಹಳ ಚಿಕ್ಕವನು. ಯಾವುದೂ ನಿಖರವಾಗಿ ತಿಳಿಯದ ಕಾಲ ಅದು, ಒಡನಾಟ ಎನ್ನಿಸಿ ಕೊಳ್ಳಲಾರದು.

ಪ್ರತಿ ಕಂತಿಗೂ ತಪ್ಪದೇ ಪ್ರತಿಕ್ರಿಯೆ ನೀಡಿದ ಪ್ರೊ.ಎಂ.ಕೃಷ್ಣೇಗೌಡ, ಕೆ.ಸತ್ಯನಾರಾಯಣ, ಟಿ.ಆರ್.ಅನಂತರಾಮು, ಎಸ್.ಆರ್.ವಿಜಯಶಂಕರ ಮೊದಲಾದ ಹಿರಿಯರು ನನ್ನ ಉತ್ಸಾಹ ಬತ್ತದ ಹಾಗೆ ಕಾಪಾಡಿದ್ದಾರೆ. ಎಂ.ಎಸ್.ಕೆ.ಪ್ರಭು ಅವರ ಕುರಿತ ಅಂಕಣವನ್ನು ಮೆಚ್ಚಿದ ಡಾ.ಎಸ್.ಎಲ್.ಭೈರಪ್ಪನವರ ಮಾತು, 'ನಿನ್ನ ಅಂಕಣ ಡಿ.ವಿ.ಜಿಯವರನ್ನು ನೆನಪು ಮಾಡುತ್ತದೆ' ಎನ್ನುವ ಅತಿಶಯ ಮಾತಿನ ಮೂಲಕ ನನ್ನನ್ನು ಆಶೀರ್ವದಿಸಿದ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳು, ನಿಮ್ಮ ಅಂಕಣ ಚೆನ್ನಾಗಿದೆ ಎಂದು ಸಿಕ್ಕಾಗಲೆಲ್ಲ ಹೇಳುತ್ತಿದ್ದ ಪ್ರೊ.ಜಿ.ಅಶ್ವತ್ಥನಾರಾಯಣ ಹೀಗೆ ಅನೇಕ ಹಿರಿಯರ ಆಶೀರ್ವಾದ ನನ್ನನ್ನು ಕೃತಾರ್ಥನನ್ನಾಗಿಸಿದೆ.

ವ್ಯಕ್ತಿಚಿತ್ರಗಳನ್ನು ನಾನು ಬರೆಯಲು ಪ್ರೇರಣೆಯೇ ಡಿ.ವಿ.ಜಿ, ವಿಸೀಯವರಂತಹ ಹಿರಿಯರು ಬರೆದ ವ್ಯಕ್ತಿಚಿತ್ರ ಮಾಲಿಕೆಗಳು. ನನ್ನ ಉದ್ದೇಶವಿದ್ದಿದ್ದು ನನ್ನ ಅನುಭವಗಳು ನನ್ನ ಮುಂದಿನ ಪೀಳಿಗೆಯನ್ನು ತಲುಪಲಿ ಎನ್ನುವುದು. ಆದರೆ ಪ್ರತಿಕ್ರಿಯೆ ನೀಡಿದ ಬಹುತೇಕರು ಹಿರಿಯರು ಇಲ್ಲವೇ ನನ್ನ ಪೀಳಿಗೆಯವರು. ಅಂದರೆ ಕಿರಿಯ ಪೀಳಿಗೆಯನ್ನು ತಲುಪುವಲ್ಲಿ ನಾನು ಸೋಲುತ್ತಿದ್ದೇನೆಯೇ? ನಮ್ಮ ನಡುವೆ ಅಗಾಧ ಎನ್ನಿಸುವ ಜನರೇಷನ್ ಗ್ಯಾಪ್ ರೂಪುಗೊಂಡಿದೆಯೇ ಎನ್ನುವ ಪ್ರಶ್ನೆ ನನ್ನನ್ನು ಕಾಡುತ್ತಿದೆ. ಈ ಮಾಲಿಕೆಯನ್ನೋದಿ, ಪ್ರತಿಕ್ರಿಯಿಸಿದ ಓದುಗರಿಗೆ, ಸಹೃದಯರಿಗೆ ಧನ್ಯವಾದಗಳು.

ಈ ಹದಿನೈದು ಮಹಿಳೆಯರು!

» ಲೀನಾ ಜೋಶಿ ಕಾಮತ

ಭಾರತದ ಸಂವಿಧಾನ ಅಸ್ತಿತ್ವಕ್ಕೆ ಬಂದಿದ್ದು 26 ಜನವರಿ 1950 ರಂದು. ನೂರಾರು ಜಾತಿ, ಉಪಜಾತಿ, ಪಂಗಡಗಳು, ಉಪಪಂಗಡಗಳು, ನೂರಾರು ಭಾಷೆಗಳ ತವರಾಗಿರುವ ದೇಶಕ್ಕೆ ಒಂದು ಶಿಸ್ತುಬದ್ಧವಾದ ಕಾನೂನನ್ನು ಅಳವಡಿಸಿ, ಎಲ್ಲರನ್ನು ಒಂದೇ ತಕ್ಕಡಿಯಲ್ಲಿ ತೂಗಿ, ಅಧಿಕಾರ ಮತ್ತು ಜವಾಬ್ದಾರಿಗಳನ್ನು ಮೇಳೈಸುವುದು ಸುಲಭವಾದ ಕೆಲಸವಾಗಿರಲಿಕ್ಕಿಲ್ಲ. ಸ್ವಾತಂತ್ರ್ಯ ಬಂದಾಗ ಭಾರತದಲ್ಲಿದ್ದದ್ದು 550 ಸಂಸ್ಥಾನಗಳು. ಪ್ರತಿ ಸಂಸ್ಥಾನದ್ದು ಒಂದೊಂದು ಕಾನೂನು, ಆಡಳಿತ ವ್ಯವಸ್ಥೆ. ಸಮಾಜದ ಪ್ರತಿಸ್ತರದ ಜನರನ್ನು ಅಳತೆಗೋಲಿನಿಂದ ತೂಗಿ, ಒಂದು ಹೊಸ ವ್ಯವಸ್ಥೆಗೆ ಎಲ್ಲರನ್ನೂ ಅಣಿಗೊಳಿಸುವದು ಒಂದು 'ಯಾಗ'ವಾಗಿತ್ತು. ಈ ಬೃಹತ್ ಕಾರ್ಯಕ್ಕೆ ಚಾಲನೆ ದೊರೆತಿದ್ದು 1949 ರಲ್ಲಿ. ಎರಡು ವರ್ಷ 18 ದಿನಗಳ 11 ತಿಂಗಳು ಪರಿಶ್ರಮದ ನಂತರ, ವಿಶ್ವದಲ್ಲೇ ಅತಿ ದೊಡ್ಡದಾದ 145,000 ಶಬ್ದಗಳ ಸಂವಿಧಾನ ಸಿದ್ಧವಾಯಿತು. ಮೂಲ ಸಂವಿಧಾನದ ಪ್ರತಿ ಕೈ ಬರಹದಲ್ಲಿ ಮೂಡಿ ಬಂತು. ಪ್ರತಿಯೊಂದು ಪುಟವನ್ನು ಶೃಂಗರಿಸಿದ್ದು, ಶಾಂತಿನಿಕೇತನದ ಚಿತ್ರಕಲಾವಿದರು. ಸಂವಿಧಾನ ರಚನೆಯಲ್ಲಿ, ಈ 15 ಮಹಿಳೆಯರ ಪಾತ್ರ ಗಮನಾರ್ಹ. 75 ವರ್ಷಗಳ ಹಿಂದೆ, ಮಹಿಳೆಯರಿಗೆ ಕಡಿಮೆ ಪ್ರಾಧಾನ್ಯತೆ

2026 ರ ಗಣರಾಜ್ಯೋತ್ಸವದ ಸಂದರ್ಭದಲ್ಲಿ, ಸಂವಿಧಾನ ರಚನಾ ಪ್ರಕ್ರಿಯೆಯಲ್ಲಿ ಪಾಲ್ಗೊಂಡ 15 ಮಹಿಳೆಯರ ಪರಿಚಯ ಮಾಡಿಕೊಳ್ಳೋಣ.

ಇದ್ದ ಕಾಲದಲ್ಲಿ, 15 ಮಹಿಳೆಯರು ಸಂವಿಧಾನ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು ಸ್ಮರಣೀಯ.

1. **ಅಮ್ಮು ಸ್ವಾಮಿನಾಥನ್:** ಕೇರಳದ ನಾಯರ್ ಕುಟುಂಬದಲ್ಲಿ ಹುಟ್ಟಿದ ಅಮ್ಮು, ವಯಸ್ಸಲ್ಲಿ 20 ವರ್ಷಕ್ಕಿಂತ ದೊಡ್ಡವರಾಗಿದ್ದ, ಮೇಲ್ವರ್ಗದ ಅಯ್ಯರ್ ಕುಲದ ಸುಬ್ಬರಾಮ್ ಸ್ವಾಮಿನಾಥನ್ ಜೊತೆಗೆ ಮದುವೆಯಾಗುತ್ತೆ. ಇಂಗ್ಲೆಂಡನಲ್ಲಿ ಉನ್ನತ ಶಿಕ್ಷಣ ಪಡೆದಿದ್ದ ಸ್ವಾಮಿನಾಥನ್, ಜಾತಿ ಕಟ್ಟಳೆಗಳನ್ನು ಮೀರಿ, ಅಮ್ಮುಳನ್ನು ಇಂಗ್ಲೆಂಡ್‌ನಲ್ಲಿ ರಿಜಿಸ್ಟರ್ ಮದುವೆಯಾಗುತ್ತಾರೆ. ಮನೆಯಲ್ಲೇ ಅಮ್ಮುವಿಗೆ ಇಂಗ್ಲಿಷ್ ವಿದ್ಯಾಭ್ಯಾಸದ ಏರ್ಪಾಟು ಮಾಡುತ್ತಾರೆ. ಅಮ್ಮು ಅವರು ಮುಂದೆ ಗಾಂಧೀಜಿಯವರ ಆಪ್ತರಲ್ಲಿ ಒಬ್ಬರಾಗುತ್ತಾರೆ. ರಾಜ್ಯಸಭಾ ಸದಸ್ಯೆಯಾಗಿಯೂ ಆಯ್ಕೆಯಾಗಿದ್ದ ಅಮ್ಮು, ಅನೇಕ ಸಂಘ ಸಂಸ್ಥೆಗಳೊಂದಿಗೆ ಕೆಲಸಮಾಡಿದ್ದಾರೆ. ವಿಕ್ರಂ ಸಾರಾಭಾಯಿ ಪತ್ನಿ ಖ್ಯಾತ ಭರತನಾಟ್ಯ ಕಲಾವಿದೆ ಮೃಣಾಲಿನಿ, ಸುಭಾಷ್ ಚಂದ್ರ ಬೋಸರ ಜೊತೆ ಕೆಲಸ ಮಡಿದ ಲಕ್ಷ್ಮೀ ಸೆಹಗಲ್, ಅಮ್ಮುವಿನ ಮಕ್ಕಳು.
2. **ದಾಕ್ಷಾಯಿಣಿ ವೇಲಾಯುಧನ್ :** ಪುಲಯಾರ್ ದಲಿತ ಸಮುದಾಯಕ್ಕೆ ಸೇರಿದ ದಾಕ್ಷಾಯಿಣಿ, ಭಾರತದ ಪ್ರಥಮ ದಲಿತ ಪದವೀಧರೆ. ಗಾಂಧಿವಾದಿ; ಅಂಬೇಡ್ಕರರಿಗೂ ಆಪ್ತರಾಗಿದ್ದರು. ದಲಿತರಿಗೆ, ಸ್ವಾತಂತ್ರ್ಯ ಬೇಕಾಗಿರುವುದು ಬ್ರಿಟಿಷರೊಬ್ಬರಿಂದ ಅಲ್ಲ, ದಬ್ಬಾಳಿಕೆ ನಡೆಸಿದ ಮೇಲ್ವರ್ಗದ ಜನರಿಂದ ಕೂಡ ಎಂದು ಪ್ರತಿಪಾದಿಸಿದಾಕೆ. ದಾಕ್ಷಾಯಿಣಿಯ ಪತಿ ರಾಮನ್ ಬೇಲಾಯುಧನ್, ಮಾಜಿ ರಾಷ್ಟ್ರಪತಿ ಕೆ. ಆರ್. ನಾರಾಯಣನ್ ಚಿಕ್ಕಪ್ಪ.
3. **ಕಮಲಾ ಚೌಧರಿ :** ಲಿಂಗ ತಾರತಮ್ಯ, ವಿಧವೆಯರ ಶೋಷಣೆಯ ವಿರುದ್ಧ ಉತ್ತರ ಪ್ರದೇಶದಲ್ಲಿ ಹೋರಾಟ ಮಾಡಿದ್ದ ದಿಟ್ಟ ಮಹಿಳೆ. ಸ್ವಾತಂತ್ರ್ಯ ಹೋರಾಟದಲ್ಲಿ ಜೈಲು ಶಿಕ್ಷೆ ಅನುಭವಿಸಿದರೂ, ಎದೆಗುಂದದ ವ್ಯಕ್ತಿತ್ವ ಕಮಲಾರದ್ದು.
4. **ಹಂಸಾ ಜೀವರಾಜ್ ಮೆಹತಾ:** ಬರೋಡ ಸಂಸ್ಥಾನದ ದಿವಾನರ ಮಗಳಾಗಿ ಜನಿಸಿದ ಗುಜರಾತಿನ ಪ್ರಥಮ ಮುಖ್ಯಮಂತ್ರಿಯ ಪತ್ನಿಯಾಗಿದ್ದ ಹಂಸಾ, ಸರಳಜೀವಿ. ಇಂಗ್ಲೆಂಡಿನಲ್ಲಿ ಶಿಕ್ಷಣ ಪಡೆದಿದ್ದರು; ಗುಜರಾತಿ ಭಾಷೆಯಲ್ಲಿ ಅನೇಕ ಕಥೆ ಕಾದಂಬರಿಗಳನ್ನು ಬರೆದಿರುವ ಹಂಸಾರದ್ದು ಬಹುಮುಖ ಪ್ರತಿಭೆ.
5. **ಸುಚೇತಾ ಕೃಪಲಾನಿ:** ಭಾರತದ ಮೊದಲ ಮಹಿಳಾ ಮುಖ್ಯಮಂತ್ರಿ ಸುಚೇತಾ ಅವರರದ್ದು ಸೂಕ್ಷ್ಮ ಸ್ವಭಾವ. ಜಲಿಯನ್ ವಾಲಾಬಾಗ್ ಹತ್ಯಾಕಾಂಡ, 11 ವರ್ಷದ ಸುಚೇತಾರ ಮೇಲೆ ಬೀರಿದ್ದ ಪ್ರಭಾವವೇ ಅವರನ್ನು ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕುವಂತೆ ಪ್ರೇರೇಪಿಸಿತು. ಕೊನೆಗಾಲದಲ್ಲಿ ಕಾಂಗ್ರೆಸ್ಸಿನ ಕಾರ್ಯವೈಖರಿಯಿಂದ ಭ್ರಮನಿರಸನಗೊಂಡಿದ್ದ ಸುಚೇತಾ ಸಕ್ರಿಯ ಕಾರಣದಿಂದ **ನಿವೃತ್ತಿಯಾಗಿದ್ದರು.**
6. **ಅಮೃತ್ ಕೌರ್:** ಗಾಂಧಿಯ ಸೆಕ್ರೆಟರಿಯಾಗಿ 16 ವರ್ಷ ಕಾರ್ಯನಿರ್ವಹಿಸಿದ್ದ ಅಮೃತ್ ಕೌರ್, ಕಪೂರ್ತಲಾ ಸಂಸ್ಥಾನದ ರಾಜಕುಮಾರಿ. ಹತ್ತು ವರ್ಷಗಳ ಕಾಲ ಆರೋಗ್ಯ ಮಂತ್ರಿಯಾಗಿದ್ದ, ಭಾರತಕ್ಕೆ ಅವರ ಕೊಡುಗೆ ಏಮ್ಸ್.
7. **ಸರೋಜಿನಿ ನಾಯ್ಡು:** ಸರೋಜಿನಿ ಹುಟ್ಟಿದ್ದು ಬೆಂಗಾಲಿ ಕುಟುಂಬದಲ್ಲಿ, ಬೆಳೆದಿದ್ದು ಹೈದ್ರಾಬಾದಿನಲ್ಲಿ. ವಿದೇಶದ ಉನ್ನತ ಶಿಕ್ಷಣದ ಖರ್ಚನ್ನು ಭರಿಸಿದ್ದು ಅಂದಿನ ಹೈದರಾಬಾದಿನ ನಿಜಾಮ. ವೈದ್ಯ ಗೋವಿಂದರಾಜು ನಾಯ್ಡುರವರನ್ನು ಮದುವೆಯಾದ ಸರೋಜಿನಿ, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದರು.
8. **ವಿಜಯಲಕ್ಷ್ಮಿ ಪಂಡಿತ್ :** ಜವಾಹರಲಾಲ ನೆಹರೂರವರ ಸಹೋದರಿ ವಿಜಯಲಕ್ಷ್ಮಿಯವರು, ಮಹಾರಾಷ್ಟ್ರದ ರಾಜ್ಯಪಾಲೆಯಾಗಿ, ಲೋಕಸಭಾ ಸದಸ್ಯೆಯಾಗಿ, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಪ್ರಥಮ ಮಹಿಳಾ ಅಧ್ಯಕ್ಷೆಯಾಗಿ ಕಾರ್ಯನಿರ್ವಹಿಸಿದ್ದಾರೆ.
9. **ಆನಿ ಮಸ್ಕರೇನ್:** ಶ್ರೀಲಂಕಾದಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡಿದ್ದ ಆನಿ, ಕೇರಳದಲ್ಲಿ ತಮ್ಮ ಸ್ವಾತಂತ್ರ್ಯ ಹೋರಾಟವನ್ನು ಆರಂಭಿಸಿದ್ದರು.
10. **ಪೂರ್ಣಿಮಾ ಬ್ಯಾನರ್ಜಿ:** ಬ್ರಹ್ಮ ಸಮಾಜದ ಪ್ರಚಾರಕ ತ್ರೈಲೋಕ್ಯನಾಥ ಸನ್ಯಾಲರ ಮೊಮ್ಮಗಳಾದ ಪೂರ್ಣಿಮಾ, ಕ್ವಿಟ್ ಇಂಡಿಯಾ, ಉಪ್ಪಿನ ಸತ್ಯಾಗ್ರಹಗಳಲ್ಲಿ ಸಕ್ರಿಯವಾಗಿ ಪಾಲುಗೊಂಡಾಕೆ.
11. **ರೇಣುಕಾ ರೇ:** ಬಂಗಾಳದ ಪ್ರಭಾವಿ ಮನೆತನದಲ್ಲಿ ಹುಟ್ಟಿದ ರೇಣುಕಾ, ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ಮಾಡಿದರು; ಸ್ವಾತಂತ್ರ್ಯ ಹೋರಾಟದಲ್ಲಿ ಬಹುಕಾಲ ಸಕ್ರಿಯರಾಗಿದ್ದರು. ಇವರು ಲೇಖಕಿಯೂ ಕೂಡ.
12. **ದುರ್ಗಾಬಾಯಿ ದೇಶಮುಖ್:** ಗಾಂಧಿಯ ಅನುಯಾಯಿಯಾಗಿದ್ದ ದುರ್ಗಾಬಾಯಿ, ಜೀವನದಲ್ಲೆಂದೂ ಆಭರಣ ಧರಿಸಲಿಲ್ಲ; ಯೋಜನಾ ಆಯೋಗದ ಸದಸ್ಯೆಯಾಗಿ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿಯಲ್ಲಿ ಸಕ್ರಿಯ ಪಾತ್ರ ವಹಿಸಿದರು.
13. **ಲೀಲಾ ರಾಯ್:** ಢಾಕಾ ವಿಶ್ವವಿದ್ಯಾನಿಲಯದ ಮೊಟ್ಟಮೊದಲ ಪದವೀದರೆ ಲೀಲಾಳ ಅಪ್ಪ ಸುಭಾಷ್ ಚಂದ್ರ ಬೋಸರ ಗುರು. ಬೋಸರು ಕಾಂಗ್ರೆಸ್ ತೊರೆದ ಬಳಿಕ, ಲೀಲಾ ಮತ್ತು ಅವರ ಪತಿ, ಬೋಸ್ ಸ್ಥಾಪಿಸಿದ ಫಾರ್ವರ್ಡ್ ಬ್ಲಾಕ್ ಸೇರಿ ಹೋರಾಟದಲ್ಲಿ ತೊಡಗಿದರು.
14. **ಬೇಗಂ ಕುದ್ಸಿಯಾ ರಸೂಲ್:** ಸಂವಿಧಾನದ ರಚನೆಯಲ್ಲಿ ಪಾಲ್ಗೊಂಡಿದ್ದ ಏಕೈಕ ಮುಸ್ಲಿಂ ಮಹಿಳೆ ಬೇಗಂ ಕುದ್ಸಿಯಾ. ದಶಕಗಳ ಕಾಲ ಉತ್ತರ ಪ್ರದೇಶದ ರಾಜಕೀಯ ಜೀವನದಲ್ಲಿ ಸಕ್ರಿಯರಾಗಿದ್ದ ಬೇಗಂ ಕೊಡುಗೆ ಅಪಾರ.
15. **ಮಾಲತಿ ಚೌಧರಿ :** ಶಾಂತಿನಿಕೇತನದಲ್ಲಿ ಅಧ್ಯಯನ ಮಾಡುತ್ತಿದ್ದ ಚಿಕ್ಕ ಬಾಲೆಯನ್ನು ಟ್ಯಾಗೋರರು ಪ್ರೀತಿಯಿಂದ ಕರೆಯುತ್ತಿದ್ದಿದ್ದು ಮೀನೂ ಎಂದು. ಮದುವೆಯಾದ ಬಳಿಕ ಒಡಿಸ್ಸಾದ ಹಳ್ಳಿಯಲ್ಲಿ ನೆಲೆಸಿದ್ದ ಮಾಲತಿ ಮತ್ತು ನವಕೃಷ್ಣ ದಂಪತಿಗಳದ್ದು ಆದರ್ಶ ಜೀವನ. ಮಾಲತಿ ಗಾಂಧೀಜಿಯ ಪರಮಶಿಷ್ಯೆ ಕೂಡ. ಮಾಲತಿಯ ಪತಿ ನವಕೃಷ್ಣ ಚೌಧರಿ, ಒಡಿಸ್ಸಾದ ಪ್ರಥಮ ಮುಖ್ಯ ಮಂತ್ರಿಯಾದರು.

ಐಶ್ವರ್ಯ ಕುವರಿ ನೀ..

ಸಂಜೆಯ ಕಿರಣಗಳು ಮೌನವಾಗಿ ಅಳುತಿವೆ
ನಿನ್ನ ಪ್ರೀತಿಯ ಕತೆಯನ್ನು ಕೇಳುತ ಕುಳಿತಿವೆ
ಸಾವಿರ ಸೂರ್ಯಕಾಂತಿಗಳ ಕಿರೀಟ ಧರಿಸಿ
ನೀ ಬಂದೆ, ನನ್ನ ಜೀವನದ ಕತ್ತಲನ್ನು ಅಳಿಸಿ

ಕವಿಗಳ ಕಲ್ಪನೆಯೂ ಮೂಕವಾಗುವಂತೆ
ನಿನ್ನ ಸೌಂದರ್ಯ ಬಿರುಸಿತ್ತು ವಜ್ರದ
ಕಾಂತಿಯಂತೆ
ಆದರೆ ಧನದ ದಾಹವೋ ಮರುಭೂಮಿಯ
ಮಾಯೆಯೋ
ನಿನ್ನ ಹೃದಯದ ದಾರಿ ತಪ್ಪಿತು, ಅದು ಹೇಗೋ?

ಕನಕದ ಕನಸುಗಳ ಕಣಿವೆಯಲ್ಲಿ
ಸಿಲುಕಿ ಬಿದ್ದ ನಿನ್ನ ಮನಸ್ಸಿನ ಅಲೆಯಲ್ಲಿ
ಮುಳುಗಿ ಹೋದವು ನಮ್ಮ ದಿನಗಳು
ಕರಗಿ ಹೋದವು ಪ್ರೀತಿಯ ಕ್ಷಣಗಳು

ಕವಿ ಕಣ

ಐಶ್ವರ್ಯದ ವಿಷಕನ್ಯೆ ನಿನ್ನನ್ನು ಆವರಿಸಿದಾಗ
ಮರೆತೆ ನೀ ನಮ್ಮ ಪವಿತ್ರ ಪ್ರೇಮದ ಸಾಗರ
ಅರಳಿದ ಮಲ್ಲಿಗೆಯ ಪರಿಮಳ ಮರೆತು
ಧನದ ಧೂಳಿನಲ್ಲಿ ದಾರಿ ಕಳೆದು ಹೋದೆ

ಸಂಪತ್ತಿನ ಸುಳಿಯಲ್ಲಿ ಸಿಲುಕಿದ ನಿನ್ನ ನಡಿಗೆ
ನೋಡುತ್ತಿದ್ದೆ ನಾನು ಹೃದಯವೇ ಶಿಲೆಯಾಯ್ತು
ಉದುರುತ್ತಿದ್ದವು ಕಣ್ಣೀರ ಬಿಸಿ ಬಿಂದುಗಳು
ಅಳಿಸುತ್ತಿದ್ದವು ನಿನ್ನ ಹೆಜ್ಜೆಗುರುತನ್ನು

ಕಾಲ ಬದಲಾಯಿತು, ನೀ ಬದಲಾದೆ
ಧನದ ದೇವಾಲಯದಲ್ಲಿ ಪೂಜಾರಿಯಾದೆ
ಪ್ರೀತಿಯ ಪವಿತ್ರತೆಯನ್ನು ಮರೆತು
ಲೋಭದ ಲೋಕದಲ್ಲಿ ಮನೆ ಕಟ್ಟಿ ನೆಲೆಸಿದೆ

ಈಗ ನಿಂತಿದ್ದೇನೆ ನಾನು ಕವಿಯಾಗಿ
ಹಚ್ಚಿದ್ದೇನೆ ನಿನ್ನ ನೆನಪುಗಳ ದೀವಿಗೆಯನ್ನು
ಧನವ್ಯಾಮೋಹದ ಕಥೆಯನ್ನು ಬರೆಯುತ್ತಾ
ಮುಳುಗುತ್ತಿದ್ದೇನೆ ಕವನದ ಕಣ್ಣೀರಿನಲ್ಲಿ

» ಸಂದೀಪ್ ಶರ್ಮಾ

ಸುಂದರ ಜಲಪಾತದ ಹಿಂದಿನ ಕಥೆ

» ಜಿ.ನಾಗೇಂದ್ರ ಕಾವೂರು

ಭಾರತದಲ್ಲೇ ಹೆಚ್ಚು ಮಳೆ ಸುರಿಯುವ ಮೇಘಾಲಯ ರಾಜ್ಯದ ಚಿರಾಪುಂಜಿ (ಸೋಹ್ರಾ) ಯಲ್ಲಿರುವ 'ನೊಹ್ಕಲಿಕೈ' ಜಲಪಾತ ಭಾರತದ ಅತಿ ಎತ್ತರದ ಜಲಪಾತವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಸಣ್ಣ ಪ್ರಸ್ತ ಭೂಮಿಯ ಶಿಖರದಲ್ಲಿ ಸಂಗ್ರಹವಾಗುವ ನೀರು 1,115 ಅಡಿ ಎತ್ತರದಿಂದ ಹಲವು ಧಾರೆಗಳಾಗಿ ಧುಮುಕಿ ಕೊಳದಲ್ಲಿ ಸಂಗ್ರಹವಾಗಿ ಮುಂದೆ ಹರಿದುಹೋಗುತ್ತದೆ.. ನಾವು ಜಲಪಾತವನ್ನು ವೀಕ್ಷಿಸಲು ಹೋದ ಸಮಯದಲ್ಲಿ ತಣ್ಣನೆಯ ವಾತಾವರಣವಿದ್ದು ಚಹಾ ಸೇವಿಸಲು ಸಮೀಪದಲ್ಲೇ ಇದ್ದ ಅಂಗಡಿ ಕಂ ಹೋಟೆಲ್‌ಗೆ ಹೋದೆವು. ಹೋಟೆಲ್ ಮಾಲಕಿಯ ಮಗಳು ಭಯಾ, ಜಲಪಾತಕ್ಕೆ 'ನೊಹ್ಕಲಿಕೈ' ಹೆಸರು ಬರಲು ಹಿಂದಿರುವ ದಂತಕಥೆಯನ್ನು ಹೇಳಿದಳು.

ರಂಗಿರ್ತೆ ಎಂಬ ಪುಟ್ಟ ಹಳ್ಳಿಯಲ್ಲಿ 'ಕಾ ಲಿಕೈ' ಎಂಬ ಹೆಸರಿನ ಮಹಿಳೆ ವಾಸಿಸುತ್ತಿದ್ದಳು. ವಿಧವೆಯಾದ ಈಕೆಗೆ ಹೆಣ್ಣು ಮಗಳಿದ್ದು, ಕೂಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದಳು. ತಾನು ಕೆಲಸಕ್ಕೆ ಹೋಗುತ್ತಿದ್ದ ಸಮಯದಲ್ಲಿ ಮಗಳನ್ನು ಮನೆಯಲ್ಲಿ ಬಿಟ್ಟಿರುತ್ತಿದ್ದಳು. ಮಗುವನ್ನು ಬೆಳೆಸಲು ತಂದೆ-ತಾಯ ಇಬ್ಬರೂ ಬೇಕೆಂದು ಅರಿತ 'ಕಾ ಲಿಕೈ' ಎರಡನೇ ಮದುವೆಯಾದಳು. ಮೇಘಾಲಯದಲ್ಲಿ ಹೆಂಗಸರು ದುಡಿದು ಸಂಸಾರವನ್ನು ಪೋಷಿಸುವ ಪದ್ಧತಿಯಿದೆ. ಕಾ ಲಿಕೈ ದುಡಿದು ತಂದ ಹಣದಲ್ಲಿ ಮಗುವನ್ನು ಪೋಷಿಸಲು ಹೆಚ್ಚು ಹಣವನ್ನು ವೆಚ್ಚಮಾಡುತ್ತಿದ್ದಳು. ಉಳಿದ ಸ್ವಲ್ಪ ಹಣವನ್ನು ಗಂಡನಿಗೆ ಕೊಡುತ್ತಿದ್ದಳು.

ಆ ಗಂಡನ ಮನಸ್ಸಿನಲ್ಲಿ ಒಂದು ಯೋಚನೆ ಬಂತು. ಮಲ ಮಗಳು ಇಲ್ಲದಿದ್ದರೆ ಎಲ್ಲಾ ಹಣವನ್ನು ತಾನೇ ಕಬಳಿಸಬಹುದೆಂಬ ಆಲೋಚಿಸಿದ. ಒಂದು ದಿನ ಮಡದಿ ಕೆಲಸಕ್ಕೆ ಹೋಗಿದ್ದಾಗ ಮಗುವನ್ನು ಕೊಂದು, ತಲೆ ಮತ್ತು ಮೂಳೆಗಳನ್ನು ಹೊರಗೆಸೆದು ಮಾಂಸದ ಅಡುಗೆ ತಯಾರಿಸಿ ಹೊರಗೆ ತಿರುಗಾಡಲು ಹೊರಟ. ಊಟದ ಬಿಡುವಿನ ಸಮಯದಲ್ಲಿ 'ಕಾ ಲಿಕೈ' ಮನೆಗೆ ಬಂದಳು. ಗಂಡ ಮಾಸಂದ ಅಡುಗೆ ಮಾಡಿಟ್ಟಿದ್ದನ್ನು ಕಂಡು, ಊಟ ಮಾಡಿದಳು. ಊಟದ ನಂತರ ಎಲೆ ಅಡಿಕೆ ಜಗಿಯುವ ಅಭ್ಯಾಸವಿದ್ದ ಕಾ ಲಿಕೈ, ಎಲೆ ಮತ್ತು



ಅಡಿಕೆ ಇಟ್ಟಿದ್ದ ಜಾಗಕ್ಕೆ ಹೋದಳು. ಅಲ್ಲಿ ತುಂಡರಿಸಿದ ಬೆರಳಿನ ಭಾಗವನ್ನು ಕಂಡಳು. ಇದು ತನ್ನ ಮಗಳದ್ದೇ ಬೆರಳೆಂದು ಅರಿಯಲು ಹೆಚ್ಚು ಸಮಯ ಹಿಡಿಯಲಿಲ್ಲ. ತಾನು ದುಡಿಯಲು ಹೋದ ಸಮಯದಲ್ಲಿ ಆಗಿರಬಹದಾದದ್ದನ್ನು ಊಹಿಸಿಕೊಂಡಳು. ಸ್ವಂತ ಮಗಳ ಮಾಂಸವನ್ನೇ ಭಕ್ಷಿಸಿದ್ದನ್ನು ಅರಿತು ಹುಚ್ಚಿಯಂತಾದಳು. ಬೇಸರದಿಂದ ಜಲಪಾತದ ಕಡೆ ಓಡಿ, ಪ್ರಪಾತದ ತುದಿಯಿಂದ ಜಿಗಿದು ಪ್ರಾಣತ್ಯಾಗ ಮಾಡಿಕೊಂಡಳು. ಈ ಹೃದಯ ವಿದ್ರಾವಕ ಘಟನೆಯನ್ನು ಕಂಡು ಸ್ಥಳೀಯರು ವಿಹ್ವಲರಾದರು; ಆಕೆಯ ನೆನಪಿಗಾಗಿ ಅಂದಿನಿಂದ ಈ ಜಲಪಾತಕ್ಕೆ 'ನೊಹ್ಕಲಿಕೈ' ಎಂಬ ಹೆಸರಿಟ್ಟರು.

ನೊಹ್ಕಲಿಕೈ ಜಲಪಾತ ಮತ್ತು ಅದರ ಸುತ್ತ ಮುತ್ತಲಿನ ಸೌಂದರ್ಯವನ್ನು ಕಣ್ತುಂಬಿಕೊಳ್ಳಲು ಹಲವಾರು ಚಾರಣ ಪಥಗಳಿವೆ. ಇದೊಂದು ಸುಂದರ ಜಲಪಾತ; ಹಲವು ಕೋನಗಳಿಂದ ಇದನ್ನು ನೋಡಬಹುದು. ಜಲಪಾತದ ಬಳಿ ಮೂಲಭೂತ ಸೌಕರ್ಯಗಳೊಂದಿಗೆ ಸುರಕ್ಷಿತ ಕ್ಯಾಂಪ್ ಸೌಲಭ್ಯವನ್ನು ಒದಗಿಸಿಕೊಡುವ ಸಂಸ್ಥೆಗಳು ಇಲ್ಲಿವೆ. ಚಾರಣಿಗರ ತಂಡಗಳು ಇಲ್ಲಿಗೆ ಬಂದು ಚಾರಣ ಮತ್ತು ನಕ್ಷತ್ರ ವೀಕ್ಷಣೆ ನಡೆಸುತ್ತಾರೆ. ಮೇ ನಿಂದ ಅಕ್ಟೋಬರ್‌ವರೆಗೆ ಹವಾಮಾನವು ಆಹ್ಲಾದಕರವಾಗಿರುತ್ತದೆ. ಜುಲೈನಿಂದ ಸೆಪ್ಟೆಂಬರ್ ಅವಧಿಯಲ್ಲಿ ಇಲ್ಲಿ ಹೆಚ್ಚು ಮಳೆಯಾಗುವುದರಿಂದ, ಮೇಘಗಳ ನಡುವೆ ಜಲಪಾತವು ಅಸ್ಪಷ್ಟವಾಗಿ ಗೋಚರಿಸುತ್ತದೆ. ಮೇಘಾಲಯದ ಶಿಲ್ಲಾಂಗ್ ವಿಮಾನ ನಿಲ್ದಾಣದಿಂದ 80 ಕಿ.ಮೀ. ದೂರದಲ್ಲಿರುವ ನೊಹಲಿಕೈ ಜಲಪಾತಕ್ಕೆ ಸಾರ್ವಜನಿಕ ಸಾರಿಗೆ ಬಸ್ ಅಥವಾ ಖಾಸಗಿ ಕ್ಯಾಬ್‌ಗಳ ಮೂಲಕ ತೆರಳಬಹುದು. (ಚಿತ್ರಗಳು : ಲೇಖಕರವು)

ಬ್ರಿಟಿಷರ ವಿರುದ್ಧ ಗೂಢಚಾರಿಯಾಗಿ ಕೆಲಸ ಮಾಡಿದ ಈ ಮಹಿಳೆಯನ್ನು, ಈ ಗಣರಾಜ್ಯೋತ್ಸವದ ಸಂದರ್ಭದಲ್ಲಿ ನೆನಪಿಸಿಕೊಳ್ಳೋಣ.

ಗೂಢಚಾರಿ ನೀರಾ ಆರ್ಯ

» ರಶ್ಮಿ ಹೆಗಡೆ, ಮುಂಬೈ

ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ ನಮ್ಮ ಕಲ್ಪನೆಗೂ ಮೀರಿದ ತ್ಯಾಗ, ಬಲಿದಾನಗಳು ಈ ದೇಶದಲ್ಲಿ ನಡೆದಿವೆ. ಊಹೆಗೂ ನಿಲುಕದ ಕಠಿಣ ಶಿಕ್ಷೆಗಳಿಗೆ ದೇಶಭಕ್ತರು ಗುರಿಯಾಗಿದ್ದಾರೆ. ಅಂತಹ ಎಲ್ಲರ ಪರಿಚಯವು ಪಠ್ಯಪುಸ್ತಕಗಳಲ್ಲಿ ಸೇರಿಲ್ಲ; ಅಂತಹ ಮಹಾನ್ ದೇಶಪ್ರೇಮಿಗಳಲ್ಲೊಬ್ಬಳು 'ನೀರಾ ಆರ್ಯಾ'.

1902, ಮಾರ್ಚ್ 5 ರಂದು ಉತ್ತರಪ್ರದೇಶದ ಭಾಗಪತ್ ಜಿಲ್ಲೆಯ ವ್ಯಾಪಾರಿ ಸೇಠ್ ಛಜ್ಜುಮಲ್ ಮಗಳಾಗಿ ಜನಿಸಿದ್ದ ನೀರಾಗೆ, ತಂದೆಯು ಕಲಕತ್ತಾದಲ್ಲಿ ವಿದ್ಯಾಭ್ಯಾಸ ಕೊಡಿಸಿದ್ದ. ಯಾವ ಬ್ರಿಟಿಷ್ ಸರಕಾರದ ಜೊತೆಗೂಡಿ ಆತ ವ್ಯಾಪಾರ ನಡೆಸುತ್ತಿದ್ದನೋ ಅವರ ವಿರುದ್ಧವೇ ಆತನ ಮಕ್ಕಳು ಸಿಡಿದೆದ್ದರು. ಕ್ರಾಂತಿಕಾರಿ ಚಿಂತನೆಗಳ ಕೈಹಿಡಿದು, ತಂದೆಯ ಸಕಲೈಶ್ವರ್ಯವನ್ನೂ ತೊರೆದರು. ನೇತಾಜಿ ಸುಭಾಷ್ಚಂದ್ರ ಬೋಸರ ತತ್ವಸಿದ್ಧಾಂತಗಳನ್ನು ಮೆಚ್ಚಿದ ನೀರಾ, ಆಜಾದ್ ಹಿಂದ್ ಫೌಜಿನ ಝಾನ್ಸಿರಾಣಿ ರೆಜಿಮೆಂಟ್ ಸೇರಿಕೊಂಡಳು. ತಂದೆಯು ಮಗಳನ್ನು ಆಕೆಯ ಇಚ್ಛೆಯ ವಿರುದ್ಧ ಪರಿಚಯಸ್ಥರ ಮಗನಾದ ಶ್ರೀಕಾಂತ್ ಜಯರಂಜನ್ ದಾಸ್ ಜೊತೆಗೆ ಮದುವೆ ಮಾಡಿಸಿದ. ಶ್ರೀಕಾಂತ್ ಬ್ರಿಟಿಷ್ ಸರಕಾರಕ್ಕೋಸ್ಕರ ಕೆಲಸಮಾಡುವ ಗುಪ್ತಚರದಳದ ಸಿಬ್ಬಂದಿಯಾಗಿದ್ದ.

ನೀರಾ ಆರ್ಯಳು, ಝಾನ್ಸಿ ರಾಣಿ ರೆಜಿಮೆಂಟ್ ಸೇರಿ, ಬ್ರಿಟಿಷರ ವಿರುದ್ಧ ಕಾರ್ಯ ಚಟುವಟಿಕೆ ನಡೆಸಲು ಆಂಭಿಸಿದಳು; ಆಕೆಯ ಪತಿ ಕ್ರಾಂತಿಕಾರಿಗಳ ವಿರುದ್ಧ ಕಾರ್ಯ ನಡೆಸುತ್ತಿದ್ದ. ಇಬ್ಬರ ತತ್ವ ಹಾಗೂ ಸಿದ್ಧಾಂತ ಸಂಪೂರ್ಣವಾಗಿ ತದ್ವಿರುದ್ಧ. ಕ್ರಮೇಣ ಅವರಲ್ಲಿ ಭಿನ್ನಾಭಿಪ್ರಾಯ ತಲೆದೋರತೊಡಗಿತ್ತು. ಆಕೆಯ ಚಲನವಲನಗಳು ಆತನಲ್ಲಿ ಸಂಶಯವನ್ನು ಉಂಟುಮಾಡಿತ್ತು. ಇಬ್ಬರಲ್ಲೂ ಆಗಾಗ ದೇಶದ ಕುರಿತು ಕಟುವಾದ ವಾದವಿವಾದ, ಚರ್ಚೆ ನಡೆಯುತ್ತಲೇ ಇತ್ತು.

ಗುಪ್ತಚರದಳಕ್ಕೆ

ಸುಭಾಶ್ ಚಂದ್ರ ಬೋಸ ಹುಟ್ಟುಹಾಕಿದ ಆಜಾದ್ ಹಿಂದ್ ಫೌಜಿನ ಗೂಢಚಾರಿಕಾ ವಿಭಾಗದ ಮುಖ್ಯಸ್ಥರಾಗಿದ್ದ ಪವಿತ್ರ ಮೋಹನ್ ರಾಯ್ ಎನ್ನುವವರು ನೀರಾ ಹಾಗೂ ಇತರೆ ಕೆಲವು ಮಹಿಳೆಯರನ್ನು ಗೂಡಚಾರಿಕಾ ವಿಭಾಗಕ್ಕೆ ನೇಮಿಸಿದರು. ಆ ಸಮಯದಲ್ಲಿ ಬ್ರಿಟಿಷರು ಭಾರತದ ಮಹಿಳೆಯರನ್ನು ತಮ್ಮ ಮನೆಯ ಕೆಲಸಕ್ಕಾಗಿ ಬಳಸಿಕೊಂಡು, ಅವರನ್ನು ತಮ್ಮ ಗುಲಾಮರಂತೆ ನಡೆಸಿಕೊಳ್ಳುತ್ತಿದ್ದರು. ಇದನ್ನು ಅರ್ಥ ಮಾಡಿಕೊಂಡ ಪವಿತ್ರ ಮೋಹನ್ ರಾಯ್, ನೀರಾ ಹಾಗೂ ಇತರರನ್ನು ಬಡ ಮಹಿಳೆಯರ ರೂಪದಲ್ಲಿ ವೇಷ ಬದಲಿಸಿ ಆ ಬ್ರಿಟಿಷರ ಮನೆಗಳಿಗೆ ಕಸ, ಮುಸುರೆ ಹಾಗೂ ಇನ್ನಿತರೆ ಮನೆಗೆಲಸಗಳಿಗೆ ಸೇರಿಸಿದ್ದರು.

ಆಕೆಯ ಜೊತೆ ಸರಸ್ವತಿ ರಾಜಮಣಿ, ದುರ್ಗಾ ಮಲ್ಲಮ್ ಗೊರ್ಖಾ ಮುಂತಾದವರೂ ಇದ್ದರು. ಅವರಿಬ್ಬರೂ ಮಾರುವೇಷದಲ್ಲಿ ಬ್ರಿಟಿಷ್ ಕ್ಯಾಂಪ್‌ಗಳಿಂದ ವಿಷಯಗಳನ್ನು ಸಂಗ್ರಹಿಸುತ್ತಿದ್ದರು. ಎಷ್ಟೋ ಬಾರಿ ನೀರಾ ಬ್ರಿಟಿಷರ ಮನೆಗಳಿಂದ ದೇಶಕ್ಕೆ ಸಂಬಂಧ ಪಟ್ಟ ಪ್ರಮುಖ ಕಾಗದ ಪತ್ರಗಳನ್ನು ಯಾರಿಗೂ ತಿಳಿಯದಂತೆ ಕದ್ದು ತಂದುಕೊಡುತ್ತಿದ್ದಳು. ಆ ಕೆಲಸವನ್ನು ಧೈರ್ಯದಿಂದ ಸಮರ್ಪಕವಾಗಿ ಮಾಡಿದ ನೀರಾಳಿಗೆ ಸ್ವತಃ ನೇತಾಜಿಯವರು 'ನೀನು ಈ ದೇಶದ ಮೊದಲ ಮಹಿಳಾ ಗೂಢಚಾರಿಣಿ' ಎಂದು ಕರೆದರು.

ಪತಿಯ ಕಣ್ಣು ತಪ್ಪಿಸಿ ಆಕೆ ಆಜಾದ್ ಹಿಂದ್ ಫೌಜ್‌ನಲ್ಲಿ ತನ್ನ ಸೇವೆ ಹಾಗೂ ತರಬೇತಿಯನ್ನು ಮುಂದುವರೆಸಿದ್ದಳು. ನೀರಾಗೆ ಕ್ರಾಂತಿಕಾರಿಗಳ ಸಂಪರ್ಕವಿರಬಹುದು ಎಂಬ ಸಂಶಯದಿಂದ ಆಕೆಯ ಮೇಲೆ ಪತಿಯು ಒಂದು ಕಣ್ಣಿಟ್ಟ. ಒಮ್ಮೆ ಆಕೆ ನೇತಾಜಿ ಹಾಗೂ ಇತರ ಹೋರಾಟಗಾರರನ್ನು ಭೇಟಿಯಾಗಲು ಹೊರಟಾಗ ಶ್ರೀಕಾಂತ್ ಆಕೆಯನ್ನು ಹಿಂಬಾಲಿಸಿದ. ನೇತಾಜಿಯನ್ನು ಕಂಡಕೂಡಲೇ ಅವರ ವಾಹನ ಚಾಲಕನತ್ತ ಗುಂಡು ಹಾರಿಸಿದ; ಮುಂದಿನ ಗುಂಡನ್ನು ಆತ ನೇತಾಜಿಯವರಿಗೆ ಹಾರಿಸುವವನಿದ್ದ.



ಪತಿಗೆ ಚುಚ್ಚಿದ ಪತ್ನಿ

ಒಂದೆಡೆ ತನ್ನ ನೆಚ್ಚಿನ ನಾಯಕ, ಇನ್ನೊಂದೆಡೆ ತನ್ನ ಪತಿ. ಇವರಿಬ್ಬರಲ್ಲಿ ಒಬ್ಬರನ್ನು ಮಾತ್ರ ಉಳಿಸೋಕೆ ಸಾಧ್ಯ. ತಾನು ಪತಿಯನ್ನು ಹಾಗೇ ಬಿಟ್ಟರೆ ಒಬ್ಬ ದೇಶ ಭಕ್ತನನ್ನು ಬ್ರಿಟಿಷರಿಗೆ ಹಿಡಿದುಕೊಡುತ್ತಾನೆ ಎಂದು ಯೋಚಿಸಿ ತಕ್ಷಣವೇ ಕೈಯಲ್ಲಿದ್ದ ಬಂದೂಕಿನಿಂದ ತನ್ನ ಪತಿಗೆ ಗುಂಡು ಹೊಡೆಯಲು ಮುಂದಾಗುತ್ತಾಳೆ. ಆದರೆ ಅದರಲ್ಲಿ ಗುಂಡು ಖಾಲಿಯಾಗಿತ್ತು. ಹಿಂದೆಮುಂದೆ ಯೋಚಿಸದೆ ಅಲ್ಲಿಯೇ ಇದ್ದ ದೊಡ್ಡ ಕತ್ತಿಯಿಂದ ಆತನ ಎದೆಗೆ ಚುಚ್ಚಿಬಿಡುತ್ತಾಳೆ. ಆ ಪರಿಣಾಮ ಶ್ರೀಕಾಂತನ ಸಾವಾಗುತ್ತದೆ. ಅವರೆಲ್ಲ ಅಲ್ಲಿಂದ ತಪ್ಪಿಸಿಕೊಳ್ಳುತ್ತಾರೆ. ದೇಶದ್ರೋಹಿ ಗಂಡನನ್ನು ಕೊಂದೆ ಎಂಬ ನೋವಿಗಿಂತ ದೇಶಭಕ್ತ ಸುಭಾಷರನ್ನು ಕಾಪಾಡಿದೆ ಎಂಬ ಸಮಾಧಾನ ಆಕೆಗಿತ್ತು.

1945 ರ ಸಮಯಕ್ಕೆ ನೇತಾಜಿಯಿದ್ದ ವಿಮಾನ ಅಪಘಾತಕ್ಕೀಡಾಯಿತು ಎಂಬ ವಿಷಯ ಎಲ್ಲೆಡೆ ಹಬ್ಬಿತು. ಇದೇ ಸಮಯದಲ್ಲಿ ಆಜಾದ್ ಹಿಂದ್ ಫೌಜಿನ ಸಾವಿರಾರು ಸೈನಿಕರನ್ನು, ಹೋರಾಟಗಾರರನ್ನು ಬ್ರಿಟಿಷರು ಸೆರೆಹಿಡಿದರು. ಅವರಲ್ಲಿ ನೀರಾ ಆರ್ಯ ಕೂಡಾ ಒಬ್ಬಳು.

ಬ್ರಿಟಿಷ್ ಸರಕಾರದ ಸೇವೆಯಲ್ಲಿದ್ದ ಶ್ರೀಕಾಂತ್‌ನನ್ನು ಕೊಂದ ಹಾಗೂ ಸರಕಾರದ ವಿರುದ್ಧದ ಗೂಢಚಾರಿಕೆಯ ಅಪರಾಧದ ಮೇಲೆ ಆಕೆಯನ್ನು ಬಂಧಿಸಿ, ಅಂಡಮಾನ್ ನಿಕೋಬಾರ್‌ನ ಜೈಲಿನಲ್ಲಿಟ್ಟು ಆಕೆಗೆ ನಾನಾ ರೀತಿಯ ಚಿತ್ರಹಿಂಸೆ ಕೊಡಲಾಗುತ್ತದೆ. ಒಮ್ಮೆ ಜೈಲರ್ ಆಕೆಯ ಕೋಣೆಗೆ ಬರುತ್ತಾನೆ. ಸುಭಾಷ್ ಚಂದ್ರ ಬೋಸ್ ಸಾವು ಅನುಮಾನಾಸ್ಪದವಾದ್ದರಿಂದ ಬ್ರಿಟಿಷರಿಗೆ ಅವರಿನ್ನೂ ಬದುಕಿರಬಹುದು ಎಂಬ ಗುಮಾನಿ ಇತ್ತು. 'ನೇತಾಜಿ ಹಾಗೂ ಇನ್ನಿತರ ಕ್ರಾಂತಿಕಾರಿಗಳು ಎಲ್ಲಿದ್ದಾರೆ ಹೇಳು! ನೀನು ನಿಜ ಹೇಳಿದರೆ ಈಗಲೇ ನಿನ್ನನ್ನು ಬಿಟ್ಟುಬಿಡುತ್ತೇವೆ'ಎನ್ನುತ್ತಾನೆ. ಆದರೆ ಆಕೆಯದ್ದು ಒಂದೇ ಉತ್ತರ, 'ನೇತಾಜಿ ವಿಮಾನ ಅಪಘಾತದಲ್ಲಿ ತೀರಿಕೊಂಡಿದ್ದಾರೆ. ಅಷ್ಟಕ್ಕೂ ಅವರು ನಮ್ಮೆಲ್ಲರ ಮನಸ್ಸಿನಲ್ಲಿದ್ದಾರೆ. ನಮ್ಮೆದೆಯಲ್ಲಿ ಸದಾ ಹಸಿರಾಗಿದ್ದಾರೆ'ಎಂದು ಕೂಗಿಕೂಗಿ ಹೇಳುತ್ತಾಳೆ. 'ಓಹ್ ಹೌದಾ! ಹಾಗಿದ್ದರೆ ನಿನ್ನ ಎದೆಯನ್ನೇ ಕೇಳಿ ತಿಳಿಯುತ್ತೇವೆ' ಎನ್ನುತ್ತಾ ಕತ್ತಿಯಿಂದ ನೀರಾಳ ಒಂದು ಸ್ತನವನ್ನೇ ಕತ್ತರಿಸಿ ಬಿಡುತ್ತಾರೆ.

ಚಲನಚಿತ್ರದಲ್ಲಿ ನೀರಾ

ಅಜಾದ್ ಹಿಂದ್ ಫೌಜ್ ಪರವಾಗಿ ಕೆಲಸ ಮಾಡಿ, ಅಂಡಮಾನ್ ಜೈಲಿನಲ್ಲಿ ಶಿಕ್ಷೆ ಅನುಭವಿಸಿದ ನೀರಾ ಆರ್ಯ ಬದುಕನ್ನು ಆಧರಿಸಿದ ಚಲನಚಿತ್ರವನ್ನು ರೂಪಾ ಐಯರ್ ಅವರು ಸಿದ್ಧಪಡಿಸುತ್ತಿದ್ದಾರೆ. ನೀರಾ ಆರ್ಯ ಅವರ ಹೋರಾಟದ ಬದುಕನ್ನು ಚಿತ್ರಿಸುವ 'ಫಸ್ಟ್ ಲೇಡಿ ಸ್ಪೈ ಆಫ್ ಐಎನ್‌ಎ ನೀರಾ ಆರ್ಯ' ಎಂಬ ಪುಸ್ತಕವೂ ಹೊರಬಂದಿದೆ.

ಸ್ವಾಭಿಮಾನಿ ಬದುಕು

ನಮ್ಮ ದೇಶಕ್ಕೆ ಸ್ವಾತಂತ್ರ ಸಿಕ್ಕನಂತರ ಕಾಲಪಾನಿಯಿಂದ ಬಿಡುಗಡೆ ಹೊಂದಿದ ಆಕೆ ಯಾರ ಹಂಗೂ ಇರದಂತೆ, ಒಬ್ಬಂಟಿಯಾಗಿ ಹೈದರಾಬಾದಿನಲ್ಲಿ ಬಂದು ನೆಲೆಸಿ, ಒಂದು ಚಿಕ್ಕ ಗುಡಿಸಲಿನಲ್ಲಿ ವಾಸವಿದ್ದಳು. ಸ್ವಾತಂತ್ರ್ಯ ಹೋರಾಟಗಾರರಿಗೆ ದೊರಕುವ ಪಿಂಚಣಿಯನ್ನೂ ನಿರಾಕರಿಸಿದ್ದಳು ನೀರಾ. ಅತ್ಯಂತ ಸ್ವಾಭಿಮಾನಿ ಜೀವನ ನಡೆಸಿದ ನೀರಾ ಆರ್ಯ, ಕೊನೆಯ ದಿನಗಳಲ್ಲಿ ಹೂವು ಮಾರಿ ಜೀವನ ನಡೆಸುತ್ತಿದ್ದಳು.

ದುಃಖಕರ ವಿಷಯವೆಂದರೆ, 1998,ಜುಲೈ 26 ರಂದು ಹೈದರಾಬಾದಿನಲ್ಲಿ ಕೊನೆಯುಸಿರೆಳೆದ ನೀರಾ ಆರ್ಯಳ ಶವ ಸಂಸ್ಕಾರವೂ ಕೂಡ ಯಾವುದೇ ಸರಕಾರಿ ಗೌರವವಿಲ್ಲದೇ ನೆರವೇರುತ್ತದೆ. ಆಸ್ಪತ್ರೆಯವರು ಆಕೆಯ ಸಂದರ್ಶನಕ್ಕೆ ಬಂದಿದ್ದ ಒಬ್ಬ ಪತ್ರಕರ್ತರಿಗೆ ಈ ವಿಚಾರ ತಿಳಿಸುತ್ತಾರೆ. ಅವರು ತಮ್ಮ ಸಂಗಡಿಗರೊಂದಿಗೆ ಬಂದು ನೀರಾ ಆರ್ಯಳ ಅಂತಿಮ ಸಂಸ್ಕಾರ ನೆರವೇರಿಸಿದರು. ನೀರಾ ಆರ್ಯ ಈ ನಾಡಿನ ಮಣ್ಣಿನಲ್ಲಿ ಮಣ್ಣಾಗಿ ಮರೆಯಾದರೂ ಆಕೆಯ ತ್ಯಾಗ, ಬಲಿದಾನ ಮಾತ್ರ ಎಂದಿಗೂ ಅಮರ.

ವಿರಾಮದ ಪೋಸ್ಟ್ ಆಫೀಸು

ವಿರಾಮ ಪುರವಣಿಯಲ್ಲಿ ಪ್ರಕಟಗೊಂಡ 'ರಾಗಿ ಲಕ್ಷ್ಮಣಯ್ಯ' ಅವರ ಕುರಿತಾದ ಲೇಖನ (ಪಿ.ಚಂದ್ರಿಕಾ) ಬಹಳ ಇಷ್ಟವಾಯಿತು. ಜನಸಾಮಾನ್ಯರ ಮತ್ತು ಬಡವರ ಧಾನ್ಯ ಎನಿಸಿದ್ದ ರಾಗಿಯ ಕುರಿತು ನಮ್ಮ ದೇಶದಲ್ಲಿ ಹೆಚ್ಚಿನ ಸಂಶೋಧನೆ ನಡೆಯಲು, ರಾಗಿ ಲಕ್ಷ್ಮಣಯ್ಯ ಅವರಂತಹ ನಿಸ್ವಾರ್ಥಿ ಸಂಶೋಧಕರು ಬರಬೇಕಾಯಿತು!

ಸ್ವಾತಂತ್ರ್ಯ ದೊರಕಿದ ನಂತರ ರಾಗಿಯ ಸಂಶೋಧನೆಗೆ ಅವಕಾಶ ದೊರೆತು, ಅದರ ಸದುಪಯೋಗ ಪಡಿಸಿಕೊಂಡ ರಾಗಿ ಲಕ್ಷ್ಮಣಯ್ಯ ಅವರು ನಮ್ಮ ನಾಡಿಗೆ ಅಮೂಲ್ಯ ಕೊಡುಗೆ ನೀಡಿದ್ದಾರೆ. ಇಂತಹ ಉತ್ತಮ ಲೇಖನ ಪ್ರಕಟಿಸಿದ್ದಕ್ಕಾಗಿ, ಧನ್ಯವಾದಗಳು.

» ಕೆ.ಎಸ್.ಹೆಬ್ಬಾರ್, ಜೆ.ಪಿ.ನಗರ

★★★

ರಾಗಿ ಮುದ್ದೆ ತಿನ್ನುವುದು ನಮ್ಮ ಪರಿಪಾಠ. ರಾಗಿಯಲ್ಲಿ ಹೆಚ್ಚು ಇಳುವರಿ ನೀಡುವ 'ಇಂಡಾಫ್' ತಳಿಯನ್ನು ಅಭಿವೃದ್ಧಿ ಪಡಿಸಿದವರು ರಾಗಿ ಲಕ್ಷ್ಮಣಯ್ಯ ಎಂಬ ಮಹನೀಯರು ಎಂದು ತಿಳಿದು ಬಹಳ ಖುಷಿಯಾಯಿತು. ಇಂತಹ ಲೇಖನಗಳನ್ನು ಇನ್ನಷ್ಟು ಪ್ರಕಟಿಸಿ.

» ಮಲ್ಲಿಕಾರ್ಜುನಪ್ಪ, ತುಮಕೂರು

★★★

ಬಡ ಕುಟುಂಬದಲ್ಲಿ ಹುಟ್ಟಿ ಬೆಳೆದ ರಾಗಿ ಲಕ್ಷ್ಮಣಯ್ಯ ಅವರ ಕುರಿತು 'ವಿಶ್ವವಾಣಿ'ಯಲ್ಲಿ ಪ್ರಕಟಗೊಂಡ ಲೇಖನ ಓದಿದೆ. ಅದರಲ್ಲಿ ಬಹಳ ಅಪರೂಪದ ಮಾಹಿತಿ ಅಡಕಗೊಂಡಿವೆ. ರಾಗಿಯ ಇಳುವರಿ ಹೆಚ್ಚಿಸಲು ಅವರು ನೀಡಿದ ಕೊಡುಗೆ ಅಮೂಲ್ಯ.

» ನಿತಿನ್ ಗೌಡ, ಮಂಡ್ಯ

ರುದ್ರಾಕ್ಷಿ ಹುಡುಗಿ



ಕುಂಭ ಮೇಳಕೆ ಬಂದಳೊಬ್ಬಳು
ಅಂಬು ನೋಟದ ಕಂಬು ಕಂಠದ
ನಂಬಲಸದಳ ಚೆಂದವಿರುತಿಹ ಕಣ್ಣು ತಿರುಗಿಸುತ್ತ
ತುಂಬ ಮಾಲೆಗಳವಳ ಕೈಯಲಿ
ಜಂಭವಿಲ್ಲದ ಮುಗ್ಧ ನಗುವದು
ಲಾಭವಿಲ್ಲದೆ ಮಾರುತಾಳೆಯೇ ರುದ್ರ ಅಕ್ಷಿಯನು

» ಶಂಕರ್ತಾ ಮುಂಡಾಜೆ

ಕರಗುತ್ತಿರುವ ಭೂಖಂಡ

» ಕಿರಣ್

ಉತ್ತರ ಧ್ರುವ ಪ್ರದೇಶ ಅಥವಾ ಆರ್ಕಿಟಿಕ್ ಪ್ರದೇಶದ ಲಕ್ಷಾಂತರ ಫೋಟೋಗಳನ್ನು ಕೃತಕ ಬುದ್ಧಿಮತ್ತೆಯ ಮೂಲಕ (ಎಐ) ಪರಿಶೀಲಿಸಿದ ವಿಜ್ಞಾನಿಗಳು, ಒಂದು ವಿಚಾರದ ಕುರಿತು ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ. ಅದೇನೆಂದರೆ, ಊಹಿಸಿದ್ದಕ್ಕಿಂತ ಹೆಚ್ಚು ವೇಗವಾಗಿ ಹಿಮಪ್ರದೇಶ ಕರಗುತ್ತಿದೆ! 1985 ಮತ್ತು 2023ರ ನಡುವೆ ಉಪಗ್ರಹಗಳು ಚಿತ್ರಿಸಿದ ಸಾವಿರಾರು ಫೋಟೋಗಳನ್ನು ವಿಶ್ಲೇಷಣೆಗೊಳಪಡಿಸಿದಾಗ, ತಾಪಮಾನ ಹೆಚ್ಚಳದಿಂದಾಗಿ ಹಿಮವು ಬೇಗನೆ ಕರಗುತ್ತಿರುವುದು ಖಚಿತವಾಗಿದೆ.

ಈ ಅವಧಿಯಲ್ಲಿ ಉತ್ತರ ಧ್ರುವಪ್ರದೇಶವು ಸುಮಾರು 800 ಚದರ ಕಿ.ಮೀ. ಜಾಗವನ್ನು ಶಾಶ್ವತವಾಗಿ ಕಳೆದುಕೊಂಡಿದೆ! ಅಂದರೆ, ವಾರ್ಷಿಕ ಸರಾಸರಿ 25 ಚದರ ಕಿ.ಮೀ. ಪ್ರದೇಶವು ಕರಗಿ ನೀರಾಗುತ್ತಿದೆ; ಈ ರೀತಿ ಆ ಖಂಡದ ಪ್ರದೇಶವು ಕರಗುವ ಪ್ರಕ್ರಿಯೆಯು, 2016ರಲ್ಲಿ ಅಧಿಕಗೊಂಡಿತ್ತು; ಅದಕ್ಕೆ ಮುಖ್ಯ ಕಾರಣ ಭೂ ತಾಪಮಾನದ ವೃದ್ಧಿ. ಮನುಷ್ಯನ ಚಟುವಟಿಕೆಗಳಿಂದಾಗಿ, ಕಳೆದ ನಾಲ್ಕಾರು ದಶಕಗಳ ಅವಧಿಯಲ್ಲಿ ಭೂ ತಾಪಮಾನ ನಿಧಾವಾಗಿ ಹೆಚ್ಚಳವಾಗುತ್ತಿದೆ ಮತ್ತು ಗ್ಲೋಬಲ್ ವಾರ್ಮಿಂಗ್ ಎಂಬ ವಿನಾಶಕಾರಿ ವಿದ್ಯಮಾನಕ್ಕೆ ದಾರಿ ಮಾಡಿಕೊಟ್ಟಿದೆ.

ಧ್ರುವ ಪ್ರದೇಶವು ಇದೇ ವೇಗದಲ್ಲಿ ಕರಗುತ್ತಾ ಹೋದರೆ, ಜಾಗತಿಕ ಸಮುದ್ರ ಮಟ್ಟವು ಏರಿಕೆಯಾಗಿ, ಭೂಮಂಡದ ಕರಾವಳಿಗಳಲ್ಲಿ ಸ್ಥಾಪಿತವಾಗಿರುವ ಬೃಹತ್ ನಗರಗಳ ಅಸ್ತಿತ್ವಕ್ಕೇ ಕುತ್ತು ಬರುವುದು ಖಚಿತ ಎಂದು ವಿಜ್ಞಾನಿಗಳು ಎಚ್ಚರಿಸಿದ್ದಾರೆ.

ಹುಡುಗಿಯರ ಜತೆ ಗಂಡಸರು ಯಾಕೆ ಹೀಗೆ ವರ್ತಿಸುತ್ತಾರೆ?

ಕೆ.ಸನಾತನಿ, ಊರು ಬೇಡ

- **ಸಂಪಾದಕರೇ, ಈ ದಿನಗಳಲ್ಲಿ ಯಾರೇ ಪರಿಚಯವಾಗಲಿ, ಮೊಬೈಲ್ ನಂಬರ್ ಕೊಡುವಂತೆ ಕೇಳುತ್ತಾರೆ. ಆರಂಭದಲ್ಲಿ ಒಳ್ಳೆಯವರಂತೆ ವಾಟ್ಸಾಪ್ ಸಂದೇಶಗಳನ್ನು ಕಳಿಸುತ್ತಾರೆ. ಕ್ರಮೇಣ ವಾಟ್ಸಪ್‌ನಲ್ಲಿ ಅಶ್ಲೀಲ ಸಂದೇಶಗಳನ್ನು ಕಳಿಸಲಾರಂಭಿಸುತ್ತಾರೆ. ಹುಡುಗಿಯರ ಜತೆ ಯಾಕೆ ಗಂಡಸರು ಹೀಗೆ ವರ್ತಿಸುತ್ತಾರೆ ? ಹುಡುಗಿಯರನ್ನು ಯಾಕೆ ಗಂಡಸರು ಅದೊಂದೇ ದೃಷ್ಟಿಯಿಂದ ನೋಡುತ್ತಾರೆ? ನನಗೆ ಈ ವಿಷಯದಲ್ಲಿ ಕೆಟ್ಟ ಅನುಭವ ಆಗಿರುವುದರಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ದಯವಿಟ್ಟು ಉತ್ತರಿಸಿ.**

– ಸನಾತನಿ ಅವರೇ, ಈ ದಿನಗಳಲ್ಲಿ ಮೊಬೈಲಿನಲ್ಲಿ ಕಾಳು ಹಾಕುವವರ ಸಂಖ್ಯೆ ಜಾಸ್ತಿಯಾಗಿದೆ. ಈ ರೀತಿ ಕಾಳು ಹಾಕುವುದು ಬಹಳ ಸುಲಭ. ಇಂಥ 'ಕಾಳಪ್ಪ'ಗಳನ್ನು ನೀವು ಸಹಿಸಿಕೊಳ್ಳಬೇಕಿಲ್ಲ. ಆರ್‌ಎಂಡಿ ಹಾಕಿಕೊಂಡು ಚೆನ್ನಾಗಿ ಉಗಿಯಬಹುದು. ಇಲ್ಲವೇ ಅವರ ಸಂಭಾಷಣೆಗಳ ಸ್ಕ್ರೀನ್ ಶಾಟ್ ತೆಗೆದುಕೊಂಡು, ನಿಮ್ಮ ಫೇಸ್ ಬುಕ್ ನಲ್ಲಿ ಪೋಸ್ಟ್ ಮಾಡಿ ಹರಾಜು ಹಾಕಬಹುದು. ಇಲ್ಲವೇ ಅಂಥವರನ್ನು ಬ್ಲಾಕ್ ಮಾಡಬಹುದು. ಅದು ಅತ್ಯಂತ ಸುಲಭ ಮತ್ತು ಪರಿಣಾಮಕಾರಿ ಕ್ರಮ. ಕಾನೂನು ಕ್ರಮಕ್ಕೂ ಅವಕಾಶವಿದೆ. ಆದರೆ 'ನಿನ್ನಿಂದಲೇ.. ನಿನ್ನಿಂದಲೇ.. ಕನಸೊಂದು ಶುರುವಾಗಿದೆ...' ಎಂಬ ಹಾಡಿನಂತೆ, ನೀವೇ ಬೆಂಕಿ ಹಚ್ಚುವ ಕೆಲಸವನ್ನು ಆರಂಭಿಸಬಾರದಷ್ಟೇ.

★★★

ಕೆ. ವಿಶ್ವನಾಥ ರಾವ್, ಬೆಂಗಳೂರು

- **ಸಂಪಾದಕರೇ, ನಾನು ದಿನ ಒಂದು ಇಂಗ್ಲಿಷ್ ಮತ್ತು ಒಂದು ಕನ್ನಡ ಪತ್ರಿಕೆಯನ್ನು ಓದುತ್ತೇನೆ. ಇದು ಕಳೆದ ಮೂವತ್ತು ವರ್ಷಗಳಿಂದ ಪಾಲಿಸಿಕೊಂಡು ಬಂದಿರುವ ಅಭ್ಯಾಸ. ಆದರೆ ನನ್ನ ಮಗ ಪತ್ರಿಕೆಯನ್ನೇ ಓದುವುದಿಲ್ಲ. ದಿನವೂ ಓದು, ಓದು ಎಂದು ಎಷ್ಟೇ ಹೇಳಿದರೂ ಓದುವುದಿಲ್ಲ. ಹಾಗಂತ ಅವನಿಗೆ ಕರೆಂಟ್ ಅಫೇರ್ಸ್ ಎಲ್ಲ ಚೆನ್ನಾಗಿ ಗೊತ್ತು. ನನ್ನ ಮಗನಿಗೆ ಪತ್ರಿಕೆಗಳನ್ನು ಓದಿಸುವುದು ಹೇಗೆ?**

– ವಿಶ್ವನಾಥ ಅವರೇ, ಪ್ರಾಯಶಃ ನಿಮಗೆ ಸುದ್ದಿಗಾಗಿ ಕೇವಲ ಪತ್ರಿಕೆ ಅಥವಾ ಟಿವಿಯನ್ನಷ್ಟೇ ಅವಲಂಬಿಸುತ್ತೀರಿ. ಆದರೆ ಈಗಿನ ಕಾಲದ ಮಕ್ಕಳು ಹಾಗಲ್ಲ, ಅವರು ತಮಗೆ ಬೇಕಾದ ಮಾಹಿತಿಯನ್ನು ಬೇರೆ ಬೇರೆ ಮೂಲಗಳಿಂದ ಪಡೆಯುತ್ತಾರೆ. ಆ ಎಲ್ಲವೂ ಅವರ ಮೊಬೈಲ್ ಮತ್ತು ಕಂಪ್ಯೂಟರುಗಳಲ್ಲೇ ಲಭ್ಯ. ನೀವು ನಿಮ್ಮ ಮಗ ಪತ್ರಿಕೆಗಳನ್ನು ಓದುವುದಿಲ್ಲ ಎಂದು ಅಂದುಕೊಂಡಿರಬಹುದು. ಆದರೆ ಆತ ತನಗೆ ಬೇಕಾದ ಮಾಹಿತಿಯನ್ನೆಲ್ಲ ಮೊಬೈಲ್ ಮೂಲಕ ಪಡೆದಿರುತ್ತಾನೆ. ಈಗಿನ ಕಾಲದ ಮಕ್ಕಳು ಮೊಬೈಲಿನಲ್ಲಿ ತಲ್ಲೀನರಾಗಿರುತ್ತಾರೆ, ಅವರು ಪುಸ್ತಕ-ಪತ್ರಿಕೆಗಳನ್ನು ಓದುವುದಿಲ್ಲ ಎಂದು ಎಲ್ಲ ತಂದೆ-ತಾಯಿಗಳು ಬೇಸರಪಟ್ಟುಕೊಳ್ಳುತ್ತಾರೆ. ಆದರೆ ಅವರಿಗೆ ಕೈಯಲ್ಲಿ ಮೊಬೈಲ್ ಇದ್ದರೆ ಅದೇ ಲೈಬ್ರರಿ, ಅದೇ ಜಗತ್ತು.

'ಮೂರೂ ಹೊತ್ತು ಮೊಬೈಲ್ ಹಿಡಿದು ಕುಳಿತಿರುತ್ತಾನೆ' ಎಂದು ಅನೇಕ ಪಾಲಕರು ಮುಖ ಕಿವುಚಿಕೊಳ್ಳುವುದನ್ನು ನೋಡಿರಬಹುದು. ಈಗಿನ ಮಕ್ಕಳು ಪಠ್ಯಗಳನ್ನು ಮತ್ತು ಪುಸ್ತಕಗಳನ್ನು ಮೊಬೈಲಿನಲ್ಲಿಯೇ ಓದುತ್ತಾರೆ. ಹೀಗಾಗಿ ಅವರು ಕೈಯಲ್ಲಿ ಮೊಬೈಲ್ ಹಿಡಿದಿದ್ದಾರೆ ಅಂದರೆ ಓದುತ್ತಿದ್ದಾರೆ ಎಂದೂ ಭಾವಿಸಬಹುದು. ಆದರೆ ಯಾವ ತಂದೆ-ತಾಯಿಯೂ ಹಾಗೆ ಹಾಗೆ ಭಾವಿಸುವುದಿಲ್ಲ. ಇಲ್ಲಿ ತಪ್ಪು ಯಾರದ್ದು?

ನೀವು ಮಕ್ಕಳಿಗೆ ಇನ್ನೂ ಪತ್ರಿಕೆಯನ್ನೇ ಓದು ಎಂದು ಹೇಳುತ್ತಿದ್ದರೆ, ನೀವು ಇನ್ನೂ ನಿಮ್ಮ ಜಮಾನದಲ್ಲೇ ಇದ್ದೀರಿ ಎಂದರ್ಥ. ಈಗಿನ ಮಕ್ಕಳು ಸ್ಮಾರ್ಟ್ ಆಗಿರುತ್ತಾರೆ. ಮಾಹಿತಿ ಜಾಡು ಹಿಡಿಯುವುದರಲ್ಲಿ ಅವರು ನಮಗಿಂತ ಮುಂದು.

Ask the Editor

● ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ಅವರು ಬರೀ ಪುಸ್ತಕವೊಂದನ್ನೇ ಹಿಡಿದುಕೊಂಡರೆ ಅವರಲ್ಲಿ ಏನೋ ಐಬು ಇದೆ ಎಂದರ್ಥ. ಮೊಬೈಲ್ ಹಿಡಿದವರೆಲ್ಲ ರೀಲ್ಸ್ ಮತ್ತು ಪೋರ್ನೋ ನೋಡ್ತಾರೆ ಅಂತ ಭಾವಿಸಬೇಕಿಲ್ಲ. ಒಂದು ವೇಳೆ ಆಗಾಗ ಅವನ್ನು ನೋಡಿದರೂ ತಪ್ಪಿಲ್ಲ, ಬಿಡಿ. ಹಾಗಾದರೆ ನೀವು ಅವ್ಯಾವುದನ್ನೂ ನೋಡಿಯೇ ಇಲ್ಲವಾ? ಇರಲಿ.

ಈಗಿನ ಮಕ್ಕಳ ಜ್ಞಾನ ಶೋಧದ ವಿಧಾನ ಬದಲಾಗಿದೆ. ಅವರು ನಮಗಿಂತ ಸುಲಭವಾಗಿ ತಮಗೆ ಬೇಕಾದುದನ್ನು ಪಡೆಯಬಲ್ಲರು. ಅವರು ನಮ್ಮ ಹಾಗೆ ಇಲ್ಲ ಎಂದ ಮಾತ್ರಕ್ಕೆ ಅವರು ಏನನ್ನೂ ಮಾಡುತ್ತಿಲ್ಲ ಎಂದು ಭಾವಿಸಬೇಕಿಲ್ಲ. ನಿಮ್ಮ ಮಗ ಪತ್ರಿಕೆ ಓದದೇ ಇರಬಹುದು. ಆದರೆ ಪತ್ರಿಕೆಯಲ್ಲಿರುವ ವಿಷಯಗಳನ್ನು ತಿಳಿದುಕೊಳ್ಳುತ್ತಿಲ್ಲ ಎಂದು ಭಾವಿಸಬೇಕಿಲ್ಲ. ಕೆಲವು ಸಲ ನಾವು ನಮ್ಮ ಮಕ್ಕಳಿಂದ ಅಪ್ಡೇಟ್ ಆಗಬೇಕಾಗುತ್ತದೆ.

ಹೀಗಾಗಿ ಮೊಬೈಲ್ ಹಿಡಿದ ಮಕ್ಕಳನ್ನು ಕಂಡರೆ ಬೇಸರಪಟ್ಟುಕೊಳ್ಳಬೇಕಿಲ್ಲ, ಗದರಬೇಕಿಲ್ಲ.

★★★

ಪ್ರಕಾಶ ವಜ್ಜಲ್, ಯಾದಗಿರಿ

- **ಭಟ್ರೇ, ನಾನು ಸರಕಾರಿ ನೌಕರನಾಗಿ ಕೆಲಸ ಮಾಡುತ್ತಿದ್ದೇನೆ. ನನಗೆ ಸಿನಿಮಾ, ರಂಗಭೂಮಿಯಲ್ಲಿ ಅಭಿನಯಿಸಲು, ಕತೆ, ಕಾದಂಬರಿ, ಲೇಖನಗಳನ್ನು ಬರೆಯಲು ತುಂಬಾ ಇಷ್ಟ. ಈ ರಂಗದಲ್ಲಿಯೇ ನಾನು ಏನಾದರೂ ಸಾಧನೆ ಮಾಡಬೇಕು ಎಂದು ನಿರ್ಧರಿಸಿದ್ದೇನೆ. ಆದರೆ ನನ್ನ ಸಹೋದ್ಯೋಗಿಗಳು ಮತ್ತು ಮೇಲಾಧಿಕಾರಿಗಳು ಇವನ್ನು ಮಾಡುವಂತಿಲ್ಲ ಎಂದು ತಾಕೀತು ಮಾಡುತ್ತಾರೆ, ಒಂದು ವೇಳೆ ಭಾಗವಹಿಸಿದರೆ ಉದ್ಯೋಗದಿಂದ ತೆಗೆದು ಹಾಕುವುದಾಗಿ ಬೆದರಿಸುತ್ತಾರೆ. ಜತೆಗೆ ಇದು ಕರ್ನಾಟಕ ನಾಗರಿಕ ಸೇವಾ ನಿಯಮಗಳಿಗೆ ವಿರುದ್ಧವಾಗಿದೆ ಅಂತಾರೆ. ಆದ್ದರಿಂದ ಉದ್ಯೋಗ ಮಾಡುವುದಾ ಇಲ್ಲಾ ಆಸಕ್ತಿಕರ ಕ್ಷೇತ್ರದಲ್ಲಿ ಸಾಧನೆ ಮಾಡುವುದಾ ಎಂಬ ಗೊಂದಲದಲ್ಲಿದ್ದೇನೆ. ನಾನು ಯಾವುದು ಮಾಡಬೇಕು, ದಯವಿಟ್ಟು ಸಲಹೆ ನೀಡಿ.**

– ಪ್ರಕಾಶ ಅವರೇ, ಸಿನಿಮಾ, ರಂಗಭೂಮಿ ಚಟುವಟಿಕೆ ಇದ್ದಿರಬಹುದು ಅಥವಾ ಕಥೆ, ಕಾದಂಬರಿ, ಲೇಖನ ಬರೆಯುವುದಿರಬಹುದು, ಇವು ನೀವು ಮಾಡುವ ಸರಕಾರಿ ಕೆಲಸಕ್ಕೆ ಅಡ್ಡಿಯಾಗಬಾರದು. ಅಲ್ಲದೇ ನೀವು ಸರಕಾರಿ ವಿರೋಧಿ ಚಟುವಟಿಕೆಗಳಲ್ಲಿ ಭಾಗವಹಿಸಬಾರದು. ನಿಮ್ಮ ಪಾಡಿಗೆ ನೀವು ಸೃಜನಶೀಲ, ಸಾಂಸ್ಕೃತಿಕ ಅಥವಾ ಸಾಹಿತ್ಯಕ ಚಟುವಟಿಕೆಗಳಲ್ಲಿ ಭಾಗಿಯಾದರೆ ತೊಂದರೆ ಇಲ್ಲ. ಅದು ಕರ್ನಾಟಕ ನಾಗರಿಕ ಸೇವಾ ನಿಯಮಗಳ ಒಳಗೇ ಬರುತ್ತದೆ. ಹಾಗೆ ಮಾಡುವುದರಿಂದ ನೀವು ಕಾನೂನನ್ನು ಉಲ್ಲಂಘಿಸಿದಂತೆ ಆಗುವುದಿಲ್ಲ. ಈ ಸಂಗತಿಯನ್ನು ನಿಮ್ಮ ಮೇಲಾಧಿಕಾರಿಗಳಿಗೆ ಮನವರಿಕೆ ಮಾಡಿಕೊಡುವುದು ಒಳ್ಳೆಯದು.

ಸಾಮಾನ್ಯವಾಗಿ ಸರಕಾರಿ ಕಚೇರಿಯಲ್ಲಿರುವವರು ಅದರಲ್ಲೂ ವಿಶೇಷವಾಗಿ ಉನ್ನತ ಸ್ಥಾನದಲ್ಲಿ ಇರುವವರು ಸೃಜನಶೀಲ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದಿಲ್ಲ. ಅವರಿಗೆ ಸಾಹಿತ್ಯ, ಸಂಸ್ಕೃತಿಯ ಗಂಧ-ಗಾಳಿಯೂ ಇರುವುದಿಲ್ಲ. ಹೀಗಾಗಿ ಬೇರೆಯವರು ಅಂಥ ಚಟುವಟಿಕೆಗಳಲ್ಲಿ ಭಾಗವಹಿಸಿದಾಗ ಸಹಜವಾಗಿ ಅಸೂಯೆ ಪಡುತ್ತಾರೆ. ತಮ್ಮ ಕೆಳಗಿನ ಸಿಬ್ಬಂದಿ ಬೆಳೆಯುವುದನ್ನಾಗಲಿ ಅಥವಾ ಇನ್ನಿತರ ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನಾಗಲಿ ಅವರು ಇಷ್ಟಪಡುವುದಿಲ್ಲ.

ನಿಮ್ಮ ವಿಷಯದಲ್ಲೂ ನಿಮ್ಮ ಮೇಲಾಧಿಕಾರಿಗಳು ಅದೇ ರೀತಿ ನಡೆದುಕೊಳ್ಳುತ್ತಿದ್ದಾರೆ ಅಂತ ಅನಿಸುತ್ತದೆ. ಸರಕಾರಿ ಕೆಲಸಗಳಿಗೆ ಹಾಗೂ ನಿಮ್ಮ ಕರ್ತವ್ಯಗಳಿಗೆ ನಿಷ್ಠರಾಗಿ, ಆಫೀಸಿನ ಕೆಲಸ-ಕಾರ್ಯಗಳಿಗೆ ಧಕ್ಕೆಯಾಗದಂತೆ, ನಿಮ್ಮ ಆಸಕ್ತಿಯನ್ನು ಬೆಳೆಸಿಕೊಂಡರೆ ತಪ್ಪೇನು ಇಲ್ಲ. ನಿಮ್ಮ ಆಸಕ್ತಿಗಾಗಿ ಸರಕಾರಿ ಕೆಲಸವನ್ನೇಕೆ ಬಿಡುತ್ತೀರಿ? ಆ ಕೆಲಸವನ್ನು ಮಾಡುತ್ತಲೇ ನಿಮ್ಮ ಆಸಕ್ತಿಯುತ ಚಟುವಟಿಕೆಗಳನ್ನು ಪೊರೆಯಬಹುದು. ಅವೆಷ್ಟೋ ಅಧಿಕಾರಿಗಳು ಸರಕಾರಿ ಸೇವೆಯಲ್ಲಿರುವಾಗಲೇ ಕಥೆ, ಕಾದಂಬರಿ, ಲೇಖನ ಬರೆಯುತ್ತಿರಲಿಲ್ಲವೇ? ಅನೇಕ ಅಧಿಕಾರಿಗಳು ನಿವೃತ್ತರಾದ ಬಳಿಕ ಬರೆಯುತ್ತಾರೆ. ಆದರೆ ಈಗಿನ ಮುಖ್ಯ ಕಾರ್ಯದರ್ಶಿಯಾಗಿರುವ ಶಾಲಿನಿ ರಜನೀಶ್ ಅವರು ನಾನು ಸಂಪಾದಕನಾಗಿದ್ದ 'ವಿಜಯ ಕರ್ನಾಟಕ' ಮತ್ತು 'ಕನ್ನಡ ಪ್ರಭ' ಪತ್ರಿಕೆಗಳಿಗೆ ಸುಮಾರು ಹತ್ತು ವರ್ಷಗಳ ಕಾಲ ನಿರಂತರವಾಗಿ ವಾರದ ಅಂಕಣವನ್ನು ಬರೆಯುತ್ತಿದ್ದರು. ಅವರು ಏನಿಲ್ಲವೆಂದರೂ ಸಾವಿರಕ್ಕೂ ಅಧಿಕ ಅಂಕಣಗಳನ್ನು ಬರೆದಿರಬಹುದು.

ನಿಮ್ಮ ಮೇಲಾಧಿಕಾರಿಗಳು ನಿಮ್ಮ ಬರಹಗಳಿಗೆ ಅಡ್ಡಿಪಡಿಸಿದರೆ ಶಾಲಿನಿ ಮೇಡಂ ಅವರ ಗಮನಕ್ಕೆ ತೆಗೆದುಕೊಂಡು ಬನ್ನಿ. ಸರಕಾರಿ ಸೇವೆಯಲ್ಲಿರುವಾಗ ಸಾಹಿತ್ಯ, ಸಂಸ್ಕೃತಿ ಸೇವೆ ಮಾಡುವುದು ತಪ್ಪಲ್ಲ. ಹೀಗಾಗಿ ನಿಮ್ಮ ಆಸಕ್ತಿ, ಅಭಿರುಚಿಯನ್ನು ಬಿಡಬೇಡಿ ಮತ್ತು ನಿಮ್ಮ ಸರಕಾರಿ ಕೆಲಸವನ್ನೂ ಬಿಡಬೇಡಿ.

★★★

ಮುಕುಂದ (ಇಮೇಲ್ ಮೂಲಕ)

- **ಸಂಪಾದಕರೇ, 'ವಿಶ್ವವಾಣಿ' ಸಂಸ್ಥೆಯನ್ನು ಕಟ್ಟಲು ಹಾಗೂ ಈ ಎತ್ತರಕ್ಕೆ ತಲುಪಲು ನೀವು ಮತ್ತು ನಿಮ್ಮ ಸಿಬ್ಬಂದಿವರ್ಗ ಸಾಕಷ್ಟು ಶ್ರಮವಹಿಸಿರುತ್ತೀರಿ. ನನ್ನ ಪ್ರಕಾರ ವಾರಕ್ಕೆ 100 ಘಂಟೆಗೂ ಹೆಚ್ಚಿನಕಾಲ ನೀವು ಮತ್ತು ನಿಮ್ಮ ಸಹಚರರು ಕೆಲಸ ಮಾಡುತ್ತಿರುವಿರೆಂದು ನಂಬಿದ್ದೇನೆ. ಮುಂದೆಯೂ ಈ ಗುಣಮಟ್ಟ ಕಾಪಾಡಲು ಹಾಗೂ ಇನ್ನಷ್ಟು ಎತ್ತರಕ್ಕೆ ತೆಗೆದು ಕೊಂಡು ಹೋಗಲು ಇನ್ನೂ ಜಾಸ್ತಿ ಶ್ರಮವಹಿಸಬೇಕಾಗುತ್ತದೆ ಅಲ್ಲವೇ? ನನ್ನ ಪ್ರಶ್ನೆ ಏನೆಂದರೆ, ನೀವು ವಾರಕ್ಕೆ ಎಷ್ಟು ಘಂಟೆ ಕೆಲಸ ಮಾಡುತ್ತೀರಿ ಹಾಗೂ ತಾವು ಮಾಡುತ್ತಿದ್ದ ಕೆಲಸ ಸ್ವಯಂ ಪ್ರೇರಣೆಯಿಂದಲೋ ಅಥವಾ ಬೇರಾವುದೋ ಒತ್ತಡದಿಂದಲೋ? ದಯವಿಟ್ಟು ತಿಳಿಸಿ.**

– ಮುಕುಂದ ಅವರೇ, ನಿಸ್ಸಂದೇಹವಾಗಿ ನಾನು ವಾರದಲ್ಲಿ ಕನಿಷ್ಠ ನೂರು ತಾಸು ಕೆಲಸ ಮಾಡುತ್ತೇನೆ. ನನ್ನ ದೃಷ್ಟಿಯಲ್ಲಿ ನನ್ನ ವೃತ್ತಿ ಸಂಬಂಧಿ ಕೆಲಸ ಎನ್ನುವುದು ಒತ್ತಾಯದಿಂದ ಅಥವಾ ಯಾರದ್ದೋ ಒತ್ತಡದಿಂದ ಮಾಡುವ ಕ್ರಿಯೆ ಅಲ್ಲ. ಒಬ್ಬ ಕ್ರಿಕೆಟ್ ಆಟಗಾರ ತಾನು ಇಡೀ ದಿನ ಅಥವಾ ಇನ್ನಿಂಗ್ಸ್ ಕೊನೆ ತನಕ ಆಡಬೇಕೆಂದು ನಿಶ್ಚಯಿಸಿಯೇ ಮೈದಾನಕ್ಕೆ ಇಳಿಯುತ್ತಾನೆ. ಆ ಬಿಸಿಲಲ್ಲಿ ಯಾರು ಆಡುತ್ತಾರೆ ಎಂದು ಯೋಚಿಸುವುದಿಲ್ಲ. ಆದಷ್ಟು ಬೇಗ ಔಟ್ ಆಗಿ ಪೆವಿಲಿಯನ್ ಗೆ ಮರಳಿ, ಡ್ರೆಸ್ಸಿಂಗ್ ರೂಮಿನಲ್ಲಿ ವಿಶ್ರಾಂತಿ ತೆಗೆದುಕೊಳ್ಳಬೇಕು ಎಂದು ಬಯಸುವುದಿಲ್ಲ. ಟೆಸ್ಟ್ ಪಂದ್ಯಗಳಲ್ಲಿ ಮೂರು ದಿನ ನಿರಂತರವಾಗಿ ಬ್ಯಾಟ್ ಮಾಡಿದ ಹಲವು ಆಟಗಾರರಿದ್ದಾರೆ. ಇದೇ ರೀತಿ ಫುಟ್ಬಾಲ್ ಆಟಗಾರರೂ.

ಆಫೀಸಿನ ವಿಷಯದಲ್ಲೂ ಇದೇ ನಿಯಮ ಅನ್ವಯಿಸ ಬಹುದಲ್ಲ? ಗಡಿಯಾರ ನೋಡಿಕೊಂಡು ಕೆಲಸ ಮಾಡುವವರಿಗೆ ಸಮಯವೇ ಪಾಠ ಕಲಿಸುತ್ತದೆ ಎಂಬ ಮಾತಿದೆ. ನಾವು ಮಾಡುವ ಕೆಲಸವನ್ನು ಒಂದು ಆಟ (sport) ಎಂದು ಪರಿಗಣಿಸಿದರೆ, ಆಗ ಕೆಲಸದ ಬಗೆಗಿನ ನಮ್ಮ ಧೋರಣೆಯೇ ಬದಲಾಗುತ್ತದೆ. ಆಗ ಸಮಯದ ಕಡೆಗೆ ನಮ್ಮ ಲಕ್ಷ್ಯ ಹೋಗುವುದಿಲ್ಲ. ನಮ್ಮ ಗುರಿಯಡೆಗೆ ಮಾತ್ರ ಗಮನಹರಿಸಲು ಅನುಕೂಲವಾಗುತ್ತದೆ.

ನಾನು 'ವಿಶ್ವವಾಣಿ'ಯಲ್ಲಷ್ಟೇ ಅಲ್ಲ, ಈ ಹಿಂದೆ 'ವಿಜಯ ಕರ್ನಾಟಕ' ಮತ್ತು 'ಕನ್ನಡಪ್ರಭ'ದಲ್ಲೂ ಅದೇ ರೀತಿ ಕೆಲಸ ಮಾಡಿದವ. ನಾನು ಒಂದು ದಿನವೂ ರಾತ್ರಿ ಹನ್ನೊಂದಕ್ಕಿಂತ ಮುನ್ನ ಮನೆಗೆ ಬಂದವನಲ್ಲ. ಬೆಳಗ್ಗೆ ಒಂಬತ್ತರ ನಂತರ ಮನೆಯಲ್ಲಿದ್ದು ಗೊತ್ತಿಲ್ಲ. ಎಂದೂ ಸಾಯಂಕಾಲ ಸೂರ್ಯಾಸ್ತ ನೋಡಿದವನೇ ಅಲ್ಲ. ಸಂಪಾದಕನಾಗಿ ಇಪ್ಪತ್ತೈದು ವರ್ಷ ಹೀಗೆ ಕಳೆದು ಹೋದವು. ಈಗ ನನ್ನ ದಿನಚರಿಯನ್ನು ಬದಲಿಸಿಕೊಳ್ಳಲು ಸಾಧ್ಯವಾ? ನಾನು ನೌಕರನಾಗಿಯೇ ಅಷ್ಟು ಗಂಟೆ ಕೆಲಸ ಮಾಡಿದ ಮೇಲೆ, ಇನ್ನು ನನ್ನ ಸಂಸ್ಥೆಯಲ್ಲಿ ವಿರಮಿಸುವುದುಂಟೇ?

ಯಾರದ್ದೋ ಒತ್ತಾಯ ಅಥವಾ ಬಲವಂತಕ್ಕೆ ನೀವು ಹೆಚ್ಚೆಂದರೆ ಒಂದೆರಡು ವಾರ ಕೆಲಸ ಮಾಡಬಹುದು. ಇದು ಸ್ವಯಂ ಪ್ರೇರಣೆಯಿಂದ ಮಾಡುವಂಥದ್ದು. ಬೇರೆಯವರ ಒತ್ತಾಯದಿಂದ ಮಾಡುವುದು ಚಾಕರಿ. ಆಗ ನಿಮ್ಮ ದೇಹ ಮಾತ್ರ ಆಫೀಸಿನಲ್ಲಿರುತ್ತದೆ, ಮನಸ್ಸು ಇನ್ನೆಲ್ಲೋ ಇರುತ್ತದೆ. ಇದರಿಂದ ನಿಮಗೂ ಒಳ್ಳೆಯ ದಲ್ಲ, ಆಫೀಸಿಗೂ. ಕೆಲಸ ಮಾಡಿ ಮನುಷ್ಯನ ದೇಹ ಸವಕಳಿ ಆಗುವುದಿಲ್ಲ. ಹೀಗಾಗಿ ಹೆಚ್ಚು ಹೆಚ್ಚು ಕೆಲಸ ಮಾಡ ಬಹುದು. ಆದರೆ ಅನೇಕರು Hard work never killed any-body, but why take a chance? ಎಂದು ಭಾವಿಸುತ್ತಾರೆ. Don't stay in bed, unless you can work or make money in bed ಎಂಬ ಮಾತಿನಲ್ಲಿ ನನಗೆ ಬಲವಾದ ನಂಬಿಕೆ.

★★★

ಗೋವಿಂದ ಕುಲಕರ್ಣಿ, ಬೆಳಗಾವಿ

- **ಸಂಪಾದಕರೇ, ನಾನು ರಾಜ್ಯಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದೇನೆ. ನರೇಂದ್ರ ಮೋದಿಯವರ ರಾಜಕೀಯ ವರಸೆಗಳಿಂದ ಪ್ರಭಾವಿತನಾಗಿ ಬಿಜೆಪಿ ಸೇರಬೇಕೆಂದು ನಿರ್ಧರಿಸಿದ್ದೆ. ಆದರೆ ಪ್ರಸ್ತುತ ಬಿಜೆಪಿಯ ನಾಯಕರ ಕಚ್ಚಾಟವನ್ನು ನೋಡಿ ತೀವ್ರ ಮನನೊಂದು ರಾಜಕೀಯವನ್ನು ಸೇರುವುದಾ, ಬಿಡುವುದಾ ಎಂಬ ಗೊಂದಲದಲ್ಲಿ ಸಿಲುಕಿದ್ದೇನೆ. ಇಂಥ ಸಂದರ್ಭದಲ್ಲಿ ನನಗೆ ನಿಮ್ಮ ಮಾರ್ಗದರ್ಶನ ಬೇಕು. ನಾನು ಬಿಜೆಪಿಯನ್ನು ಸೇರಬೇಕಾ, ಬೇಡವಾ? ದಯವಿಟ್ಟು ತಿಳಿಸಿ.**

– ಕುಲಕರ್ಣಿ ಅವರೇ, ರಾಜ್ಯ ಬಿಜೆಪಿ ವಿದ್ಯಮಾನ ಹುಚ್ಚಾಸ್ಪತ್ರೆಯನ್ನು ನೆನಪಿಸುವಂತಿದೆ. ಅಲ್ಲಿ ಹೇಳುವವರು, ಕೇಳುವವರು ಯಾರೂ ಇದ್ದಂತಿಲ್ಲ. ಬೀದಿ ನಾಯಿಗಳ ಹಾವಳಿ ಮಿತಿ ಮೀರಿದರೆ ಬಿಬಿಎಂಪಿ ಅಥವಾ ನಗರಸಭೆಯವರು ಅವುಗಳನ್ನು ಹಿಡಿದುಕೊಂಡು ಹೋಗುತ್ತಾರೆ. ಆದರೆ ರಾಜ್ಯ ಬಿಜೆಪಿ ನಾಯಕರ ಹಾವಳಿ ಮಿತಿ ಮೀರಿದೆ, ಆದರೆ ಅವರನ್ನು ಮಾತ್ರ ಯಾರೂ ನಿಯಂತ್ರಿಸುತ್ತಿಲ್ಲ. ನಿಯಂತ್ರಿಸಬೇಕಾದ ಸಂಘದ ನಾಯಕರು, ಹೈಕಮಾಂಡ್ ನಾಯಕರು ಬೆರಳು ಚೀಪುತ್ತಾ ಸುಮ್ಮನೆ ಕುಳಿತಿದ್ದಾರೆ. ಅವರ ಮೂಗಿನ ಕೆಳಗೇ ಈ ಕಚ್ಚಾಟ ನಡೆಯುತ್ತಿರುವುದು ವಿಷಾದನೀಯ. ಇವನ್ನೆಲ್ಲ ನೋಡಿದರೆ, ಈ ನಾಯಕರು ಕಚ್ಚಾಡಿ ಸಾಯಲಿ ಎಂದು ಸಂಘ ಮತ್ತು ಹೈಕಮಾಂಡ್ ಬಯಸಿರಬಹುದೇನೋ. ಸಂಘ ಮತ್ತು ಹೈಕಮಾಂಡ್ ಇಷ್ಟು ಬಲಿಷ್ಠವಾಗಿರುವಾಗಲೇ ಪಕ್ಷ 'ಹುಚ್ಚಾಸ್ಪತ್ರೆ'ಯಾಗಿರುವುದು ದುರಂತ.

ಪಕ್ಷದಲ್ಲಿ ಯಾರ ಮಾತನ್ನೂ ಯಾರೂ ಕೇಳುತ್ತಿಲ್ಲ. ಅಷ್ಟಕ್ಕೂ ರಾಜ್ಯ ಬಿಜೆಪಿಯಲ್ಲಿ ನಾಯಕರು ಯಾರು, ಯಾರು ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂಬುದೇ ಗೊತ್ತಿಲ್ಲ. ಅಧ್ಯಕ್ಷರ ನಿರ್ಧಾರವನ್ನು ಇತರರು ಗೌರವಿಸುವುದಿಲ್ಲ. ಅಧ್ಯಕ್ಷರು ಸರಕಾರದ ವಿರುದ್ಧ ಹೋರಾಟ ಆರಂಭಿಸಿದರೆ, ಮತ್ತೊಂದು ಗುಂಪು ಪರ್ಯಾಯ ಅಥವಾ ಪ್ರತ್ಯೇಕ ಹೋರಾಟಕ್ಕೆ ಸಜ್ಜಾಗುತ್ತದೆ. ಅಸಲಿಗೆ ಅದು ಬಣ-ಬಣಗಳ ಹೋರಾಟವಾಗುತ್ತಿದೆ. ಮನಸ್ಸು ಮಾಡಿದರೆ ಹೈಕಮಾಂಡ್ ಚಿಟಿಕೆ ಹೊಡೆದು 'ಗಪ್' ಎಂದು ಇಲ್ಲಿನ ನಾಯಕರನ್ನು ಸುಮ್ಮನಿರಿಸಬಹುದು. ಆದರೆ ಇಲ್ಲಿನ ಕಚ್ಚಾಟಕ್ಕೆ ಹೈಕಮಾಂಡ್ ಕುಮ್ಮಕ್ಕು ಇರುವಂತಿದೆ. ಶಿಸ್ತಿನ ಪಕ್ಷದಲ್ಲಿ ಈಗ ಇಲ್ಲದಿರುವುದೇ ಶಿಸ್ತು ಎಂಬಂತಾಗಿದೆ.

ಎದುರಿಗೆ ಬೆಕ್ಕು ಇದ್ದರೂ, ಇಲಿ ಗಹಗಹಿಸಿ ನಗುತ್ತಿದೆ ಅಂದರೆ ಪಕ್ಕದಲ್ಲಿಯೇ ಬಿಲ ಇದೆಯೆಂದರ್ಥ!

ಇಂಥ ಸಂದರ್ಭದಲ್ಲಿ ನೀವು ಬಿಜೆಪಿ ಸೇರಲು ಪಕ್ಷದ ಕಚೇರಿಗೆ ಹೋದರೆ, ಬಾವುಟ ಕೊಡುವವರೇ ಬಡಿದಾಡುತ್ತಿದ್ದರೆ ಏನು ಮಾಡುತ್ತೀರಿ? ಸದ್ಯದಮಟ್ಟಿಗೆ ಆ ಒಳಜಗಳ ಶಮನವಾಗುವ ಯಾವ ಲಕ್ಷಣಗಳೂ ತೋರುತ್ತಿಲ್ಲ. ಕಾರಣ ಅಗ್ನಿಶಾಮಕ ದಳವೇ ಬೆಂಕಿ ಹಚ್ಚಲು ಸೂಚನೆ ಕೊಟ್ಟಿರುವಂತಿದೆ. ಅಷ್ಟಕ್ಕೂ ಅಗ್ನಿಶಾಮಕ ದಳದ ಟ್ಯಾಂಕರ್ ವಾಹನದಲ್ಲಿ ತುಂಬಿರುವುದು ನೀರೋ, ಪೆಟ್ರೋಲೋ ಎಂಬುದೇ ಗೊತ್ತಿಲ್ಲ.

ಹೀಗಾಗಿ ಸದ್ಯಕ್ಕೆ ಸುಮ್ಮನಿರಿ. ಇನ್ನೂ ಮೂರೂವರೆ ವರ್ಷ ಯಾವ ಚುನಾವಣೆಯೂ ಇಲ್ಲ. ಅಲ್ಲಿ ತನಕ ಈ ನಾಯಕರ ಒಳಜಗಳ ಅಬಾಧಿತ. ಅಲ್ಲಿ ತನಕ 'ಶಂಭೋ' ಅಂತ ಸುಮ್ಮನಿರದಿದ್ದರೆ, 'ಅಂಬೋ' ಎಂದು ಪರಿತಪಿಸಬೇಕಾಗುತ್ತದೆ. ಈಗಿನ ಸ್ಥಿತಿಯಲ್ಲಿ 'ಜಗನ್ನಾಥ ಭವನ'ದಲ್ಲಿ ಶಾಂತಿ, 'ಸಂತೋಷ' ನೆಲೆಸುವಂತೆ ಮಾಡಲು ಆ ಜಗನ್ನಾಥನಿಗೂ ಸಾಧ್ಯವಿಲ್ಲ. ಹಾಳುಬಾವಿಯಲ್ಲಿ ಸಿಗುವ ಶಾಂತಿ, ಹಾಳಿ ಬಿಜೆಪಿಯಲ್ಲಿ ಸಿಗಲಿಕ್ಕಿಲ್ಲ. ಹೀಗಾಗಿ ಸದ್ಯದ ನಿಮ್ಮ ನಿರ್ಧಾರವನ್ನು ಬಿಟ್ಟು, ಕೂಲಿನಾಲಿ ಮಾಡಿಯಾದರೂ ಉಪಜೀವನ ನಡೆಸಿ, ಮಾನ-ಮರ್ಯಾದೆಯಿಂದ ಇರುವುದು ಹೇಗೆ ಎಂಬ ಬಗ್ಗೆ ಯೋಚಿಸಿ.